ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಮುಂಗಾರು, ಚಂಡಮಾರುತಗಳ ತರ ಅವಾಂತರಿಯಲ್ಲ. ಅದೇನಿದ್ದರೂ ಗುಡುಗು, ಮಿಂಚುಗಳ ಅದ್ದೂರಿಯಿಂದ ಬರುವ ರಾಜ ಮೆರವಣಿಗೆ.

ಮೇನಲ್ಲಿ ₹ 1.02 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ 12
ಸಿ.ಎಂ, ಕಾನೂನು ತಜ್ಞರ ಜೊತೆ ಚರ್ಚಿಸಿ ತೀರ್ಮಾನ: ಅಶ್ವತ್ಥನಾರಾಯಣ
ಟ್ವಿಟರ್‌ಗೆ ಅಂತಿಮ ನೋಟಿಸ್ 7
ವೃತ್ತಿಪರ ಕೋರ್ಸ್‌ಗೆ ಸಿಇಟಿ ಅಂಕವೇ ಆಧಾರ? 4

ಭೂಮಿ ಹದವಾದರೂ ಬೀಜಗೊಬ್ಬರದ ಪಾಡು – ತಪ್ಪದ ರೈತರ ಗೋಳು

ಅನ್ನದಾತರ ಸುತ್ತ ಸಮಸ್ಯೆಗಳ ಸುಳಿ

• ಎಸ್.ರವಿಪ್ರಕಾಶ್

ಬೆಂಗಳೂರು: ಉತ್ತಮ ಮುಂಗಾರಿನ ಸೂಚನೆಯಿಂದಾಗಿ ಕೃಷಿ ಕೈಹಿಡಿಯಬಹುದೆಂಬ ಕನಸು ನಾಡಿನ ಅನ್ನದಾತರಲ್ಲಿ ಚಿಗುರಿದೆ. ಆದರೆ, ಗ್ರಾಮ–ಗ್ರಾಮಗಳಿಗೂ ಕೋವಿಡ್ ಎರಡನೇ ಅಲೆ ಕಬಂಧ ಬಾಹುಗಳನ್ನು ಚಾಚಿದ್ದು ಆತಂಕವನ್ನೂ ತಂದಿದೆ. ಏತನ್ಮಧ್ಯೆಯೇ, ಕೃಷಿ ಚಟುವಟಿಕೆಗೆ ಪೂರಕ ಅಗತ್ಯವಾದ ಬಿತ್ತನೆ ಬೀಜ, ರಸಗೊಬ್ಬರ ದರ ಏರಿಕೆ, ನಕಲಿ ಬಿತ್ತನೆ ಬೀಜಗಳ ಹಾವಳಿ, ರಸಗೊಬ್ಬರಕೃತಕ ಅಭಾವ ಸೃಷ್ಟಿಸುವ ಪ್ರಯತ್ನಗಳು ರೈತರನ್ನು ಕಂಗೆಡಿಸಿವೆ.

ಕೆಲವು ವರ್ಷಗಳ ಹಿಂದೆ ಬಿತ್ತನೆ ಬೀಜಗಳು ಮತ್ತು ರಸಗೊಬ್ಬರಗಳ ಕೃತಕ ಅಭಾವ ಹಾಗೂ ಅಸಮರ್ಪಕ ಪೂರೈಕೆಯ ಪರಿಣಾಮ ಗಲಭೆ–ಹಿಂಸಾಚಾರದಿಂದ ರಾಜ್ಯವೇ ತಲ್ಲಣಿಸಿತ್ತು. ರಸಗೊಬ್ಬರಕ್ಕೆ ಬೇವು ಲೇಪನ ಮಾಡಿ ಮಾರುಕಟ್ಟೆಗೆ ಬಿಡಲಾರಂಭಿಸಿದ ಬಳಿಕ ಉದ್ಯಮಗಳಿಗೆ ಅಕ್ರಮವಾಗಿ ಪೂರೈಕೆ ಮಾಡುವ ಕಳ್ಳಾಟಕ್ಕೆ ಕಡಿವಾಣ ಬಿದ್ದಿತು. ಕೆಲವೊಮ್ಮೆ ಅಗತ್ಯಕ್ಕೆ ತಕ್ಕಷ್ಟು ಪೂರೈಕೆ ಆಗದೇ ರೈತರು ಸಮಸ್ಯೆ ಎದುರಿಸಿದ್ದರು. ಆದರೆ, ನಕಲಿ ಬಿತ್ತನೆ ಬೀಜ ಹಾವಳಿ ಮಾತ್ರ ಮಟ್ಟ ಹಾಕಲು ಇನ್ನೂ ಸಾಧ್ಯವಾಗಿಲ್ಲ.

ಕಳೆದ 15–20 ದಿನಗಳಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು, ಬೆಳಗಾವಿ ಜಿಲ್ಲೆಯ ಕಿತ್ತೂರು, ಕೊಪ್ಪಳ ಜಿಲ್ಲೆಯ ಬಿ.ಹೊಸಹಳ್ಳಿ, ಕೊಡಗು ಜಿಲ್ಲೆಯ ಪೊನ್ನಂಪೇಟೆ, ಗಂಗಾವತಿ ಮತ್ತು ಇತರ ಕಡೆಗಳಲ್ಲಿ ಹಲವು ಬೀಜ ಮತ್ತು ರಸಗೊಬ್ಬರ ಮಾರಾಟ ಮಳಿಗೆಗಳ ಮೇಲೆ ದಾಳಿ ನಡೆಸಿ ಸುಮಾರು ₹ 1 ಕೋಟಿ ಮೌಲ್ಯದಷ್ಟು ನಕಲಿ ಬಿತ್ತನೆ ಬೀಜ ಮತ್ತು ಅಕ್ರಮ ರಸಗೊಬ್ಬರ ದಾಸ್ತಾನನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ವಿಚಕ್ಷಣದಳವು ಈಗ ರಾಜ್ಯ ವ್ಯಾಪಿ ಹದ್ದಿನ ಕಣ್ಣಿಟ್ಟು, ಗದಾ ಪ್ರಹಾರ ಆರಂಭಿಸಿದೆ.

ಒಳನೋಟ
ಬೀಜ–ಗೊಬ್ಬರ ಸಮಸ್ಯೆ ನಿರಂತರ
ಪ್ರತಿಕ್ರಿಯಿಸಿ: 9606038256
feedback@prajavani.co.in

ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಹೇಳಿದ್ದರು. ಆ ಮಾತು ಹಾಗಿರಲಿ, ಅಸಲೇ ಸಿಗದ ಸ್ಥಿತಿ ನಿರ್ಮಾಣವಾಗಿದೆ. ಕಣ್ಣೀರಿನಲ್ಲಿ ಕೈತೊಳೆಯುವ ಸ್ಥಿತಿ ಇದೆ
ಕೃಷ್ಣ ಭೈರೇಗೌಡ
ಮಾಜಿ ಕೃಷಿ ಸಚಿವ

ನಕಲಿ ಬಿತ್ತನೆ ಬೀಜ ಮಾರಾಟ ಮತ್ತು ಅಕ್ರಮವಾಗಿ ರಸಗೊಬ್ಬರ ಸಂಗ್ರಹಿಸಿಡುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು
ಬಿ.ಸಿ. ಪಾಟೀಲ, ಕೃಷಿ ಸಚಿವ

ಡಿಎಪಿ ಮತ್ತು ಪಿಕೆ ರಸಗೊಬ್ಬರ ಸಬ್ಸಿಡಿಯನ್ನು ಚೀಲವೊಂದಕ್ಕೆ ₹511 ರಿಂದ ₹1,211ಕ್ಕೆ ಹೆಚ್ಚಳ ಮಾಡಲಾಗಿದೆ. ಇದೇ ರೀತಿ ಇತರ ರಸಗೊಬ್ಬರಗಳಿಗೂ ಹೆಚ್ಚಿನ ಸಬ್ಸಿಡಿ ನಿಗದಿ ಮಾಡಲಾಗಿದೆ
ಡಿ.ವಿ.ಸದಾನಂದಗೌಡ, ಕೇಂದ್ರ ರಾಸಾಯನಿಕ– ರಸಗೊಬ್ಬರಗಳ ಸಚಿವ

ಕಲಬುರ್ಗಿಯ ಹೊರವಲಯದ ತಾಜ್ ಸುಲ್ತಾನ್‌ಪುರ ರೈಲು ನಿಲ್ದಾಣದಲ್ಲಿ ಕೂಲಿಕಾರರು ರಸಗೊಬ್ಬರವನ್ನು ಲಾರಿಗಳಲ್ಲಿ ತುಂಬಿದ್ದು ಕಂಡುಬಂತು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ

ಕಾಳ ಸಂತೆಕೋರರ ಮೇಲೆ ಗದಾ ಪ್ರಹಾರ

ಕೃಷಿ ವಿಚಕ್ಷಣಾದಳ ರಾಜ್ಯದ ಹಲವು ಕಡೆಗಳಲ್ಲಿ ದಾಳಿ ನಡೆಸಿ ನಕಲಿ ಬಿತ್ತನೆ ಬೀಜ ಮತ್ತು ಅಕ್ರಮವಾಗಿ ಸಂಗ್ರಹಿಸಿಟ್ಟ ರಸಗೊಬ್ಬರವನ್ನು ವಶ ಪಡಿಸಿಕೊಂಡಿದೆ.

* 2020–21
ನಕಲಿ ಬೀಜ
895.70 ಟನ್ ಪ್ರಮಾಣ
₹17.31 ಕೋಟಿ ಮೌಲ್ಯ
16 ಪ್ರಕರಣಗಳ ಸಂಖ್ಯೆ

ಅನಧಿಕೃತ ರಸಗೊಬ್ಬರ
₹46.50 ಲಕ್ಷ ಮೌಲ್ಯ
20 ಮೊಕದ್ದಮೆ

ನಕಲಿ ಕೀಟನಾಶಕ
₹2.13 ಕೋಟಿ ಮೌಲ್ಯ
33 ಪ್ರಕರಣ
* 2021 (ಒಂದು ತಿಂಗಳಲ್ಲಿ)

ಬಿತ್ತನೆ ಬೀಜ ಮತ್ತು ರಸಗೊಬ್ಬರ
₹1 ಕೋಟಿ ಮೌಲ್ಯ

ಉತ್ತಮ ಮುಂಗಾರು: ಈ ವರ್ಷ 'ಲಾ ನಿನಾ' ಹವಾಮಾನದ ಪರಿಣಾಮ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಮುಂಗಾರು ಪೂರ್ವ ವಾಡಿಕೆಗಿಂತ ಅಧಿಕ ಮಳೆಯಾಗಿದೆ. ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಕೃಷಿ ಚಟುವಟಿಕೆಗೆ ಚಾಲನೆಯೂ ಸಿಕ್ಕಿದೆ. ಮುಂಗಾರು ರಾಜ್ಯಕ್ಕೆ ಕಾಲಿಟ್ಟಿದೆ. ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ, ಸರಾಸರಿ ಮಳೆ ವಾಡಿಕೆಯ ಶೇ 93 ರಿಂದ ಶೇ 107 ರಷ್ಟು ಆಗಲಿದ್ದು, ಇದು ಕೃಷಿಗೆ ಹೇಳಿ ಮಾಡಿಸಿದ ಮುಂಗಾರು ಎಂಬುದು ತಜ್ಞರ ಅಭಿಪ್ರಾಯ.

ಈ ಮುಂಗಾರು ಹಂಗಾಮಿನಲ್ಲಿ 77 ಲಕ್ಷ ಹೆಕ್ಟೇರ್ ವಿಸ್ತೀರ್ಣ ಪ್ರದೇಶದಲ್ಲಿ ಆಹಾರ– ಧಾನ್ಯಗಳು ಮತ್ತು ಎಣ್ಣೆಕಾಳುಗಳ ಬಿತ್ತನೆ ಗುರಿ ಹೊಂದಲಾಗಿದೆ. ಒಟ್ಟು 1.01ಕೋಟಿ ಟನ್ ಆಹಾರ ಧಾನ್ಯ ಹಾಗೂ 10.85 ಲಕ್ಷ ಟನ್ ಎಣ್ಣೆಕಾಳುಗಳ ಉತ್ಪಾದನೆ ಗುರಿಯನ್ನು ಕೃಷಿ ಇಲಾಖೆ ನಿಗದಿ ಮಾಡಿದೆ.

ಗೊಬ್ಬರ, ಬೀಜ ದರ ಏರಿಕೆ: ಕೋವಿಡ್ ಮತ್ತು ಆರ್ಥಿಕ ಸಂಕಷ್ಟದ ಮಧ್ಯೆ ಕೆಲವು ಬಿತ್ತನೆ ಬೀಜಗಳ ದರ ಗಗನಮುಖಿಯಾಗಿರುವುದು ರೈತರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಆ ಪೈಕಿ ಸೋಯಾಬಿನ್, ಹೆಸರು, ಶೇಂಗಾ ಪ್ರಮುಖವಾದವು. ಕಳೆದ ವರ್ಷ ಬೇಳೆ– ಕಾಳುಗಳ ಕಟಾವಿನ ಸಂದರ್ಭದಲ್ಲಿ ವಿಪರೀತ ಮಳೆ ಮತ್ತು ಪ್ರವಾಹ ಬಂದ ಕಾರಣ ಫಸಲು ನಾಶವಾಗಿದ್ದೂ ಅಲ್ಲದೆ, ಬಿತ್ತನೆ ಬೀಜ ಉತ್ಪಾದನೆಯೂ ಗಣನೀಯ ಪ್ರಮಾಣದಲ್ಲಿ ಕುಸಿತ ಕಂಡಿತ್ತು.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಕೋವಿಡ್: ಶೇ 5ಕ್ಕೆ ಇಳಿದರೆ ಲಾಕ್‌ಡೌನ್ ಸಡಿಲ –ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಸೋಂಕು ದೃಢ ಪ್ರಮಾಣ ಶೇ 5ಕ್ಕೆ ಇಳಿಕೆಯಾಗುವ ಜಿಲ್ಲೆಗಳಲ್ಲಿ ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸುವ ಬಗ್ಗೆ ಅಧಿಕಾರಿಗಳು ಮತ್ತು ಸಚಿವ ಸಂಪುಟದ ಸಹೋದ್ಯೋಗಿಗಳ ಜೊತೆ ಚರ್ಚಿಸಿ, ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಸದ್ಯ ರಾಜ್ಯದಲ್ಲಿ ಜೂನ್ 14ರವರೆಗೆ ಲಾಕ್‌ಡೌನ್ ವಿಧಿಸಲಾಗಿದೆ. ಕೋವಿಡ್ ದೃಢಪ್ರಮಾಣ ಕಡಿಮೆಯಾಗುತ್ತಿರುವ ಜಿಲ್ಲೆಗಳಿಗೆ ಲಾಕ್‌ಡೌನ್‌ನಿಂದ ಯಾವ ಯಾವ ರೀತಿಯಲ್ಲಿ ವಿನಾಯಿತಿ ನೀಡಬಹುದು ಎಂಬ ಬಗ್ಗೆ ಸದ್ಯವೇ ನಿರ್ಧರಿಸಲಾಗುವುದು' ಎಂದರು.

ರಾಜ್ಯದಲ್ಲಿ ಕೆಲವು ದಿನಗಳಿಂದ ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಪ್ರಕರಣಗಳ ಸಂಖ್ಯೆ ಕಡಿಮೆಯಾಗಿರುವ ಮಹಾರಾಷ್ಟ್ರದಲ್ಲಿ ಐದು ಹಂತಗಳಲ್ಲಿ ಲಾಕ್‌ಡೌನ್ ಸಡಿಲಿಸುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ರಾಜ್ಯದಲ್ಲೂ ನಿರ್ಬಂಧಗಳನ್ನು ಸಡಿಲಿಸುವ ಸುಳಿವು ನೀಡಿದರು.

ಶೇ 10ಕ್ಕಿಂತ ಕಡಿಮೆ: ರಾಜ್ಯದಲ್ಲಿ ಒಂದೇ ಸಮನೆ ಏರಿಕೆ ಕಂಡು ಶೇ 50ರ ಗಡಿ ಮುಟ್ಟಿದ್ದ ಕೋವಿಡ್ ದೃಢ ಪ್ರಮಾಣದರ ಶನಿವಾರ ಶೇ 9.69ಕ್ಕೆ ಇಳಿದಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, 'ಏಪ್ರಿಲ್ 15ರಿಂದೀಚೆಗೆ ಇದೇ ಮೊದಲ ಬಾರಿಗೆ ಕೋವಿಡ್ ದೃಢ ಪ್ರಮಾಣ ಶೇ 10ಕ್ಕಿಂತ ಕಡಿಮೆಯಾಗಿದೆ' ಎಂದಿದ್ದಾರೆ.

ದೆಹಲಿ, ಮಹಾರಾಷ್ಟ್ರ: ಹಂತಹಂತವಾಗಿ ತೆರವು

ನವದೆಹಲಿ/ಮುಂಬೈ/ಚೆನ್ನೈ: ಕೋವಿಡ್ ಎರಡನೇ ಅಲೆ ಹಿನ್ನೆಲೆಯಲ್ಲಿ ಜಾರಿಗೊಳಿಸಲಾಗಿದ್ದ ಲಾಕ್‌ಡೌನ್ ಅನ್ನು ಸೋಮವಾರದಿಂದ ಅನ್ವಯವಾಗುವಂತೆ ಹಂತ ಹಂತವಾಗಿ ತೆರವುಗೊಳಿಸಲು ಮಹಾರಾಷ್ಟ್ರ ಮತ್ತು ದೆಹಲಿ ಸರ್ಕಾರಗಳು ನಿರ್ಧರಿಸಿವೆ.

ಹಲವು ವಿನಾಯಿತಿಗಳೊಂದಿಗೆ ತಮಿಳುನಾಡು ಸರ್ಕಾರ ಜೂನ್ 14ರವರೆಗೆ ಲಾಕ್‌ಡೌನ್ ವಿಸ್ತರಣೆ ಮಾಡಿದೆ. ಮಹಾರಾಷ್ಟ್ರದ ವಿಪತ್ತು ನಿರ್ವಹಣಾ ಘಟಕವು ಕೋವಿಡ್ ದೃಢ ಪ್ರಮಾಣ ಹಾಗೂ ಆಮ್ಲಜನಕ ಸೌಲಭ್ಯ ಹೊಂದಿದ ಹಾಸಿಗೆಗಳು ಭರ್ತಿಯಾಗಿರುವ ಆಧಾರದಲ್ಲಿ ರಾಜ್ಯವನ್ನು ಐದು ಹಂತಗಳನ್ನಾಗಿ ವಿಂಗಡಿಸಿದೆ.

7ನೇ ಪುಟ ನೋಡಿ

ಅಮೆಜಾನ್: ಒಳ ಉಡುಪಿಗೆ ಕನ್ನಡ ಬಾವುಟದ ಬಣ್ಣ

ರಾಜ್ಯ ಲಾಂಛನಕ್ಕೆ ಅವಮಾನ !

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಕೊಳಕು ಭಾಷೆ' ಎಂದು ಗೂಗಲ್ ಕಂಪನಿ ಕನ್ನಡಕ್ಕೆ ಅವಮಾನ ಮಾಡಿದ ಬೆನ್ನಲ್ಲೇ, ಇ ಕಾಮರ್ಸ್ ಕಂಪನಿ 'ಅಮೆಜಾನ್' ಕೂಡ ಕನ್ನಡದ ಧ್ವಜ ಮತ್ತು ರಾಜ್ಯ ಲಾಂಛನವನ್ನು ಅವಹೇಳನಕಾರಿಯಾಗಿ ಬಳಸಿರುವುದು ಆಕ್ರೋಶಕ್ಕೆ ಕಾರಣವಾಗಿದೆ.

ಇಂತಹ ನಡವಳಿಕೆ ಸಹಿಸುವುದಿಲ್ಲ ಎಂದಿರುವ ರಾಜ್ಯ ಸರ್ಕಾರ, ಕಂಪನಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದೆ.

ಕನ್ನಡ ಬಾವುಟದ ಹಳದಿ ಮತ್ತು ಕೆಂಪು ಬಣ್ಣ ಇರುವ ಒಳ ಉಡುಪು ಹಾಗೂ ಅದರ ಮೇಲೆ ಕರ್ನಾಟಕ ಸರ್ಕಾರದ ಲಾಂಛನದ ಚಿತ್ರವಿರುವ ಜಾಹೀರಾತನ್ನು Amazon.ca ಕಂಪನಿಯು ನೀಡಿದೆ. ಇದರ ಬಗ್ಗೆ ವಿಶ್ವದಾದ್ಯಂತ ಕನ್ನಡಿಗರು ಕಂಪನಿ ವಿರುದ್ಧ ಕಿಡಿ ಕಾರಿದ್ದಾರೆ.

https://www.amazon.ca/BKDMHHH-Karnataka--Original-Triangle-Trimmer/dp/B07FBMC4X2 ಈ ಲಿಂಕ್‌ನಲ್ಲಿ ವಿವಾದಿತ ಉತ್ಪನ್ನಗಳ ಜಾಹೀರಾತು ನೀಡಲಾಗಿದೆ. BKDMHHH ಎಂಬ ಬ್ರ್ಯಾಂಡ್‌ನ ಬಿಕಿನಿ ರೀತಿಯ ಒಳ ಉಡುಪು ಇದಾಗಿದೆ. ಈ ಉತ್ಪನ್ನ ಸದ್ಯ ಲಭ್ಯವಿಲ್ಲ ಎಂದು ತೋರಿಸುತ್ತದೆ. ಆದರೆ, ಈ ಬಗ್ಗೆ ಪರಿಶೀಲಿಸಿದರೆ ಕೆನಡಾದ ಅಧಿಕೃತ ಅಮೆಜಾನ್ ತಾಣದಲ್ಲಿ ವಿವಾದಿತ ಜಾಹೀರಾತು ಇರುವ ಪುಟ ಸಿಗುವುದಿಲ್ಲ. ಅಲ್ಲದೇ ಭಾರತದ ಅಮೇಜಾನ್ ಪುಟದಲ್ಲೂ ಅಂತಹ ಯಾವುದೇ ಉತ್ಪನ್ನ ಮಾರಾಟಕ್ಕೆ ಲಭ್ಯವಿಲ್ಲ. ಈ ಬಗ್ಗೆ ಅಮೆಜಾನ್ ಕೂಡ ಈವರೆಗೆ ಯಾವುದೇ ಸ್ಪಷ್ಟನೆ ನೀಡಿಲ್ಲ.

ಗುರುವಾರವಷ್ಟೇ ಡೆಪ್ಟ್ ಕನ್ಸಾಲಿಡೇಷನ್ ಸ್ಕ್ವಾಡ್.ಕಾಮ್ ಮತ್ತು ಗೂಗಲ್ ಸಂಸ್ಥೆ ಇಂತಹದೇ ಅಚಾತುರ್ಯ ಎಸಗಿ ಕನ್ನಡಿಗರಿಂದ ಛೀಮಾರಿ ಹಾಕಿಸಿಕೊಂಡು ನಂತರ ಕ್ಷಮೆ ಕೇಳಿತ್ತು.

ಕನ್ನಡದ ಅಸ್ಮಿತೆಗೆ ಅವಮಾನವಾಗುವುದನ್ನು ಸಹಿಸಲಾಗದು. ಅಮೆಜಾನ್ ಕಂಪನಿ ವಿರುದ್ಧ ಕೂಡಲೇ ಕಾನೂನು ಕ್ರಮ ಜರುಗಿಸಲು ಸೂಚಿಸುತ್ತೇನೆ
ಅರವಿಂದ ಲಿಂಬಾವಳಿ
ಕನ್ನಡ ಮತ್ತು ಸಂಸ್ಕೃತಿ ಸಚಿವ

7ನೇ ಪುಟ ನೋಡಿ

'ಜಾಹೀರಾತು ನೋಡಿ ಹಣ ಗಳಿಸಿ' ಆಮಿಷ

₹3.5 ಕೋಟಿ 'ಲೈಫ್‌ಸ್ಟೈಲ್' ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾಹೀರಾತು ನೋಡಿ ಹಣ ಗಳಿಸಿ' ಎಂಬ ಆಮಿಷವೊಡ್ಡಿ ಸದಸ್ಯತ್ವದ ಹೆಸರಿನಲ್ಲಿ ಜನರಿಂದ ಹಣ ಸಂಗ್ರಹಿಸಿ ವಂಚಿಸಿದ್ದ ಆರೋಪದಡಿ 'ಜೆಎ ಲೈಫ್ ಸ್ಟೈಲ್ ಇಂಡಿಯಾ' ಕಂಪನಿ ನಿರ್ದೇಶಕ ಕೆ.ವಿ. ಜಾನಿ ಎಂಬುವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಜಾನಿ

'ಕೇರಳದ ಎರ್ನಾಕುಲಂ ಜಿಲ್ಲೆಯ ಜಾನಿ, ಮಾಜಿ ಸೈನಿಕ. ಆರು ತಿಂಗಳ ಹಿಂದಷ್ಟೇ ಪತ್ನಿ ಜೊತೆ ನಗರಕ್ಕೆ ಬಂದು ಬಸವೇಶ್ವರನಗರದ ಪಶ್ಚಿಮ ಕಾರ್ಡ್ ರಸ್ತೆ ಬಳಿ ವಾಸವಿದ್ದರು' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ಬಸವೇಶ್ವರನಗರ 2ನೇ ಹಂತದ 80 ಅಡಿ ರಸ್ತೆಯಲ್ಲಿ 'ಜೆಎ ಲೈಫ್ ಸ್ಟೈಲ್ ಇಂಡಿಯಾ' ಕಂಪನಿ ಕಚೇರಿ ತೆರೆದಿದ್ದ ಆರೋಪಿ, ಜನರನ್ನು ವಂಚಿಸುತ್ತಿದ್ದರು. ಪತ್ನಿ ಕಂಪನಿಯ ನಿರ್ದೇಶಕಿ ಆಗಿದ್ದರು. ವಂಚನೆ ಬಗ್ಗೆ ಸಾರ್ವಜನಿಕರೊಬ್ಬರು ಇತ್ತೀಚೆಗೆ ಮಾಹಿತಿ ನೀಡಿದ್ದರು. ಕಂಪನಿ ಕಚೇರಿ ಮೇಲೆ ದಾಳಿ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದೂ ತಿಳಿಸಿದರು.

7ನೇ ಪುಟ ನೋಡಿ

ರೋಹಿಣಿ ಸಿಂಧೂರಿ, ಶಿಲ್ಪಾ ನಾಗ್ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಮತ್ತು ಮೈಸೂರು ಪಾಲಿಕೆ ಆಯುಕ್ತೆ ಶಿಲ್ಪಾ ನಾಗ್ ಅವರನ್ನು ಶನಿವಾರ ರಾತ್ರಿ ಎತ್ತಂಗಡಿ ಮಾಡಲಾಗಿದೆ.

ರೋಹಿಣಿ ಸಿಂಧೂರಿ

ಶಿಲ್ಪಾ ನಾಗ್

ರೋಹಿಣಿ ಅವರನ್ನು ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರಾಗಿ ವರ್ಗಾವಣೆ ಮಾಡಲಾಗಿದೆ. ಈ ಹಿಂದೆ ಅವರು ಇದೇ ಹುದ್ದೆಯಲ್ಲಿದ್ದರು. ಶಿಲ್ಪಾ ನಾಗ್ ಅವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ನಿರ್ದೇಶಕರಾಗಿ (ಇ– ಆಡಳಿತ) ವರ್ಗಾವಣೆ ಮಾಡಲಾಗಿದೆ.

ವಾಣಿಜ್ಯ ತೆರಿಗೆ ಇಲಾಖೆಯ (ಜಾರಿ) ಹೆಚ್ಚುವರಿ ಆಯುಕ್ತರಾಗಿದ್ದ ಡಾ. ಬಗಾದಿ ಗೌತಮ್ ಅವರನ್ನು ಮೈಸೂರು ಜಿಲ್ಲಾಧಿಕಾರಿಯಾಗಿ ನೇಮಿಸಲಾಗಿದೆ.

3B ಪುಟ ನೋಡಿ

ಕೋವಿಡ್ ಆರೈಕೆ ಕೇಂದ್ರ; ಸಾವಿರಾರು ಹಾಸಿಗೆ ಖಾಲಿ!

• ಕೆ.ನರಸಿಂಹಮೂರ್ತಿ

ಬಳ್ಳಾರಿ: ಜಿಲ್ಲಾಡಳಿತ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸಿರುವ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಸಾವಿರಾರು ಹಾಸಿಗೆಗಳು ಖಾಲಿ ಉಳಿದಿವೆ. ಬಳ್ಳಾರಿ, ಸಂಡೂರು ಮತ್ತು ಸಿರುಗುಪ್ಪದ ಕೇಂದ್ರಗಳ ಪೈಕಿ ಕೆಲವೆಡೆ ಒಂದಂಕಿಯಷ್ಟು ಸೋಂಕಿತರು ದಾಖಲಾಗಿದ್ದು, ಮುಚ್ಚಬೇಕಾದ ಪರಿಸ್ಥಿತಿ ಇದೆ. ಖಾಸಗಿ ಕೇರ್ ಸೆಂಟರ್‌ಗಳೂ ಭಣಗುಡುತ್ತಿವೆ.

ವೈದ್ಯ–ಸಿಬ್ಬಂದಿ ಕೊರತೆ, ಆಪ್ತ ಸಮಾಲೋಚನೆ ಇಲ್ಲದಿರುವುದು, ಆಮ್ಲಜನಕ, ಊಟೋಪಚಾರದ ಅಸಮರ್ಪಕ ವ್ಯವಸ್ಥೆ ಬಗೆಗಿನ ಅಸಮಾಧಾನದಿಂದಾಗಿ ಹಲವರು ಕೇಂದ್ರಗಳಿಗೆ ದಾಖಲಾಗಲು ಹಿಂಜರಿಯುತ್ತಿದ್ದಾರೆ. ದಾಖಲಾಗಿರುವವರು ಕೊರತೆಗಳ ಬಗ್ಗೆ ಬಹಿರಂಗವಾಗಿ ಮಾತನಾಡಲು ಹಿಂಜರಿಯುತ್ತಾರೆ. ಕೆಲವೆಡೆ ಮಾತ್ರ ಇದಕ್ಕೆ ಅಪವಾದವೆಂಬಂಥ ಸನ್ನಿವೇಶಗಳಿವೆ.

ಆರೈಕೆ ಕೇಂದ್ರಗಳಾಗಿರುವ ವಿದ್ಯಾರ್ಥಿ ನಿಲಯಗಳು ಬಿಕೊ ಎನ್ನುತ್ತಿವೆ. ಬಾಡಿದ ತರಕಾರಿಗಳಿಂದ ಊಟ ತಯಾರಿಸಲಾಗುತ್ತಿದೆ. ಆರೈಕೆ ಕೇಂದ್ರದ ಸಮೀಪದ ಆರೋಗ್ಯ ಕೇಂದ್ರಗಳ ವೈದ್ಯರನ್ನು ಕೋವಿಡ್ ಆಸ್ಪತ್ರೆಗಳಿಗೆ ನಿಯೋಜಿಸಲಾಗಿದ್ದು, ಅಲ್ಲಿ ಶುಶ್ರೂಷಕರೇ ವೈದ್ಯರ ಕೆಲಸ ಮಾಡುತ್ತಿದ್ದಾರೆ.

ಸಂಡೂರು ತಾಲ್ಲೂಕಿನ ಹೊಸದರೋಜಿಯ ಹಿಂದುಳಿದ ವರ್ಗಗಳ ಮೆಟ್ರಿಕ್‌ಪೂರ್ವ ಬಾಲಕಿಯರ ವಸತಿ ನಿಲಯದ ಕೋವಿಡ್ ಕೇರ್ ಸೆಂಟರ್‌ನಲ್ಲಿ ಶುಕ್ರವಾರ ಇಬ್ಬರು ಸೋಂಕಿತರಷ್ಟೇ ಇದ್ದರು

ಗ್ರಾಮಾರೋಗ್ಯ
ಆಗಲಿ ಇನ್ನಷ್ಟು ಯೋಗ್ಯ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

5ನೇ ಪುಟ ನೋಡಿ
ವಿಶೇಷ ಪುಟ 5

ಕಾನ್‌ಸ್ಟೆಬಲ್ ಪರೀಕ್ಷೆ ಸಿದ್ಧತೆಗೆ ಮಾದರಿ ಪ್ರಶ್ನೋತ್ತರ

ಪ್ರಿಯ ಓದುಗರೇ, ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದೆ. ಈ ಪರೀಕ್ಷೆ ಎದುರಿಸುವ ಸ್ಪರ್ಧಾರ್ಥಿಗಳ ಮಾರ್ಗದರ್ಶನಕ್ಕೆ ಪ್ರಜಾವಾಣಿಯ ವಿಶೇಷ ಪುಟದಲ್ಲಿ ಪ್ರತಿ ಸೋಮವಾರದಿಂದ ಗುರುವಾರದವರೆಗೆ ಮಾದರಿ ಪ್ರಶ್ನೋತ್ತರಗಳು ಪ್ರಕಟವಾಗಲಿವೆ.

ರಾಜ್ಯ ಕೋವಿಡ್ ಅಂಕಿ–ಅಂಶ

26,83,314 ▲	ಒಟ್ಟು ಸೋಂಕಿತರು (26,69,514 ನಿನ್ನೆಯ ವಿವರ)
2,68,275 ▼	ಸಕ್ರಿಯ ಪ್ರಕರಣಗಳು
23,83,758 ▲	ಗುಣಮುಖರಾದವರು
31,260 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	13,800	▼
ಗುಣಮುಖ	25,346	▲
ಸಾವು	365	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯದಲ್ಲಿ 1,784 ಮಂದಿಗೆ ಕಪ್ಪು ಶಿಲೀಂಧ್ರ ದೃಢ 7

ಚಿನಕುರಳಿ
ಪ್ರಕಾಶ್ ಶೆಟ್ಟಿ

ಕೋಟ್ಯಂತರ ಭಾರತೀಯರ ಬದುಕಿನ ಭಾಗ ನೂರು ವರ್ಷಗಳಿಂದ ನಿಮ್ಮ ಅಚಲ ವಿಶ್ವಾಸದ ಕಥೆ.

ನಮ್ಮ ನಿಮ್ಮ ಈ ಸಂಬಂಧ, ಪ್ರೀತಿ ಮತ್ತು ವಿಶ್ವಾಸದ ಸಂಬಂಧ. ಹಾಗಾಗಿ ನಮ್ಮ ನಡುವಿನ ಈ ವಿಶ್ವಾಸ ಎಂದೆಂದೂ ಉಳಿಯಲು ನಾವು ನಿರಂತರ ಪ್ರಯತ್ನ ಮಾಡುತ್ತಿರುತ್ತೇವೆ. ಆದುದರಿಂದಲೇ ನಾವು ಸುರಕ್ಷಿತ ಮತ್ತು ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ನಿಮಗೆ ನೀಡುತ್ತೇವೆ.

ಬದುಕಿನ ಪ್ರತಿಯೊಂದು ತಿರುವುಗಳಲ್ಲೂ ನಿಮಗೆ ಮತ್ತು ನಿಮ್ಮ ಕುಟುಂಬಿಕರಿಗೆ ಸಂತೋಷ, ಸ್ವಾದ ಮತ್ತು ಪೋಷಣೆಯನ್ನು ತಲುಪಿಸುವ ಉತ್ಪನ್ನಗಳ ಶ್ರೇಣಿಯನ್ನು ಒದಗಿಸುವ ಪ್ರಯತ್ನವನ್ನು ನಾವು ನಿರಂತರವಾಗಿ ಮಾಡುತ್ತಿದ್ದೇವೆ.

ನಿಮ್ಮ ಪ್ರತಿಯೊಂದು ಸಲಹೆ ಮತ್ತು ಪ್ರತಿಯೊಂದು ಪ್ರಶ್ನೆಯ ಬಗ್ಗೆ ನಮಗೆ ಕಾಳಜಿಯಿದೆ. ಹಾಗಾಗಿ ನಾವು ಪ್ರತಿದಿನ 24 ಗಂಟೆ ನಿಮ್ಮ ಫೋನ್ ಅಥವಾ ಇಮೇಲ್ ಗೆ ಪ್ರತಿಕ್ರಿಯಿಸಲು ಸಿದ್ಧರಿರುತ್ತೇವೆ.

ಇದು 100 ವರ್ಷಗಳ ಸಂಬಂಧ, —
— ಇದು 100 ವರ್ಷಗಳ ವಿಶ್ವಾಸ

ಇಮೇಲ್: wecare@in.nestle.com I ಫೋನ್ ಸಂಖ್ಯೆ: 1800 103 1947

Refer packs for more details.
Nestlé Good food, Good life

ಭಾನುವಾರದ ಉಷ್ಣಾಂಶ 29° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಭಾಗಶಃ ಮೋಡ ಕವಿದ ವಾತಾವರಣ. ಸಂಜೆ ಮಳೆ ಸಾಧ್ಯತೆ

ಸೋಮವಾರ	ಮಂಗಳವಾರ	ಬುಧವಾರ
30° 20°	32° 21°	32° 21°

ಬೆಳಿಗ್ಗೆ 8ರಿಂದ ಬ್ಯಾಂಕ್ ಸೇವೆ

ಬೆಂಗಳೂರು: ಬೆಂಗಳೂರು ಸಿಟಿ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್ ತನ್ನ ವ್ಯವಹಾರದ ವೇಳೆಯನ್ನು ಬೆಳಿಗ್ಗೆ 8ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಬದಲಾಯಿಸಿದೆ.

'10 ಗಂಟೆಯ ನಂತರ ಮುಕ್ತ ಓಡಾಟಕ್ಕೆ ಅವಕಾಶ ಇಲ್ಲದಿರುವುದರಿಂದ ಸರ್ಕಾರ ಅಗತ್ಯ ಸೇವೆಗಳಿಗೆ ಅವಕಾಶ ಕಲ್ಪಿಸಿರುವ ಅವಧಿಯಲ್ಲೇ ಗ್ರಾಹಕರು ಬ್ಯಾಂಕಿಂಗ್ ಸೇವೆ ಪಡೆದುಕೊಳ್ಳಲು ಅನುಕೂಲವಾಗುವಂತೆ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಬ್ಯಾಂಕಿನ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ನೆನಪು ಹಂಚಿಕೊಂಡ ಹಿರಿಯ ನಾಯಕ ಎಸ್.ಎಂ. ಕೃಷ್ಣ

ಗೌಡರ ಸರ್ಕಾರ ಪತನಕ್ಕೆ 'ಕೇಸರಿ' ಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಐಸಿಸಿ ಅಧ್ಯಕ್ಷರಾಗಿದ್ದ ಸೀತಾರಾಂ ಕೇಸರಿ ಅವರಲ್ಲಿ ಎಚ್.ಡಿ. ದೇವೇಗೌಡರ ಕುರಿತು ಮೂಡಿದ ಅನುಮಾನಗಳೇ 1997ರಲ್ಲಿ ಗೌಡರ ನೇತೃತ್ವದ ಸರ್ಕಾರದ ಪತನಕ್ಕೆ ಕಾರಣವಾಯಿತು ಎಂದು ಆಗ ಕಾಂಗ್ರೆಸ್‌ನಿಂದ ರಾಜ್ಯಸಭಾ ಸದಸ್ಯರಾಗಿದ್ದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಹೇಳಿದ್ದಾರೆ.

ದೇವೇಗೌಡರು ಪ್ರಧಾನಿ ಹುದ್ದೆಗೇರಿ 25 ವರ್ಷಗಳಾದ ಪ್ರಯುಕ್ತ ಜೆಡಿಎಸ್ ಹಮ್ಮಿಕೊಂಡಿರುವ ನೆನಪಿನ ಸರಣಿಯಲ್ಲಿ ಶನಿವಾರ ಪ್ರಸಾರವಾದ ವಿಡಿಯೊ ತುಣುಕಿನಲ್ಲಿ ತಮ್ಮ ನೆನಪುಗಳನ್ನು ಅವರು ಹಂಚಿಕೊಂಡಿದ್ದಾರೆ.

'ದೇವೇಗೌಡರು ಪ್ರಧಾನಿ ಹುದ್ದೆಗೇರಿದ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷರಾಗಿದ್ದ ಪಿ.ವಿ. ನರಸಿಂಹ ರಾವ್ ಮುಕ್ತವಾಗಿ ಬೆಂಬಲ ಸೂಚಿಸಿದ್ದರು. ನಂತರ ಎಐಸಿಸಿ ಅಧ್ಯಕ್ಷರಾದ ಸೀತಾರಾಂ ಕೇಸರಿ ಗೌಡರ ಸರ್ಕಾರ ಪತನಕ್ಕೆ ಕಾರಣವಾದರು' ಎಂದಿದ್ದಾರೆ.

ಎಸ್.ಎಂ.ಕೃಷ್ಣ

1996ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಸರ್ಕಾರ ಪತನವಾದ ಬಳಿಕ ತಮ್ಮನ್ನು ಮತ್ತು ರಾಜ್ಯಸಭೆಯ ಇನ್ನೊಬ್ಬ ಸದಸ್ಯ ಸಚ್ಚಿದಾನಂದ ಅವರನ್ನು ನರಸಿಂಹ ರಾವ್ ಅವರು ಮನೆಗೆ ಕರೆಸಿಕೊಂಡಿದ್ದರು. ಅಲ್ಲಿಗೆ ದೇವೇಗೌಡರನ್ನೂ ಆಹ್ವಾನಿಸಿದ್ದರು. ಪ್ರಧಾನಿಯಾಗಿ ದೇವೇಗೌಡರನ್ನು ಕಾಂಗ್ರೆಸ್ ಬೆಂಬಲಿಸುವ ವಿಷಯವನ್ನು ನರಸಿಂಹ ರಾವ್ ಆಗ ಪ್ರಕಟಿಸಿದ್ದರು ಎಂದು ಕೃಷ್ಣ ತಿಳಿಸಿದ್ದಾರೆ.

'ಸೀತಾರಾಂ ಕೇಸರಿ ಎಐಸಿಸಿ ಅಧ್ಯಕ್ಷರಾದ ಬಳಿಕ ಗೌಡರ ಜತೆಗೆ ಸಂಬಂಧ ಚೆನ್ನಾಗಿಯೇ ಇತ್ತು. ಆದರೆ, ದೇವೇಗೌಡರ ಬಗ್ಗೆ ಅವರಿಗೆ ಅನುಮಾನ ಇತ್ತು. ಅದೇ ಸಮಯದಲ್ಲಿ ಕರ್ನಾಟಕದ ಕಾಂಗ್ರೆಸ್‌ನ ಮುಖಂಡರೂ ಗೌಡರ ಸರ್ಕಾರಕ್ಕೆ ನೀಡಿದ್ದ ಬೆಂಬಲ ಹಿಂಪಡೆಯುವಂತೆ ಒತ್ತಡ ಹೇರುತ್ತಿದ್ದರು. ಆ ಒತ್ತಡಕ್ಕೆ ಸೀತಾರಾಂ ಕೇಸರಿ ಬಲಿಯಾಗಬೇಕಾಯಿತು' ಎಂದು ಮಾಹಿತಿ ಹಂಚಿಕೊಂಡಿದ್ದಾರೆ.

'ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಕಾಂಗ್ರೆಸ್ ಹಿಂಪಡೆಯುವ ಹಿಂದಿನ ದಿನ ಸಂಜೆ ನಾನು ಪ್ರಧಾನಿ ನಿವಾಸಕ್ಕೆ ಹೋಗಿದ್ದೆ. ಆಗ ರಾಜ್ಯಸಭಾ ಸದಸ್ಯರಾಗಿದ್ದ ಆರ್.ಕೆ. ಧವನ್ ಕೂಡ ನನ್ನೊಂದಿಗೆ ಇದ್ದರು. ನಾವು ಮೂವರೂ ಊಟ ಮಾಡುತ್ತಿದ್ದ ಸಂದರ್ಭದಲ್ಲಿ ಅಲ್ಲಿಗೆ ಬಂದ ಗುಪ್ತದಳದ ಅಧಿಕಾರಿಗಳು, ಸೀತಾರಾಂ ಕೇಸರಿಯವರು ಸರ್ಕಾರ ಪತನಗೊಳಿಸಲು ಸಿದ್ಧತೆ ನಡೆಸಿರುವ ಕುರಿತು ಮಾಹಿತಿ ನೀಡಿದರು' ಎಂದಿದ್ದಾರೆ.

ಕಾಂಗ್ರೆಸ್ ನಾಯಕರ ಜತೆ ಉತ್ತಮ ಬಾಂಧವ್ಯ ಹೊಂದಿದ್ದ ಧವನ್, ಸೀತಾರಾಂ ಕೇಸರಿ ಅವರನ್ನು ಭೇಟಿ ಮಾಡಿ ಮುಂದಿನ ಬೆಳವಣಿಗೆ ತಡೆಯುವ ಭರವಸೆ ನೀಡಿದ್ದರು. ಆದರೆ, ಮರುದಿನ ಕೇಸರಿ ಯಾರ ಕೈಗೂ ಸಿಗಲಿಲ್ಲ. ಭೇಟಿಗೆ ಅವಕಾಶವನ್ನೂ ಪಡೆಯದೆ ರಾಷ್ಟ್ರಪತಿ ಭವನಕ್ಕೆ ತೆರಳಿದ್ದರು. ಸರ್ಕಾರಕ್ಕೆ ನೀಡಿದ್ದ ಬೆಂಬಲ ಹಿಂಪಡೆಯುವ ಪತ್ರವನ್ನು ಸಲ್ಲಿಸಿದ್ದರು. ಬಳಿಕ ರಾಷ್ಟ್ರಪತಿಯವರು ಗೌಡರಿಗೆ ವಿಶ್ವಾಸ ಮತ ಯಾಚನೆಗೆ ಸೂಚಿಸಿದರು. ವಿಶ್ವಾಸಮತ ಯಾಚನೆಯಲ್ಲಿ ಗೌಡರು ಸೋತರು. ಈ ಇತಿಹಾಸಕ್ಕೆ ನಾನೂ ಒಬ್ಬ ಸಾಕ್ಷಿ' ಎಂದು ಕೃಷ್ಣ ನೆನಪಿಸಿಕೊಂಡಿದ್ದಾರೆ.

ತೈಲ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ: ನಲಪಾಡ್ ವಶಕ್ಕೆ

ಬೆಂಗಳೂರು: ಲಾಕ್‌ಡೌನ್ ನಿಯಮ ಉಲ್ಲಂಘಿಸಿ ಪ್ರತಿಭಟನೆ ನಡೆಸಿದ ಆರೋಪದಡಿ ಯುವ ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್ ಹಾಗೂ ಇತರರನ್ನು ಅಶೋಕನಗರ ಠಾಣೆ ಪೊಲೀಸರು ಶನಿವಾರ ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಂಡು ಬಿಟ್ಟು ಕಳುಹಿಸಿದರು.

ತೈಲ ಬೆಲೆ ಏರಿಕೆ ಖಂಡಿಸಿ ಯುವ ಕಾಂಗ್ರೆಸ್ ಘಟಕ ರಾಜ್ಯದಾದ್ಯಂತ ಪ್ರತಿಭಟನೆಗೆ ಕರೆ ನೀಡಿತ್ತು. ನಲಪಾಡ್ ಹಾಗೂ ಇತರರು, ಪಿಪಿಇ ಕಿಟ್ ಧರಿಸಿ ಕೈಯಲ್ಲಿ ಬ್ಯಾಟ್ ಹಿಡಿದು ಅಶೋಕ ನಗರ ಠಾಣೆ ವ್ಯಾಪ್ತಿಯ ಬಂಕ್ ಬಳಿ ಪ್ರತಿಭಟನೆ ನಡೆಸಿದರು. ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು.

ಸ್ಥಳಕ್ಕೆ ಬಂದ ಪೊಲೀಸರು, 'ನಗರದಲ್ಲಿ ಲಾಕ್‌ಡೌನ್ ಜಾರಿಯಲ್ಲಿದೆ. ಯಾವುದೇ ಪ್ರತಿಭಟನೆಗೆ ಅವಕಾಶವಿಲ್ಲ. ಹೊರಟು ಹೋಗಿ' ಎಂದಿದ್ದರು. ಅದಕ್ಕೆ ಪ್ರತಿಭಟನಕಾರರು ಒಪ್ಪಲಿಲ್ಲ. ಎಲ್ಲರನ್ನೂ ಪೊಲೀಸರು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದಿದ್ದರು. 'ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆಯಡಿ ಪ್ರತಿಭಟನಕಾರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ದಂಡ ಕಟ್ಟಿಸಿಕೊಂಡು ಎಲ್ಲರನ್ನೂ ಬಿಟ್ಟು ಕಳುಹಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

SOBHA
PASSION AT WORK

SOBHA LIMITED
CIN: L45201KA1995PLC018475
Registered & Corporate Office: 'SOBHA', Sarjapur – Marathahalli Outer Ring Road (ORR), Devarabisanahalli, Bellandur Post
BANGALORE - 560 103
Phone: 080-4932 0000

NOTICE

Notice is hereby given pursuant to Regulation 29 and 47 of the SEBI (Listing Obligations and Disclosure Requirements) Regulations, 2015 that, a meeting of the Board of Directors of the Company is scheduled on Saturday, the 12th day of June, 2021, to consider and take on record, inter-alia, the Audited Standalone and Consolidated Financial Results of the Company for the quarter and financial year ended March 31, 2021 and to recommend dividend, if any, on its equity shares.

Further details may be accessed from the website of the Company www.sobha.com or the website of Stock Exchanges where the securities of the Company are listed viz. www.nseindia.com or www.bseindia.com.

For Sobha Limited
Vighneshwar G Bhat
Company Secretary and Compliance Officer

Place: Bangalore
Date : June 05, 2021

"All the Investor Queries / Complaints / Grievances may be addressed to investors@sobha.com."

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ ಚಿಕ್ಕಬಳ್ಳಾಪುರ.
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)
ದೂ & ಫ್ಯಾಕ್ಸ್: 08156-277005 / 277006ಇ-ಮೇಲ್: pdchikkaballapur@gmail.com
ಸಂಖ್ಯೆ:ಜಿನಕೋ/ಚಿಸಿ(1)/ತಾಶಾ/ಸಿಆರ್/96/2021–22 ದಿನಾಂಕ: 31.05.2021

ಟೆಂಡರ್ ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ನಗರಸಭೆಯ ನಗರೋತ್ಥಾನ (ಮುನಿಸಿಪಾಲಿಟಿ)–3ನೇ ಹಂತದ 2ನೇ ಕಂತಿನ ಯೋಜನೆಯ ಈ ಕೆಳಕಂಡ ಕಾಮಗಾರಿಗಾಗಿ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಂದ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆ ಅವಧಿ
1	ಗೌರಿಬಿದನೂರು ನಗರಸಭಾ ವ್ಯಾಪ್ತಿಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ) –3 ಯೋಜನೆಯಡಿ ಮಲ ತ್ಯಾಜ್ಯ ಸಂಸ್ಕರಣಾ ಘಟಕ **(Feacal sludge management plant)** ನಿರ್ಮಾಣ ಕಾಮಗಾರಿ **(DMA/2021-22/WT/WORK_INDENT116161)**	157.06	09 ತಿಂಗಳು

ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ **www.eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **www.eproc.karnataka.gov.in** ನಲ್ಲಿ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು.

(1) ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: **02.06.2021. (2)** ಪೂರ್ವಭಾವಿ ಸಭೆ **(PRE -BID MEETING): 08.06.2021** ರ ಪೂರ್ವಾಹ್ನ **11:00** ಗಂಟೆಗೆ (ಗೂಗಲ್ ಮೀಟ್ ಮುಖಾಂತರ). **(3)** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:**16.06.2021** ರ ಸಂಜೆ **05.30** ಗಂಟೆಗೆ. **(4)** ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **18.06.2021** ರ ಪೂರ್ವಾಹ್ನ **11.00** ಗಂಟೆಗೆ. **(5)** ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ: **25.06.2021** ರ ಬೆಳಗ್ಗೆ **11.00** ಗಂಟೆಗೆ ಅಥವಾ ಮುಂದೆ ಸೂಚಿಸಿದ ದಿನದಂದು.

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಪೂರ್ವಭಾವಿ ಸಭೆಗೆ ಸಂಬಂಧಿಸಿದ ಗೂಗಲ್ ಮೀಟ್ ಲಿಂಕ್‌ನ್ನು ಗುತ್ತಿಗೆದಾರರ ಕೋರಿಕೆಯ ಮೇರೆಗೆ ಇ–ಮೇಲ್ ಮುಖಾಂತರ ಕಳುಹಿಸಲಾಗುವುದು. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ.
ವಾಸಾಸಂಇ/ ಚಿಕ್ಕಬಳ್ಳಾಪುರ/ ಆರ್.ಓ.ಸಂಖ್ಯೆ 45/ ಎಂ.ಸಿ.ಎ/ 2021-22

ನೈರುತ್ಯ ರೈಲ್ವೆ
ಟೇಕಲ್‌ನಲ್ಲಿ ಎಸ್‌ಟಿಬಿಎ ನೇಮಕಾತಿಗಾಗಿ ಅಧಿಸೂಚನೆಗೆ ತಿದ್ದುಪಡಿ – 1

ಕರ್ನಾಟಕ ಸರ್ಕಾರ ವಿಧಿಸಿರುವ ನಿರ್ಬಂಧಗಳ ಹಿನ್ನೆಲೆಯಲ್ಲಿ, ಟೇಕಲ್ ನಿಲ್ದಾಣದಲ್ಲಿ ಎಸ್‌ಟಿಬಿಎ ನೇಮಕಕ್ಕೆ ಆಹ್ವಾನಿಸಲಾದ 06.05.21 ರ ಅಧಿಸೂಚನೆಯ ಆರಂಭದ ದಿನಾಂಕವನ್ನು ಈ ಮೂಲಕ 07.06.21 ರಿಂದ 21.06.21 ಕ್ಕೆ ಮುಂದೂಡಲಾಗಿದೆ. ಅಂತೆಯೇ, ಸಮಯಗಳು ಈ ಕೆಳಗಿನಂತಿರುತ್ತವೆ:

ಅರ್ಜಿ ಸಲ್ಲಿಸುವ ದಿನಾಂಕ ಮತ್ತು ಸಮಯ:
21.06.2021 ರ 10:00 ಯಿಂದ 15:00 ಗಂಟೆವರೆಗೆ

ಅರ್ಜಿ ತೆರೆಯುವ ದಿನಾಂಕ ಮತ್ತು ಸಮಯ:
21.06.2021 ರ 15:05 ಗಂಟೆಗಳು

ಮಾಹಿತಿಗಾಗಿ **www.ireps.gov.in** ಗೆ ಲಾಗಾನ್ ಆಗಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
PUB/25/AASP/PRB/SWR/2021-22 ಬೆಂಗಳೂರು

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Cook

COOK WANTED. South Indian veg and non vegetarian male cook for company MD residence. At Basaveshwaranagar Bangalore. Contact: 9845343184

Teachers/ Professors

WANTED
Computer & Subject Teachers for India Literacy Project (NGO)
Qual: B.Sc – B.Ed, B.E, MCA and M.Sc working knowledge of Computers, MS Office.
Location: Raichur, Gulbarga, Bidar, Yadgir, Koppal, Bellary & Vijayanagara
No.of Posts: **24**
Send your resume/ CV to
jobs@ilpnet.org

DR.N.RAMAIAH INSTITUTE of Education(R),Gurukula Vidya Kendra School,Ramagiri,Tharahunase Post,Bangalore North-562157,Near Yelahanka Air Force,Requires Teachers for Primary/Middle/High School (B.A.,B.Ed-English/Social, BSc.,B.ed-PCM/CBZ) ,Computer Instructor.Mail Resume to: prashy.r7779@gmail.com

SJB COLLEGE OF MANAGEMENT STUDIES
STAFF RECRUITMENT 2021
Invites Applications from qualified and experienced Teaching staffs / Non- Teching staffs for the appointment of
PROFESSORS / ASSOCIATE PROFESSORS
(Ph.D Mandatory)
ASSISTANT PROFESSORS
Department of MBA
NON - TEACHING STAFF
Librarian, Administrative Officer, Office Clerck, Computer Operator
Qualification & Experience:
As per AICTE Norms, Job related benefits and performance related perks are available.
Applications can be sent Principal@sjbcms.edu.in within 10 days from the day of advertisement along with latest passport size photograph & copies of certificates / testimonial.

General

WANTED
HR EXECUTIVES
MSW or Relevant Degree 2 to 3 years experience with Excellent knowledge in recruitment, Payroll, Joining & exit formalities, Computer skill, Strong personality and good capability to take people along.
DATA ENTRY OPERATOR
Any Degree and 2 to 3 years Experience with Computer knowledge.
9900493600/ info@shinems.in

WORK FROM HOME and earn minimum 50k-1lakh/month, opportunity from AAA Rated Govt Approved Company; For Free Registration call: 8660713809

CAREER OPPORTUNITY for Unemployed Techies, Teachers, Retired Bankers, Homemakers on Fixed Income with Huge Incentives. Dial:9341838235

WANTED OFFICE ASSISTANTS (Male) H.S.R. Layout (Bangalore) Call: 9344168305 Email: starsilks@gmail.com

Receptionist/ Secretary

REQUIRED FRESHER female Administrative/ personal assistant for Kenmore school, basavanagudi opp M N Krishna rao park near Lalbagh west gate. Candidate should have good computer knowledge, good communication skills and should have flexibility and adaptability in work, send in your resume to kenmoreschool@gmail.com or whatsapp to 9901501185.

Hospital & Medical Jobs

REQUIRED FOR upcoming CV.HOSPITAL at Chetana Vihara-143B Bommasandra-IA, Bangalore. MEDICAL CONSULTANTS, DUTY - DOCTORS, NURSES, RADIOGRAPHERS, LAB TECHNICIANS and PHARMACISTS. Contact: 080-41511104, Mail:cvhospital.in@gmail.com

WANTED EXPERIENCED B.Sc NURSE for the post RESIDENTIAL NURSE. Apply: medicopastoralassociation@gmail.com /7411485215

DH Classifieds
For Lineage & Single/ Multi Column Classifieds Display ads
BOOK YOUR AD ON SUNDAY & GET 50% OFF ON WEEKDAYS
For more information contact:
9880856233 / 9845114560
9606912256

REAL ESTATE BUYING

Sites

Banashankari

BDA SITES Wanted. Banashankari 6th Stage, Anjanapura, Vishweshwaraiah Layout, Any Block, Immediate Settlement Contact: 9845444588

REAL ESTATE SELLING

Sites

Nagarabhavi

"NAGARABHAVI BDA Complex near Annapoorneshwari Temple 32x45 North-West Corner BDA Site 40ft Road. 9448432633"

Devanahalli

SITE for sale 30x40 PC realty layout Devanahalli to Doddaballapur 5KM from Devanahalli Contact: 6360086393

Hoskote

HOSKOTE 30X60 Site Sale at Kanaka Nagar, Sir. M. Vishveshwaraiah Layout, Hoskote. Contact: 9880843416, 9743535151.

Commercial Building

Mysore

BOOK PENTHOUSE Apartments on Commercial Building near to Mysore, very good Location and easy Drive distance to Ring Road. Contact Land Owner and Promoter 7676770503

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

CONNECT

FUSION MONT Svasthya
VITAMIN - Enriched Functional Water
Inviting Area Dealers & Experienced Sales Representatives
for Retail & Corporate Sales.
Contact:
9845013347

RENTAL PROPERTIES

Accommodation Available

Flats

TWO BEDROOM excellent furnished flat, Indira Nagar. Generator. Parking. 9986187882

PERSONAL

Change of Name

I, KUMARI MONALI BEHERA, Residing at No.3/39, Anugraha Nilaya, Jubliee School Road, Vijinapura, Dooravani Nagar, Bangalore-560016 have changed my name to MONALI NIKHIL GONDHKAR Vide affidavit dated 31.03.2021, sworn before notary: Y.R.Chandrasekar, Bangalore

I,POONAM .P D/o Purushotham das residing at No.8, 3rd Floor, 1st Main, 9th Cross, Mothinagar, R.T.Nagar post, Bangalore-560032 have changed my name to POONAM TAWAR vide affidavit dated 05.06.2021 sworn before notary Smt.Rajamani, Bangalore-43

LATA W/O 14846151P-NK/MT- JITENDRA KUMAR R/a #64, Sarang Vihar, Mathura, Uttar Pradesh changed name from LATA to LATA DEVI notary KV Mani Bangalore.

MATRIMONIAL

Brides Wanted

Brahmin

BANGALORE LIVING alone banker single 65 seek life companion and living together, Honest, caring, educated, pleasant looking, soft matured genuine lady who knows cooking and a vegetarian required. Mob, 6363447633

Matrimonial Bureaus

MATRIMONIAL
Register Bride and Groom profiles of Kannada Smartha Brahmins in matrimony website
http://www.hoysalakarnatakabrahmins.com.
Contact: Suma Gopalakrishna on 9886908152

OTHERS

For Sale

IMMEDIATE SALE Leather Sofa Leather diwan King size Box cot dining call 9845414482/ 8861643112

Classifieds
Book Your Classifieds Ads
Online Log in to
dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ಗಂಗಮ್ಮ ಸರ್ಕಲ್ ರಸ್ತೆ ಶೀಘ್ರ ಬಂದ್

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: ಜಾಲಹಳ್ಳಿಯ ಗಂಗಮ್ಮ ಸರ್ಕಲ್‌ನಿಂದ ವಾಯುಪಡೆ ಸ್ಟೇಷನ್ ಒಳಗಿನಿಂದ ಹಾದು ಹೋಗಿರುವ ರಸ್ತೆ ಇನ್ನೊಂದು ವಾರದಲ್ಲಿ ಬಂದ್ ಆಗಲಿದೆ. ಇದರಿಂದಾಗಿ ಎಂ.ಎಸ್. ಪಾಳ್ಯ, ಯಲಹಂಕ, ಪೀಣ್ಯ ಭಾಗಕ್ಕೆ ಸಂಚಾರ ಮಾಡುವ ಲಕ್ಷಾಂತರ ಜನರಿಗೆ ತೊಂದರೆ ಎದುರಾಗಲಿದೆ.

ಭದ್ರತಾ ಕಾರಣಕ್ಕೆ ಜಾಲಹಳ್ಳಿ ವಾಯುಪಡೆ ಈ ರಸ್ತೆ ಬಂದ್ ಮಾಡಲು ಅನುಮತಿ ಕೋರಿ ಹೈಕೋರ್ಟ್ ಮೆಟ್ಟಿಲೇರಿತ್ತು. ಸಂಚಾರ ನಿರ್ಬಂಧಿಸಲು ಹೈಕೋರ್ಟ್ ಅನುಮತಿ ನೀಡಿದ್ದು, ಫಲಕವನ್ನು ವಾಯುಪಡೆ ಅಳವಡಿಸಿದೆ. 'ಜುಮ್‌ಜುಮ್ ಗೇಟ್ ಮೂಲಕ ಹಾದು ಹೋಗುವ ರಸ್ತೆಯನ್ನು ಬಂದ್ ಮಾಡಲಾಗುವುದು' ಎಂಬ ತಿಳಿಸಿದೆ.

ಒಮ್ಮೆಲೆ ಮುಚ್ಚಿದರೆ ಜನರಿಗೆ ತೊಂದರೆ ಆಗಬಾರದು ಎಂಬ ಕಾರಣಕ್ಕೆ 10 ದಿನಗಳ ಸಮಯಾವಕಾಶ ನೀಡಿ ಸೂಚನಾ ಫಲಕ ಅಳವಡಿಸಿದೆ.

ರಸ್ತೆ ಬಂದ್ ಆಗಲಿರುವ ಬಗ್ಗೆ ಹಾಕಿರುವ ಫಲಕ

ಎಂ.ಎಸ್. ಪಾಳ್ಯ, ಯಲಹಂಕ ಕಡೆಗೆ ಹೋಗುವವರಿಗೆ ಈ ರಸ್ತೆ ಅನುಕೂಲವಾಗಿತ್ತು. ಪೀಣ್ಯ, ಕೆಂಗೇರಿ ಕಡೆಯಿಂದ ಯಲಹಂಕ ಕಡೆಗೆ ಹೋಗುವ ಬಿಎಂಟಿಸಿ ಬಸ್‌ಗಳು ಇದೇ ಮಾರ್ಗದಲ್ಲಿ ಸಂಚರಿಸುತ್ತಿದ್ದವು. ಮೆಜೆಸ್ಟಿಕ್, ಮಲ್ಲೇಶ್ವರ, ಯಶವಂತಪುರ ಕಡೆಯಿಂದ ಬರುವವರು ರಾಮಚಂದ್ರಪುರ ಕ್ರಾಸ್ ಮೂಲಕ ಅಥವಾ ಬಿಇಎಲ್ ವೃತ್ತದಿಂದ ದೊಡ್ಡ ಬೊಮ್ಮಸಂದ್ರ ಮಾರ್ಗವಾಗಿ ವಿದ್ಯಾರಣ್ಯಪುರದ ಮಾರ್ಗದಲ್ಲಿ ಎಂ.ಎಸ್. ಪಾಳ್ಯ ತಲುಪಬೇಕಾಗುತ್ತದೆ. ಇದರಿಂದ ಸುಮಾರು 5 ಕಿ.ಮೀ ಸುತ್ತಾಡಿದಂತೆ ಆಗಲಿದೆ. ಜಾಲಹಳ್ಳಿ ಕ್ರಾಸ್ ಕಡೆಯಿಂದ ಬರುವವರಂತೂ ಪರದಾಡಬೇಕಾಗುತ್ತದೆ.

ಈ ರಸ್ತೆಯನ್ನು 4 ಪಥದ ರಸ್ತೆಯನ್ನಾಗಿ ವಿಸ್ತರಿಸಿದ್ದರಿಂದ ವಾಹನಗಳ ಸಂಚಾರ ಸುಗಮವಾಗಿತ್ತು. ಆದರೆ, ರಾಮಚಂದ್ರಪುರ ಮಾರ್ಗ ಮತ್ತು ದೊಡ್ಡಬೊಮ್ಮಸಂದ್ರ ಮಾರ್ಗದ ರಸ್ತೆಗಳು ತೀರಾ ಕಿರಿದಾಗಿದ್ದು ವಾಹನ ಸಂಚಾರಕ್ಕೆ ಕಿರಿಕಿರಿಯಾಗಲಿದೆ.

ರಾಜ್ಯ ಸರ್ಕಾರದ ಮನವಿ ಮೇರೆಗೆ ವಾಯುಪಡೆ ಈ ರಸ್ತೆಯನ್ನು ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸಿತ್ತು. ವಾಹನಗಳ ದಟ್ಟಣೆ ಹೆಚ್ಚಾಗಿರುವುದರಿಂದ ಭದ್ರತೆ ಕಾರಣ ತೋರಿಸಿ ಹೈಕೋರ್ಟ್ ಮೆಟ್ಟಿಲೇರಿತ್ತು.

ಈ ರಸ್ತೆ ಬಂದ್ ಆದರೆ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗಲಿದೆ ಎಂದು ಸಂಚಾರ ಪೊಲೀಸ್ ಕಾನ್‌ಸ್ಟೆಬಲ್ ಬಸವರಾಜು ತಿಳಿಸಿದರು.

ಅಪಘಾತದಿಂದ ಸಿಕ್ಕಿಬಿದ್ದ ಸುಲಿಗೆ ಆರೋಪಿಗಳು

ಬೆಂಗಳೂರು: ವ್ಯಕ್ತಿಯೊಬ್ಬರನ್ನು ಸುಲಿಗೆ ಮಾಡಿ ಬೈಕ್‌ನಲ್ಲಿ ಪರಾರಿಯಾಗುತ್ತಿದ್ದ ಆರೋಪಿಗಳಿಬ್ಬರು ರಸ್ತೆ ಅಪಘಾತದಿಂದಾಗಿ ಪೀಣ್ಯ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

'ಪೀಣ್ಯ ಠಾಣೆ ವ್ಯಾಪ್ತಿಯಲ್ಲಿ ಶುಕ್ರವಾರ ರಾತ್ರಿ ವ್ಯಕ್ತಿಯೊಬ್ಬರನ್ನು ಸುಲಿಗೆ ಮಾಡಿದ್ದ ಆರೋಪಿಗಳು, ಸ್ಥಳದಿಂದ ಪರಾರಿಯಾಗುತ್ತಿದ್ದರು. ವ್ಯಕ್ತಿ ಅವರನ್ನು ಬೆನ್ನಟ್ಟಿ, ದಾರಿ ಮಧ್ಯೆ ಸಿಕ್ಕ ಪೊಲೀಸರಿಗೆ ವಿಷಯ ತಿಳಿಸಿದ್ದರು. ಪೊಲೀಸ್ ಸಿಬ್ಬಂದಿ ಆರೋಪಿಗಳ ಬೈಕ್ ಬೆನ್ನಟ್ಟಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಟಿವಿಎಸ್ ವೃತ್ತ ಬಳಿ ವೇಗವಾಗಿ ಬೈಕ್ ಚಲಾಯಿಸಿದ್ದ ಆರೋಪಿಗಳು, ಟೆಂಪೊಗೆ ಗುದ್ದಿಸಿದ್ದರು. ಅದರಿಂದಾಗಿ ಅವರಿಬ್ಬರು ರಸ್ತೆಯಲ್ಲೇ ಬಿದ್ದಿದ್ದರು. ಅವರಿಬ್ಬರನ್ನು ಸಾರ್ವಜನಿಕರೇ ಹಿಡಿದು ಪೊಲೀಸರಿಗೆ ಒಪ್ಪಿಸಿದರು. ಆರೋಪಿಗಳ ಬಳಿ ಮೊಬೈಲ್ ಹಾಗೂ ಮಾರಕಾಸ್ತ್ರ ಸಿಕ್ಕಿವೆ' ಎಂದೂ ಮೂಲಗಳು ತಿಳಿಸಿವೆ.

ಮಹಿಳೆಯ ಸರಗಳವು

ಬೆಂಗಳೂರು: ಮಹಿಳೆಯೊಬ್ಬರ ಸರವನ್ನು ಕಳ್ಳರು ಕಿತ್ತೊಯ್ದ ಕುರಿತು ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮೂಡಲಪಾಳ್ಯ 10ನೇ ಅಡ್ಡರಸ್ತೆ ನಿವಾಸಿ ಮೋಹನ್ ಕುಮಾರಿ, ಮನೆ ಎದುರು ನಿಂತುಕೊಂಡಿದ್ದರು. ಬೈಕ್‌ನಲ್ಲಿ ಬಂದ ಇಬ್ಬರು ಕಳ್ಳರು, 40 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಾಸ್ಕ್, ಸ್ಯಾನಿಟೈಸರ್ ಪೂರೈಕೆ ಭರವಸೆ: ₹ 48 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಸ್ಕ್, ಸ್ಯಾನಿಟೈಸರ್ ಹಾಗೂ ಇತರೆ ವೈದ್ಯಕೀಯ ಪರಿಕರ ಪೂರೈಕೆ ಮಾಡುವುದಾಗಿ ಹೇಳಿ ನಗರದ ಕಂಪನಿಯೊಂದರಿಂದ ₹ 48 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಈಶಾನ್ಯ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಂಪನಿ ಪ್ರತಿನಿಧಿಯಾಗಿರುವ ವಿದ್ಯಾರಣ್ಯಪುರದ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಸ್ಸಾಂನ ನಿಪ್ಪೊನ್ ದುಲುವಾ, ಹುಜ್ಜೈ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಂಪನಿಗೆ ಬೇಕಾದ ಮಾಸ್ಕ್, ಸ್ಯಾನಿಟೈಸರ್ ಹಾಗೂ ಕೆಲ ವೈದ್ಯಕೀಯ ಸಾಧನ ಖರೀದಿಗಾಗಿ ಹುಡುಕಾಟ ನಡೆದಿತ್ತು. ಕಂಪನಿ ಪ್ರತಿನಿಧಿ, ಆನ್‌ಲೈನ್ ಮೂಲಕ ಆರೋಪಿಗಳನ್ನು ಸಂಪರ್ಕಿಸಿದ್ದರು. ಮುಂಗಡವಾಗಿ ಹಣ ನೀಡಬೇಕೆಂದು ಹೇಳಿದ್ದ ಆರೋಪಿಗಳು, ವಿವಿಧ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹ 48 ಲಕ್ಷ ಹಾಕಿಸಿಕೊಂಡಿದ್ದರು.'

'ಹಣ ಪಡೆದ ನಂತರ ಆರೋಪಿಗಳು, ಮಾಸ್ಕ್ ಹಾಗೂ ಸ್ಯಾನಿಟೈಸರ್ ಕಳುಹಿಸಿರಲಿಲ್ಲ. ಈ ಬಗ್ಗೆ ಕಂಪನಿ ಪ್ರತಿನಿಧಿಗಳು ವಿಚಾರಿಸಿದಾಗ ಸರಿಯಾಗಿ ಪ್ರತಿಕ್ರಿಯಿಸಿಲ್ಲ. ಹಣವನ್ನೂ ಮರಳಿಸಿಲ್ಲ. ಈ ಸಂಗತಿ ದೂರಿನಲ್ಲಿದೆ' ಎಂದೂ ಪೊಲೀಸರು ತಿಳಿಸಿದರು.

₹ 2.10 ಲಕ್ಷ ಮೌಲ್ಯದ ಮದ್ಯ ಜಪ್ತಿ

ಬೆಂಗಳೂರು: ಲಾಕ್‌ಡೌನ್ ನಡುವೆಯೇ ಮದ್ಯ ಅಕ್ರಮವಾಗಿ ಸಾಗಣೆ ಮಾಡುತ್ತಿದ್ದವರ ವಿರುದ್ಧ ಪ್ರತ್ಯೇಕ ಕಾರ್ಯಾಚರಣೆ ನಡೆಸಿರುವ ಎಲೆಕ್ಟ್ರಾನಿಕ್ ಸಿಟಿ ಹಾಗೂ ಬೇಗೂರು ಠಾಣೆ ಪೊಲೀಸರು, ₹ 2.10 ಲಕ್ಷ ಮೌಲ್ಯದ ಮದ್ಯ ಜಪ್ತಿ ಮಾಡಿದ್ದಾರೆ.

'ದೊಡ್ಡತೂಗೂರಿನ ಬಾರ್‌ನಿಂದ ಮದ್ಯವನ್ನು ಅಕ್ರಮವಾಗಿ ವಾಹನದಲ್ಲಿ ಸಾಗಿಸಲಾಗುತ್ತಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಎಲೆಕ್ಟ್ರಾನಿಕ್ ಸಿಟಿ ಪೊಲೀಸರು, ವಾಹನ ಸಮೇತ ಮದ್ಯ ಜಪ್ತಿ ಮಾಡಿದ್ದಾರೆ. ಚಾಲಕ ವೇಲು (27) ಎಂಬಾತನನ್ನು ಬಂಧಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

'ಮದ್ಯವನ್ನು ಅಕ್ರಮವಾಗಿ ಸಾಗಿಸುತ್ತಿದ್ದಆರೋಪದಡಿಕುಮಾರ್,ಬಾಲಾಜಿ, ಜಗನ್, ಸುಂದರ್ ಮೂರ್ತಿ ಹಾಗೂ ರಾಜೇಶ್ ಎಂಬುವರನ್ನು ಬಂಧಿಸಿದ್ದಾರೆ.

ಮಾದಕ ವಸ್ತು ಜಾಲ: ಆರೋಪಿ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತು ಮಾರಾಟ ಜಾಲದಲ್ಲಿ ಸಕ್ರಿಯನಾಗಿದ್ದ ಆರೋಪಿ ರಿಜೇಶ್ ರವೀಂದ್ರನ್ ಸಲ್ಲಿಸಿದ್ದ ಎರಡು ಕ್ರಿಮಿನಲ್ ಪರಿಷ್ಕರಣೆ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಬೆಂಗಳೂರು ವಲಯ ಮಾದಕ ವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಗುಪ್ತಚರ ಅಧಿಕಾರಿ ಸಲ್ಲಿಸಿದ್ದ ದೂರು ಆಧರಿಸಿ 2021ರ ಫೆಬ್ರುವರಿ 20ರಂದು ವಿಶೇಷ ನ್ಯಾಯಾಲಯ ಹೊರಡಿಸಿದ್ದ ಆದೇಶ ಪ್ರಶ್ನಿಸಿ ರಿಜೇಶ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಜಾಮೀನು ನಿರಾಕರಿಸಿದ ಆದೇಶವನ್ನೂ ಅವರು ಪ್ರಶ್ನಿಸಿದ್ದರು.

'ಎನ್‌ಸಿಬಿ ವರದಿಯನ್ನು ಸಲ್ಲಿಸಬೇಕೇ ಹೊರತು ನ್ಯಾಯಾಲಯಕ್ಕೆ ದೂರು ಸಲ್ಲಿಸಬಾರದು. ತೋಫಾನ್ ಸಿಂಗ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಈ ಆದೇಶ ಹೊರಡಿಸಿದೆ' ಎಂದು ಅರ್ಜಿದಾರ ರಿಜೇಶ್ ಪರ ವಕೀಲರು ವಾದಿಸಿದರು.

'ಎನ್‌ಸಿಬಿ ಅಧಿಕಾರಿಗಳು ಮಾದಕ ವಸ್ತು ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಅಡಿಯಲ್ಲಿ ದೂರು ದಾಖಲಿಸಿದ್ದಾರೆಯೇ ಹೊರತು, ಸಿಆರ್‌ಪಿಸಿ ಅಡಿಯಲ್ಲಿ ಅಲ್ಲ. ಎನ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ ಕಾರ್ಯನಿರ್ವಹಿಸುವಾಗ ಸಿಆರ್‌ಪಿಸಿಯನ್ನು ಅವಲಂಬಿಸಬೇಕಿಲ್ಲ' ಎಂದು ಎನ್‌ಸಿಬಿ ಪರ ವಕೀಲರು ವಾದಿಸಿದರು.

'ನಿಗದಿತ 180 ದಿನಗಳಲ್ಲಿ ಎನ್‌ಸಿಬಿ ಪೊಲೀಸರು ದೂರು ದಾಖಲಿಸಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರ ಅಧಿಕಾರ ನೀಡಿದೆ' ಎಂದು ನ್ಯಾಯಮೂರ್ತಿ ಎಚ್.ಬಿ. ಪ್ರಭಾಕರ ಶಾಸ್ತ್ರಿ ಅಭಿಪ್ರಾಯಪಟ್ಟರು.

2020ರ ಆಗಸ್ಟ್ 21ರಂದು ರಿಜೇಶ್ ಮನೆಯಲ್ಲಿ ಎನ್‌ಸಿಬಿ ಅಧಿಕಾರಿಗಳು ಶೋಧ ನಡೆಸಿದ್ದರು. ನಿಷೇಧಿತ ವಸ್ತುಗಳು ಈ ವೇಳೆ ಪತ್ತೆಯಾದ ಕಾರಣ ಅವರನ್ನು ಬಂಧಿಸಲಾಗಿತ್ತು.



ನಾಗರಬಾವಿಯಲ್ಲಿ ಸಸಿ ನೆಡುವ ಮೂಲಕ ವಸತಿ ಸಚಿವ ವಿ.ಸೋಮಣ್ಣ ಪರಿಸರದ ದಿನಕ್ಕೆ ಚಾಲನೆ ನೀಡಿದರು. ಗೋವಿಂದರಾಜನಗರ ಮಂಡಲ ಅಧ್ಯಕ್ಷ ವಿಶ್ವನಾಥ ಗೌಡ ಮತ್ತು ಎನ್‌ಜಿಇಎಫ್ ಬಡಾವಣೆಯ ನಿವಾಸಿಗಳ ಸಂಘ ಮತ್ತು ಸಾಂಸ್ಕೃತಿಕ ಒಕ್ಕೂಟದ ಪದಾಧಿಕಾರಿಗಳು ಇದ್ದರು (ಮೊದಲನೇ ಚಿತ್ರ), ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮಗಳ ಕುರಿತು ರಂಗಚಂದಿರ ಟ್ರಸ್ಟ್ ವತಿಯಿಂದ ಪುರಭವನದ ಬಳಿ ಜಾಗೃತಿ ಕಾರ್ಯಕ್ರಮವನ್ನು ಶನಿವಾರ ಏರ್ಪಡಿಸಲಾಯಿತು (ಮಧ್ಯದ ಚಿತ್ರ), ಪರಿಸರ ದಿನದ ಪ್ರಯುಕ್ತ ಶಾಸಕ ಉದಯ್ ಬಿ.ಗರುಡಾಚಾರ್ ಅವರು ಬಡವರಿಗೆ ಆಹಾರ ಪದಾರ್ಥಗಳು ಹಾಗೂ ಸಸಿಗಳನ್ನು ವಿತರಿಸಿದರು ಪ್ರಜಾವಾಣಿ ಚಿತ್ರಗಳು

ವಿಶ್ವ ಪರಿಸರ ದಿನ ಆಚರಣೆ • ನಗರದ ವಿವಿಧೆಡೆ ಸಂಘ ಸಂಸ್ಥೆಗಳಿಂದ ಸಸಿ ನಾಟಿ

ಉದ್ಯಾನ ನಗರಿಯ ಭೂಮಡಿಲು ತುಂಬಿದ ಸಸಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪರಿಸರ ದಿನದ ಅಂಗವಾಗಿ ವಿವಿಧ ಸಂಘ ಸಂಸ್ಥೆಗಳು ನಗರದ ಹಲವೆಡೆ ಶನಿವಾರ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಂಡವು. ಉದ್ಯಾನ ನಗರಿಯ ಭೂಮಡಿಲಿಗೆ ಹಸಿರುಡುಗೆ ತೊಡಿಸುವ ಕಾರ್ಯ ಭರದಿಂದ ನಡೆಯಿತು. ಈ ಸಸಿಗಳಿಗೆ ಮಧ್ಯಾಹ್ನ ಮಳೆಯ ಸಿಂಚನವೂ ಆಯಿತು.

ಕೋವಿಡ್ ಕಾರಣದಿಂದ ಸಂಘ–ಸಂಸ್ಥೆಗಳು ಪರಿಸರ ದಿನಾಚರಣೆಯನ್ನು ಸರಳವಾಗಿ ಆಯೋಜಿಸಿದವು. ಕೆಲವೇ ಮಂದಿ ಅಂತರ ಕಾಯ್ದುಕೊಂಡು ಸಸಿಗಳನ್ನು ನೆಟ್ಟರು. ಆನ್‌ಲೈನ್ ವೇದಿಕೆಯಲ್ಲೂ ಪರಿಸರ ಕಾಳಜಿ ಮೂಡಿಸುವ ವಿಚಾರ ಸಂಕಿರಣ, ಸಂವಾದ ಹಾಗೂ ವೆಬಿನಾರ್‌ಗಳು ನಡೆದವು.

ಬಿಡುಗಡೆಗೊಂಡು ಮನೆಗೆ ತೆರಳಿದ ರೋಗಿಗಳಿಗೆ ಜೆ.ಪಿ.ನಗರದ ಜಿವಿಜಿ ಇನ್ವಿವೊ ಆಸ್ಪತ್ರೆಯು ಸಸಿಗಳನ್ನು ವಿತರಿಸಿತು. ಕಮಲಾನಗರದ ರಾಷ್ಟ್ರಕವಿ ಕುವೆಂಪು ಉದ್ಯಾನದಲ್ಲಿ ಸಸಿ ನೆಡುವ ಕಾರ್ಯಕ್ಕೆ ಚಾಲನೆ ನೀಡಿದ ಅಬಕಾರಿ ಸಚಿವ ಕೆ.ಗೋಪಾಲಯ್ಯ,

'ಪರಿಸರ ಕಾಳಜಿ ಪ್ರತಿಯೊಬ್ಬರಲ್ಲೂ ಮೂಡಬೇಕು. ವರ್ಷದ ಪ್ರತಿ ದಿನವೂ ಪರಿಸರ ದಿನವಾಗಬೇಕು' ಎಂದರು.

ಎನ್‌ಜಿಇಎಫ್ ಗೃಹ ನಿರ್ಮಾಣ ಮಂಡಳಿ ಹಾಗೂ ನಾಗರಬಾವಿ ಯುವಕರ ಸಂಘಗಳ ಸಹಯೋಗದಲ್ಲಿ ನಾಗರಬಾವಿ ವಾರ್ಡ್‌ನಲ್ಲಿ ಸಸಿ ನೆಡುವ ಕಾರ್ಯಕ್ಕೆ ವಸತಿ ಸಚಿವ ವಿ.ಸೋಮಣ್ಣ ಚಾಲನೆ ನೀಡಿದರು.

ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರು ಪರಿಸರ ದಿನದ ಅಂಗವಾಗಿ ಗೃಹ ಕಚೇರಿ ಕೃಷ್ಣಾ ಬಳಿ ಸಸಿ ನೆಟ್ಟರು

ಈ ವೇಳೆ ಪೌರ ಕಾರ್ಮಿಕರಿಗೆ ಬೆಳಗಿನ ಉಪಹಾರವನ್ನೂ ವಿತರಿಸಲಾಯಿತು.

ಕೆನರಾ ಬ್ಯಾಂಕ್ ತರಬೇತಿ ಸಂಸ್ಥೆ ಹಾಗೂ ರುಡ್‌ಸೆಟ್ ಸಂಸ್ಥೆಗಳ ಸಹಯೋಗದಲ್ಲಿ ಮಲ್ಲೇಶ್ವರದಲ್ಲಿ ಸಸಿಗಳನ್ನು ನೆಡಲಾಯಿತು. ನಿವೃತ್ತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ ನೇತೃತ್ವದಲ್ಲಿ ರಾಜರಾಜೇಶ್ವರಿ ನಗರದ ವಿವಿಧ ಬಡಾವಣೆಗಳಲ್ಲಿ ವಿವಿಧ ರೀತಿಯ ಜಾತಿಯ ಸಸಿಗಳನ್ನು ನೆಟ್ಟರು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ಗಿಡಗಳನ್ನು ನೆಡುವ ಮೂಲಕ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್. ರಾಜೇಂದ್ರ ಪ್ರಸಾದ್ ಪರಿಸರ ದಿನಕ್ಕೆ ಚಾಲನೆ ನೀಡಿದರು. ಕೋರಮಂಗಲದ ಚೆಕ್ ಪೋಸ್ಟ್ ಬಳಿ ರಿಫಾರೆಸ್ಟ್ ಇಂಡಿಯಾ ವತಿಯಿಂದ ಸಸಿ ನೆಡಲಾಯಿತು. ಶುದ್ಧ ಗಾಳಿ ಸಿಗಲಿ ಎಂಬ ಆಶಯದೊಂದಿಗೆ ಎಬಿವಿಪಿ ತಂಡದವರು ಮಲ್ಲೇಶ್ವರದ ಹಲವು ಭಾಗಗಳಲ್ಲಿ ಸಸಿಗಳನ್ನು ನೆಟ್ಟರು.

ಆನ್‌ಲೈನ್‌ನಲ್ಲಿ 'ಹಸಿರು' ಸಂವಾದ

ಬೆಂಗಳೂರು ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯಗಳ ಜಂಟಿ ಆಶ್ರಯದಲ್ಲಿ 'ಅಂತರರಾಷ್ಟ್ರೀಯ ಹವಾಮಾನ ವೈಪರೀತ್ಯ' ಕುರಿತು ಆನ್‌ಲೈನ್ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್,'ಪ್ರವಾಸದ ನೆಪದಲ್ಲಿ ವಾಯು ಹಾಗೂ ಜಲ ಮಾಲಿನ್ಯ ಉಂಟು ಮಾಡುತ್ತಿರುವುದು ಮುಂದಿನ ಪೀಳಿಗೆಯವರಿಗೆ ಮಾರಕ. ಸೈಕಲ್ ಬಳಸಿ ವಾಯು ಮಾಲಿನ್ಯ ತಡೆಯಬೇಕು' ಎಂದರು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ವೇಣುಗೋಪಾಲ್, ನಗರ ವಿಶ್ವವಿದ್ಯಾಲಯದ ಕುಲಪತಿ ಡಾ.ಲಿಂಗರಾಜ ಗಾಂಧಿ ಭಾಗವಹಿಸಿದ್ದರು.

ದಯಾನಂದ ಸಾಗರ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗ ಆಯೋಜಿಸಿದ್ದ ವೆಬಿನಾರನ್ನು ಇಂಡಿಯನ್ ವಾಟರ್ ವರ್ಕ್ಸ್ ಅಸೋಸಿಯೇಷನ್ ಅಧ್ಯಕ್ಷ ಎಂ.ಸತ್ಯನಾರಾಯಣ ಉದ್ಘಾಟಿಸಿದರು.

ಕಾವೇರಿ ಕೂಗು, ರಾಷ್ಟ್ರೀಯ ಬಿದಿರು ಮಿಷನ್, ಇಂಡಿಯನ್ ಪ್ಲೈವುಡ್ ಇಂಡಸ್ಟ್ರೀಸ್ ರಿಸರ್ಚ್ ಆ್ಯಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳ ಸಹಯೋಗದಲ್ಲಿ 'ಕರ್ನಾಟಕದಲ್ಲಿ ಬಿದಿರು ಕೃಷಿ-ನೆಡುವಿಕೆಯಿಂದ ಲಾಭದವರೆಗೆ' ಕುರಿತ ವೆಬಿನಾರ್ ಏರ್ಪಡಿಸಲಾಯಿತು. 500ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

'ಸರ್ಕಾರವೇ ಗೋಹತ್ಯೆ ಮಾಡುತ್ತಿದೆ'

ಬೆಂಗಳೂರು: ರಾಸುಗಳಿಗೆ ಕಾಲು–ಬಾಯಿ ರೋಗಕ್ಕೆ ಲಸಿಕೆ ನೀಡದೆ ಇರುವುದರಿಂದ ಅವು ನರಳಾಡಿ ಸಾಯುವ ಸನ್ನಿವೇಶ ನಿರ್ಮಾಣವಾಗಿದೆ. ಲಸಿಕೆ ಅಭಿಯಾನ ನಡೆಸದೆ ಸರ್ಕಾರವೇ ಗೋಹತ್ಯೆಗೆ ಕಾರಣವಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಈ ಕುರಿತು ಶನಿವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಕಳೆದ ಅಕ್ಟೋಬರ್‌ನಲ್ಲಿ ಕಾಲು–ಬಾಯಿ ರೋಗಕ್ಕೆ ಲಸಿಕೆ ಅಭಿಯಾನ ನಡೆಯಬೇಕಿತ್ತು. ಕೇಂದ್ರ ಸರ್ಕಾರ ಅಭಿಯಾನ ನಡೆಸಿಲ್ಲ. ರಾಜ್ಯ ಸರ್ಕಾರವೂ ಕೇಳಿಲ್ಲ. ಈಗ ರಾಸುಗಳು ನರಳುತ್ತಿವೆ' ಎಂದು ದೂರಿದ್ದಾರೆ.

ಗೋ ರಕ್ಷಣೆ ಕುರಿತು ಹಾದಿ ಬೀದಿಯಲ್ಲಿ ಅರಚುವ ಬಿಜೆಪಿ ಗೋರಕ್ಷಣೆಗಾಗಿ ಕೆಲಸ ಮಾಡುವುದಿಲ್ಲ ಎಂಬುದಕ್ಕೆ ಇದು ತಾಜಾ ನಿದರ್ಶನ. ಹಿಂದೆಯೂ ಬಿಜೆಪಿ ಅಧಿಕಾರದಲ್ಲಿದ್ದಾಗ ಕಾಲು–ಬಾಯಿ ರೋಗದಿಂದ ಹಸುಗಳು ಮೃತಪಟ್ಟಿದ್ದವು. ಆಗ, ತಮ್ಮ ಕಡೆಯಿಂದ ರೈತರಿಗೆ ವೈಯಕ್ತಿಕವಾಗಿ ಪರಿಹಾರ ನೀಡಿದ ಬಳಿಕ ಎಚ್ಚೆತ್ತ ಸರ್ಕಾರ ರೈತರ ನೆರವಿಗೆ ಬಂದಿತ್ತು. ಗೋವುಗಳ ಕುರಿತು ದೊಡ್ಡದಾಗಿ ಮಾತನಾಡುವ ಬಿಜೆಪಿ ಈಗ ಅವುಗಳ ರಕ್ಷಣೆ ಮಾಡಲಿ ಎಂದು ಆಗ್ರಹಿಸಿದ್ದಾರೆ.

ಕಾಲು–ಬಾಯಿ ಜ್ವರ ಭೀಕರವಾದ ಸಾಂಕ್ರಾಮಿಕ ರೋಗ. ಹಸುಗಳು ನರಳಾಡಿ ಸಾಯುವುದನ್ನು ನೋಡಿ ರೈತರೂ ಕುಗ್ಗಿ ಹೋಗುತ್ತಾರೆ. ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಈ ರೋಗ ಕಾಣಿಸಿಕೊಂಡಿದೆ. ರಾಜ್ಯ ಸರ್ಕಾರ ತಕ್ಷಣ ಎಚ್ಚೆತ್ತುಕೊಂಡು ರೋಗ ಹರಡದಂತೆ ತಡೆಯಬೇಕು. ಜೂನ್‌ನಲ್ಲಿ ನಡೆಯಬೇಕಿರುವ ಲಸಿಕಾ ಅಭಿಯಾನ ನಿಲ್ಲದಂತೆ ನೋಡಿಕೊಳ್ಳಬೇಕು ಎಂದು ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಮಕ್ಕಳ ಸಮೀಕ್ಷೆ: ಗಡುವು ವಿಸ್ತರಣೆ

ಬೆಂಗಳೂರು: ಮಕ್ಕಳನ್ನು ಶಾಲೆಗೆ ದಾಖಲಿಸಿಕೊಳ್ಳಲು ಮನೆ–ಮನೆಗೆ ತೆರಳಿ ಸಮೀಕ್ಷೆ ನಡೆಸಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ(ಪಿಡಿಒ) ನೀಡಲಾಗಿದ್ದ ಗಡುವನ್ನು ಹೈಕೋರ್ಟ್ ಜುಲೈ 15ರವರೆಗೆ ವಿಸ್ತರಿಸಿದೆ.

'ಏಪ್ರಿಲ್ 15ರ ಗಡುವಿನೊಳಗೆ ಸಮೀಕ್ಷೆ ಕಾರ್ಯ ಪೂರ್ಣಗೊಳಿಸದ ಕಾರಣಕ್ಕೆ ಪಿಡಿಒಗಳಿಗೆ ಸರ್ಕಾರ ಶೋಕಾಸ್ ನೋಟಿಸ್ ಹೊರಸಿತ್ತು. ಕೋವಿಡ್ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಈ ವಿಸ್ತರಣೆ ಮಾಡಲಾಗಿದೆ. ಈ ಸಂದರ್ಭದಲ್ಲಿ ಮನೆ ಮನೆಗೆ ತೆರಳಿ ಸಮೀಕ್ಷೆ ನಡೆಸಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಗಡುವನ್ನು ಮೂರು ತಿಂಗಳ ಅವಧಿಗೆ ವಿಸ್ತರಣೆ ಮಾಡುವುದೊಂದೇ ದಾರಿ' ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಪೀಠ ತಿಳಿಸಿತು.

ಗಡುವು ವಿಸ್ತರಿಸಬೇಕು ಎಂದು ಕೋರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಅರ್ಜಿ ಸಲ್ಲಿಸಿತ್ತು. ಶಾಲೆ ಬಿಟ್ಟ ಮಕ್ಕಳ ಬಗ್ಗೆ ಸ್ವಯಂ ಪ್ರೇರಿತ ಅರ್ಜಿ ದಾಖಲಿಸಿಕೊಂಡಿದ್ದ ಹೈಕೋರ್ಟ್, ಸಮೀಕ್ಷೆ ನಡೆಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಅದನ್ನು ಆಧರಿಸಿ ಗಡುವು ನಿಗದಿ ಮಾಡಿ ಸರ್ಕಾರ ಪಿಡಿಒಗಳಿಗೆ ಶೋಕಾಸ್ ನೋಟಿಸ್ ನೀಡಿತ್ತು.



ಚಿವುಟಿದರೂ ಚಿಗುರುವೆ... ಕಬ್ಬನ್ ಉದ್ಯಾನದಲ್ಲಿ ಕಡಿದ ಬಿದಿರಿನಲ್ಲಿ ಚಿಗುರಿದ ಸಸಿಯೊಂದರಲ್ಲಿ ಅರಳಿಕೊಂಡಿದ್ದ ಹೂವು ಪರಿಸರ ದಿನಕ್ಕೆ ಶುಭ ಕೋರುವಂತಿತ್ತು ಪ್ರಜಾವಾಣಿ ಚಿತ್ರ /ಎಂ.ಎಸ್.ಮಂಜುನಾಥ್

'ಜನರಲ್ಲಿ ರೋಗ ಪ್ರತಿರೋಧಕ ಶಕ್ತಿ ದುರ್ಬಲ'

ಉಸಿರಾಡುವ ಗಾಳಿ, ಕುಡಿಯುವ ನೀರು ವಿಷಪೂರಿತ: ನಾಗೇಶ ಹೆಗಡೆ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಹಿಂದಿನ ನೂರಾರು ವರ್ಷಗಳಿಂದ ಗಾಳಿಯನ್ನು ಕೊಲೆ ಮಾಡಿದ್ದೇವೆ. ಜಲ, ನೆಲ, ಆಹಾರ ಮಾಲಿನ್ಯವೂ ನಿಂತಿಲ್ಲ. ಉಸಿರಾಡುವ ಗಾಳಿ, ಕುಡಿಯುವ ನೀರು ವಿಷಪೂರಿತವಾಗಿದೆ. ಇದರಿಂದ ಜನರಲ್ಲಿ ರೋಗ ಪ್ರತಿರೋಧಕ ಶಕ್ತಿ ಕ್ರಮೇಣ ಕಡಿಮೆಯಾಗುತ್ತಿದೆ' ಎಂದು ಹಿರಿಯ ಪತ್ರಕರ್ತ ಹಾಗೂ ಪರಿಸರವಾದಿ ನಾಗೇಶ ಹೆಗಡೆ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕವು ಆನ್‌ಲೈನ್ ಮೂಲಕ ಹಮ್ಮಿಕೊಂಡಿದ್ದ 'ವಿಚಾರ



ನಾಗೇಶ ಹೆಗಡೆ

ಕಲರವ' ಉಪನ್ಯಾಸ ಮಾಲಿಕೆಯಲ್ಲಿ 'ಜನಪದ ಪರಿಸರ' ಕುರಿತು ಅವರು ಮಾತನಾಡಿದರು.

'ನಿಫಾ, ಹಕ್ಕಿಜ್ವರ, ಮಂಗನ ಕಾಯಿಲೆ ಸೇರಿದಂತೆ ಹಲವಾರು ರೋಗಗಳು ಪ್ರಾಣಿ ಪಕ್ಷಿಗಳಿಂದ ಹರಡುತ್ತಿವೆ. ನಮ್ಮ ಅವ್ಯವಸ್ಥೆಗಳೇ ಇದಕ್ಕೆ ಕಾರಣ. ಇದರಿಂದಲೇ ಎಲ್ಲ ರೀತಿಯ ವೈರಸ್, ಶಿಲೀಂಧ್ರಗಳು ಹುಟ್ಟಿಕೊಳ್ಳುತ್ತಿವೆ. ದೊಡ್ಡ ಆಸ್ಪತ್ರೆಗಳು ಪ್ರಬಲವಾಗುತ್ತಿದ್ದು, ನಾವೆಲ್ಲ ಆಂತರಿಕ ರೋಗಪ್ರತಿರೋಧಕ ಶಕ್ತಿ ಕಳೆದುಕೊಂಡು ದುರ್ಬಲರಾಗುತ್ತಿದ್ದೇವೆ' ಎಂದರು.

ಪರಿಸರ ದಿನವನ್ನು 'ಪರಿಸರದ ಪುನಃಶ್ಚೇತನ'ದ ಘೋಷಣೆಯಡಿ ಆಚರಿಸುವಂತೆ ವಿಶ್ವಸಂಸ್ಥೆ ಕರೆ ನೀಡಿದೆ. ಮುಂದಿನ 10 ವರ್ಷ ಪರಿಸರದ ಮರು ಸಂವರ್ಧನೆ ಆಗಬೇಕು ಎಂದೂ ಹೇಳಿದೆ. ಲಾಕ್‌ಡೌನ್ ನಂತರ ಪರಿಸರ ತಾನಾಗೇ ಪುನಃಶ್ಚೇತಗೊಂಡಿರುವ ಉದಾಹರಣೆಗಳಿವೆ. ಅಪಾಯದಲ್ಲಿರುವ ಎಲ್ಲ ಜೀವಸಂಕುಲಗಳನ್ನು ಉಳಿಸಬೇಕಿದೆ. ನಮ್ಮ ಅಭಿವ್ಯಕ್ತಿಗಳ ಮೂಲಕ ಪರಿಸರದ ಪುನಶ್ಚೇತನಕ್ಕೆ ಉಳಿದವರನ್ನು ಪ್ರೇರೇಪಿಸಬೇಕು' ಎಂದು ಕಿವಿಮಾತು ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್.ವೇಣುಗೋಪಾಲ್ ಅವರು,'ಪರಿಸರ ಸಮತೋಲನವನ್ನು ನಾವೆಲ್ಲ ಹದಗೆಡಿಸುತ್ತಿದ್ದೇವೆ. ಪರಿಸರದ ಪುನಃಶ್ಚೇತನವಾಗದಿದ್ದರೆ, ಅಪಾಯದ ದಿನಗಳು ಸನ್ನಿಹಿತ. ಪರಿಸರ ಸಂರಕ್ಷಣೆಯಲ್ಲಿ ಎಲ್ಲರೂ ತೊಡಗಿಸಿಕೊಳ್ಳಬೇಕು. ಸಂರಕ್ಷಣೆ ಕುರಿತು ಪ್ರತಿ ಶಾಲಾ ಕಾಲೇಜುಗಳಲ್ಲಿ ಪ್ರಚಾರದ ಕೆಲಸವಾಗಬೇಕು' ಎಂದರು.

ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಎನ್.ಸತೀಶ್ ಗೌಡ ಹಾಗೂ ಇತರರು ಭಾಗವಹಿಸಿದ್ದರು.

ಕಟ್ಟಡ ಕಾರ್ಮಿಕರಿಗೆ ನೆರವು: ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯಿಂದ ಸಂಕಷ್ಟದಲ್ಲಿ ಇರುವವರಿಗೆ ಮೊದಲ ಹಂತದಲ್ಲಿ ಘೋಷಿಸಿದ ಆರ್ಥಿಕ ಪ್ಯಾಕೇಜ್‌ನಡಿ, ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಿಗೆ ತಲಾ ₹ 3 ಸಾವಿರ ಪರಿಹಾರಧನ ವಿತರಣೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶನಿವಾರ ಚಾಲನೆ ನೀಡಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಇವತ್ತು (ಶನಿವಾರ) ಸುಮಾರು 4 ಲಕ್ಷ ಕಟ್ಟಡ ಕಾರ್ಮಿಕರ ಖಾತೆಗಳಿಗೆ ನೇರವಾಗಿ ಹಣ ವರ್ಗಾವಣೆ ಮಾಡಿದ್ದೇನೆ. ಸುಮಾರು 25 ಲಕ್ಷ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಒಟ್ಟು ₹ 749.55 ಕೋಟಿ ವರ್ಗಾವಣೆ ಮಾಡಲಾಗುವುದು' ಎಂದರು.

'ಅಸಂಘಟಿತ ವಲಯದ ಒಟ್ಟು 11 ವರ್ಗದ ಕಾರ್ಮಿಕರಿಗೆ (ಕ್ಷೌರಿಕರು, ಅಗಸರು, ಟೈಲರ್‌ಗಳು, ಹಮಾಲಿಗಳು, ಚಿಂದಿ ಆಯುವವರು, ಕುಂಬಾರರು, ಭಟ್ಟಿ ಕಾರ್ಮಿಕರು, ಅಕ್ಕಸಾಲಿಗರು, ಮೆಕ್ಯಾನಿಕ್‌ಗಳು, ಕಮ್ಮಾರರು, ಗೃಹ ಕಾರ್ಮಿಕರು) ಅರ್ಜಿ ಸಲ್ಲಿಸಲು ಅನುಕೂಲ ಆಗುವಂತೆ ಆನ್‌ಲೈನ್ ಅರ್ಜಿ ಸಲ್ಲಿಸುವ ವ್ಯವಸ್ಥೆಗೂ ಚಾಲನೆ ನೀಡಲಾಗಿದೆ' ಎಂದರು.

ವಿಶ್ವ ಪರಿಸರ ದಿನವೇ ಧರೆಗುರುಳಿದ ಮರಗಳು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪರಿಸರ ದಿನದ ಅಂಗವಾಗಿ ಗಿಡಗಳನ್ನು ನೆಟ್ಟು ಪೋಷಣೆ ಮಾಡುವುದು ಸಾಮಾನ್ಯ ಪರಿಪಾಠ. ಈ ವಿಶೇಷ ದಿನವೇ ದಾಸರಹಳ್ಳಿ ಸಮೀಪದ ಚೊಕ್ಕಸಂದ್ರ ವಾರ್ಡ್‌ನ ಸರ್ಕಾರಿ ಶಾಲೆಯ ಎದುರು 8ಕ್ಕೂ ಹೆಚ್ಚು ಮರಗಳಿಗೆ ಕೊಡಲಿ ಪೆಟ್ಟು ಬಿದ್ದಿದೆ!

ಪಾಲಿಕೆಯ ಮಾಜಿ ಸದಸ್ಯ ಮುನಿಸ್ವಾಮಿ ಅವರ ಈ ಕೃತ್ಯಕ್ಕೆ ಸಾರ್ವಜನಿಕರಿಂದ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ವಿಷಯ ತಿಳಿದೊಡನೆ ಸ್ಥಳಕ್ಕೆ ಧಾವಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಮುನಿಸ್ವಾಮಿ ಹಾಗೂ ಇತರರನ್ನು ವಶಕ್ಕೆ ಪಡೆದಿದ್ದಾರೆ. ಮರ ಕಡಿಯಲು ಬಳಸಿದ್ದ ಉಪಕರಣಗಳನ್ನೂ ಜಪ್ತಿ ಮಾಡಿದ್ದಾರೆ. ಅನುಮತಿ ಇಲ್ಲದೇ ಮರಗಳನ್ನು ಕಡಿದಿರುವ ಕಾರಣ ಮುನಿಸ್ವಾಮಿ ಸೇರಿದಂತೆ ಮೂವರ ವಿರುದ್ಧ ಎಫ್‌ಐಆರ್ ಕೂಡ ದಾಖಲಿಸಲಾಗಿದೆ.

ಶಾಲೆಯ ಎದುರು ಮರಗಳನ್ನು ಕಡಿದಿರುವುದು

'30 ವರ್ಷಗಳಷ್ಟು ಹಳೆಯದಾದ ದೊಡ್ಡ ಮರಗಳನ್ನು ಧರೆಗುರುಳಿಸಲಾಗಿದೆ. ಈ ಮರಗಳು ಸಾಕಷ್ಟು ಮಂದಿಗೆ ನೆರಳು ನೀಡುತ್ತಿದ್ದವು. ಇವುಗಳನ್ನು ಕಡಿದಿರುವುದು ಸರಿಯಲ್ಲ' ಎಂದು ಸ್ಥಳೀಯರೊಬ್ಬರು ತಿಳಿಸಿದ್ದಾರೆ.

₹ 3.55 ಲಕ್ಷ ಕಿತ್ತ ಫೇಸ್‌ಬುಕ್ ಸ್ನೇಹಿತ

ಬೆಂಗಳೂರು: ಫೇಸ್‌ಬುಕ್‌ನಲ್ಲಿ ಪರಿಚಯವಾಗಿದ್ದ ವಿದೇಶಿ ಪ್ರಜೆಯೊಬ್ಬ, ನಗರದ ವೃದ್ಧೆಯೊಬ್ಬರ ಸ್ನೇಹ ಬೆಳೆಸಿ ₹3.55 ಲಕ್ಷ ಪಡೆದುಕೊಂಡು ನಾಪತ್ತೆಯಾಗಿದ್ದಾನೆ.

ಈ ಬಗ್ಗೆ ನಗರದ ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಇನ್ಫೆಂಟ್ರಿ ರಸ್ತೆಯ 60 ವರ್ಷದ ವೃದ್ಧೆ ದೂರು ನೀಡಿದ್ದಾರೆ. ಮಿಲ್ಲರ್ ವಿಲ್ಲಿಂಗ್ ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲ ತಿಂಗಳ ಹಿಂದಷ್ಟೇ ವೃದ್ಧೆಗೆ ಫೇಸ್‌ಬುಕ್‌ನಲ್ಲಿ ಮಿಲ್ಲರ್ ಪರಿಚಯವಾಗಿತ್ತು. ಇಬ್ಬರೂ ಚಾಟಿಂಗ್ ಮಾಡುತ್ತ ಪರಸ್ಪರ ಮೊಬೈಲ್ ನಂಬರ್ ಹಂಚಿಕೊಂಡಿದ್ದರು. ವಾಟ್ಸ್ ಆ್ಯಪ್‌ನಲ್ಲೂ ಚಾಟಿಂಗ್ ನಡೆಸುತ್ತಿದ್ದರು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

2,961 ಕಿಮೀ. ರಾಜ್ಯ ಹೆದ್ದಾರಿ ನಿರ್ಮಾಣ ಪೂರ್ಣ: ಗೋವಿಂದ ಕಾರಜೋಳ

ರಸ್ತೆ ಅಭಿವೃದ್ಧಿಗೆ ₹12,122 ಕೋಟಿ ವೆಚ್ಚ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಮಧ್ಯೆಯೂ ಲೋಕೋಪಯೋಗಿ ಇಲಾಖೆ 2020-21 ಸಾಲಿನಲ್ಲಿ ₹ 10,893 ಕೋಟಿ ಅನುದಾನದಲ್ಲಿ ₹ 10,743 ಕೋಟಿ ಆರ್ಥಿಕ ಪ್ರಗತಿ (ಶೇ 99) ಸಾಧಿಸಿದೆ' ಎಂದು ಉಪ ಮುಖ್ಯಮಂತ್ರಿಯೂ ಆಗಿರುವ ಇಲಾಖಾ ಸಚಿವ ಗೋವಿಂದ ಎಂ. ಕಾರಜೋಳ ತಿಳಿಸಿದರು.

ಗೋವಿಂದ ಕಾರಜೋಳ

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, '2019-20 ಸಾಲಿನಲ್ಲಿ ₹ 9,033 ಕೋಟಿ ₹ 8,788 ಕೋಟಿ ಆರ್ಥಿಕ ಪ್ರಗತಿ (ಶೇ 97) ಪ್ರಗತಿ ಸಾಧಿಸಲಾಗಿತ್ತು' ಎಂದರು.

'ವಿವಿಧ ಯೋಜನೆಗಳಡಿ ಒಟ್ಟಾರೆ 12,125 ಕಿಮೀ ರಸ್ತೆ ಅಭಿವೃದ್ಧಿಗೆ ₹ 12,122 ಕೋಟಿ ವೆಚ್ಚ ಮಾಡಲಾಗಿದೆ. 2,961 ಕಿಮೀ. ರಾಜ್ಯ ಹೆದ್ದಾರಿ ಮತ್ತು 9164 ಕಿಮೀ. ಜಿಲ್ಲಾ ಮುಖ್ಯ ರಸ್ತೆ ಮತ್ತು 621 ಸೇತುವೆಗಳ ನಿರ್ಮಾಣ ಪೂರ್ಣಗೊಳಿಸಲಾಗಿದೆ. 48 ನ್ಯಾಯಾಲಯ ಹಾಗೂ ನ್ಯಾಯಾಧೀಶರ ವಸತಿಗೃಹಗಳ ಕಾಮಗಾರಿ ಮತ್ತು 15 ಪೋಕ್ಸೊ ನ್ಯಾಯಾಲಯಗಳ ಕಟ್ಟಡಗಳನ್ನು ₹ 255 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ' ಎಂದರು.

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಾಲೊನಿಗಳಲ್ಲಿ 3,668 ಕಿ.ಮೀ ಕಾಂಕ್ರೀಟ್ ರಸ್ತೆಗಳನ್ನು ₹ 2,779 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಎಸ್‌ಡಿಪಿ ಯೋಜನೆಯಡಿ 609 ಕಿಮೀ ರಸ್ತೆ ಅಭಿವೃದ್ಧಿ ಮತ್ತು ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ 933 ಕಿಮೀ ರಸ್ತೆ ಅಭಿವೃದ್ಧಿಯನ್ನು ₹ 302 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. 2020ರಲ್ಲಿ ಪ್ರವಾಹದಿಂದ ಹಾನಿಯಾಗಿರುವ ರಸ್ತೆ ಮತ್ತು ಸೇತುವೆಗಳ ದುರಸ್ತಿಗೆ ₹ 615 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದ್ದು, 1,553 ಕಾಮಗಾರಿಗಳ ಅನುಷ್ಠಾನ ಕೈಗೊಳ್ಳಲಾಗಿದೆ. 384 ಕಾಮಗಾರಿ ಪೂರ್ಣಗೊಂಡಿವೆ' ಎಂದು ವಿವರಿಸಿದರು.

ಇಲಾಖೆ ಕಾರ್ಯಚಟುವಟಿಕೆಯ ಸಮಗ್ರ ಮಾಹಿತಿ ನೀಡಿದ ಸಚಿವರು, 'ಮೂಲಸೌಕರ್ಯ ಇಲಾಖೆಯ ಸಹಯೋಗದಲ್ಲಿ ₹ 17 ಕೋಟಿ ವೆಚ್ಚದಲ್ಲಿ ಬೀದರ್ ವಿಮಾನ ನಿಲ್ದಾಣ ಟರ್ಮಿನಲ್ ಕಟ್ಟಡ ನಿರ್ಮಾಣ ಮಾಡಲಾಗಿದೆ. ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿಯನ್ನು ಏರ್‌ಬಸ್-320 ವಿಮಾನಗಳ ಹಾರಾಟಕ್ಕೆ ಅನುವಾಗುವಂತೆ ₹ 384 ಕೋಟಿ ಮೊತ್ತದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ವಿಜಯಪುರ ವಿಮಾನ ನಿಲ್ದಾಣ ಕಾಮಗಾರಿಯನ್ನು ಒಟ್ಟು ₹ 220 ಕೋಟಿಯಲ್ಲಿ ಕೈಗೊಳ್ಳಲು ಅನುಮೋದನೆಯಾಗಿದ್ದು, ಫೇಸ್-1ರ ಕಾಮಗಾರಿಯ ಒಟ್ಟು ₹ 85 ಕೋಟಿ ಮೊತ್ತದ ಕಾಮಗಾರಿ ಪ್ರಗತಿಯಲ್ಲಿದೆ' ಎಂದರು.

50 ಅಂತಸ್ತುಗಳ ಅವಳಿ ಕಟ್ಟಡ ನಿರ್ಮಾಣಕ್ಕೆ ಅಸ್ತು

'ಬೆಂಗಳೂರಿನ ಆನಂದರಾವ್ ವೃತ್ತದಲ್ಲಿ 50 ಅಂತಸ್ತುಗಳ ಅವಳಿ ಕಟ್ಟಡ ನಿರ್ಮಾಣವನ್ನು ನವದೆಹಲಿಯ ಎನ್‌ಬಿಸಿಸಿ ಜೊತೆ ಪಿಪಿಪಿ ಮಾದರಿಯಡಿಯಲ್ಲಿ ₹ 1,251 ಕೋಟಿ ವೆಚ್ಚದಲ್ಲಿ ನಿರ್ಮಿಸಲು ತಾತ್ವಿಕ ಅನುಮೋದನೆ ನೀಡಲಾಗಿದೆ. ನವದೆಹಲಿಯಲ್ಲಿ ಕರ್ನಾಟಕ ಭವನ-1ರ ನಿರ್ಮಾಣವನ್ನು ₹ 120 ಕೋಟಿ ಪರಿಷ್ಕೃತ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ. ವಸಂತ ನಗರದಲ್ಲಿ 77 ವಸತಿಗೃಹಗಳ ಸಮುಚ್ಚಯದ ನಿರ್ಮಾಣವನ್ನು ₹ 117 ಕೋಟಿ ಮೊತ್ತದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ' ಎಂದು ಕಾರಜೋಳ ಅವರು ತಿಳಿಸಿದರು.

ಶಾಸಕರ ಆಕ್ರೋಶ ಆಲಿಸಲು ಮುಂದಾದ ನಳಿನ್

ಪಕ್ಷ–ಸರ್ಕಾರದ ಮಧ್ಯೆ ಸಮನ್ವಯಕ್ಕೆ ಸೂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ನಾಯಕತ್ವದ ಕುರಿತು ಎದ್ದಿರುವ ಅಪಸ್ವರಗಳನ್ನು ತಗ್ಗಿಸಿ, ಸರ್ಕಾರ ಮತ್ತು ಪಕ್ಷದ ವರ್ಚಸ್ಸು ಹೆಚ್ಚಿಸಲು ಐವರು ಸದಸ್ಯರ ಸಮಿತಿ ರಚನೆಯೂ ಸೇರಿದಂತೆ ಹಲವು ಕ್ರಮಗಳನ್ನು ರಾಜ್ಯ ಬಿಜೆಪಿ ಕೈಗೊಂಡಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ಸಚಿವರಾದ ಆರ್. ಅಶೋಕ, ಅರವಿಂದ ಲಿಂಬಾವಳಿ ಮುಂತಾದವರ ಜತೆ ಪಕ್ಷದ ಬಲವರ್ಧನೆ ಸಂಬಂಧ ಶುಕ್ರವಾರ ಸುದೀರ್ಘ ಸಭೆ ನಡೆಸಿದರು. ಶಾಸಕರು, ಸಚಿವರು ಮತ್ತು ಸರ್ಕಾರದ ಜತೆಗೆ ಸಮನ್ವಯಕ್ಕೆ ಸಮಿತಿಯೊಂದನ್ನು ರಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಂಘಟನೆ ಚುರುಕುಗೊಳಿಸಲು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್ ಇತ್ತೀಚೆಗೆ ನಳಿನ್ ಕುಮಾರ್ ಕಟೀಲ್ ಅವರಿಗೆ ಗಂಭೀರ ಸೂಚನೆ ನೀಡಿದ ಬೆನ್ನಲ್ಲೇ ಅವರು ಕಾರ್ಯಶೈಲಿ ಬದಲಿಸಿದ್ದಾರೆ. ವಾರಕ್ಕೊಮ್ಮೆ ಬೆಂಗಳೂರಿಗೆ ಭೇಟಿ ನೀಡಿ, ಸಚಿವರು ಮತ್ತು ಪದಾಧಿಕಾರಿಗಳ ಸರಣಿ ಸಭೆಯನ್ನು ನಡೆಸಲಾರಂಭಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಸಮನ್ವಯಕ್ಕೆ ಸೂತ್ರ: ಮುಖ್ಯಮಂತ್ರಿ ಯಡಿಯೂರಪ್ಪ ಅವರು ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ತುತ್ತಾದವರಿಗೆ ಪರಿಹಾರವಾಗಿ ₹1,250 ಕೋಟಿಯ ಮೊದಲ ಪ್ಯಾಕೇಜ್ ಪ್ರಕಟಿಸಿದ ಸಂದರ್ಭ ಪಕ್ಷದಿಂದ ಯಾವುದೇ ಹೇಳಿಕೆ ನೀಡಿರಲಿಲ್ಲ. ಅಲ್ಲದೆ, ಸರ್ಕಾರದ ಉತ್ತಮ ಕಾರ್ಯಕ್ರಮಗಳನ್ನು ಪ್ರಚಾರ ಮಾಡುವ ಬಗ್ಗೆ, ಕೋವಿಡ್ ನಿರ್ವಹಣೆಯಲ್ಲಿ ಸರ್ಕಾರದ ಜತೆ ಹೆಗಲು ನೀಡದೇ ಇರುವ ಬಗ್ಗೆ ಅರುಣ್‌ಸಿಂಗ್ ಅವರು ಅಸಮಾಧಾನಗೊಂಡು ನಳಿನ್ ಅವರನ್ನು ಪ್ರಶ್ನಿಸಿದ್ದರು. ಇದರಿಂದ ಎಚ್ಚೆತ್ತ ನಳಿನ್ ಸರ್ಕಾರ ಮತ್ತು ಪಕ್ಷದ ನಡುವೆ ಸಮನ್ವಯಕ್ಕೆ ಮುಂದಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಶಾಸಕರನ್ನು ಒಟ್ಟಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಅಧ್ಯಕ್ಷರು ಮತ್ತು ಮುಖ್ಯಮಂತ್ರಿಯವರು ಎಲ್ಲ ಶಾಸಕರು ಮತ್ತು ಸಚಿವರ ಸಭೆ ನಡೆಸಬೇಕು ಎಂದು ಸಭೆಯಲ್ಲಿ ಸಲಹೆ ನೀಡಲಾಯಿತು. ಎಲ್ಲ ಶಾಸಕರ ಜತೆ ವೈಯಕ್ತಿಕವಾಗಿ ಮಾತನಾಡಿ, ಸಮನ್ವಯ ಸಾಧಿಸುವುದರ ಅಗತ್ಯವಿದೆ. ಇದಕ್ಕಾಗಿ ತಿಂಗಳಿಗೊಮ್ಮೆ ಸಭೆ ನಡೆಸಿ ಚರ್ಚಿಸಲಾಗುವುದು' ಎಂದು ಸಚಿವ ಅಶೋಕ ಅವರು ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ಅಲ್ಲದೆ, ಸರ್ಕಾರ ಮತ್ತು ಪಕ್ಷದ ವರ್ಚಸ್ಸು ಹೆಚ್ಚಿಸಲು ಏನೆಲ್ಲ ಮಾಡಬೇಕು ಎಂಬ ಪಟ್ಟಿಯನ್ನೂ ತಯಾರಿಸಲಾಗುತ್ತಿದೆ ಎಂದು ಹೇಳಿದರು.

ಸಮನ್ವಯ ಸಮಿತಿ ರಚನೆ

ಸಮನ್ವಯ ಸಮಿತಿಯಲ್ಲಿ ಬಿ.ಎಸ್. ಯಡಿಯೂರಪ್ಪ, ನಳಿನ್ ಕುಮಾರ್ ಕಟೀಲ್, ಡಾ.ಸಿ.ಎನ್.ಅಶ್ವತ್ಥನಾರಾಯಣ, ಆರ್.ಅಶೋಕ, ಅರವಿಂದ ಲಿಂಬಾವಳಿ ಇದ್ದಾರೆ. ಈ ಸಮಿತಿ ಆಗಿಂದಾಗ್ಗೆ ಸಭೆ ಸೇರಿ ಪಕ್ಷ ಬಲಪಡಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪಿಸಲಿದೆ.

ಶಾಸಕರ ಅಹವಾಲುಗಳಿಗೆ ಸ್ಪಂದನೆ

ಶಾಸಕರು ಅಥವಾ ನಾಯಕರು ಯಾರದ್ದೇ ವಿರುದ್ಧ ದೂರುಗಳಿದ್ದರೂ ಮಾಧ್ಯಮದ ಮುಂದೆ ಹೇಳಿಕೊಳ್ಳುವುದು ಸರಿಯಲ್ಲ. ಅಸಮಾಧಾನದ ಹೊಂದಿರುವ ಶಾಸಕರ ಜತೆ ಕೆಲವು ಸಚಿವರು ಮತ್ತು ಪಕ್ಷ ನಾಯಕರು ಈಗಾಗಲೇ ಮಾತುಕತೆ ಆರಂಭಿಸಿದ್ದಾರೆ. ಮುಖ್ಯಮಂತ್ರಿಯವರನ್ನು ಕಟೀಲ್ ಭೇಟಿ ಮಾಡಿದಾಗ ಶಾಸಕರ ಆತಂಕ ದೂರು ಮಾಡಲು ಚರ್ಚೆ ನಡೆಸಲಿದ್ದಾರೆ ಎಂದು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಅವರು ಹೇಳಿದರು.

ಸ್ಮಶಾನದಲ್ಲೇ ಉಪಹಾರ ಸೇವಿಸಿದ ಡಿ.ಸಿ

ಬೆಂಗಳೂರು: ಕೋವಿಡ್ ಶವಗಳ ಅಂತ್ಯಸಂಸ್ಕಾರ ಮಾಡುವ ಸಿಬ್ಬಂದಿ ಜೊತೆಗೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರು ಶನಿವಾರ ಸ್ಮಶಾನದಲ್ಲೇ ಉಪಹಾರ ಸೇವಿಸಿದರು.

ತಾವರೆಕೆರೆಯ ಸ್ಮಶಾನಕ್ಕೆ ಶನಿವಾರ ಭೇಟಿ ನೀಡಿದ ಅವರು ಶವ ಸುಡುವ ಸಿಬ್ಬಂದಿಗೆ ಖುದ್ದು ಉಪಹಾರ ಬಡಿಸಿ, ಅವರ ಸಮಸ್ಯೆಗಳನ್ನು ಆಲಿಸಿದರು. ಪರಿಸರ ದಿನದ ಅಂಗವಾಗಿ ಸ್ಮಶಾನದ ಖಾಲಿ ಜಾಗದಲ್ಲಿ ಸಸಿ ನೆಟ್ಟು ವನ ಮಹೋತ್ಸವಕ್ಕೂ ಚಾಲನೆ ನೀಡಿದರು.

ಸ್ಮಶಾನಗಳ ನೌಕರರ ಒಕ್ಕೂಟದ ಸುರೇಶ್, 'ಜಿಲ್ಲಾಧಿಕಾರಿಗಳು ನಮ್ಮೊಂದಿಗೆ ಕುಳಿತು ಊಟ ಮಾಡಿದ್ದಲ್ಲದೆ, ಸ್ವತಃ ತಿಂಡಿ ಬಡಿಸಿದ್ದಾರೆ. ನಮ್ಮ ಕಷ್ಟ-ಸುಖ ವಿಚಾರಿಸಿದ್ದಾರೆ. ನಮಗೆ ಬಹಳ ಸಂತೋಷವಾಗಿದೆ' ಎಂದರು.

ಸ್ಮಶಾನ ಸಿಬ್ಬಂದಿಗೆ ದಿನಸಿ ಕಿಟ್‌ಗಳನ್ನು ವಿತರಿಸಲಾಯಿತು.

ಮತ್ತೆ ಮಳೆ: ಮನೆಗಳಿಗೆ ನೀರು, ರಸ್ತೆಯಲ್ಲಿ ಕಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಹುತೇಕ ಕಡೆ ಶನಿವಾರ ಮಧ್ಯಾಹ್ನ ಮಳೆ ಸುರಿಯಿತು. ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನದ ವೇಳೆಯಲ್ಲಿ ಹಲವೆಡೆ ಜಿಟಿ ಜಿಟಿ ಮಳೆ ಆಯಿತು.

ಶುಕ್ರವಾರವೂ ನಗರದಲ್ಲಿ ಮಳೆ ಅಬ್ಬರಿಸಿತ್ತು. ಇದರಿಂದಾಗಿ ಯಲಚೇನಹಳ್ಳಿ ವಾರ್ಡ್‌ನ ಫಯಾಜ್‌ಬಾದ್, ಕನಕನಗರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗಿತ್ತು. ಸಾರಕ್ಕಿ ಬಳಿಯ ಶಾಕಾಂಬರಿ ನಗರದ ರಸ್ತೆಗಳಲ್ಲೂ ನೀರು ಹೊಳೆಯಂತೆ ಹರಿದಿದ್ದರಿಂದ ವಾಹನಗಳು ನೀರಿನಲ್ಲಿ ಮುಳುಗಿದ್ದವು. ರಸ್ತೆಯ ಅಕ್ಕ–ಪಕ್ಕದ ಮನೆಗಳಿಗೆ ನೀರು ನುಗ್ಗಿತ್ತು. ಈ ಪ್ರದೇಶಗಳಲ್ಲಿ ಶನಿವಾರ ಬೆಳಿಗ್ಗೆ ನೀರು ಕಡಿಮೆಯಾಗಿತ್ತು. ಇಲ್ಲಿನ ರಸ್ತೆಗಳಲ್ಲಿ ಮಳೆ ನೀರು ಹೊತ್ತು ತಂದ ಕಸ ತುಂಬಿರುವುದು ಕಂಡುಬಂತು. ಮನೆಗೆ ನುಗ್ಗಿದ್ದ ನೀರು ಹೊರಹಾಕುವುದರಲ್ಲೇ ನಿವಾಸಿಗಳು ರಾತ್ರಿ ಕಳೆದರು. ನೀರಿನಲ್ಲಿ ತೇಲಿ ಹೋಗಿದ್ದ ಎಲೆಕ್ಟ್ರಾನಿಕ್ ವಸ್ತುಗಳು ಹಾಗೂ ಪೀಠೋಪಕರಣಗಳಿಗಾಗಿಯೂ ನಿವಾಸಿಗಳು ಹುಡುಕಾಟ ನಡೆಸಿದ್ದು ಕಂಡುಬಂತು. ಜೆ.ಪಿ. ನಗರದಲ್ಲಿ ಮರದ ಟೊಂಗೆ ಬಿದ್ದು ಎರಡು ಕಾರುಗಳು ಜಖಂಗೊಂಡಿವೆ.

'ಬೆಂಗಳೂರಿನಲ್ಲಿ ಮುಂದಿನ ಎರಡು ದಿನ ಜೋರು ಮಳೆಯಾಗುವ ಸಾಧ್ಯತೆ ಇದೆ' ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಆನ್‌ಲೈನ್ ಮದ್ಯ ನಂಬಿ ₹ 75,999 ಕಳೆದುಕೊಂಡ

ಬೆಂಗಳೂರು: ಆನ್‌ಲೈನ್‌ನಲ್ಲಿ ಮದ್ಯ ಖರೀದಿಸಿದ್ದ ನಗರದ ನಿವಾಸಿಯೊಬ್ಬರು, ಡೆಲಿವರಿ ಬಾಯ್ ಎಂದು ಕರೆ ಮಾಡಿದ್ದ ವಂಚಕನಿಗೆ ಬ್ಯಾಂಕ್ ಖಾತೆ ವಿವರ ಹಾಗೂ ಒನ್ ಟೈಂ ಪಾಸ್‌ವರ್ಡ್ (ಒಟಿಪಿ) ಕೊಟ್ಟು ₹ 75,999 ಕಳೆದುಕೊಂಡಿದ್ದಾರೆ.

'ಇಂದಿರಾನಗರದ 27 ವರ್ಷದ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೂರ್ವ ವಿಭಾಗದ ಸೈಬರ್ ಕ್ರೈಂ ಪೊಲೀಸ್ ಮೂಲಗಳು ತಿಳಿಸಿವೆ.

'ಲಾಕ್‌ಡೌನ್‌ನಿಂದಾಗಿ ಮನೆಯಲ್ಲಿರುವ ದೂರುದಾರ, ಆನ್‌ಲೈನ್ ಮೂಲಕ ಮದ್ಯ ಖರೀದಿಸಿದ್ದರು. ಮದ್ಯವನ್ನು ಮನೆಗೆ ತಂದುಕೊಡುವುದಕ್ಕಾಗಿ ಡೆಲಿವರಿ ಬಾಯ್ ಸೋಗಿನಲ್ಲಿ ಕರೆ ಮಾಡಿದ್ದ ವಂಚಕ, ದೂರುದಾರರ ಬ್ಯಾಂಕ್ ಖಾತೆ ವಿವರ ಹಾಗೂ ಒಟಿಪಿ ಕೇಳಿದ್ದ.'

'ಆರೋಪಿ ಮಾತು ನಂಬಿದ್ದ ದೂರುದಾರ, ಎಲ್ಲ ಮಾಹಿತಿಯನ್ನೂ ಹಂಚಿಕೊಂಡಿದ್ದರು. ಅದಾದ ಕೆಲ ನಿಮಿಷಗಳಲ್ಲೇ ದೂರುದಾರರ ಬ್ಯಾಂಕ್ ಖಾತೆಯಿಂದ ₹ 75,999 ಕಡಿತವಾಗಿದೆ. ಕರೆ ಮಾಡಿದ್ದ ವಂಚಕನ ಮೊಬೈಲ್ ಸಹ ಸ್ವಿಚ್ ಆಫ್ ಆಗಿದೆ. ಈ ಸಂಗತಿ ದೂರಿನಲ್ಲಿದೆ' ಎಂದೂ ಮೂಲಗಳು ಹೇಳಿವೆ.

ನಾರಾಯಣ ಹೆಲ್ತ್: ವಲಸೆ ಕಾರ್ಮಿಕರಿಗೆ ಉಚಿತ ಲಸಿಕೆ

ಪ್ರಜಾವಾಣಿ ವಾರ್ತೆ

ನಾರಾಯಣ ಹೆಲ್ತ್ ಆಸ್ಪತ್ರೆಯಿಂದ ವಲಸೆ ಕಾರ್ಮಿಕರಿಗೆ ಉಚಿತವಾಗಿ ಲಸಿಕೆ ನೀಡಲಾಯಿತು

ಬೆಂಗಳೂರು: ನಾರಾಯಣ ಹೆಲ್ತ್ ಆಸ್ಪತ್ರೆಗಳ ಸಮೂಹವು ನಗರದಲ್ಲಿನ ವಲಸೆ ಕಾರ್ಮಿಕರು ಹಾಗೂ ಸೌಲಭ್ಯ ವಂಚಿತರಿಗೆ ಹಮ್ಮಿಕೊಂಡಿರುವ ಉಚಿತ ಲಸಿಕೆ ವಿತರಣಾ ಅಭಿಯಾನಕ್ಕೆ ಶನಿವಾರ ಚಾಲನೆ ದೊರೆಯಿತು. ಮೊದಲ ಹಂತದಲ್ಲಿ 2 ಸಾವಿರ ಮಂದಿಗೆ ಉಚಿತವಾಗಿ ಲಸಿಕೆ ನೀಡಲು ಆಸ್ಪತ್ರೆ ಮುಂದಾಗಿದೆ.

ಆನ್‌ಲೈನ್ ದೇಣಿಗೆ ವೇದಿಕೆಯಾಗಿರುವ 'ಗಿವ್ ಇಂಡಿಯಾ' ಸಹಯೋಗದಲ್ಲಿ ಈ ಅಭಿಯಾನವನ್ನು ಆಸ್ಪತ್ರೆ ಹಮ್ಮಿಕೊಂಡಿದೆ. ಇದಕ್ಕೆ ಆಸ್ಪತ್ರೆಯ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಹಾಗೂ ಗಿವ್ ಇಂಡಿಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅತುಲ್ ಸತೀಜಾ ಚಾಲನೆ ನೀಡಿದರು. ಗೋವಿಂದಪುರ, ಸೋಮೇಶ್ವರನಗರ, ಅತ್ತಿಬೆಲೆ ಸೇರಿದಂತೆ ನಗರದ ವಿವಿಧೆಡೆ ಲಸಿಕೆ ವಿತರಣಾ ಅಭಿಯಾನವನ್ನು ನಡೆಸಲಾಯಿತು.

ಇದೇ ವೇಳೆ #ಗೆಟ್ ಒನ್ ಗಿವ್ ಒನ್ (ಒಂದು ಪಡೆದು ಒಂದು ನೀಡಿ) ಲಸಿಕೆ ಅಭಿಯಾನಕ್ಕೂ ಚಾಲನೆ ನೀಡಲಾಯಿತು. ನಾರಾಯಣ ಹೆಲ್ತ್‌ನಲ್ಲಿ ಲಸಿಕೆ ಪಡೆದುಕೊಂಡವರು ದುರ್ಬಲ ವರ್ಗದವರಿಗೆ ಲಸಿಕೆ ಒದಗಿಸಲು ಒಂದು ಡೋಸ್‌ನ ಹಣವನ್ನು ದಾನ ಮಾಡಬಹುದಾಗಿದೆ. ಈ ಅಭಿಯಾನಕ್ಕೆ ನಾರಾಯಣ ಹೆಲ್ತ್ ಆಸ್ಪತ್ರೆಯು ಕಾರ್ಪೊರೇಟ್ ಕಂಪನಿಗಳ ಬೆಂಬಲವನ್ನು ಕೂಡ ಪಡೆಯುತ್ತಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಡಾ. ದೇವಿಪ್ರಸಾದ್ ಶೆಟ್ಟಿ, 'ಕೊರೊನಾ ಸೋಂಕಿನಿಂದ ಜನರನ್ನು ರಕ್ಷಿಸಲು ಲಸಿಕೆ ಸಹಕಾರಿಯಾಗಿದೆ. ಬಡ–ಮಧ್ಯಮ ವರ್ಗದ ಕೆಲ ಕುಟುಂಬಗಳ ಎಲ್ಲ ಸದಸ್ಯರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಪಡೆಯಲು ಸಾಧ್ಯವಾಗುವುದಿಲ್ಲ. ಲಸಿಕೆ ಪಡೆಯುವುದು ತಡವಾದಲ್ಲಿ ಜೀವಕ್ಕೇ ಅಪಾಯ ಉಂಟಾಗುವ ಸಾಧ್ಯತೆಗಳಿವೆ. ಹಾಗಾಗಿ, ಒಂದು ಲಸಿಕೆಯನ್ನು ದಾನವಾಗಿ ನೀಡುವ ಅಭಿಯಾನವನ್ನೂ ಆರಂಭಿಸಲಾಗಿದೆ. ದಿನಗೂಲಿ ಕಾರ್ಮಿಕರು ಸೇರಿದಂತೆ ವಿವಿಧ ದುರ್ಬಲ ವರ್ಗದವರಿಗೆ ಲಸಿಕೆ ಒದಗಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದರು.

ಸೋಂಕು ಹೆಚ್ಚುವ ಸಾಧ್ಯತೆ: ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ.ಎಂ.ಕೆ. ಸುದರ್ಶನ್ ಎಚ್ಚರಿಕೆ

'ಒಮ್ಮೆಲೆ ಲಾಕ್‌ಡೌನ್ ತೆರವು ಅಪಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಾಕ್‌ಡೌನ್ ಒಮ್ಮೆಲೆ ತೆರವುಗೊಳಿಸಿದರೆ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಹೆಚ್ಚಾಗುವ ಅಪಾಯ ಇದೆ' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ.ಎಂ.ಕೆ. ಸುದರ್ಶನ್ ಎಚ್ಚರಿಸಿದರು.

ರಾಜ್ಯದಲ್ಲಿ ಸೂಕ್ತ ಮತ್ತು ಸುರಕ್ಷಿತ ರೀತಿಯಲ್ಲಿ ಲಾಕ್‌ಡೌನ್ ನಿರ್ವಹಿಸಿ ತೆರವುಗೊಳಿಸುವ ವಿಧಾನ ಕುರಿತು ಸೊಸೈಟಲ್ ಆ್ಯಕ್ಷನ್ ಗ್ರೂಪ್ ಆಫ್ ಎಕ್ಸ್‌ಪರ್ಟ್ಸ್(ಎಸ್‌ಎಜಿಇ) ಆಯೋಜಿಸಿದ್ದ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

'ಏಪ್ರಿಲ್ ಕೊನೆಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಯಿತು. ಸೋಂಕಿತರಿಗೆ ಚಿಕಿತ್ಸೆ ಸಿಗದಷ್ಟು ಸಮಸ್ಯೆ ಆಯಿತು. ಆ ಸಂದರ್ಭದಲ್ಲಿ ಬ್ರಹ್ಮಾಸ್ತ್ರವಾಗಿ ಲಾಕ್‌ಡೌನ್ ಘೋಷಣೆ ಮಾಡಲಾಯಿತು. ಈಗ ಸೋಂಕು ನಿಯಂತ್ರಣಕ್ಕೆ ಬಂದಿದೆ' ಎಂದರು.

'ಲಾಕ್‌ಡೌನ್ ತೆರವು ವೇಳೆ ಎಲ್ಲಾ ಕ್ಷೇತ್ರಗಳ ಕಾರ್ಯಾಚರಣೆಗೆ ಒಮ್ಮೆಲೆ ಅವಕಾಶ ಕಲ್ಪಿಸಿದರೆ ಸಮಸ್ಯೆ ಆಗಲಿದೆ. ಒಂದೇ ಕಡೆ ಹೆಚ್ಚು ಜನ ಸೇರುವ ಕಾರ್ಯಕ್ರಮ, ಜಾತ್ರೆ, ಮದುವೆ ಸಮಾರಂಭಗಳಿಗೆ ಹಾಗೂ ಒಳಾಂಗಣಗಳಲ್ಲಿ ಜನ ಸೇರುವುದಕ್ಕೆ ಅವಕಾಶ ಕಲ್ಪಿಸುವ ಚಿತ್ರಮಂದಿರ, ಬಾರ್, ಪಬ್ ಮೊದಲಾದವುಗಳಿಗೆ ಅವಕಾಶ ನೀಡಿದರೆ ಸೋಂಕು ಹರಡುವ ಸಾಧ್ಯತೆ ಇದೆ. ಹೀಗಾಗಿ, ಹಂತ–ಹಂತವಾಗಿ ಲಾಕ್‌ಡೌನ್ ಸಡಿಲಗೊಳಿಸಲು ಯೋಚಿಸಲಾಗಿದೆ' ಎಂದು ವಿವರಿಸಿದರು.

ಸಾಂಕ್ರಾಮಿಕ ರೋಗಗಳ ತಜ್ಞ ಡಾ. ಗಿರಿಧರ್ ಬಾಬು ಮಾತನಾಡಿ, 'ಲಾಕ್‌ಡೌನ್‌ನಿಂದ ಕೋವಿಡ್ ಹರಡುವಿಕೆ ತಡೆಯಲು ಸಾಧ್ಯವಿಲ್ಲ. ಆದರೆ, ಹರಡುವಿಕೆಯ ವೇಗ ಕಡಿಮೆ ಮಾಡಲು ಸಾಧ್ಯ. ಕೋವಿಡ್‌ನಿಂದ ಜನರನ್ನು ರಕ್ಷಿಸಲು ಉಳಿದ ದಾರಿ ಎಂದರೆ ಎಲ್ಲರಿಗೂ ಲಸಿಕೆ ನೀಡುವುದು' ಎಂದು ಪ್ರತಿಪಾದಿಸಿದರು.

'ಅಮೆರಿಕದಲ್ಲಿ ಲಸಿಕೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿರುವ ಕಾರಣ ಆ ದೇಶ ಕೋವಿಡ್‌ನಿಂದ ಮುಕ್ತವಾಗಿದೆ. ನವೆಂಬರ್‌ನಲ್ಲಿ ಮೂರನೇ ಅಲೆ ಕಾಣಿಸಿಕೊಳ್ಳಲಿದೆ ಎಂಬ ವರದಿಗಳಿವೆ. ಭಾರತದಲ್ಲೂ ಲಸಿಕೆ ಅಭಿಯಾನ ಪರಿಣಾಮಕಾರಿಯಾಗಿ ನಡೆಯಬೇಕಿದೆ' ಎಂದರು.

ಕೃಷಿ ವಿಜ್ಞಾನಿ ಪ್ರಕಾಶ್ ಕಮ್ಮರಡಿ, ಆರ್ಥಿಕ ತಜ್ಞ ವಿನೋದ್ ವ್ಯಾಸುಲು, ಕಾರ್ಮಿಕ ಆರ್ಥಿಕ ತಜ್ಞ ಪ್ರೊ. ಅಮಿತ್ ಬಸೋಲೆ, ಜಿ.ಕೆ.ವೆಂಕಟೇಶ್, ಪಿ.ವಿ. ಕೃಷ್ಣನ್ ಭಟ್, ಬಿ.ಎಲ್.ಶಂಕರ್, ಪಿ.ವಿ. ವೇಣುಗೋಪಾಲ್, ಕುರುಬೂರು ಶಾಂತಕುಮಾರ್, ಪ್ರತಾಪ್ ಹೆಗ್ಡೆ ವೆಬಿನಾರ್‌ನಲ್ಲಿ ಭಾಗವಹಿಸಿದರು.

'ಲಸಿಕೆ ಪಡೆದವರಿಗಷ್ಟೇ ಅವಕಾಶ– ತಪ್ಪು ನಿರ್ಧಾರ'

'ಲಸಿಕೆ ಪಡೆಯದವರಿಗೆ ಶಾಲಾ, ಕಾಲೇಜು ಮತ್ತು ವಿಮಾನ ನಿಲ್ದಾಣಗಳಲ್ಲಿ ಅವಕಾಶ ನಿರಾಕರಿಸಿರುವುದು ಸರಿಯಾದ ಕ್ರಮ ಅಲ್ಲ' ಎಂದು ವೈದ್ಯ ಡಾ. ಶ್ರೀನಿವಾಸ ಕಕ್ಕಿಲ್ಲಾಯ ಅಭಿಪ್ರಾಯಪಟ್ಟರು.

'ಈಗಾಗಲೇ ಸೋಂಕು ತಗುಲಿ ವಾಸಿಯಾದವರು 6 ತಿಂಗಳು ಲಸಿಕೆ ಪಡೆಯುವ ಅಗತ್ಯ ಇಲ್ಲ ಎಂದು ಸರ್ಕಾರವೇ ಹೇಳುತ್ತಿದೆ. ಗುಣಮುಖ ಆಗಿದ್ದರೂ ಲಸಿಕೆ ಪಡೆದಿಲ್ಲ ಎಂಬ ಕಾರಣಕ್ಕೆ ಅವಕಾಶ ನಿರಾಕರಿಸಿದರೆ ಹೇಗೆ' ಎಂದು ಅವರು ಪ್ರಶ್ನಿಸಿದರು.

'ಈಗಾಗಲೇ ಶೇ 70ರಷ್ಟು ಜನರಿಗೆ ಸೋಂಕು ಬಂದು ಹೋಗಿದೆ. ಅವರಿಗೆ ಸಹಜವಾಗಿಯೇ ರೋಗ ನಿರೋಧಕ ಹೆಚ್ಚಾಗಿರುತ್ತದೆ. ಯಾವುದೇ ಕರ್ತವ್ಯಕ್ಕೆ ಲಸಿಕೆ ಕಡ್ಡಾಯಗೊಳಿಸುವುದು ಸರಿಯಲ್ಲ' ಎಂದರು.

'ಲಾಕ್‌ಡೌನ್ ಅಗತ್ಯತೆಯನ್ನು ಮೊದಲಿನಿಂದಲೂ ಪ್ರಶ್ನಿಸಿದ್ದೇನೆ. ವಿಶ್ವ ಆರೋಗ್ಯ ಸಂಸ್ಥೆಯೂ ಲಾಕ್‌ಡೌನ್ ಮಾಡುವಂತೆ ಸಲಹೆ ನೀಡಿಲ್ಲ. ಕೋವಿಡ್ ತಡೆಯಲು ಲಾಕ್‌ಡೌನ್ ಪರಿಹಾರ ಅಲ್ಲ ಎಂಬುದನ್ನು ತಾಂತ್ರಿಕ ಸಲಹಾ ಸಮಿತಿಯ ತಜ್ಞರೇ ಹೇಳುತ್ತಿರುವುದು ಸಂತಸದ ಸಂಗತಿ' ಎಂದರು.

'ಲಾಕ್‌ಡೌನ್ ಹೆಸರಿನಲ್ಲಿ ವರ್ತಮಾನ ಮತ್ತು ಭವಿಷ್ಯವನ್ನು ಹಾಳು ಮಾಡಿದ್ದೇವೆ. ಶಿಕ್ಷಣ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಕೂಡಲೇ ಲಾಕ್‌ಡೌನ್ ತೆರವುಗೊಳಿಸಬೇಕು, ಶಾಲಾ– ಕಾಲೇಜುಗಳನ್ನು ತೆರೆಯಬೇಕು. ಸೋಂಕಿತರಾದವರಿಗೆ ಚಿಕಿತ್ಸೆ ಕೊಡುವ ವ್ಯವಸ್ಥೆ ಬಲಗೊಳಿಸಬೇಕು. ಸೋಂಕು ವ್ಯಾಪಕ ಇರುವ ಕ್ಲಸ್ಟರ್‌ಗಳನ್ನು ಗುರುತಿಸಿ ನಿಯಂತ್ರಿಸಬೇಕು' ಎಂದು ಸಲಹೆ ನೀಡಿದರು

ಸಕ್ರಿಯ ಪ್ರಕರಣ 2.68 ಲಕ್ಷಕ್ಕೆ ಇಳಿಕೆ

ಶನಿವಾರ ಸಂಜೆ 5 ಗಂಟೆಯವರೆಗಿನ ಹಿಂದಿನ 24 ಗಂಟೆಗಳ ಅವಧಿಯಲ್ಲಿ 13,800 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 26.83 ಲಕ್ಷ ದಾಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 2.68 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೊರೊನಾ ಸೋಂಕಿತರಲ್ಲಿ 365 ಮಂದಿ ಸಾವಿಗೀಡಾಗಿರುವುದು ಶನಿವಾರ ಖಚಿತಪಟ್ಟಿದೆ. ಮರಣ ಪ್ರಮಾಣ ದರ ಶೇ 2.64ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 31,260ಕ್ಕೆ ಏರಿಕೆಯಾಗಿದೆ.

ಸೋಂಕಿತರಲ್ಲಿ 25,346 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 23.83 ಲಕ್ಷ ದಾಟಿದೆ. ರಾಜ್ಯದ 27 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 206 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮೈಸೂರಿನಲ್ಲಿ 22 ಮಂದಿ, ಬೆಳಗಾವಿಯಲ್ಲಿ 18 ಮಂದಿ, ಕೋಲಾರದಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ.

ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿದ್ದು, 24 ಗಂಟೆಗಳ ಅವಧಿಯಲ್ಲಿ 2,686 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಮೈಸೂರಿನಲ್ಲಿ 1,155 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ರಾಜ್ಯದ 20 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ವರದಿಯಾಗಿವೆ.

ವಿಕ್ಟೋರಿಯಾ: ಬಾಲಕನಿಗೆ ಕಪ್ಪು ಶಿಲೀಂಧ್ರ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಏಳು ವರ್ಷದ ಬಾಲಕನಿಗೆ ಕಪ್ಪು ಶಿಲೀಂಧ್ರ ಸೋಂಕು ತಗುಲಿರುವುದು ಶನಿವಾರ ದೃಢಪಟ್ಟಿದ್ದು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ.

ಬಾಲಕನನ್ನು ವೈದ್ಯರು ತಪಾಸಣೆಗೆ ಒಳಪಡಿಸಿದಾಗ ಸೋಂಕು ಕಣ್ಣಿಗೆ ವ್ಯಾಪಿಸಿಕೊಂಡಿರುವುದು ದೃಢಪಟ್ಟಿದೆ. ಹೀಗಾಗಿ, ನಿಮ್ಹಾನ್ಸ್‌ನ ನರರೋಗ ತಜ್ಞರು ಹಾಗೂ ಮಿಂಟೊ ಕಣ್ಣಿನ ಆಸ್ಪತ್ರೆಯ ನೇತ್ರ ತಜ್ಞರು ಬಾಲಕನಿಗೆ ಚಿಕಿತ್ಸೆ ನೀಡುತ್ತಿದ್ದಾರೆ.

ಕೆಲ ದಿನಗಳ ಹಿಂದೆ ಬಾಲಕನ ತಾಯಿಗೆ ಕೊರೊನಾ ಸೋಂಕು ತಗುಲಿತ್ತು. ಪ್ರಾಥಮಿಕ ಸಂಪರ್ಕ ಹೊಂದಿದ್ದ ಬಾಲಕ ಕೂಡ ಈಗ ಕೋವಿಡ್ ಪೀಡಿತನಾಗಿದ್ದಾನೆ. ಹೆಚ್ಚಿನ ತಪಾಸಣೆ ನಡೆಸಿದಾಗ ಶಿಲೀಂಧ್ರ ಸೋಂಕು ತಗುಲಿರುವುದು ಖಚಿತಪಟ್ಟಿದೆ. ನಗರದ ಬೌರಿಂಗ್ ಆಸ್ಪತ್ರೆಗೆ ಈಗಾಗಲೇ ಇಬ್ಬರು ಮಕ್ಕಳು ದಾಖಲಾಗಿದ್ದು, ಅವರಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ.

ಬೈರತಿ ಬಸವರಾಜ ಅವರಿಂದ 1 ಲಕ್ಷ ದಿನಸಿ ಕಿಟ್ ವಿತರಣೆ

ಡಿಸೆಂಬರ್ ವೇಳೆಗೆ ಎಲ್ಲರಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಡಿಸೆಂಬರ್ ಅಂತ್ಯದ ವೇಳೆಗೆ 130 ಕೋಟಿ ಜನರಿಗೂ ಕೋವಿಡ್ ಲಸಿಕೆ ನೀಡುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಕೇಂದ್ರ ರಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ. ಸದಾನಂದಗೌಡ ಹೇಳಿದರು.

ಕೆ.ಆರ್.ಪುರ ಕ್ಷೇತ್ರ ವ್ಯಾಪ್ತಿಯ ಕೊತ್ತನೂರಿನಲ್ಲಿ ಸಚಿವ ಬೈರತಿ ಬಸವರಾಜ ಹಮ್ಮಿಕೊಂಡಿದ್ದ ಒಂದು ಲಕ್ಷ ಬಡ ಕುಟುಂಬಗಳಿಗೆ ದಿನಸಿ ಕಿಟ್‌ಗಳ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜೂನ್ ಅಂತ್ಯದ ವೇಳೆಗೆ ರಾಜ್ಯಕ್ಕೆ ಕೇಂದ್ರದಿಂದ 50 ಲಕ್ಷ ಲಸಿಕೆ ನೀಡಲಾಗುತ್ತದೆ. ರಾಜ್ಯ ಸರ್ಕಾರ ಕೂಡ 15 ಲಕ್ಷ ಲಸಿಕೆ ಖರೀದಿಸಲು ಮುಂದಾಗಿದೆ. ಈ ತಿಂಗಳಲ್ಲಿ ಒಟ್ಟು 65 ಲಕ್ಷದಷ್ಟು ಲಸಿಕೆ ರಾಜ್ಯಕ್ಕೆ ಲಭ್ಯವಾಗಲಿದೆ ಎಂದು ಸದಾನಂದಗೌಡ ಮಾಹಿತಿ ನೀಡಿದರು.

ದಿನಸಿ ಕಿಟ್ ವಿವರಣಾ ಕಾರ್ಯಕ್ಕೆ ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಚಾಲನೆ ನೀಡಿದರು. ಬೈರತಿ ಬಸವರಾಜ್, ಬಿಬಿಎಂಪಿ ಮಾಜಿ ಸದಸ್ಯರಾದ ಎಂ.ಎನ್. ಶ್ರೀಕಾಂತ್, ಜಯಪ್ರಕಾಶ್, ವಿ.ಸುರೇಶ್, ಬಂಡೆ ಎಸ್‌ರಾಜ, ಚಿದಾನಂದ ಇದ್ದರು

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಮಾತನಾಡಿ, ಕೆ.ಆರ್.ಪುರ ಕ್ಷೇತ್ರದಲ್ಲಿ ಕೋವಿಡ್ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಬಡವರು, ಕೂಲಿ ಕಾರ್ಮಿಕರು, ಚಾಲಕರು, ದಿನಗೂಲಿ ನೌಕರರಿಗೆ ನೆರವು ನೀಡುವ ಉದ್ದೇಶದಿಂದ ಒಂದು ಲಕ್ಷ ದಿನಸಿ ಕಿಟ್ ವಿತರಣೆ ಮಾಡಲಾಗುತ್ತಿದೆ. 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ₹1 ಲಕ್ಷ ನೆರವು ನೀಡಲಾಗುವುದು ಎಂದು ಹೇಳಿದರು.

ಕೃಷ್ಣರಾಜಪುರ ಸಾರ್ವಜನಿಕ ಆಸ್ಪತ್ರೆಯನ್ನು 200 ಹಾಸಿಗೆಗಳಿಗೆ ಮೇಲ್ದರ್ಜೆಗೆ ಏರಿಸುವ ಗುರಿ ಹೊಂದಿದ್ದು, ಇದಕ್ಕಾಗಿ ₹13 ಕೋಟಿ ವೆಚ್ಚವಾಗಲಿದೆ. ಐಟಿಐ ಆಸ್ಪತ್ರೆಯಲ್ಲಿ ಕೋವಿಡ್ ಆರೈಕೆ ಕೇಂದ್ರ ತೆರೆಯಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ ಎಂದು ಬಸವರಾಜ ಹೇಳಿದರು.

ಕೊತ್ತನೂರಿನ ನಂಜುಂಡ ಕಲ್ಯಾಣ ಮಂಟಪ, ವಿಜಿನಾಪುರದ ಸೈನಿಕ ಭವನ, ಕಲ್ಕೆರೆಯ ಎನ್.ಆರ್.ಐ.ಲೇಔಟ್, ಟಿ.ಸಿ.ಪಾಳ್ಯದ ಸಂತ ಅಂತೋಣಿ ಶಾಲೆ, ಕುರುಡುಸೊಣ್ಣೆನಹಳ್ಳಿಯ ಲೇಕ್ ಮೌಂಟ್ ಶಾಲೆ, ಎಚ್.ಎ.ಎಲ್.ನ ವಿಭೂತಿಪುರ ಶಾಲೆ, ಉದಯ ನಗರದ ಜೈನ ಭವನ, ಎ.ನಾರಾಯಣಪುರದ ಎಮ್.ಇ.ಜಿ. ಲೇಔಟ್, ದೇವಸಂದ್ರದ ಕೆಂಪೇಗೌಡ ಕ್ರೀಡಾಂಗಣದಲ್ಲಿ ದಿನಸಿ ಕಿಟ್‌ಗಳನ್ನು ವಿತರಿಸಲಾಯಿತು.

'ಬ್ರೇಕ್‌ಥ್ರೂ ಇನ್‌ಫೆಕ್ಷನ್': ಲಸಿಕೆಯ ಎರಡು ಡೋಸ್‌ನಿಂದ ಅಧಿಕ ರಕ್ಷಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 2ನೇ ಡೋಸ್ ಪಡೆದ 14 ದಿನಗಳ ನಂತರ ಸೋಂಕು
- 'ಬ್ರೇಕ್‌ಥ್ರೂ ಇನ್‌ಫೆಕ್ಷನ್'ಗೆ ಸಂಬಂಧ, ಬೃಹತ್ ಸಮೀಕ್ಷೆ

ನವದೆಹಲಿ: ಕೋವಿಡ್ ಲಸಿಕೆಯ ಎರಡನೇ ಡೋಸ್ ತೆಗೆದುಕೊಂಡ ವ್ಯಕ್ತಿಯಲ್ಲಿ, 14 ದಿನಗಳ ನಂತರ ಸೋಂಕು ಕಾಣಿಸಿಕೊಳ್ಳಬಹುದು. ಆದರೆ, ಎರಡು ಡೋಸ್‌ಗಳನ್ನು ತೆಗೆದುಕೊಂಡ ಕಾರಣ ವ್ಯಕ್ತಿಗೆ ಸೋಂಕಿನಿಂದ ಅಧಿಕ ರಕ್ಷಣೆ ಸಿಗುವುದು ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ಬಿಡುಗಡೆ ಮಾಡಿರುವ ವರದಿಯಲ್ಲಿ ಹೇಳಲಾಗಿದೆ.

ಲಸಿಕೆಯ ಎರಡು ಡೋಸ್‌ಗಳನ್ನು ತೆಗೆದುಕೊಂಡ ವ್ಯಕ್ತಿಯಲ್ಲಿ ಕೋವಿಡ್ ದೃಢಪಟ್ಟರೆ ಅದನ್ನು 'ಬ್ರೇಕ್‌ಥ್ರೂ ಇನ್‌ಫೆಕ್ಷನ್' ಎಂದು ಕರೆಯಲಾಗುತ್ತದೆ.

ಆರೋಗ್ಯ ಕಾರ್ಯಕರ್ತರು 'ಬ್ರೇಕ್‌ಥ್ರೂ ಇನ್‌ಫೆಕ್ಷನ್'ಗೆ ಒಳಗಾಗುವ ಅಪಾಯ ಹೆಚ್ಚು. ಆದರೆ, ಲಸಿಕೆಯ ಎರಡು ಡೋಸ್‌ಗಳನ್ನು ಪಡೆಯುವ ಮೂಲಕ ಅವರಿಗೆ ಇಂಥ ಸೋಂಕಿನಿಂದ ರಕ್ಷಣೆ ಸಿಗಲಿದೆ ಎಂದು ಮೂರು ಪ್ರತ್ಯೇಕ ಅಧ್ಯಯನಗಳಿಂದ ತಿಳಿದು ಬಂದಿದೆ.

ಚಂಡೀಗಡ ಮೂಲದ ಪಿಜಿಐಎಂಇಆರ್, ದೆಹಲಿಯ ಎಐಐಎಂಎಸ್ ಹಾಗೂ ಇನ್‌ಸ್ಟಿಟ್ಯೂಟ್ ಫಾರ್ ಜಿನೋಮಿಕ್ಸ್ ಆ್ಯಂಡ್ ಇಂಟಿಗ್ರೇಟಿವ್ ಬಯೋಲಜಿ (ಐಜಿಐಬಿ) ಅಧ್ಯಯನ ನಡೆಸಿವೆ. ಅಧ್ಯಯನ ವರದಿಯು 'ನ್ಯೂ ಇಂಗ್ಲೆಂಡ್ ಜರ್ನಲ್ ಆಫ್ ಮೆಡಿಸಿನ್'ನಲ್ಲಿ ಪ್ರಕಟವಾಗಿದೆ.

'ಬ್ರೇಕ್‌ಥ್ರೂ ಇನ್‌ಫೆಕ್ಷನ್'ಗೆ ಸಂಬಂಧಿಸಿ ದೇಶದಲ್ಲಿ ನಡೆದ ಬೃಹತ್ ಸಮೀಕ್ಷೆಯೂ ಇದಾಗಿದೆ.

ನಗರದ ಕೋವಿಡ್ ಅಂಕಿ–ಅಂಶ

11,80,182	ಒಟ್ಟು ಪ್ರಕರಣಗಳು (11,77,496 ನಿನ್ನೆಯ ವಿವರ)
1,24,807	ಸಕ್ರಿಯ ಪ್ರಕರಣಗಳು
10,40,686	ಗುಣಮುಖರಾದವರು
14,688	ಒಟ್ಟು ಸಾವು

ಶನಿವಾರದ ಏರಿಕೆ

ಹೊಸ ಪ್ರಕರಣ	2,686
ಗುಣಮುಖ	8,852
ಸಾವು	206

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಪೋಷಕರ ಮಡಿಲು ಸೇರಿದ ಬಾಲಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂದೆ–ತಾಯಿ ಕೆಲಸಕ್ಕೆ ಹೋಗಿದ್ದ ವೇಳೆ ಮನೆಯಿಂದ ರೈಲು ನಿಲ್ದಾಣಕ್ಕೆ ಬಂದು ಅನಾಥವಾಗಿ ಸುತ್ತಾಡುತ್ತಿದ್ದ 6 ವರ್ಷದ ಬಾಲಕಿ, ಯಲಹಂಕ ಪೊಲೀಸರ ತುರ್ತು ಸ್ಪಂದನೆಯಿಂದ ಪೋಷಕರ ಮಡಿಲು ಸೇರಿದ್ದಾಳೆ.

'ಕೊಂಡಪ್ಪ ಲೇಔಟ್ ನಿವಾಸಿ ಅನಿಲ್ ಹಾಗೂ ನೇತ್ರಾ ದಂಪತಿ ಪುತ್ರಿ ಸೃಷ್ಟಿ, ಯಲಹಂಕ ರೈಲು ನಿಲ್ದಾಣದಲ್ಲಿ ಶನಿವಾರ ಮಧ್ಯಾಹ್ನ ಒಬ್ಬಳೇ ಓಡಾಡುತ್ತಿದ್ದಳು. ನಿಲ್ದಾಣದಲ್ಲಿ ನಿಂತಿದ್ದ ರೈಲುಗಳನ್ನು ಹತ್ತಿ ಇಳಿಯುತ್ತಿದ್ದಳು. ಅದನ್ನು ಗಮನಿಸಿದ್ದ ಪ್ರಯಾಣಿಕರೊಬ್ಬರು, ಬಾಲಕಿಯನ್ನು ವಿಚಾರಿಸಿದ್ದರು. ಯಾವುದೇ ವಿಳಾಸ ಹೇಳಿರಲಿಲ್ಲ. ಹೀಗಾಗಿ, ಬಾಲಕಿಯನ್ನು ಪೊಲೀಸರಿಗೆ ಒಪ್ಪಿಸಿದ್ದರು' ಎಂದು ಪೊಲೀಸರು ಹೇಳಿದರು.

ಪೋಷಕರ ಜೊತೆ ಬಾಲಕಿ ಸೃಷ್ಟಿ

'ಠಾಣೆಗೆ ಬಾಲಕಿಯನ್ನು ಕರೆದುಕೊಂಡು ಬಂದಿದ್ದ ಪೊಲೀಸರು, 'ರೈಲು ನಿಲ್ದಾಣದಲ್ಲಿ ಬಾಲಕಿ ಪತ್ತೆಯಾಗಿದ್ದಾಳೆ. ಪೋಷಕರು ಯಾರಾದರೂ ಇದ್ದರೆ ಠಾಣೆಗೆ ಬನ್ನಿ' ಎಂದು ಆಕೆಯ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು. ವಾಟ್ಸ್‌ಆ್ಯಪ್‌ಗೆ ಬಂದಿದ್ದ ವಿಡಿಯೊ ನೋಡಿದ ತಂದೆ ಅನಿಲ್, ಪತ್ನಿ ಸಮೇತ ಠಾಣೆಗೆ ಬಂದು ಮಗಳನ್ನು ಕರೆದುಕೊಂಡು ಹೋದರು' ಎಂದೂ ಮೂಲಗಳು ತಿಳಿಸಿವೆ.

'ಮನೆಯಲ್ಲಿ ಒಬ್ಬಳೇ ಇದ್ದ ಬಾಲಕಿ, ತನ್ನಿಷ್ಟದ ರೈಲು ನೋಡಲು ನಿಲ್ದಾಣಕ್ಕೆ ಬಂದಿದ್ದಳು. ವಾಪಸು ಮನೆಗೆ ಹೋಗಲು ದಾರಿ ಗೊತ್ತಾಗದೇ ನಿಲ್ದಾಣದಲ್ಲಿ ಓಡಾಡುತ್ತಿದ್ದಳು. ಆಕಸ್ಮಾತ್ ರೈಲಿನಲ್ಲಿ ಹತ್ತಿ ಹೋಗಿದ್ದರೆ ಹುಡುಕುವುದು ಕಷ್ಟವಾಗುತ್ತಿತ್ತು' ಎಂದೂ ತಿಳಿಸಿದರು.

ಜೂಜು ಅಡ್ಡೆ ನಡೆಸುತ್ತಿದ್ದ ಆರೋಪ ಹರಿರಾಜ್ ಶೆಟ್ಟಿ ಸೆರೆ

ಬೆಂಗಳೂರು: 'ರಿಕ್ರಿಯೇಷನ್ ಕ್ಲಬ್' ನಡೆಸುತ್ತಿದ್ದ ಹರಿರಾಜ್ ಶೆಟ್ಟಿ ಅವರನ್ನು ಗೂಂಡಾ ಕಾಯ್ದೆಯಡಿ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ನಗರದಲ್ಲಿ ರಿಕ್ರಿಯೇಷನ್ ಕ್ಲಬ್ ಹೆಸರಿನಲ್ಲಿ ಹರಿರಾಜ್, ಜೂಜು ಅಡ್ಡೆ ನಡೆಸುತ್ತಿದ್ದರು. ಕ್ಲಬ್ ಮೇಲೆ ಈ ಹಿಂದೆ ಹಲವು ಬಾರಿ ದಾಳಿ ಮಾಡಿದ್ದ ಸಿಸಿಬಿ ಪೊಲೀಸರು, ಹರಿರಾಜ್ ವಿರುದ್ಧ ಪ್ರಕರಣ ದಾಖಲಿಸಿ ಬಂಧಿಸಿದ್ದರು. ಬಹುತೇಕ ಪ್ರಕರಣಗಳಲ್ಲಿ ಹರಿರಾಜ್ ಜಾಮೀನು ಪಡೆದಿದ್ದರು' ಎಂದು ಸಿಸಿಬಿ ಮೂಲಗಳು ಹೇಳಿವೆ.

ರೋಹಿಣಿ ಸಿಂಧೂರಿ, ಶಿಲ್ಪಾ ನಾಗ್ ಎತ್ತಂಗಡಿ

ಒಂದನೇ ಪುಟದಿಂದ...

ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಆಡಳಿತ ವ್ಯವಸ್ಥಾಪಕ ಲಕ್ಷ್ಮೀಕಾಂತ ರೆಡ್ಡಿ ಅವರನ್ನು ಮೈಸೂರು ಪಾಲಿಕೆ ಆಯುಕ್ತರಾಗಿ ನೇಮಿಸಲಾಗಿದೆ.

ವರ್ಗಾವಣೆಯಾದ ಇತರರು: ಪಿ. ರಾಜೇಂದ್ರ ಚೋಳನ್– ಆಡಳಿತ ನಿರ್ದೇಶಕ, ಬೆಸ್ಕಾಂ ಹೆಚ್ಚುವರಿಯಾಗಿ ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ ಮತ್ತು ಐಟಿ) ಹುದ್ದೆ ಮತ್ತು ದಯಾನಂದ ಕೆ.ಎ– ಬಿಬಿಎಂಪಿ ವಿಶೇಷ ಆಯುಕ್ತ (ಆಡಳಿತ)

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.35 ಕೋಟಿ	2.88 ಕೋಟಿ
ಸಕ್ರಿಯ ಪ್ರಕರಣ	1.34 ಕೋಟಿ	14.78 ಲಕ್ಷ
ಗುಣಮುಖ	15.63 ಕೋಟಿ	2.69 ಕೋಟಿ
ಸಾವು	37.32 ಲಕ್ಷ	3.46 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.16 ಲಕ್ಷ	1,11,024
ಗುಣಮುಖ	4.93 ಲಕ್ಷ	1.81 ಲಕ್ಷ
ಸಾವು	10,247	2,572

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

30,950 ಅರ್ಜೆಂಟಿನಾ; 38,482 ಬ್ರೆಜಿಲ್; 30,000 ಕೊಲಂಬಿಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

55.24 ಅಮೆರಿಕ; 11.31 ಬ್ರೆಜಿಲ್; 3.69 ಅರ್ಜೆಂಟಿನಾ

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

99,512 ಮಹಾರಾಷ್ಟ್ರ; 24,557 ದೆಹಲಿ; 26,571 ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

58.19 ಮಹಾರಾಷ್ಟ್ರ; 26.18 ಕೇರಳ; 22.16 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

'ಬೀಜ, ಗೊಬ್ಬರ ಉಚಿತ ವಿತರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ನೀತಿ ಮತ್ತು ಕೋವಿಡ್ ಕಾರಣದಿಂದ ಬಿತ್ತನೆ ಚಟುವಟಿಕೆಗೆ ರೈತರ ಬಳಿ ಹಣ ಇಲ್ಲದಂತಾಗಿದೆ. ಹೀಗಾಗಿ, ಬೀಜ, ಗೊಬ್ಬರ ಉಚಿತವಾಗಿ ನೀಡಬೇಕು' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಶನಿವಾರ ಈ ಬಗ್ಗೆ ಪತ್ರ ಬರೆದಿರುವ ಅವರು, 'ಸಾಲ ವಿತರಣೆ ತಕ್ಷಣ ಆರಂಭಿಸಬೇಕು. ಹೆಸರು, ಉದ್ದು, ಅಲಸಂಡೆ, ತೊಗರಿ ಮುಂತಾದ ದ್ವಿದಳ ಧಾನ್ಯಗಳು ಹಾಗೂ ಸೋಯಾ, ಶೇಂಗಾ ಮುಂತಾದ ಎಣ್ಣೆ ಬೀಜಗಳನ್ನು ಸಂಗ್ರಹಿಸಿ, ಬೇಡಿಕೆ ಇದ್ದಷ್ಟು ಪೂರೈಸಬೇಕು' ಎಂದು ಆಗ್ರಹಿಸಿದ್ದಾರೆ.

'ಈ ವರ್ಷ ಕೇವಲ 410 (ಶೇ 19ರಷ್ಟು) ಕ್ವಿಂಟಲ್ ಹೆಸರು ಕಾಳು ಬಿತ್ತನೆ ಬೀಜವನ್ನು ರೈತ ಸಂಪರ್ಕ ಕೇಂದ್ರಗಳಿಗೆ ವಿತರಿಸಲಾಗಿದೆ. ಇದು ದ್ರೋಹವಲ್ಲದೆ ಇನ್ನೇನು' ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಮ್ಯಾನ್‌ಹೋಲ್ ಪ್ರಕರಣ: ಅಧಿಕಾರಿಗಳಿಗೆ ತರಾಟೆ

ಪ್ರಜಾವಾಣಿ ವಾರ್ತೆ

ರಾಮನಗರ: ಮ್ಯಾನ್‌ಹೋಲ್‌ಗೆ ಇಳಿದು ಮೂವರು ಕಾರ್ಮಿಕರು ಮೃತಪಟ್ಟ ಸ್ಥಳಕ್ಕೆ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ವೆಂಕಟೇಶನ್ ಹಾಗೂ ರಾಜ್ಯ ಆಯೋಗದ ಅಧ್ಯಕ್ಷ ಶಿವಣ್ಣ ಶನಿವಾರ ಭೇಟಿ ನೀಡಿ ಪರಿಶೀಲಿಸಿದರು.

'ಮ್ಯಾನ್‌ಹೋಲ್‌ಗೆ ಕಾರ್ಮಿಕರನ್ನು ಇಳಿಸಲು ಏಕೆ ಬಿಟ್ಟಿರಿ? ಸಂಬಂಧಪಟ್ಟ ಎಂಜಿನಿಯರ್ ಯಾಕೆ ಸ್ಥಳದಲ್ಲಿ ಹಾಜರಿರಲಿಲ್ಲ?' ಎಂದು ಅಧಿಕಾರಿಗಳನ್ನು ಅಧ್ಯಕ್ಷರು ತರಾಟೆಗೆ ತೆಗೆದುಕೊಂಡರು.

ಈ ಸಂದರ್ಭ ಪತ್ರಕರ್ತರ ಜೊತೆ ಮಾತನಾಡಿದ ವೆಂಕಟೇಶನ್, 'ಪ್ರಕರಣ ಸಂಬಂಧ ಈಗಾಗಲೇ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಗುತ್ತಿಗೆದಾರರ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಆದಾಗ್ಯೂ ಇಂತಹ ಪ್ರಕರಣಗಳಲ್ಲಿ ಸ್ಥಳೀಯ ಆಡಳಿತ ಹಾಗೂ ಅಧಿಕಾರಿಗಳೂ ಹೊಣೆಗಾರರು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಜಿಲ್ಲಾಧಿಕಾರಿ ನೇತೃತ್ವದಲ್ಲಿ ತನಿಖೆ ನಡೆದಿದ್ದು, ಅಧಿಕಾರಿಗಳ ಲೋಪ ಇದ್ದಲ್ಲಿ ಅವರ ಮೇಲೂ ಕ್ರಮ ಜರುಗಿಸಲಾಗುವುದು' ಎಂದರು.

'ಸತ್ತವರಲ್ಲಿ ಇಬ್ಬರು ಪರಿಶಿಷ್ಟ ಜಾತಿಗೆ ಸೇರಿದವರು ಎಂದು ಹೇಳಲಾಗಿತ್ತು. ಆದರೆ, ಒಬ್ಬರ ಜಾತಿ ಪ್ರಮಾಣದಲ್ಲಿ ಗೊಂದಲ ಇದ್ದು, ಇದನ್ನು ಪರಿಶೀಲಿಸಿ ಪೂರ್ಣ ಪರಿಹಾರ ನೀಡಲಾಗುವುದು. ಮಕ್ಕಳ ಶಿಕ್ಷಣಕ್ಕೂ ನೆರವು ನೀಡಲಾಗುವುದು' ಎಂದು ಶಿವಣ್ಣ ತಿಳಿಸಿದರು.

ರಾಜ್ಯ ಆಯೋಗದ ಕಾರ್ಯದರ್ಶಿ ಆರ್. ರಮಾ, ಜಿಲ್ಲಾಧಿಕಾರಿ ಕೆ. ರಾಕೇಶ್ ಕುಮಾರ್, ಎಸ್.ಪಿ ಗಿರೀಶ್ ಇದ್ದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಂತ್ರಸ್ತ ಕುಟುಂಬಗಳಿಗೆ ಆಯೋಗದ ಅಧ್ಯಕ್ಷರು ತಲಾ ₹ 10 ಲಕ್ಷ ಪರಿಹಾರದ ಚೆಕ್ ವಿತರಿಸಿದರು. ಆನಂತರ ಶವಗಳನ್ನು ಅವರ ಕುಟುಂಬದವರು ಒಯ್ದು ಅಂತ್ಯಕ್ರಿಯೆ ನಡೆಸಿದರು.

ನಗರದಲ್ಲಿ ಇಂದು

'ಮಾಸ್ತಿ ಸ್ಮರಣೆ' ಆನ್‌ಲೈನ್ ವಿಚಾರ ಸಂಕಿರಣ: ಭಾಗವಹಿಸುವವರು–ಎಸ್. ಆರ್.ವಿಜಯಶಂಕರ, ಬಿ.ಎ.ವಿವೇಕ ರೈ, ಮಾವಿನಕೆರೆ ರಂಗನಾಥನ್, ಶಶಿಕಲಾ, ಆಯೋಜನೆ–ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ವಿದ್ಯಾಲಯ ಹಾಗೂ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

'ಕೋವಿಡ್ -19ರ ಪರಿಸ್ಥಿತಿಯಲ್ಲಿ ಉಸಿರಾಟದ ಆರೈಕೆಯ ಮೂಲಭೂತ ಅಂಶಗಳು' ವೆಬಿನಾರ್: ಮಾತನಾಡುವವರು–ಡಾ.ಮಂಜೂಷ್ ಕಾರ್ತಿಕಾ, ತಿಶಾ ಆ್ಯನ್ ಸ್ಕೇರಿಯ, ರಿತುಜಾ ಬಾಗಡೆ, ಮೌಮಿತಾ ಚಕ್ರವರ್ತಿ, ಮುಸಲ್ಲಾಂ ಅಲ್ ನಸೀರ್, ಅನ್ಮೋಲ್ ತೋರ್ಬೊಲೆ, ಆಯೋಜನೆ–ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

ನಿಧನ ವಾರ್ತೆ

ಸಾವಿತ್ರಮ್ಮ

ದೊಡ್ಡಬಳ್ಳಾಪುರ: ನಗರದ ಪಾಲನಜೋಗಿಹಳ್ಳಿ ನಿವಾಸಿ ಸಾವಿತ್ರಮ್ಮ(65) ಶನಿವಾರ ನಿಧನರಾದರು.

ಕೆಲ ದಿನಗಳಿಂದ ಅವರು ಕೊರೊನಾ ಸೋಂಕಿನಿಂದ ಬಳಲುತ್ತಿದ್ದರು. ಅವರ ಪತಿ ಎನ್.ಎ.ಕಮಲನಾಥ್ ಆರು ದಿನಗಳ ಹಿಂದೆಯಷ್ಟೇ ಕೋವಿಡ್‌ನಿಂದ ಮೃತಪಟ್ಟಿದ್ದರು. ಮೃತರಿಗೆ 'ಪ್ರಜಾವಾಣಿ' ಬಳ್ಳಾರಿ ಜಿಲ್ಲೆ ಮುಖ್ಯ ವರದಿಗಾರ ಕೆ.ನರಸಿಂಹಮೂರ್ತಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ನಗರದ ಮುಕ್ತಿಧಾಮದಲ್ಲಿ ನಡೆಯಿತು.

ಉಚಿತ ಲಸಿಕೆ, ಆಹಾರ ಪ್ಯಾಕೇಜ್‌ಗೆ ವಲಸೆ ಕಾರ್ಮಿಕರ ಒತ್ತಾಯ

ಜೋಪಡಿಗಳಲ್ಲೇ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆಯನ್ನು ಉಚಿತವಾಗಿ ನೀಡಬೇಕು ಮತ್ತು ಲಾಕ್‌ಡೌನ್ ವೇಳೆ ಕೆಲಸ ಕಳೆದುಕೊಂಡ ತಮಗೂ ಪರಿಹಾರದ ಪ್ಯಾಕೇಜ್ ನೀಡಬೇಕು ಎಂದು ಒತ್ತಾಯಿಸಿ ನಗರದ ವಿವಿಧ ಪ್ರದೇಶಗಳಲ್ಲಿ ಜೋಪಡಿಗಳಲ್ಲಿ ನೆಲೆಸಿರುವ ಅಂತರರಾಜ್ಯ ವಲಸೆ ಕಾರ್ಮಿಕರು ಶನಿವಾರ ಪ್ರತಿಭಟನೆ ನಡೆಸಿದರು.

ಅಂತರ ರಾಜ್ಯ ವಲಸೆ ಕಾರ್ಮಿಕರ ಫೆಡರೇಷನ್ ಆಫ್ ಕರ್ನಾಟಕ ಸಂಸ್ಥೆ ಆಶ್ರಯದಲ್ಲಿ ನಡೆದ ಪ್ರತಿಭಟನೆ ವೇಳೆ ವಲಸೆ ಕಾರ್ಮಿಕರು ತಮ್ಮ ಜೋಪಡಿಗಳ ಮುಂದೆಯೇ ಬೇಡಿಕೆಗಳ ಫಲಕಗಳನ್ನು ಪ್ರದರ್ಶಿಸಿದರು. ವಲಸೆ ಕಾರ್ಮಿಕರ ಪ್ರತಿ ಕುಟುಂಬಕ್ಕೆ ಕನಿಷ್ಠ ₹ 10 ಸಾವಿರ ಪರಿಹಾರ ಮತ್ತು ತಲಾ 10 ಕೆ.ಜಿ ಪಡಿತರ ನೀಡುವಂತೆ ಒತ್ತಾಯಿಸಿದರು.

'ವಲಸೆ ಕಾರ್ಮಿಕರಲ್ಲಿ ಬಹುತೇಕರು ಚಿಂದಿ ಆಯುವವರು ಮತ್ತು ಮನೆಕೆಲಸಗಾರರು. ತಮ್ಮ ಬಳಿಕ ಈ ರಾಜ್ಯದ ಬಿಪಿಎಲ್ ಪಡಿತರ ಚೀಟಿ ಇಲ್ಲ. ಹಾಗಾಗಿ ರಾಜ್ಯ ಸರ್ಕಾರ ಪ್ರಕಟಿಸಿರುವ ತಲಾ ₹ 2 ಸಾವಿರ ಪರಿಹಾರವೂ ತಮಗೆ ಸಿಗುವುದಿಲ್ಲ. ಈ ಷರತ್ತನ್ನು ತೆಗೆದುಹಾಕಬೇಕು' ಎಂದು ಪ್ರತಿಭಟನಾಕಾರರು ಮನವಿ ಮಾಡಿದರು.

ಅಂತರರಾಜ್ಯ ವಲಸೆ ಕಾರ್ಮಿಕರು ಪ್ರತಿಭಟನೆ ವೇಳೆ ಫಲಕಗಳನ್ನು ಪ್ರದರ್ಶಿಸಿದರು

ಬಹಳಷ್ಟು ಕಟ್ಟಡ ಕಾರ್ಮಿಕರು ರಾಜ್ಯ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಸದಸ್ಯರಲ್ಲ. ಹಾಗಾಗಿ ಮಂಡಳಿಯಿಂದಲೂ ಯಾವುದೇ ಸೌಲಭ್ಯ ದೊರೆಯುತ್ತಿಲ್ಲ. ಕಾರ್ಮಿಕ ಇಲಾಖೆಯು ಈ ಕಾರ್ಮಿಕರಿಗೂ ಮಂಡಳಿಯ ಸದಸ್ಯತ್ವ ನೀಡುವ ಮೂಲಕ ಇವರಿಗೂ ಪ್ಯಾಕೇಜ್ ಕೊಡಬೇಕು ಎಂದು ಫೆಡರೇಷನ್ ಒತ್ತಾಯಿಸಿದೆ.

ಪಶ್ಚಿಮ ಬಂಗಾಳ, ಒಡಿಶಾ, ಜಾರ್ಖಂಡ್, ಬಿಹಾರ್, ಛತ್ತೀಸ್‌ಗಡ, ಉತ್ತರ ಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದರು.

ಮನ್‌ಮುಲ್: 6 ಮಂದಿ ಅಮಾನತು

ಮಂಡ್ಯ: ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಕ್ಕೆ (ಮನ್‌ಮುಲ್), ನೀರು ಮಿಶ್ರಿತ ಹಾಲು ಸರಬರಾಜು ಮಾಡಿದ ಪ್ರಕರಣದ ಸಂಬಂಧ ಮನ್‌ಮುಲ್ ವ್ಯವಸ್ಥಾಪಕ ನಿರ್ದೇಶಕರನ್ನು ಶನಿವಾರ ವರ್ಗಾವಣೆಗೊಳಿಸಿ, ಇತರ 6 ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಸಹಕಾರ ಸಂಘಗಳಿಂದ ಸಂಗ್ರಹಿಸಿದ ಹಾಲಿನಲ್ಲಿ ನೀರು ಮಿಶ್ರಣ ಮಾಡಿ ಮನ್‌ಮುಲ್‌ಗೆ ಪೂರೈಸುತ್ತಿರುವ ವಿಷಯ ಈಚೆಗೆ ಹಿಂದೆ ಬೆಳಕಿಗೆ ಬಂದಿತ್ತು. ಗಟ್ಟಿ ಹಾಲನ್ನು ಖಾಸಗಿ ಡೇರಿಗಳಿಗೆ ಮಾರಾಟ ಮಾಡಲಾಗುತ್ತಿತ್ತು. ಕಳಪೆ ಹಾಗೂ ಗುಣಮಟ್ಟದ ಹಾಲು ಬೇರ್ಪಡಿಸಲು ವಿಶೇಷ ರೀತಿಯಲ್ಲಿ ಟ್ಯಾಂಕರ್ ವಿನ್ಯಾಸ ಮಾಡಿರುವ ಅಂಶ ಪತ್ತೆಯಾಗಿತ್ತು.

ಈ ಸಂಬಂಧ 4 ಟ್ಯಾಂಕರ್‌ಗಳನ್ನೂ ವಶಕ್ಕೆ ಪಡೆದಿದ್ದು, ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಿತ್ತು. ಸದ್ಯ, ಎಂಡಿ ಚಂದ್ರಶೇಖರ್ ಅವರನ್ನು ತರಾತುರಿಯಲ್ಲಿ ವರ್ಗಾವಣೆ ಮಾಡಿದ್ದು, ಹಾಲಿನ ಗುಣಮಟ್ಟ ಪರೀಕ್ಷೆ ವೇಳೆ ಕರ್ತವ್ಯಲೋಪ ಕುರಿತು 6 ಮಂದಿಯನ್ನು ಅಮಾನತು ಮಾಡಲಾಗಿದೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ (ಟ್ರಾಫಿಕ್ ಇಂಜಿನಿಯರಿಂಗ್ ಸೆಲ್) ರಸ್ತೆ ಮೂಲಸೌಕರ್ಯ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–560002

ಸಂಖ್ಯೆ:ಕಾಪಾಅ/ಆರ್‌ಐ–ಟಿಇಸಿ/ಕೊ/02/2021–22 ದಿನಾಂಕ:05.06.2021

ಕೊಟೇಷನ್‌ಗಾಗಿ ಆಹ್ವಾನ

ಕಾರ್ಯಪಾಲಕ ಅಭಿಯಂತರರು–ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ರಸ್ತೆ ಮೂಲಸೌಕರ್ಯ ವಿಭಾಗ, ಬಿಬಿಎಂಪಿ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಕೊಟೇಷನ್‌ಗಳನ್ನು ಆಹ್ವಾನಿಸಿದ್ದಾರೆ.

ವಿವರಗಳು	ಯೂನಿಟ್	ಪ್ರಮಾಣ
Supply and fixing of Retro Reflective Landmark Name Signboard of size 1800mm x 1220mm made out of retro reflective sheeting conforming to Type XI standards of ASTM D 4956 — 09 specification & fixed over 2mm thick Aluminum sheet, Back support frame of Stainless Steel supported by 32 NB dia and 1.2 mm thick Stainless Steel pipe all around & 65 NB 2mm thick pipe vertical post (AISI 202 Grade) of height 1.8 mtrs firmly fixed to the ground by means of properly designed foundation with M20 Grade Cement concrete, foundation of size 450mm x 450mm x 600mm in 1:1.5:3 ratio cement concrete. The background shall be white in color and information should be cut in electro cutable film of blue color & BBMP Logo black color film, 10 years warranty as per clause 6.9 of IRC 672012 for Type XI retro reflective sheeting from the sheeting manufacturer & a certified copy of test reports from an independent test laboratory conforming to clause 6.7 of IRC 67-2012 including 3 years outdoor weather exposure report for the retro reflective sheeting offered".	Each	1

1) ಕೊಟೇಷನ್‌ಗಳನ್ನು ಮುಚ್ಚಿದ ಲಕೋಟೆಯಲ್ಲಿ ಕಾರ್ಯಪಾಲಕ ಅಭಿಯಂತರರು–ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ರಸ್ತೆ ಮೂಲಸೌಕರ್ಯ ವಿಭಾಗ, ಬಿಬಿಎಂಪಿ, ಇವರ ಕಛೇರಿಯಲ್ಲಿ **ದಿನಾಂಕ 14.06.2021ರೊಳಗೆ** ಸಲ್ಲಿಸಬಹುದು. 2) ಅವಧಿ ಮುಗಿದ ಮೇಲೆ ಸಲ್ಲಿಸಿದ ಕೊಟೇಷನ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. 3) ಕಂಡೀಷನಲ್ ಕೊಟೇಷನ್‌ಗಳನ್ನು ತಿರಸ್ಕರಿಸಲಾಗುವುದು. 4) ಕೊಟೇಷನ್‌ಗಳನ್ನು ಕಾರ್ಯಪಾಲಕ ಅಭಿಯಂತರರು–ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ರಸ್ತೆ ಮೂಲಸೌಕರ್ಯ ವಿಭಾಗ, ಬಿಬಿಎಂಪಿ, ಇವರ ಕಛೇರಿಯಲ್ಲಿ **ದಿನಾಂಕ 14.06.2021ರ ಸಂಜೆ 4.30ಕ್ಕೆ** ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ರಸ್ತೆ ಮೂಲಸೌಕರ್ಯ ವಿಭಾಗ.

"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ರಾಜ್ಯ ಬಿಜೆಪಿಯಲ್ಲಿ ಏಕೆ ಭಿನ್ನಮತ ಭುಗಿಲೆದ್ದಿದೆ?
ಸಂವಾದದಲ್ಲಿ ಭಾಗವಹಿಸುವವರು

ಅಡಗೂರು ಎಚ್. ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ, ಬಿಜೆಪಿ

ಎ. ನಾರಾಯಣ, ರಾಜಕೀಯ ವಿಶ್ಲೇಷಕ ಪ್ರಾಧ್ಯಾಪಕ

ಎನ್.ರವಿಕುಮಾರ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಎಂಎಲ್‌ಸಿ
ಸೋಮವಾರ, 7- 6-2021 ಸಮಯ- ಮಧ್ಯಾಹ್ನ 11.45 ರಿಂದ 12.45

ಸಿ.ಎಂ, ಕಾನೂನು ತಜ್ಞರ ಜೊತೆ ಚರ್ಚಿಸಿ ತೀರ್ಮಾನ– ಅಶ್ವತ್ಥನಾರಾಯಣ

ವೃತ್ತಿಪರ ಕೋರ್ಸ್‌ಗೆ ಪ್ರವೇಶ ಸಿಇಟಿ ಅಂಕವೇ ಆಧಾರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ ರದ್ದುಪಡಿಸಿರುವುದರಿಂದ, ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ವಿದ್ಯಾರ್ಥಿಗಳ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಮತ್ತು ರಾಷ್ಟ್ರೀಯ ಪ್ರವೇಶ ಪರೀಕ್ಷೆಯ (ನೀಟ್) ಅಂಕ ಮಾತ್ರ ಪರಿಗಣಿಸುವ ಬಗ್ಗೆ ಶೀಘ್ರ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಅಶ್ವತ್ಥನಾರಾಯಣ

ದ್ವಿತೀಯ ಪಿಯು ಪರೀಕ್ಷೆ ರದ್ದು ಕಾರಣದಿಂದ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ಸಿಇಟಿ, ನೀಟ್ ಅಂಕ ಮಾತ್ರ ಪರಿಗಣಿಸುವಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಈ ಬಗ್ಗೆ ಪತ್ರವನ್ನೂ ಬರೆದಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ಅಶ್ವತ್ಥನಾರಾಯಣ, 'ಅಧಿಕಾರಿಗಳು ಮತ್ತು ಉನ್ನತ ಶಿಕ್ಷಣ ತಜ್ಞರ ಜತೆ ಚರ್ಚಿಸಿ ಸದ್ಯದಲ್ಲೇ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದರು.

'ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ದ್ವಿತೀಯ ಪಿಯುದಲ್ಲಿ ಕನಿಷ್ಠ ಇಂತಿಷ್ಟು ಅಂಕ ಗಳಿಸಬೇಕಿತ್ತು. ಅದರ ಬದಲು ಸಿಇಟಿ ರ್‍ಯಾಂಕ್ ಪರಿಗಣಿಸಲು ಸುರೇಶ್ ಕುಮಾರ್ ಸಲಹೆ ನೀಡಿದ್ದಾರೆ. ಇದಕ್ಕೆ ಕಾಯ್ದೆಗೆ ತಿದ್ದುಪಡಿ ಆಗಬೇಕು. ಈ ಬಗ್ಗೆ ಕಾನೂನು ತಜ್ಞರು, ಸಿ.ಎಂ ಜೊತೆಗೆ ಚರ್ಚಿಸಲಾಗುವುದು' ಎಂದು ತಿಳಿಸಿದರು.

ಸುರೇಶ್‌ಕುಮಾರ್ ಪತ್ರ: 'ದ್ವಿತೀಯ ಪಿಯು ಮತ್ತು ಸಿಇಟಿ ಅಂಕ ಪರಿಗಣಿಸಿ, ವೆಯ್ಟೇಜ್ ನೀಡಿ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ರ್‍ಯಾಂಕಿಂಗ್ ಘೋಷಿಸಲಾಗುತ್ತದೆ. ಈ ಬಾರಿ ದ್ವಿತೀಯ ಪಿಯು ವಿದ್ಯಾರ್ಥಿಗಳನ್ನು ಪರೀಕ್ಷೆ ಇಲ್ಲದೇ ತೇರ್ಗಡೆ ಮಾಡಲು ನಿರ್ಧರಿಸಿರುವುದರಿಂದ ಪ್ರಥಮ ಪಿಯು ಮತ್ತು ಎಸ್ಸೆಸ್ಸೆಲ್ಸಿ ಅಂಕ ಪರಿಗಣಿಸಿ, ಸಮನಾದ ಸೂಕ್ತ ಮೌಲ್ಯ ಸೇರಿಸಿ ವಿದ್ಯಾರ್ಥಿಗಳಿಗೆ ಗ್ರೇಡಿಂಗ್ ನೀಡಲು ನಿರ್ಧರಿಸಲಾಗಿದೆ' ಎಂದು ಪತ್ರದಲ್ಲಿ ಸುರೇಶ್ ಕುಮಾರ್ ಉಲ್ಲೇಖಿಸಿದ್ದಾರೆ.

'ಗ್ರೇಡಿಂಗ್ ಫಲಿತಾಂಶ ವಿದ್ಯಾರ್ಥಿಗಳ ಪ್ರತಿಭೆಯನ್ನು ಖಚಿತವಾಗಿ ವ್ಯಕ್ತಪಡಿಸಿದರೂ, ಅದನ್ನು ನಿರಾಕರಿಸಿ ಮತ್ತೆ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ. ಹೀಗಾಗಿ, ಈ ಬಾರಿಯ ದ್ವಿತೀಯ ಪಿಯು ವಿದ್ಯಾರ್ಥಿಗಳ ಅಂಕವನ್ನು ಸಿಇಟಿ ರ್‍ಯಾಂಕಿಂಗ್ ವೇಳೆ ಗಣನೆಗೆ ತೆಗೆದುಕೊಳ್ಳುವಾಗ, ಈ ಫಲಿತಾಂಶವನ್ನು ಪ್ರಶ್ನಿಸಿ ಮತ್ತೊಮ್ಮೆ ಪರೀಕ್ಷೆ ಬರೆಯಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ಅನಾನುಕೂಲ ಆಗಬಹುದು' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಎಸ್ಸೆಸ್ಸೆಲ್ಸಿ ಅಂಕ ಆಧರಿಸಿ ದ್ವಿತೀಯ ಪಿಯು ಫಲಿತಾಂಶ: ಸುರೇಶ್‌ಕುಮಾರ್

'ದ್ವಿತೀಯ ಪಿಯು ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಸಮಗ್ರ ಮತ್ತು ಹೆಚ್ಚು ನ್ಯಾಯಯುತವಾಗಲು, ಈ ವಿದ್ಯಾರ್ಥಿಗಳ ಎಸ್ಸೆಸ್ಸೆಲ್ಸಿ ಅಂಕವನ್ನು ಅವಲೋಕಿಸಿ, ಅದಕ್ಕೆ ಸಮನಾದ ಸೂಕ್ತ ಮೌಲ್ಯ ಸೇರಿಸಿ ಫಲಿತಾಂಶ ಘೋಷಿಸಬೇಕು' ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸಚಿವ ಸುರೇಶ್‌ಕುಮಾರ್ ಸೂಚಿಸಿದ್ದಾರೆ.

ಸುರೇಶ್ ಕುಮಾರ್

'ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಎಸ್ಸೆಸ್ಸೆಲ್ಸಿ ಅಂಕಗಳನ್ನು ಪಡೆದು, ಪ್ರಥಮ ಪಿಯು ದಲ್ಲಿ ಪಡೆದ ಅಂಕಗಳೊಂದಿಗೆ ಹೊಂದಿಸಿ, ಜೂನ್ ತಿಂಗಳ ಅಂತ್ಯಕ್ಕೆ ಗ್ರೇಡಿಂಗ್ ಫಲಿತಾಂಶ ಘೋಷಿಸಬೇಕು' ಎಂದೂ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಪ್ರತಿ ಜಿಲ್ಲೆಗೆ 1000 ಹೊಲಿಗೆ ಯಂತ್ರ, 500 ಕಂಪ್ಯೂಟರ್: ರಘು ಕೌಟಿಲ್ಯ

ಮೈಸೂರು: 'ಕೋವಿಡ್‌ನಿಂದ ಉದ್ಯೋಗ ಕಳೆದುಕೊಂಡವರಿಗೆ ನೆರವಾಗಲು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದಿಂದ ಪ್ರತಿ ಜಿಲ್ಲೆಗೆ ತಲಾ 1,000 ಹೊಲಿಗೆ ಯಂತ್ರಗಳು ಹಾಗೂ 500 ಕಂಪ್ಯೂಟರ್‌ಗಳನ್ನು ಉಚಿತವಾಗಿ ನೀಡಲಾಗುವುದು' ಎಂದು ನಿಗಮದ ಅಧ್ಯಕ್ಷ ಆರ್. ರಘು ಕೌಟಿಲ್ಯ ಹೇಳಿದರು.

'ಈ ಕುರಿತ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಒಪ್ಪಿಗೆ ಸೂಚಿಸಿದ್ದಾರೆ. ಶೀಘ್ರದಲ್ಲೇ ಆದೇಶ ಹೊರಬೀಳಲಿದೆ. ದೇವರಾಜ ಅರಸು ಅವರ 39ನೇ ಪುಣ್ಯಸ್ಮರಣೆ ಅಂಗವಾಗಿ ಯೋಜನೆ ಜಾರಿಯಾಗಲಿದೆ' ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಫಲಾನುಭವಿಗಳನ್ನು ಗುರುತಿಸುವಾಗ, ಕೋವಿಡ್‌ನಿಂದ ಉದ್ಯೋಗ ಕಳೆದುಕೊಂಡವರಿಗೆ ಆದ್ಯತೆ ನೀಡಲಾಗುತ್ತದೆ. ನಿಗಮದ ವ್ಯಾಪ್ತಿಯಲ್ಲಿ ಬರುವ ಎಲ್ಲ ಹಿಂದುಳಿದ ವರ್ಗಗಳ ಜನರು ಅರ್ಜಿ ಸಲ್ಲಿಸಬಹುದು. ಆರ್ಥಿಕವಾಗಿ ಹಿಂದುಳಿದ ಇತರ ವರ್ಗಗಳ ಜನರು ಅರ್ಜಿ ಸಲ್ಲಿಸಿದರೂ, ಪರಿಗಣಿಸುತ್ತೇವೆ' ಎಂದು ಕೌಟಿಲ್ಯ ಹೇಳಿದರು.

'ಹೊಲಿಗೆ ಯಂತ್ರ ವಿತರಿಸುವ ಜತೆಗೆ, ಟೈಲರಿಂಗ್ ಅಂಗಡಿ ಆರಂಭಿಸಲು ಅಗತ್ಯವಿರುವ ಪರಿಕರಗಳನ್ನು ನೀಡುವ ಚಿಂತನೆಯಿದೆ. ಉದ್ಯೋಗ ಕಳೆದುಕೊಂಡ ವಿದ್ಯಾವಂತರನ್ನು ಗುರುತಿಸಿ ಕಂಪ್ಯೂಟರ್ ನೀಡಲು ಉದ್ದೇಶಿಸಲಾಗಿದೆ. ತಾತ್ಕಾಲಿಕ ಪರಿಹಾರ ನೀಡುವ ಬದಲು, ಅವರ ಬದುಕು ರೂಪಿಸುವುದು ನಿಗಮದ ಗುರಿ' ಎಂದು ಅವರು ಹೇಳಿದರು.

ನೋಂದಣಿಗೆ ಡಿ.ಡಿ ಸ್ವೀಕೃತಿ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ನೋಂದಣಿ ಕಚೇರಿಗಳಲ್ಲಿ ಡಿಮಾಂಡ್ ಡ್ರಾಫ್ಟ್ (ಡಿ.ಡಿ) ಮೂಲಕ ಶುಲ್ಕ ಸ್ವೀಕೃತಿಯನ್ನು ನಿಷೇಧಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ.

ಸರ್ಕಾರದ ಹಣ ಖಾಸಗಿ ಖಾತೆಗಳಿಗೆ ಅಕ್ರಮವಾಗಿ ವರ್ಗಾವಣೆ ಆಗುತ್ತಿರುವ ಕಾರಣದಿಂದ ನಗದು ಮತ್ತು ಡಿ.ಡಿ ಮೂಲಕ ಶುಲ್ಕ ಪಡೆಯುವುದನ್ನು ನಿಷೇಧಿಸಲಾಗಿದೆ. ಬ್ಯಾಂಕ್ ಮೂಲಕ ಅಥವಾ ಡಿಜಿಟಲ್ ವರ್ಗಾವಣೆ ಮೂಲಕ ಹಣ ಪಾವತಿ ಕಡ್ಡಾಯಗೊಳಿಸಲಾಗಿದೆ. ನಗದು ಅಥವಾ ಡಿ.ಡಿ ಪಡೆಯುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವುದಾಗಿ ಇಲಾಖೆ ಎಚ್ಚರಿಕೆ ನೀಡಿದೆ.

ಖಜಾನೆ ತಂತ್ರಾಂಶ ಮತ್ತು ನೋಂದಣಿ ಇಲಾಖೆಯ ಕಾವೇರಿ ತಂತ್ರಾಂಶಗಳನ್ನು ಜೋಡಣೆ ಮಾಡುವವರೆಗೂ ಹಣ ಪಾವತಿಯನ್ನು ಖಚಿತಪಡಿಸಿಕೊಂಡು, ಉಪ ನೋಂದಣಾಧಿಕಾರಿ ಪ್ರಮಾಣೀಕರಿಸಿದ ಬಳಿಕ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆರ್.ಪಿ. ವೆಂಕಟೇಶ್‌ಮೂರ್ತಿಗೆ ಖಾದ್ರಿ ಶಾಮಣ್ಣ ಪ್ರಶಸ್ತಿ

ಹಾಸನ: ಹಾಸನ ಜಿಲ್ಲೆಯ 'ಜನತಾ ಮಾಧ್ಯಮ' ಪತ್ರಿಕೆ ಸಂಪಾದಕ ಆರ್.ಪಿ. ವೆಂಕಟೇಶ್ ಮೂರ್ತಿ ಅವರು, 2020ನೇ ಸಾಲಿನ ಪ್ರತಿಷ್ಠಿತ ಖಾದ್ರಿ ಶಾಮಣ್ಣ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಪತ್ರಿಕಾ ಕ್ಷೇತ್ರದಲ್ಲಿನ ಸಾಧನೆ, ರೈತ ಚಳವಳಿ ಹಾಗೂ ಪರಿಸರ ಕಾಳಜಿಯನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿ ₹15 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

ವೆಂಕಟೇಶ್ ಮೂರ್ತಿ

ಕಳೆದ ಬಾರಿ ಕೋವಿಡ್ ಕಾರಣಗಳಿಂದ ಪ್ರಶಸ್ತಿ ವಿತರಣಾ ಸಮಾರಂಭ ನಡೆದಿರಲಿಲ್ಲ. ಈ ಬಾರಿ ಒಟ್ಟಿಗೆ ಎರಡು ವರ್ಷದ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಖಾದ್ರಿ ಶಾಮಣ್ಣ ಟ್ರಸ್ಟ್‌ನ ಟ್ರಸ್ಟಿ ಎಚ್.ಆರ್.ಶ್ರೀಶ ತಿಳಿಸಿದ್ದಾರೆ.

ನಾಯಕತ್ವ ಬದಲಾವಣೆ ಕೇವಲ ವದಂತಿ: ಸಿ.ಟಿ. ರವಿ

ನವದೆಹಲಿ: 'ರಾಜ್ಯದಲ್ಲಿ ನಾಯಕತ್ವ ಬದಲಾಗಲಿದೆ ಎಂಬ ಆಧಾರರಹಿತ ಹೇಳಿಕೆಗೆ ಯಾರೂ ಪ್ರತಿಕ್ರಿಯೆ ನೀಡುವುದಿಲ್ಲ. ಅಂಥ ಹೇಳಿಕೆಗಳನ್ನು ಬೆಂಬಲಿಸುವ ಪ್ರಶ್ನೆಯೇ ಇಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ತಿಳಿಸಿದರು.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ನೇತೃತ್ವದಲ್ಲಿ ಶನಿವಾರ ಇಲ್ಲಿ ನಡೆದ ಸಂಘಟನಾ ಸಭೆಯಲ್ಲಿ ಪಾಲ್ಗೊಂಡ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಬಿ.ಎಸ್. ಯಡಿಯೂರಪ್ಪ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದ್ದು, ಅವರನ್ನು ಬದಲಿಸಲಾಗುತ್ತದೆ ಎಂಬುದು ವದಂತಿಯಷ್ಟೇ ಎಂದು ಅವರು ಹೇಳಿದರು.

'ರಾಜನಾದವನು ತನ್ನ ಆಸ್ಥಾನದಲ್ಲಿ ಇರುವ ಅವಕಾಶವಾದಿಗಳು ಹಾಗೂ ನಿಷ್ಠರ ನಡುವಿನ ವ್ಯತ್ಯಾಸವನ್ನು ಅರಿಯಬೇಕು ಎಂಬುದೇ ನಾನು ಇತ್ತೀಚೆಗೆ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದ, ವಿಜಯನಗರ ಪತನದ ಗೂಢಾರ್ಥ ಕಥನದ ಸಾರಾಂಶವಾಗಿತ್ತು ಎಂದು ಅವರು ಸ್ಪಷ್ಟಪಡಿಸಿದರು.

'ಯಾರನ್ನು ನಂಬಿದರೆ ಹಿತ. ಯಾರನ್ನು ನಂಬಿದರೆ ದ್ರೋಹ ಎಂಬುದು ಮುಖ್ಯ. ರಾಜನಾದವನು ಯಾರನ್ನು ನಂಬದಿದ್ದರೆ ಒಳ್ಳೆಯದು ಎಂಬುದನ್ನು ಅರಿಯಬೇಕು. ರಾಜಕಾರಣದಲ್ಲಿ ವ್ಯಕ್ತಿ ನಿಷ್ಠೆಗಿಂತ ಪಕ್ಷ ನಿಷ್ಠೆ ಮುಖ್ಯ ಎಂಬುದೂ ಆ ಕಥನದ ಗೂಢಾರ್ಥವಾಗಿತ್ತು' ಎಂದೂ ಅವರು ಪರೋಕ್ಷವಾಗಿ ವಿವರಿಸಿದರು.

ಕೋವಿಡ್–19 ನಿರ್ವಹಣೆ, ಲಸಿಕೆ ಕಾರ್ಯಕ್ರಮದಲ್ಲಿ ಪಕ್ಷದ ಪಾಲ್ಗೊಳ್ಳುವಿಕೆ, ಪ್ರತಿ ಗ್ರಾಮಗಳಲ್ಲಿ ಆರೋಗ್ಯ ಸೇವಾ ಕಾರ್ಯಕರ್ತರ ನೇಮಕ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ. ರಾಜ್ಯ ರಾಜಕಾರಣದ ಕುರಿತು ಪ್ರಸ್ತಾಪವೇ ಆಗಿಲ್ಲ ಎಂದರು.

ವಿಜಯೇಂದ್ರ ದೆಹಲಿಗೆ ಹೋಗಿದ್ದು ಇ.ಡಿ ವಿಚಾರಣೆಗೆ: ಯತ್ನಾಳ

ವಿಜಯಪುರ: 'ಬಿ.ವೈ.ವಿಜಯೇಂದ್ರ ದೆಹಲಿಗೆ ಹೋಗಿದ್ದು ಜಾರಿ ನಿರ್ದೇಶನಾಲಯದ (ಇ.ಡಿ) ವಿಚಾರಣೆ ಎದುರಿಸಲೇ ಹೊರತು, ಪಕ್ಷದ ರಾಷ್ಟ್ರೀಯ ನಾಯಕರ ಜತೆ ಮಾತುಕತೆ ನಡೆಸಲು ಅಲ್ಲ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಶನಿವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಾರಿಷಸ್‌ನಲ್ಲಿ ಅಕ್ರಮವಾಗಿ ಇಟ್ಟಿರುವ ಹಣ ಎಲ್ಲಿಂದ ಬಂತು? 'ಕಿಯಾ' ಕಂಪನಿಗೆ ವರ್ಗಾವಣೆ ಆಗಿದ್ದು ಹೇಗೆ? ಎನ್ನುವ ಅಕ್ರಮದ ಕುರಿತು ಜಾರಿ ನಿರ್ದೇಶನಾಲಯ ವಿಜಯೇಂದ್ರ ಅವರನ್ನು ವಿಚಾರಣೆ ನಡೆಸಿದೆ' ಎಂದರು.

'ಪಕ್ಷದ ಆಂತರಿಕ ವಿಚಾರವನ್ನು ರಾಜ್ಯ ಉಪಾಧ್ಯಕ್ಷರ ಜತೆ ರಾಷ್ಟ್ರೀಯ ನಾಯಕರು ಮಾತನಾಡುವುದಿಲ್ಲ. ಅದಕ್ಕೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು, ಮುಖ್ಯಮಂತ್ರಿ ಇದ್ದಾರೆ. ರಾಜ್ಯದಲ್ಲಿ ಒಂಬತ್ತು ಜನ ಉಪಾಧ್ಯಕ್ಷರಿದ್ದಾರೆ. ವಿಜಯೇಂದ್ರ ಜತೆಗೇ ಮಾತನಾಡಿದ್ದಾರೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು' ಎಂದು ಹೇಳಿದರು.

'ವಿಜಯೇಂದ್ರ ಅವರ ದೆಹಲಿ ಪ್ರವಾಸ ಯಶಸ್ವಿಯಾಗಿದ್ದು, ಯಡಿಯೂರಪ್ಪ ಅವರ ಮುಖ್ಯಮಂತ್ರಿ ಕುರ್ಚಿ ಗಟ್ಟಿಯಾಗಿದೆ ಎನ್ನುವುದು ಕೇವಲ ಮಾಧ್ಯಮಗಳ ಸೃಷ್ಟಿ. ವಿಜಯೇಂದ್ರ ಕೇವಲ 10 ನಿಮಿಷ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರನ್ನು ಭೇಟಿಯಾಗಿದ್ದಾರೆ. ಈ ಕುರಿತು ವರಿಷ್ಠರಿಂದ ಸ್ಪಷ್ಟ ಮಾಹಿತಿ ದೊರೆತಿದೆ' ಎಂದರು.

ಬಿಎಸ್‌ವೈ ನಿವೃತ್ತಿ ಪಡೆಯಲಿ: 'ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಗೌರವಯುತವಾಗಿ ಶೀಘ್ರ ರಾಜಕೀಯ ನಿವೃತ್ತಿ ಪಡೆಯಬೇಕು. ಹೊಗಳುಭಟ್ಟರ ಮಾತು ಕೇಳಿದರೆ ಸಾಕಷ್ಟು ಅವಮಾನಕ್ಕೆ ಒಳಗಾಗಬೇಕಾಗುತ್ತದೆ' ಎಂದರು.

ಜಿಲ್ಲಾ ಪಂಚಾಯತ್, ಬಳ್ಳಾರಿ.
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಬಳ್ಳಾರಿ
ಜಿಲ್ಲಾ ಪಂಚಾಯತ್ ಇ–ಮೇಲ್: ceo_zp_bly@nic.in
ಫ್ಯಾಕ್ಸ್:08392–267200 ದೂರವಾಣಿ:08392–267300
ಸಂಖ್ಯೆ:ಜಿಪಂಬ/ಪಿ.ಡಿ/ರೂರ್ಬನ್/ಹೊ.ಗು.ನೇ/01/2021–22
ದಿನಾಂಕ:02.06.2021
ತಿದ್ದುಪಡಿ ಪ್ರಕಟಣೆ
ಜಿಲ್ಲಾ ಪಂಚಾಯತ್, ಬಳ್ಳಾರಿ ಪ್ರಕಟಣೆ ಸಂಖ್ಯೆ:ಜಿಪಂಬ/ಪಿ.ಡಿ/ರೂರ್ಬನ್/ಹೊ.ಗು.ನೇ/01/2021–22 ದಿನಾಂಕ: 31.05.2021 ರಲ್ಲಿ ಶ್ಯಾಮ್ ಪ್ರಸಾದ್ ಮುಖರ್ಜಿ ರೂರ್ಬನ್ ಮಿಷನ್ ಅಡಿಯಲ್ಲಿ ಬಳ್ಳಾರಿ/ವಿಜಯನಗರ ಜಿಲ್ಲೆಯಲ್ಲಿ ಆಯ್ಕೆಯಾದ 04 ಕ್ಲಸ್ಟರ್‌ಗಳಿಗೆ ಸಂಬಂಧಿಸಿದಂತೆ ಬಳ್ಳಾರಿ/ವಿಜಯನಗರ ಜಿಲ್ಲೆಗಳಲ್ಲಿ ಕ್ಲಸ್ಟರ್‌ವಾರು ಪ್ರಗತಿ ಮತ್ತು ಮೇಲ್ವಿಚಾರಣೆ ಮಾಡಲು DPMU ಹಾಗೂ CDMU ಘಟಕಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಕರೆಯಲಾದ ಹುದ್ದೆಗಳ ಪೈಕಿ CDMU ಘಟಕಕ್ಕೆ Engineering Specialist-04 ಹುದ್ದೆಗಳ ಬದಲಾಗಿ DPMU ಘಟಕಕ್ಕೆ Engineering Specialist-02 ಹುದ್ದೆಗಳೆಂದು ಓದಿಕೊಳ್ಳತಕ್ಕದ್ದು ಹಾಗೂ ಅರ್ಜಿಯನ್ನು https://ballari.nic.in Website ನಲ್ಲಿ Online ಮೂಲಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು, ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/–ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/70/ಎಂಸಿಎ/2021–22

ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ) (ನೋ. ಸಂಖ್ಯೆ .DRB-2/SOR/54/2017-18)
ಓಲ್ಡ್ ಸ್ಕೂಲ್ ಆಫ್ ನರ್ಸಿಂಗ್ ಬಿಲ್ಡಿಂಗ್, ವಿಕ್ಟೋರಿಯಾ ಆಸ್ಪತ್ರೆ ಕ್ಯಾಂಪಸ್, ಬೆಂಗಳೂರು–02
ದೂ: 080–26707727 ಇ–ಮೇಲ್: igotinstitute@gmail.com
ಸಂಖ್ಯೆ: ಐಜಿಒಟಿ/ಟಿಎನ್‌ಡಿ/01/2021–22 ದಿನಾಂಕ: 04.06.2021
ಸಂಕ್ಷಿಪ್ತ ಮರು ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆಯ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ಕೆಳಕಂಡ ಕಾರ್ಯಗಳಿಗೆ ಎರಡು ಲಕೋಟೆ ಪದ್ಧತಿ ಅನುಸರಿಸಿ ಅರ್ಹ ಟೆಂಡರ್‌ದಾರರಿಂದ ಮರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Details
1.	IGOT/TND/SEC/01/2021-22 Dtd: 04.06.2021	Security Services
2.	IGOT/TND/HKS/02/2021-22 Dtd: 04.06.2021	House Keeping Services
3.	IGOT/TND/LINEN/07/2021-22 Dtd: 04.06.2021	Outsourcing Laundry Services

ಕ್ರಮ ಸಂಖ್ಯೆ 1 ಮತ್ತು 2: ಟೆಂಡರ್‌ದಾರರು ದಿನಾಂಕ: 04.06.2021 ರಿಂದ 18.06.2021ರ ಸಾಯಂಕಾಲ 4.00 ಗಂಟೆಯವರೆಗೆ www.eproc.karnataka.gov.in ವೀಕ್ಷಿಸಿ ಟೆಂಡರ್ ದಸ್ತಾವೇಜುಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಟೆಂಡರ್‌ದಾರರ ತಾಂತ್ರಿಕ ಬಿಡ್ಡನ್ನು ದಿನಾಂಕ: 21.06.2021 ರಂದು ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುವುದು.
ಕ್ರಮ ಸಂಖ್ಯೆ 3: ಟೆಂಡರ್‌ದಾರರು ದಿನಾಂಕ: 04.06.2021 ರಿಂದ 14.06.2021ರ ಸಾಯಂಕಾಲ 4.00 ಗಂಟೆಯವರೆಗೆ www.eproc.karnataka.gov.in ವೀಕ್ಷಿಸಿ ಟೆಂಡರ್ ದಸ್ತಾವೇಜುಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಟೆಂಡರ್‌ದಾರರ ತಾಂತ್ರಿಕ ಬಿಡ್ಡನ್ನು ದಿನಾಂಕ: 16.06.2021 ರಂದು ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುವುದು.
ಸಹಿ/- ನಿರ್ದೇಶಕರು, ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ, ಬೆಂಗಳೂರು-02.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No : 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗಃಲೋಇಃಪಿಬಿ–ಃವಿವಿಧ:2021–22/452 ದಿನಾಂಕ : 04–06–2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಗದಗ ಲೋ ಇ ವಿಭಾಗದಡಿ ಬರುವ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು 946.79 ಲಕ್ಷ ಮೊತ್ತದಲ್ಲಿ ಗದಗ ವಿಭಾಗದಡಿ ಬರುವ ಗದಗ , ರೋಣ ಹಾಗೂ ಶಿರಹಟ್ಟಿ ತಾಲೂಕಿನ ಒಟ್ಟು 94 ಕಾಮಗಾರಿಗಳಿಗೆ (ಕನಿಷ್ಠ ಮೊತ್ತ ರೂ: 0.42 ಲಕ್ಷ ಗರಿಷ್ಟ ಮೊತ್ತ ರೂ: 100.00 ಲಕ್ಷ) ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ (ಇ– Procurement) ಸ್ಟಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ–1, 2 ಹಾಗೂ 3 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http:// www. eproc. Karnataka. gov.in/ ದಲ್ಲಿ ನೋಡಿಕೊಳ್ಳಬಹುದು. ಒಟ್ಟು 94 ಕಾಮಗಾರಿಗಳ ಪೈಕಿ 69 ಕಾಮಗಾರಿಗಳು ಸಾಮಾನ್ಯ ವರ್ಗದವರಿಗೆ, 16 ಕಾಮಗಾರಿಗಳು ಪರಿಶಿಷ್ಟ ಜಾತಿ ಹಾಗೂ 09 ಕಾಮಗಾರಿಗಳು ಪರಿಶಿಷ್ಟ ಪಂಗಡದವರಿಗೆ ಮಿಸಲಿರಿಸಲಾಗಿದೆ. ಮೇಲಿನ ಕಾಮಗಾರಿಗಳಿಗೆ ಟೆಂಡರ ವಿವರ ಪಶ್ನೋತ್ತರ ದಿನಾಂಕಃ 14–06–2021, ಟೆಂಡರ್ ಸಲ್ಲಿಸುವ ದಿನಾಂಕಃ 17–06–2021 ತಾಂತ್ರಿಕ ಬಿಡ್ / ಆರ್ಥಿಕ ಬಿಡ್ ತೆರೆಯುವ ದಿನಾಂಕಃ 18–06–2021 ಆರ್ಥಿಕ ಬಿಡ್ ತೆರೆಯುವ ದಿನಾಂಕಃ 19–06–2021
GST of 12% shall be added separately in the estimate as per Govt. Letter No PWD 65 RDF 2017, dated 11-10-2018. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.
ಅನುಸೂಚಿತ ಜಾತಿ ಮತ್ತು ಪಂಗಡಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ
ವಾಸಾಸಂಇ/ಗದಗ/ಎಂ.ಸಿ.ಎ/99/2021–22

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಯಗಚಿ ಯೋಜನಾ ವಿಭಾಗ, ಬೇಲೂರು, ಹಾಸನ ಜಿಲ್ಲೆ
ಟೆಂಡರ್ ಪ್ರಕಟಣೆ ಸಂಖ್ಯೆ: 03/2021–22 ದಿನಾಂಕ: 04.06.2021 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
ಎಗ್ಸಿಕ್ಯುಟಿವ್ ಇಂಜಿನಿಯರ್ ರವರ ಕಛೇರಿ, ಕಾವೇರಿ ನೀರಾವರಿ ನಿಗಮ(ನಿ) ಯಗಚಿ ಯೋಜನಾ ವಿಭಾಗ, ಬೇಲೂರು ರವರು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ (ನಿ.,) ಬೆಂಗಳೂರು ರವರ ಪರವಾಗಿ ಸಾರ್ವಜನಿಕ ಖರೀದಿಯಲ್ಲಿನ ಕರ್ನಾಟಕ ಪಾರದರ್ಶಕ ಕಾಯ್ದೆ 1999 ಮತ್ತು 2000ರ KW–4 & 5 ರ ಪ್ರಕಾರ, CPWD/KPWD/ WRD/ & in any other Central or state government organization as Class I contractor & Enrolled as Cat-1A in CNNL. ದರ್ಜೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ Item Rate ಎರಡು ಲಕೋಟೆ ಟೆಂಡರ್‌ನ್ನು (ಕರ್ನಾಟಕದ ಇ–ಪೋರ್ಟಲ್ ಮೂಲಕ ಮಾತ್ರ) ಆಹ್ವಾನಿಸಲಾಗಿದೆ. ಕಾಮಗಾರಿ ವಿವರ:– ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ದ್ವಾರಸಮುದ್ರ ಮತ್ತು 6 ಕೆರೆಗಳನ್ನು ಹಾಗೂ ಚಿಕ್ಕಮಗಳುರು ತಾಲ್ಲೂಕಿನ ಬೆಳವಾಡಿ ಕೆರೆಯನ್ನು ರಣಘಟ್ಟ ಪಿಕ್‌ಅಪ್ ವಿಯರ್ ತಿರುವಿನಿಂದ ಕೆರೆ ತುಂಬಿಸುವ ಕಾಮಗಾರಿ. (1) ಟೆಂಡಿರಿಗಿಟ್ಟ ಮೊತ್ತ, ರೂ.9720.00 ಲಕ್ಷಗಳು, ಇ.ಎಂ.ಡಿ ಮೊತ್ತ ರೂ. 97.20 ಲಕ್ಷಗಳು ಕೆಲಸ ಮುಗಿಸಲು ಕಾಲಾವಧಿ 24 ತಿಂಗಳು (ಮಳೆಗಾಲ ಸೇರಿದಂತೆ) ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರೊಕ್ಯೂರ್‌ಮೆಂಟ್ ನಿಯಮಾನು ಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://eproc. karnataka.gov.in ಮೂಲಕ ದಿನಾಂಕ:25.06.2021 ರಿಂದ 26.07.2021ರ ವರೆಗೆ ಪಡೆಯಬಹುದು (Download), ಪ್ರೀ ಬಿಡ್ ಮೀಟಿಂಗ್ ನಡೆಯುವ ದಿನಾಂಕ:19.07.2021, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 28.07.2021, ರ ಬೆಳಿಗ್ಗೆ 11.30 ಗಂಟೆಯ ನಂತರ ಮತ್ತು ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು, ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ https://eproc.karnataka.gov.in ಅಂತರ್ಜಾಲ ತಾಣದಲ್ಲಿ (ಇಲಾಖೆ) ಅಥವಾ ಯಗಚಿ ಯೋಜನಾ ವಿಭಾಗ, ಬೇಲೂರು ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ, ಯಗಚಿ ಯೋಜನಾ ವಿಭಾಗ, ಬೇಲೂರು
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/127/2020–21

ಕರ್ನಾಟಕ ಸರ್ಕಾರ
(ಜಲಸಂಪನ್ಮೂಲ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಪುನರ್ವಸತಿ ವಿಭಾಗ ನಂ.2 ಆಲಮಟ್ಟಿ.
ತಾ॥ ನಿಡಗುಂದಿ, ಜಿ॥ ವಿಜಯಪುರ. ದೂರವಾಣಿ ಸಂ: 08426–281049
ಸಂಖ್ಯೆ:ಕೃಮೇಯೋ/ಪುವಿ–2/ಡಿಬಿ/ಇ–ಪ್ರೋಕ/ಟೆಂಡರ್–01/2021–22/77
ದಿನಾಂಕ:31.05.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ (ಒಂದು ಲಕೋಟೆ ಪದ್ದತಿಯ ಮೇಲೆ)
ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕೆಳಕಾಣಿಸಿದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯುಮದಂತೆ ಲೋಕೋಪಯೋಗಿ ಇಲಾಖೆ/ಕೃಭಾಜನಿ(ನಿ) ಇಲಾಖೆಯಲ್ಲಿ ನೊಂದಾಯಿತ 1ನೇ ಹಾಗೂ 2ನೇ ದರ್ಜೆ/ಕೆಟಗರಿ–3 ಹಾಗೂ ಮೇಲ್ಪಟ್ಟ ಮತ್ತು ಎಲೆಕ್ಟ್ರಿಕಲ್ ಇಲಾಖೆಯಲ್ಲಿ ನೊಂದಾಯಿತ ಸಿ.ಇ.ಆಯ್.ಜಿ 1ನೇ ದರ್ಜೆ ಗುತ್ತಿಗೆದಾರರಿಂದ ಶೇಕಡವಾರು ಟೆಂಡರಗಳನ್ನು ಕೆ.ಡಬ್ಲೂ.– 1 & 2 ರ ಮೂಲಕ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ನಿಯಮಾವಳಿಯಂತೆ 'ಇ' ಪ್ರೊಕ್ಯೂರಮೆಂಟ ಮೂಲಕ ಟೆಂಡರನ್ನು ಕೆಳಗೆ ಸಹಿ ಮಾಡಿದವರಿಂದ ಅಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ ದಾಖಲೆಗಳನ್ನು www.eproc.karnataka.gov.in ವೆಬಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರಗಳನ್ನು ಇ–ಪ್ರೋಕ್ಯೂರಮೆಂಟ ಮೂಲಕ ಸಲ್ಲಿಸುವದು.
1) ವಿಜಯಪೂರ ಜಿಲ್ಲೆಯ ಕೋಲ್ಹಾರ ತಾಲೂಕಿನ ಕೋಲ್ಹಾರ ಪುನರ್ವಸತಿ ಕೇಂದ್ರಗಳಲ್ಲಿ ವಿವಿಧ ಕಟ್ಟಡಗಳನ್ನು ನಿರ್ಮಿಸುವ, ಹೈಮಾಸ್ಕ ದೀಪ, ಬೀದಿ ದೀಪ ಅಳವಡಿಸುವ, ಆರ.ಒ ಯುನಿಟ,ಪಂಪಿಂಗ್ ಮಶೀನರಿ, ಪೇವ್ಹರ್ ಬ್ಲಾಕ್ ರಸ್ತೆ ಮತ್ತು ರಸ್ತೆ ಅಭಿವೃದ್ದಿ ಪಡಿಸುವ ವಿವಿಧ ಇನ್ನಿತರ ಕಾಮಗಾರಿಗಳು. ಒಟ್ಟು ಕಾಮಗಾರಿಗಳ ಸಂಖ್ಯೆ– 13.
ಜನರಲ್ ಗುತ್ತಿಗೆದಾರರಿಗೆ ಸಂಖ್ಯೆ:09 (ಎಸ್.ಸಿ–03, ಎಸ್.ಟಿ–01) ಗುತ್ತಿಗೆದಾರರಿಗೆ ಮೀಸಲು ಒಟ್ಟು ಕಾಮಗಾರಿಗಳ ಸಂ.–04 ಸಂಖ್ಯೆ)
ಟೆಂಡರಿಗಿಟ್ಟ ಅಂದಾಜು ಮೊತ್ತ. ಗರಿಷ್ಠ ರೂ. 48.69 ಲಕ್ಷ, ಕನಿಷ್ಠ ಮೊತ್ತ. ರೂ. 12.90 ಲಕ್ಷ. ಇ.ಎಂ.ಡಿ ಮೊತ್ತ. 0.00
ವೆಬಸೈಟ್ ಮೂಲಕ ಟೆಂಡರ ಮಾಹಿತಿಯ ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ: 11.06.2021 ಸಾಯಂಕಾಲ 5.00 ಗಂಟೆಯವರೆಗೆ. ಟೆಂಡರಗಳಿಗೆ ಇ–ಪ್ರೋಕ್ಯೂರಮೆಂಟ ಮೂಲಕ ಅರ್ಜಿ ಸಲ್ಲಿಸುವುದು ಹಾಗೂ ಟೆಂಡರಗಳನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 17.06.2021 ಸಾಯಂಕಾಲ 5.00 ಗಂಟೆವರೆಗೆ, ಆರ್ಥಿಕ & ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 19.06.2021 ಮುಂಜಾನೆ 11.00 ಗಂಟೆಗೆ (ಸಾಧ್ಯವಾದಲ್ಲಿ).
(The Estimate amount put to Tender is exclusive of GST but including all other charges as applicable. GST shall be paid to the Tendered Amount Separately)
ಹೆಚ್ಚಿನ ಮಾಹಿತಿಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ವಿಭಾಗ ನಂ,2, ಆಲಮಟ್ಟಿ ಇವರ ಕಛೇರಿಯಲ್ಲಿ ಕೆಲಸದ ಅವಧಿಯಲ್ಲಿ ಅಥವಾ www.eproc.karnataka.govt.in ವೆಬಸೈಟ್ ಮೂಲಕ ಪಡೆಯಬಹುದು.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ವಿಭಾಗ ನಂ.2, ಆಲಮಟ್ಟಿ
ವಾಸಾಸಂಇ/ವಿಜಯಪುರ/100/ಎಂಸಿಎ/2021–22

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಮುಖ್ಯ ಕಾರ್ಯದರ್ಶಿಗೆ ಪತ್ರ

ರೋಹಿಣಿ ಕಾರ್ಯವೈಖರಿಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಮೈಸೂರು: ಕೋವಿಡ್ ನಿರ್ವಹಣೆಗೆ ಸಂಬಂಧಿಸಿ ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರ ಕಾರ್ಯವೈಖರಿ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್.ಜಯರಾಮ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮೈಸೂರು ಜಿಲ್ಲಾಧಿಕಾರಿಗೆ ಅಗತ್ಯ ನಿರ್ದೇಶನ ನೀಡುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್‌ಗೆ ಪತ್ರ ಬರೆದಿದ್ದಾರೆ.

ಜಯರಾಮ್ ಅವರು ಮೇ 24ರಂದೇ ಪತ್ರ ಬರೆದಿದ್ದು, ಇದರಲ್ಲಿ ಜಿಲ್ಲಾಡಳಿತದ ಲೋಪವನ್ನು ತಿಳಿಸಿದ್ದಾರೆ. ಲಸಿಕೆ ಅಭಿಯಾನದ ಯಶಸ್ಸನ್ನು ಉಲ್ಲೇಖಿಸಿದ್ದಾರೆ.

'ಜಿಲ್ಲೆಯಲ್ಲಿ ಕೋವಿಡ್ ಪಾಸಿಟಿವಿಟಿ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿಲ್ಲ. ಹೋಬಳಿಗೊಂದು ಕೋವಿಡ್ ಆರೈಕೆ ಕೇಂದ್ರ ಆರಂಭಿಸಬೇಕು ಎಂಬ ಸೂಚನೆ ಪಾಲಿಸಿಲ್ಲ. ಆರಂಭಗೊಂಡಿದ್ದ ನಾಲ್ಕು ಕೇಂದ್ರಗಳಿಗೆ ಭೇಟಿ ನೀಡಿದ್ದಾಗ, ಎರಡು ಕೇಂದ್ರದಲ್ಲಿ ಅವ್ಯವಸ್ಥೆ ಕಂಡು ಬಂದಿತ್ತು' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ಡಿ.ಸಿ ನಡೆಸುವ ಸರಣಿ ಸಭೆಗಳಿಂದ ಅಧಿಕಾರಿಗಳು ಅರ್ಧ ದಿನವಷ್ಟೇ ಕೆಲಸ ಮಾಡುವಂತಾಗಿದೆ. ವಾರಕ್ಕೊಮ್ಮೆ ಸಭೆ ನಡೆಸಲು ಸೂಚಿಸಿ' ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

'ಒಳ್ಳೆಯದಾಗುವುದಿದ್ದರೆ ರಾಜೀನಾಮೆಗೂ ಸಿದ್ಧ'

ಮೈಸೂರು: 'ರಾಜೀನಾಮೆ ನೀಡುವುದರಿಂದ ಮೈಸೂರಿನಲ್ಲಿ ಕೊರೊನಾ ಕಡಿಮೆಯಾಗುವುದಾದರೆ, ಜಿಲ್ಲೆಯ ಜನರಿಗೆ ಒಳ್ಳೆಯದಾಗುವುದಾದರೆ ಅದಕ್ಕೂ ನಾನು ಸಿದ್ಧ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಶನಿವಾರ ಇಲ್ಲಿ ಹೇಳಿದರು.

ಸೋಮಶೇಖರ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನ ಉಸ್ತುವಾರಿಯಲ್ಲಿ ವೈಫಲ್ಯವೇನಾದರೂ ಇದ್ದರೆ ತಿದ್ದಿಕೊಳ್ಳಲು ಸಿದ್ಧ. ಐಎಎಸ್ ಅಧಿಕಾರಿಗಳ ಸಂಘರ್ಷದಿಂದ ಮನಸ್ಸಿಗೆ ನೋವಾಗಿದೆ. ಉತ್ತಮ ಕೆಲಸ ಮಾಡಲು ಜಿಲ್ಲೆಗೆ ಬಂದೆ. ನನ್ನ ನೋವನ್ನು ಮುಖ್ಯಮಂತ್ರಿಗೆ ತಿಳಿಸಿದ್ದೇನೆ' ಎಂದರು.

'ಸಂಘರ್ಷವು ಸೀರಿಯಲ್ ಸ್ಟೋರಿ ಅಲ್ಲ. ಕೋವಿಡ್ ಸಂದರ್ಭದಲ್ಲಿ ಸೀರಿಯಲ್ ಸ್ಟೋರಿ ಮಾಡಲು ಸಾಧ್ಯವಿಲ್ಲ. ಮುಖ್ಯ ಕಾರ್ಯದರ್ಶಿಯೂ ಮುಖ್ಯಮಂತ್ರಿಗೆ ವರದಿ ನೀಡುತ್ತಾರೆ. ಸಿ.ಎಂ ಕೂಡಾ ತಮ್ಮ ಮೂಲಗಳಿಂದ ಮಾಹಿತಿ ಪಡೆದಿರುತ್ತಾರೆ. ಅದರ ಆಧಾರದಲ್ಲಿ ಕೊನೆಗೊಳ್ಳಲಿದೆ' ಎಂದರು.

'ಒಬ್ಬರಿಂದಲೇ ಕೋವಿಡ್ ನಿಯಂತ್ರಣವಾಗುತ್ತಿದೆ ಎಂಬ ಭ್ರಮೆ ಯಾರಿಗೂ ಬೇಡ. 11 ಕ್ಷೇತ್ರಗಳ ಶಾಸಕರು, ಸಂಸದ ಕೂಡಾ ಸೇರಿದ್ದಾರೆ. ಸಾರ್ವಜನಿಕರು, ಸಂಘ ಸಂಸ್ಥೆಯವರು ಕೈಜೋಡಿಸಿದ್ದಾರೆ. ಎಲ್ಲರಿಗಿಂತ ಹೆಚ್ಚಾಗಿ, ವಿಶೇಷವಾಗಿ ವೈದ್ಯರು, ನರ್ಸ್, ಆಶಾ ಕಾರ್ಯಕರ್ತೆಯರ ಪಾತ್ರ ದೊಡ್ಡದು' ಎಂದು ತಿಳಿಸಿದರು.

ರಾಜೀನಾಮೆಗೆ ಆಗ್ರಹಿಸಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ವಿರುದ್ಧ ವಾಗ್ದಾಳಿ ನಡೆಸಿದರು.

ಇಂದಿನಿಂದಲೇ ಕೆಲಸಕ್ಕೆ ಹಾಜರ್: ಶಿಲ್ಪಾ ನಾಗ್

ಶಿಲ್ಪಾ ನಾಗ್

ಮೈಸೂರು: ಕೋವಿಡ್ ನಿರ್ವಹಣೆ ನಿಟ್ಟಿನಲ್ಲಿ, ಭಾನುವಾರದಿಂದಲೇ ಕೆಲಸಕ್ಕೆ ಹಾಜರಾಗುವುದಾಗಿ ಪಾಲಿಕೆ ಆಯುಕ್ತೆ ಶಿಲ್ಪಾ ನಾಗ್ ಶನಿವಾರ ಹೇಳಿದರು.

'ಶುಕ್ರವಾರ ಮೈಸೂರಿಗೆ ಬಂದಿದ್ದ ಮುಖ್ಯ ಕಾರ್ಯದರ್ಶಿ ರವಿಕುಮಾರ್ ಅವರನ್ನು ಭೇಟಿಯಾಗಿ ರಾಜೀನಾಮೆ ಪತ್ರ ನೀಡಿದೆ. ಆದರೆ, ಅಂಗೀಕಾರ ಮಾಡುವುದಿಲ್ಲವೆಂದು ವಾಪಸ್ ನೀಡಿದ್ದು,, ನಿರ್ಧಾರ ಪುನರ್ ಪರಿಶೀಲಿಸುವಂತೆ ಸಲಹೆ ನೀಡಿದರು' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ರಾಜೀನಾಮೆ ಪತ್ರವನ್ನು ರಿಜಿಸ್ಟರ್ಡ್ ಪೋಸ್ಟ್ ಮೂಲಕ ಮುಖ್ಯ ಕಾರ್ಯದರ್ಶಿ ಕಚೇರಿಗೆ ಕಳುಹಿಸಿದ್ದೇನೆ. ಇ–ಮೇಲ್ ಕೂಡಾ ಮಾಡಿದ್ದೇನೆ. ಶನಿವಾರ ರಜೆ ಪಡೆದಿದ್ದೆ. ಕೋವಿಡ್ ಕೆಲಸ ಎಲ್ಲದಕ್ಕಿಂತ ಮುಖ್ಯ. ಹೀಗಾಗಿ, ಕೆಲಸ ಮುಂದುವರಿಸುತ್ತೇನೆ' ಎಂದರು.

'ಮಾತುಕತೆಗಾಗಿ, ಜಿಲ್ಲಾ ಉಸ್ತುವಾರಿ ಸಚಿವರು ಶುಕ್ರವಾರ ಸುತ್ತೂರು ಶಾಖಾ ಮಠಕ್ಕೆ ಕರೆಸಿದ್ದರು. ಹೀಗಾಗಿ, ಅಲ್ಲಿಗೆ ಹೋಗಿದ್ದೆ. ಅವರು ಕೂಡ ಕೆಲಸ ಮುಂದುವರಿಸುವಂತೆ ಕೇಳಿಕೊಂಡರು' ಎಂದೂ ಶಿಲ್ಪಾ ನಾಗ್ ಹೇಳಿದರು.

ಕಲಬುರ್ಗಿ: ಕೋಡ್ಲಾದಲ್ಲಿ 79.8 ಮಿ.ಮೀ ಮಳೆ

ವಿವಿಧೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕದ ಜಿಲ್ಲೆಗಳು ಮತ್ತು ಕರಾವಳಿ ಜಿಲ್ಲೆಗಳು ಒಳಗೊಂಡು ವಿವಿಧ ಜಿಲ್ಲೆಗಳಲ್ಲಿ ಶನಿವಾರ ಧಾರಾಕಾರ ಮಳೆಯಾಗಿದೆ.

ಕಲಬುರ್ಗಿ ಜಿಲ್ಲೆಯ ಕಾಳಗಿ ತಾಲ್ಲೂಕಿನ ಕೋಡ್ಲಾದಲ್ಲಿ ಅತಿ ಹೆಚ್ಚು 79.8 ಮಿ.ಮೀ ಮಳೆಯಾಗಿದೆ. ರೌದ್ರಾವತಿ ನದಿಯಲ್ಲಿ ನೀರು ಉಕ್ಕಿ, ಹರಿಯಿತು. ಕಾಳಗಿ–ಕೊಡದೂರ ಸೇತುವೆಯಲ್ಲಿ ಕೆಲ ಹೊತ್ತು ಸಂಚಾರ ಸ್ಥಗಿತಗೊಂಡಿತ್ತು. ನದಿ ದಡದಲ್ಲಿರುವ ನೀಲಕಂಠ ಕಾಳೇಶ್ವರ ದೇವಸ್ಥಾನದ ಒಳಗೂ ನೀರು ನುಗ್ಗಿತು.

ಕಲಬುರ್ಗಿ ಮತ್ತು ರಾಯಚೂರು ಜಿಲ್ಲೆಯಲ್ಲಿ ಮಳೆ ಸುರಿಯಿತು.

ಶುಕ್ರವಾರ ರಾತ್ರಿ ಸುರಿದ ಮಳೆಗೆ ಮಂಗಳೂರಿನ ಕೆ.ಎಸ್.ರಾವ್ ರಸ್ತೆ ಕ್ಲಾಸಿಕ್ ಆರ್ಕೇಡ್ ಸಮೀಪ ಫ್ಲಾಟ್‌ನ ತಡೆಗೋಡೆ ಕುಸಿದು ಕೆಳಭಾಗದಲ್ಲಿ ಪಾರ್ಕಿಂಗ್ ಮಾಡಲಾಗಿದ್ದ ವಾಹನಗಳು ಜಖಂಗೊಂಡಿವೆ. ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಮತ್ತು ಬಯಲುಸೀಮೆ ಭಾಗದ ವಿವಿಧೆಡೆ ಮಳೆಯಾಗಿದೆ. ಕೃಷಿ ಚಟುವಟಿಕೆಗಳು ಗರಿಗೆದರಿವೆ.

ವಿಜಯನಗರ ಜಿಲ್ಲೆಯ ಕೊಟ್ಟೂರಿನ ಇಟ್ಟಿಗಿ ರಸ್ತೆಯ ರೈಲ್ವೆ ಮೇಲು ಸೇತುವೆಯ ಕೆಳಭಾಗದ ರಸ್ತೆ ಶನಿವಾರ ಜಲಾವೃತಗೊಂಡಿತ್ತು –ಪ್ರಜಾವಾಣಿ ಚಿತ್ರ

ಚಿತ್ರದುರ್ಗ ಜಿಲ್ಲೆಯ ಕೆಲವೆಡೆ ಬಿರುಸಿನಿಂದ ಮಳೆಯಾಗಿದೆ. ಜಿಲ್ಲೆಯ ಕೆಲವೆಡೆ ಶುಕ್ರವಾರ ಸುರಿದ ಭಾರಿ ಮಳೆಯಿಂದಾಗಿ 17.4 ಹೆಕ್ಟೇರ್ ಬಾಳೆ, 6.1 ಹೆಕ್ಟೇರ್ ಈರುಳ್ಳಿ ಸೇರಿ ತೋಟಗಾರಿಕೆಗೆ ಬೆಳೆಗಳಿಗೆ ಹಾನಿ ಉಂಟಾಗಿದೆ.

ದಾವಣಗೆರೆ ನಗರ ಸೇರಿ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗಿದೆ. ಹರಿಹರದಲ್ಲಿ ಪಕ್ಕಾ ಮನೆಗೆ ಹಾನಿಯಾಗಿದೆ.

ಬೆಳಗಾವಿ, ವಿಜಯನಗರ ಹಾಗೂ ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ.

ಕರಾವಳಿ ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್'

'ನೈರುತ್ಯ ಮುಂಗಾರು ಮಾರುತಗಳು ರಾಜ್ಯದುದ್ದಕ್ಕೂ ಪ್ರವೇಶಿಸಿದ್ದು, ಜೂನ್ 6ರಂದು ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮುಂಗಾರು ಅಬ್ಬರಿಸಲಿದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಶನಿವಾರ ಉತ್ತರ ಒಳನಾಡು ಪ್ರವೇಶಿಸಲಿದೆ. ಜೂ.6ರವರೆಗೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗಲಿದೆ' ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ, 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಕೊಡಗು, ಯಾದಗಿರಿ, ರಾಯಚೂರು, ಕೊಪ್ಪಳ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕಲಬುರ್ಗಿ ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ' ಎಂದರು.



ತುರ್ತು ಸಂದರ್ಭದಲ್ಲಿ ಸಿಗದ ಚಿಕಿತ್ಸೆ, ಹದಗೆಟ್ಟ ಗ್ರಾಮೀಣ ಆರೋಗ್ಯ ವ್ಯವಸ್ಥೆ

ಸೌಲಭ್ಯಗಳಿವೆ, ಸಿಬ್ಬಂದಿಯೇ ಇಲ್ಲ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಲಕ್ಷ್ಮೇಶ್ವರ ತಾಲ್ಲೂಕಿನ ಶಿಗ್ಲಿ ಗ್ರಾಮದಲ್ಲಿ ತೆರೆದಿದ್ದ ಕೋವಿಡ್ ಆರೈಕೆ ಕೇಂದ್ರಕ್ಕೆ ರೋಗಿಗಳ ಕೊರತೆಯಾಗಿದ್ದರಿಂದ ಬೀಗ ಹಾಕಲಾಗಿದೆ (ಎಡಚಿತ್ರ) ಗದಗ ತಾಲ್ಲೂಕಿನ ಮುಳಗುಂದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಗೆ ಕಾದು ನಿಂತಿರುವ ರೋಗಿಗಳು

ಗದಗ: ಜಿಲ್ಲೆಯ ಗ್ರಾಮೀಣ ಭಾಗದ ಆಸ್ಪತ್ರೆಗಳು ಸಿಬ್ಬಂದಿ ಕೊರತೆಯಿಂದ ರೋಗ-ಗ್ರಸ್ತಗೊಂಡಿವೆ. ಸುಸಜ್ಜಿತ ಕೋವಿಡ್ ಆರೈಕೆ ಕೇಂದ್ರಗಳಿದ್ದರೂ ಸೋಂಕಿತರು ಅಲ್ಲಿಗೆ ಬರಲು ಒಪ್ಪುತ್ತಿಲ್ಲ. ಲಸಿಕೆ ಪ್ರಕ್ರಿಯೆ ಮಾತ್ರ ನಿರಂತರವಾಗಿ ನಡೆಯುತ್ತಿದೆ. ಜಿಲ್ಲೆಯಲ್ಲಿ ಸೋಂಕು ನಿಯಂತ್ರಣದಲ್ಲಿದೆ ಎಂದು ಜಿಲ್ಲಾಡಳಿತ ಹೇಳುತ್ತದೆ. ಆದರೆ, ಸ್ಮಶಾನದಲ್ಲಿ ಪ್ರತಿನಿತ್ಯ ಸುಟ್ಟು ಬೂದಿಯಾಗುವ ಹೆಣಗಳ ಸಂಖ್ಯೆ ಬೇರೆಯದೇ ಚಿತ್ರಣ ನೀಡುತ್ತವೆ. ಒಟ್ಟಾರೆಯಾಗಿ, ಜಿಲ್ಲೆಯ ಕೋವಿಡ್ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತೆ ಇದೆ.

ಜಿಲ್ಲೆಯಲ್ಲಿನ ಗ್ರಾಮೀಣ ಪ್ರದೇಶದ ಜನರು ಈಗಲೂ ಕೋವಿಡ್ ಅನ್ನು ಗಂಭೀರವಾಗಿ ಪರಿಗಣಿಸಿಲ್ಲ. ಲಕ್ಷ ರೂಪಾಯಿ ಸಂಬಳ ಕೊಡುತ್ತೇನೆಂದರೂ ಗದಗ ಜಿಲ್ಲೆಗೆ ಬಂದು ಕೆಲಸ ಮಾಡುವ ಉತ್ಸಾಹವನ್ನು ಯಾವ ಎಂಬಿಬಿಎಸ್ ವೈದ್ಯರೂ ತೋರುತ್ತಿಲ್ಲ. ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯೂ ಸೇರಿದಂತೆ 4 ತಾಲ್ಲೂಕು ಆಸ್ಪತ್ರೆ, 3 ಸಮುದಾಯ ಆರೋಗ್ಯ ಕೇಂದ್ರ, 42 ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ 190 ಸಬ್ ಸೆಂಟರ್‌ಗಳಲ್ಲಿ ವೈದ್ಯರು, ತಜ್ಞ ವೈದ್ಯರು ಹಾಗೂ ಸಿಬ್ಬಂದಿಯ ಕೊರತೆ ಕಾಡುತ್ತಿದೆ. ಸದ್ಯಕ್ಕೆ ಆಯುರ್ವೇದ ಕಲಿತವರೇ ಗ್ರಾಮೀಣ ಭಾಗದ ರೋಗಿಗಳ ಪಾಲಿಗೆ ಸಂಜೀವಿನಿಯಾ-ಗಿದ್ದಾರೆ.

ಏಳು ತಾಲ್ಲೂಕುಗಳಿದ್ದರೂ ತಾಲ್ಲೂಕು ಆಸ್ಪತ್ರೆಗಳಿರುವುದು ನಾಲ್ಕರಲ್ಲಿ ಮಾತ್ರ. ಲಕ್ಷ್ಮೇಶ್ವರ ಮತ್ತು ಗಜೇಂದ್ರಗಡಗಳಲ್ಲಿ ಈಗಲೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ತಾಲ್ಲೂಕುಗಳಲ್ಲಿ ಆಂಬುಲೆನ್ಸ್ ಕೊರತೆಯೂ ಕಾಡುತ್ತಿದೆ.

ಗಜೇಂದ್ರಗಡ ತಾಲ್ಲೂಕಿನ ನರೇಗಲ್ ಅಂದಾಜು 25 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಊರು. ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸುತ್ತಲಿನ 10 ಹಳ್ಳಿಗಳ ಜನರು ಅವಲಂಬಿಸಿದ್ದಾರೆ.

‘ಈ ಎರಡು ತಿಂಗಳ ಅವಧಿಯಲ್ಲಿ ನರೇಗಲ್ ಭಾಗದಲ್ಲಿ 140 ಮಂದಿಗೆ ಕೋವಿಡ್ ದೃಢಪಟ್ಟಿದೆ. ಹೆಚ್ಚಿನವರು ಹೋಂ ಐಸೊಲೇಷನ್‌ನಲ್ಲೇ ಚಿಕಿತ್ಸೆ ಪಡೆದು ಗುಣ-ಮುಖರಾಗಿದ್ದಾರೆ. ಗಂಭೀರ ಪರಿಸ್ಥಿತಿ ಇದ್ದ ಐವರನ್ನು ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದೆ-ವು’ ಎಂದು ನರೇಗಲ್ ವೈದ್ಯಾಧಿಕಾರಿ ಡಾ. ಎ.ಡಿ.ಸಾಮುದ್ರಿ ತಿಳಿಸಿದರು.

‘ನರೇಗಲ್ ಭಾಗದಲ್ಲಿ ಸೋಂಕು ಪ್ರಮಾಣ ಹೆಚ್ಚುತ್ತಿದ್ದು, ಕೋವಿಡ್ ಆರೈಕೆ ಕೇಂದ್ರದ ಅವಶ್ಯಕತೆ ಹೆಚ್ಚಿದೆ. ಈ ಪಿಎಚ್‌ಸಿಗೆ ಆಂಬುಲೆನ್ಸ್ ಕೊಡಬೇಕು. ಆರೈಕೆ ಕೇಂದ್ರ ತೆರೆಯಲು ಕಟ್ಟಡ ಲಭ್ಯವಿದ್ದು, ಅದರ ಸದ್ಬಳಕೆ ಮಾಡಿಕೊಳ್ಳಬೇಕು’ ಎಂದು ಸ್ಥಳೀಯರಾದ ಅಶೋಕ ಬೇವಿನಕಟ್ಟಿ, ದಾವುದ್ ಅಲಿ ಕುದರಿ, ಶಿವನಗೌಡ ಪಾಟೀಲ ಆಗ್ರಹಿಸಿದರು.

ಒಂದೆಡೆ ಜನರು ಆರೈಕೆ ಕೇಂದ್ರ ತೆರೆಯುವಂತೆ ಆಗ್ರಹಿಸುತ್ತಾರೆ. ಆದರೆ ಜಿಲ್ಲಾಡಳಿತದ ವತಿಯಿಂದ ತೆರೆದಿರುವ ಸುಸಜ್ಜಿತ ಕೇಂದ್ರಗಳಲ್ಲಿ ಮುಕ್ಕಾಲು ಪಾಲು ಹಾಸಿಗೆಗಳು ಖಾಲಿ ಬಿದ್ದಿವೆ.

ಜಿಲ್ಲೆಯ ವಿವಿಧೆಡೆ 2000 ಹಾಸಿಗೆ ಸಾಮರ್ಥ್ಯದ 15ಕ್ಕೂ ಅಧಿಕ ಕೋವಿಡ್ ಆರೈಕೆ ಕೇಂದ್ರಗಳನ್ನು ತೆರೆಯಲಾಗಿದೆ. ಹೊಸದಾಗಿ ಸೋಂಕು ದೃಢಪಟ್ಟ ಎಲ್ಲರನ್ನೂ ಕೋವಿಡ್ ಆರೈಕೆ ಕೇಂದ್ರಗಳಿಗೆ ದಾಖಲಿಸಬೇಕು ಎಂದು ಜಿಲ್ಲಾಧಿಕಾರಿ ಈಗ ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ. ಅದರ ಅನುಷ್ಠಾನಕ್ಕಾಗಿ ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಪಂಚಾಯ್ತಿ ಹಾಗೂ ಪೊಲೀಸ್ ಸಿಬ್ಬಂದಿ ಹರಸಾಹಸ ಪಡುತ್ತಿದ್ದಾರೆ. ಪ್ರತಿ ಕೇಂದ್ರದಲ್ಲಿ ಶೇ 15ರಿಂದ 20ರಷ್ಟು ಹಾಸಿಗೆಗಳು ಮಾತ್ರ ಭರ್ತಿಯಾಗಿವೆ.

ಮುಳಗುಂದ ವ್ಯಾಪ್ತಿಯಲ್ಲಿ 132 ಮಂದಿ ಸೋಂಕಿತರು ಇದ್ದಾರೆ. 100 ಹಾಸಿಗೆಗಳ ಸುಸಜ್ಜಿತ ಕೋವಿಡ್ ಕೇಂದ್ರ ತೆರೆಯಲಾಗಿದೆ. ಆದರೆ, ಏಳು ಮಂದಿ ಮಾತ್ರ ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಜೇಂದ್ರಗಡ ತಾಲ್ಲೂಕಿನಲ್ಲಿ 50 ಹಾಸಿಗೆಗಳ ಆರೈಕೆ ಕೇಂದ್ರ ತೆರೆಯಲಾಗಿದೆ. ದಾಖಲಿರುವುದು 15 ಮಂದಿ ಮಾತ್ರ. ರೋಣ ಮತ್ತು ನರಗುಂದ ತಾಲ್ಲೂಕಿನ ಚಿಕ್ಕನರಗುಂದ, ಲಕ್ಷ್ಮೇಶ್ವರ, ಶಿರಹಟ್ಟಿಗಳಲ್ಲಿ ಕೇಂದ್ರಗಳಿದ್ದರೂ ಸೋಂಕಿತರು ಇಲ್ಲಿಗೆ ಬರಲು ಒಪ್ಪುತ್ತಿಲ್ಲ.

‘ಶೇ 80ರಷ್ಟು ಸೋಂಕಿತರು ಕಾಳಜಿ ಕೇಂದ್ರಕ್ಕೆ ಬರಲು ಒಪ್ಪುತ್ತಿಲ್ಲ. ಅಧಿಕಾರದ ಬಲ ಪ್ರಯೋಗಿಸಿ ಕರೆದೊಯ್ಯುವ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದು ಚಿಕ್ಕನರಗುಂದ ಪಂಚಾಯ್ತಿ ಪಿಡಿಒ ಶಹನಾಜ್ ಹೇಳಿದರು.

‘ಬೆಳ್ಳಟ್ಟಿ ಗ್ರಾಮ ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದು, ಸುತ್ತಮುತ್ತಲಿನ 32 ಹಳ್ಳಿಗಳ ಜನರು ಪ್ರತಿಯೊಂದಕ್ಕೂ ಈ ಊರನ್ನೇ ಅವಲಂಬಿಸಿದ್ದಾರೆ. ಸೋಂಕು ನಿಯಂತ್ರಣಕ್ಕೆ ಪಂಚಾಯ್ತಿ ವತಿಯಿಂದ ಕಟ್ಟುನಿಟ್ಟಿನ ಕ್ರಮ ವಹಿಸಲಾಗಿದೆ. ವಿಲೇಜ್ ಟಾಸ್ಕ್‌ಫೋರ್ಸ್ ಎಂಬ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿದ್ದು, ಆಶಾ ಕಾರ್ಯಕರ್ತೆಯರು ಪ್ರತಿದಿನದ ಸ್ಥಿತಿಗತಿಯನ್ನು ಅಪ್‌ಡೇಟ್ ಮಾಡುತ್ತಾರೆ’ ಎನ್ನುತ್ತಾರೆ ಬೆಳ್ಳಟ್ಟಿ ಪಂಚಾಯ್ತಿ ಪಿಡಿಒ ಸುರೇಶ್ ಕಲ್ಲೋದರ.

ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಔಷಧ, ಲಸಿಕೆಗಳು ನಿರಂತರವಾಗಿ ಪೂರೈಕೆ ಆಗುತ್ತಿವೆ. ಬಹುತೇಕ ಆಸ್ಪತ್ರೆಗಳು ಉತ್ತಮ ಕಟ್ಟಡ ಹೊಂದಿವೆ. ಲಕ್ಷ್ಮೇಶ್ವರ ತಾಲ್ಲೂಕಿನ ಶಿಗ್ಲಿ ಆರೋಗ್ಯ ಕೇಂದ್ರದಲ್ಲಿ ಪಾಳಿ ಅನುಸಾರ ವೈದ್ಯರು ಕರ್ತವ್ಯಕ್ಕೆ ಹಾಜರಾಗುತ್ತಾರೆ. ಗಡಿ ಗ್ರಾಮ ಬಾಲೆಹೊಸೂರಿನಲ್ಲಿ ಸುಸಜ್ಜಿತ ಕಟ್ಟಡ ಇದ್ದು, ಅಲ್ಲಿ ವೈದ್ಯರೇ ಇಲ್ಲ.

ಜಿಲ್ಲೆಯ ಮುಂಡರಗಿ, ಲಕ್ಷ್ಮೇಶ್ವರ, ಶಿರಹಟ್ಟಿ, ನರಗುಂದ ತಾಲ್ಲೂಕುಗಳ ಪರಿಸ್ಥಿತಿ ಒಂದು ರೀತಿಯದ್ದಾದರೆ, ಗಜೇಂದ್ರಗಡ ಹಾಗೂ ರೋಣ ತಾಲ್ಲೂಕಿನಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಲಾಕ್‌ಡೌನ್ ಜಾರಿಯಲ್ಲಿದ್ದರೂ ಇಲ್ಲಿ ಇಡೀ ದಿನ ಜನ ಸಂಚಾರ ಜೋರಾಗಿತ್ತು. ಅಂಗಡಿಗಳು ತೆರೆದಿದ್ದವು. ಹೋಟೆಲ್‌ಗಳಲ್ಲಿ ಕಾಫಿ ತಿಂಡಿ ಸರಬರಾಜು ಕೂಡ ಎಂದಿನಂತೆಯೇ ಇತ್ತು.

‘ಜನರು ಜಾಗೃತರಾಗದ ತನಕ ಕೋವಿಡ್ ನಿಯಂತ್ರಣಕ್ಕೆ ಬರುವುದಿಲ್ಲ. ಸೋಂಕಿತರನ್ನು ಕಡ್ಡಾಯವಾಗಿ ಕೋವಿಡ್ ಆರೈಕೆ ಕೇಂದ್ರಕ್ಕೆ ಸ್ಥಳಾಂತರಿಸಿ, ಸೋಂಕು ಸರಪಳಿ ತುಂಡರಿಸಬೇಕು’ ಎಂದು ನರೇಗಲ್‌ನ ನಿಂಗನಗೌಡ ಲಕ್ಕನಗೌಡ್ರ ಆಗ್ರಹಿಸುತ್ತಾರೆ.

ವೆಂಟಿಲೇಟರ್ ಕೊರತೆ; ಸಾವಿನ ಪ್ರಮಾಣದಲ್ಲಿ ಹೆಚ್ಚಳ

ಕೊರೊನಾ ಎರಡನೇ ಅಲೆಯ ಸಂದರ್ಭದಲ್ಲಿ ಗ್ರಾಮೀಣ ಭಾಗದಲ್ಲಿ ಸೋಂಕು ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ರೋಗಿಯ ಪರಿಸ್ಥಿತಿ ಗಂಭೀರವಾದರೆ ಹೆಚ್ಚಿನ ಚಿಕಿತ್ಸೆಗೆ ಅವರನ್ನು ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಬೇಕು. ಆದರೆ, ಜಿಮ್ಸ್‌ನಲ್ಲಿರುವ 78 ವೆಂಟಿಲೇಟರ್‌ಗಳು ಸದಾ ಭರ್ತಿಯಾಗಿರುತ್ತವೆ. ವೆಂಟಿಲೇಟರ್ ಬೆಡ್‌ಗಾಗಿ ದಿನವೂ ಕನಿಷ್ಠ 15 ಮಂದಿ ರೋಗಿಗಳು ಕ್ಯೂನಲ್ಲಿ ಇರುತ್ತಾರೆ.

ಜಿಲ್ಲೆಯ ಯಾವ ತಾಲ್ಲೂಕು ಆಸ್ಪತ್ರೆಯಲ್ಲೂ ವೆಂಟಿಲೇಟರ್ ಸೌಲಭ್ಯ ಇಲ್ಲ. ಅವುಗಳ ನಿರ್ವಹಣೆಗೆ ಅಗತ್ಯ ಸಿಬ್ಬಂದಿ ಇಲ್ಲದ್ದರಿಂದ ಅಲ್ಲಿಯ ವೆಂಟಿಲೇಟರ್‌ಗಳನ್ನು ಜಿಲ್ಲಾ ಆಸ್ಪತ್ರೆಗೆ ನೀಡಲಾಗಿದೆ.

ವೆಂಟಿಲೇಟರ್ ಬೆಡ್ ಸಿಗದ ಕಾರಣ ಮುಂಡರಗಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನಾಲ್ಕು ಮಂದಿ ಹಾಗೂ ರೋಣ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮೂರು ಮಂದಿ ಕೋವಿಡ್ ರೋಗಿಗಳು ಈಚೆಗಷ್ಟೇ ಮೃತಪಟ್ಟಿದ್ದರು.

ಗದಗ ಜಿಲ್ಲಾ ಕೋವಿಡ್ ಅಂಕಿ–ಅಂಶ

24,661 ಒಟ್ಟು ಸೋಂಕಿತರು ▲

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
1,903 ▼	22,489 ▲	269 ▼

ದಿನದ ಏರಿಕೆ

ಹೊಸ ಪ್ರಕರಣ	152 ▼
ಗುಣಮುಖ	328 ▲
ಸಾವು	4 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಜಿಲ್ಲಾಡಳಿತ ನರೇಗಲ್‌ನಲ್ಲಿ ಕೋವಿಡ್ ಕೇರ್ ಸೆಂಟರ್ ತೆರೆದು ಅಗತ್ಯ ಸಿಬ್ಬಂದಿ ಒದಗಿಸಿದರೆ, ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಇಲ್ಲಿಗೆ ಸ್ಥಳಾಂತರಿಸಿ ಚಿಕಿತ್ಸೆ ನೀಡಲು ಸಮಸ್ಯೆ ಇಲ್ಲ.
ಡಾ. ಎ.ಡಿ.ಸಾಮುದ್ರಿ, ನರೇಗಲ್ ವೈದ್ಯಾಧಿಕಾರಿ

ಲಾಕ್‌ಡೌನ್ ಕಾರಣದಿಂದ ಊರಿಗೆ ಹಿಂದಿರುಗಿದ 34 ಮಂದಿಯನ್ನು ತಕ್ಷಣವೇ ಹೋಂ ಕ್ವಾರಂಟೈನ್ ಮಾಡಿದ್ದರಿಂದ ಸೋಂಕು ನಿಯಂತ್ರಣಕ್ಕೆ ಬಂತು.
ಸುರೇಶ್ ಕಲ್ಲೋದರ
ಬೆಳ್ಳಟ್ಟಿ ಗ್ರಾಮ ಪಂಚಾಯ್ತಿ ಪಿಡಿಒ

ಕೋವಿಡ್ ಆರೈಕೆ ಕೇಂದ್ರ; ಸಾವಿರಾರು ಹಾಸಿಗೆ ಖಾಲಿ!

ಒಂದನೇ ಪುಟದಿಂದ...

ಆರೋಗ್ಯ ಕೇಂದ್ರ ಮತ್ತು ಆರೈಕೆ ಕೇಂದ್ರ ಒಂದೇ ಕಡೆ ಇರುವೆಡೆ ಮಾತ್ರ ವೈದ್ಯರ ಸೇವೆ ನಿರಂತರ ಲಭ್ಯವಿದೆ.

ಜಿಲ್ಲೆಯ ಕೆಲವು ಕೋವಿಡ್ ಆರೈಕೆ ಕೇಂದ್ರಗಳಿಗೆ ‘ಪ್ರಜಾವಾಣಿ’ ಭೇಟಿ ನೀಡಿದಾಗ ಈ ಅಂಶಗಳು ಕಂಡು ಬಂದವು.

ಸಂಡೂರು ತಾಲ್ಲೂಕಿನ ಹೊಸದರೋಜಿ ಗ್ರಾಮ ಪಂಚಾಯ್ತಿ ಕೇಂದ್ರದ ಹಿಂದುಳಿದ ವರ್ಗಗಳ ಮೆಟ್ರಿಕ್‌ಪೂರ್ವ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡಿದಾಗ ನಾಲ್ವರು ಸೋಂಕಿತರಿದ್ದರು. ಅವರಿಗೆ ಆಹಾರ ಪದಾರ್ಥಗಳನ್ನು ತಯಾರಿ-ಸಲಾಗುತ್ತಿದ್ದೆಡೆ ಒಣಗಿ ಮುರುಟಿದ್ದ ತರಕಾರಿ-ಗಳಿದ್ದವು. ‘ಊಟ, ಉಪಾಹಾರ ಚೆನ್ನಾಗಿಲ್ಲ’ ಎಂದು ಸೋಂಕಿತರೊಬ್ಬರು ದೂರಿದರು.

‘ಸೋಂಕಿತರು ಅಸಮಾಧಾನ ವ್ಯಕ್ತಪ-ಡಿಸಿದ ನಂತರ ಸಮಸ್ಯೆಯನ್ನು ಸರಿಪಡಿಸ-ಲಾಗಿದೆ’ ಎಂದು ಹೆಸರು ಹೇಳಲು ಬಯಸದ ಪಂಚಾಯ್ತಿ ಸದಸ್ಯರೊಬ್ಬರು ತಿಳಿಸಿದರು.

ಸಿರುಗುಪ್ಪ ತಾಲ್ಲೂಕಿನ ಕರೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಸಮೀಪದಲ್ಲೇ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾ-ರ್ಥಿನಿಲಯದ ಆರೈಕೆ ಕೇಂದ್ರ ಆರಂಭವಾದ ದಿನ ಹತ್ತು ಸೋಂಕಿತರಿದ್ದರು. ಆದರೆ ಊಟ–ಉಪಹಾರ ಪೂರೈಕೆಯ ಟೆಂಡರ್ ಪ್ರಕ್ರಿಯೆಯೇ ಮುಗಿದಿರಲಿಲ್ಲ. ಪಂಚಾಯ್ತಿ ಮತ್ತು ರೈತ ಸಂಘದ ಸಹಯೋಗದಲ್ಲಿ ಆಹಾರ ಪೂರೈಕೆಗೆ ವ್ಯವಸ್ಥೆ ಮಾಡಲಾಗಿತ್ತು.

ಎರಡು ವೈದ್ಯಕೀಯ ಆಮ್ಲಜನಕ ಸಾಂ-ದ್ರಕಗಳಿದ್ದವು. ಅಲ್ಲಿಗೆ ದಮ್ಮೂರಿನ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ಸಮುದಾಯ ಆರೋಗ್ಯಾಧಿಕಾರಿಯನ್ನು ನಿಯೋಜಿಸಲಾ-ಗಿತ್ತು.

‘ಕೋವಿಡ್ ಕೇಂದ್ರದಲ್ಲಿರುವವರ ಆರೋಗ್ಯದ ಮೇಲೆ ನಿರಂತರ ನಿಗಾ ವಹಿ-ಸಲಾಗುತ್ತದೆ. ಹೆಚ್ಚಿನ ಏರುಪೇರಾದರೆ ಕೋವಿಡ್ ಆಸ್ಪತ್ರೆಗೆ ದಾಖಲಿಸಲಾಗುತ್ತದೆ’ ಎಂದು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ನಾಗರಾಜ್ ಹೇಳಿದರು.

ಕುರುಗೋಡು ತಾಲ್ಲೂಕಿನ ಎರ್ರಂಗಳಿಗಿ ಗ್ರಾಮದ ಹಾಸ್ಟೆಲ್‌ನಲ್ಲಿ ಸ್ಥಾಪಿಸಿರುವ ಕೋವಿಡ್ ಆರೈಕೆ ಕೇಂದ್ರದ ಬಗ್ಗೆ ಸಮೀಪದ ದಮ್ಮೂರು ಗ್ರಾಮಸ್ಥರು ಹೆಚ್ಚಿನ ವಿಶ್ವಾಸ ವ್ಯಕ್ತ-ಪಡಿಸಲಿಲ್ಲ.

‘ವೈದ್ಯಕೀಯ ಆಮ್ಲಜನಕವಿಲ್ಲದೆ ಪರದಾಡಿದ್ದರಿಂದ ಜನ ಅಲ್ಲಿಗೆ ಹೋಗಲು ಹಿಂಜರಿಯುತ್ತಿದ್ದಾರೆ. ಮನೆಯಲ್ಲೇ ಇದ್ದುಕೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಗ್ರಾಮದ ಮುಖಂಡ, ರೈತ ಸಂಘದ ಪರಶುರಾಮ್ ಪ್ರತಿಪಾದಿಸಿದರು. ಸಿಬ್ಬಂದಿ ಇಲ್ಲದೆ ದಮ್ಮೂರಿನ ಆರೋಗ್ಯ ಉಪ ಕೇಂದ್ರವೂ ಮುಚ್ಚಿತ್ತು.

‘ಕರೂರಿನಲ್ಲಿ ಆರೈಕೆ ಕೇಂದ್ರವನ್ನು ಸ್ಥಾಪಿಸಿ ವೈದ್ಯ ಸಿಬ್ಬಂದಿಯನ್ನು ನೇಮಿಸಿದರೆ ಎಲ್ಲ ಖರ್ಚನ್ನೂ ಸಂಘವೇ ಭರಿಸಲು ಸಿದ್ಧ ಎಂಬ ನಮ್ಮ ಮನವಿಯನ್ನು ತಳ್ಳಿಹಾಕಿದ್ದ ಜಿಲ್ಲಾಧಿಕಾರಿ, ವೈದ್ಯರಿಲ್ಲ ಎಂದು ಹೇಳಿದ್ದರು. ಆದರೆ ಪ್ರತ್ಯೇಕ ವೈದ್ಯರಿಲ್ಲದ ಸ್ಥಿತಿಯಲ್ಲೇ ಜಿಲ್ಲಾಡಳಿತ ಆರೈಕೆ ಕೇಂದ್ರವನ್ನು ಆರಂಭಿಸಿರುವುದು ವಿಪರ್ಯಾಸ’ ಎಂದು ಕರೂರಿನವರೇ ಆಗಿರುವ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಆರ್.ಮಾಧವರೆಡ್ಡಿ ವಿಷಾದ ವ್ಯಕ್ತಪಡಿಸಿದರು.

ಅರ್ಧ ದಿನ ಭರ್ತಿ ಕೆಲಸ

ಬಳ್ಳಾರಿ: ಗ್ರಾಮೀಣ ಪ್ರದೇಶಗಳಲ್ಲಿ ಸಿಬ್ಬಂದಿ ಕೊರತೆಯ ಕಾರಣದಿಂದಾಗಿ, ಪ್ರಸ್ತುತ ಇರುವ ಸಿಬ್ಬಂದಿಯೇ ದಿನವೂ 12 ಗಂಟೆ ಕಾಲ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಹಾಗೂ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶುಶ್ರೂಷಕರು, ಸಮುದಾಯ ಆರೋಗ್ಯಾಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಕಿರಿಯ ಆರೋಗ್ಯ ಸಹಾಯಕಿಯರು ಸೇರಿದಂತೆ ತಳಮಟ್ಟದ ಎಲ್ಲರೂ ಈ ದೀರ್ಘ ಅವಧಿಯ ಕರ್ತವ್ಯದ ಭಾರ ಹೊತ್ತಿದ್ದಾರೆ. ಹಲವರು ಸೋಂಕಿನಿಂದ ಬಳಲಿ ಚೇತರಿಸಿಕೊಂಡು ಮತ್ತೆ ಕರ್ತವ್ಯಕ್ಕೆ ಬಂದಿದ್ದಾರೆ. ವೈದ್ಯಾಧಿಕಾರಿಗಳ ಅನುಪಸ್ಥಿತಿಯಲ್ಲೇ ಇವರೆಲ್ಲರೂ ಗ್ರಾಮೀಣ ಜನಸಮುದಾಯದ ಆರೋಗ್ಯದ ಮೇಲೆ ನಿಗಾ ವಹಿಸಿದ್ದಾರೆ.

ವೈದ್ಯರಿಲ್ಲ, ಔಷಧಿಯುಂಟು

ಜಿಲ್ಲಾಡಳಿತವು ಜಿಂದಾಲ್ ಸಹಯೋಗದಲ್ಲಿ ತೋರಣಗಲ್‌ನಲ್ಲಿ ಸ್ಥಾಪಿಸಿರುವ ತಾತ್ಕಾಲಿಕ ಆಸ್ಪತ್ರೆಗೆ ಹೊಸದರೋಜಿಯ ಆಯುಷ್ ವೈದ್ಯಾಧಿಕಾರಿ ಡಾ.ಫಣೀಂದ್ರ ಅವರನ್ನು ನಿಯೋಜಿಸಲಾಗಿದೆ. ಆಯುರ್ವೇದ ಚಿಕಿತ್ಸಾಲಯದ ನಾಲ್ಕನೇ ದರ್ಜೆ ನೌಕರರೊಬ್ಬರು ಔಷಧವನ್ನು ಕೊಡುತ್ತಿದ್ದರು.

ಕಂಪ್ಲಿ ತಾಲ್ಲೂಕಿನ ದೇವಲಾಪುರ ಗ್ರಾಮ ಪಂಚಾಯ್ತಿ ಕೇಂದ್ರದಲ್ಲೂ ಇದೇ ಪರಿಸ್ಥಿತಿ. ಪಂಚಾಯ್ತಿಯ ಶ್ರೀರಾಮರಂಗಪುರದ ಆರೋಗ್ಯ ಕ್ಷೇಮ ಕೇಂದ್ರದ ವೈದ್ಯಾಧಿಕಾರಿ ಡಾ.ರೇವಣಸಿದ್ದ ಅವರನ್ನು ಕಂಪ್ಲಿಯ ಕೋವಿಡ್ ಆರೈಕೆ ಕೇಂದ್ರಕ್ಕೆ ನಿಯೋಜಿಸಿರುವುದರಿಂದ ಸಿಬ್ಬಂದಿಯೇ ಔಷಧಿ ಕೊಡುತ್ತಿದ್ದರು.

ಬಳ್ಳಾರಿ ತಾಲ್ಲೂಕಿನ ಬೃಹತ್ ಕೈಗಾರಿಕಾ ಪ್ರದೇಶವಾದ ಕುಡುತಿನಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ರವಿಚಂದ್ರ ಅವರನ್ನು ಬಳ್ಳಾರಿ ತುರ್ತು ಸ್ಪಂದನ ತಂಡಗಳ ನೇತೃತ್ವ ವಹಿಸಲು ನಿಯೋಜಿಸಿರುವುದರಿಂದ, ಆಯುಷ್ ವೈದ್ಯೆ ಡಾ.ಶಶಿಕಲಾ ಹಾಗೂ ಒಂದಿಬ್ಬರು ಸಿಬ್ಬಂದಿ ಕೇಂದ್ರದಲ್ಲಿದ್ದರು.

ಕೋವಿಡ್ ಆರೈಕೆ ಕೇಂದ್ರದ ಹಾಸಿಗೆ ಸೌಲಭ್ಯ

ತಾಲ್ಲೂಕು	ಕೇರ್ ಸೆಂಟರ್	ಭರ್ತಿ
3	24	308

ಹಾಸಿಗೆಗಳು	ಖಾಲಿ
1730	1422

ಬಳ್ಳಾರಿ ಜಿಲ್ಲಾ ಕೋವಿಡ್ ಅಂಕಿ–ಅಂಶ

93,659 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,046 ▼	86,209 ▲	1,404

ದಿನದ ಏರಿಕೆ

ಹೊಸ ಪ್ರಕರಣ	345 ▼
ಗುಣಮುಖ	1,052 ▼
ಸಾವು	09 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಆರೈಕೆ ಕೇಂದ್ರವು ನಡೆದುಕೊಂಡು ಹೋಗುವಷ್ಟು ಸಮೀಪದಲ್ಲಿರುವುದರಿಂದ ನಿಯಮಿತವಾಗಿ ಭೇಟಿ ನೀಡಿ ಸೋಂಕಿತರ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ
ಡಾ.ನಾಗರಾಜ್, ಕರೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ

ಸದ್ಯ ಗ್ರಾಮ ಪಂಚಾಯ್ತಿ ವತಿಯಿಂದಲೇ ಕೋವಿಡ್ ಆರೈಕೆ ಕೇಂದ್ರದ ಸೋಂಕಿತರಿಗೆ ಆಹಾರ ಪೂರೈಸಲಾಗುತ್ತಿದೆ
ತಿಮ್ಮಪ್ಪ ಉಪ್ಪಾರ
ಗ್ರಾಮ ಪಂಚಾಯ್ತಿ ಸದಸ್ಯ, ಹೊಸ ದರೋಜಿ

ಎರ್ರಂಗಳಿಗಿ ಗ್ರಾಮದ ಆರೈಕ ಕೇಂದ್ರದಲ್ಲಿ ಆಮ್ಲಜನಕ ಸೌಕರ್ಯವಿಲ್ಲ ಎಂಬ ಭಯಕ್ಕೆ ಅಲ್ಲಿಗೆ ಹೋಗಲು ಗ್ರಾಮಸ್ಥರು ಹಿಂಜರಿಯುತ್ತಿದ್ದಾರೆ.
ಪರುಶುರಾಮ್, ದಮ್ಮೂರು

ಕೇಂದ್ರದಲ್ಲಿ ಕೊಡುತ್ತಿರುವ ಊಟ, ಉಪಾಹಾರ ಚೆನ್ನಾಗಿಲ್ಲ. ಆಗಾಗ ವೈದ್ಯರು, ಶುಶ್ರೂಷಕರು ಬಂದು ಆರೋಗ್ಯದ ಬಗ್ಗೆ ವಿಚಾರಿಸುತ್ತಾರೆ
ಸೋಂಕಿತ, ಕೋವಿಡ್ ಕೇರ್ ಸೆಂಟರ್ ಹೊಸದರೋಜಿ

ಟಿಎಂಸಿ: ಅಭಿಷೇಕ್ ಬ್ಯಾನರ್ಜಿಗೆ ಉನ್ನತ ಹುದ್ದೆ

ಕೋಲ್ಕತ್ತ (ಪಿಟಿಐ): ತನ್ನ ಸೋದರಳಿಯ, ಸಂಸದ ಅಭಿಷೇಕ್ ಬ್ಯಾನರ್ಜಿ ಅವರನ್ನು ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷದ ವರಿಷ್ಠೆ ಮಮತಾ ಬ್ಯಾನರ್ಜಿ ಶನಿವಾರ ನೇಮಕ ಮಾಡಿದ್ದಾರೆ.

ಟಿಎಂಸಿ ಹಿರಿಯ ಮುಖಂಡ ಪಾರ್ಥ ಚಟರ್ಜಿ ಅವರು ಮಾಧ್ಯಮಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ್ದಾರೆ. ‘ಪಕ್ಷದಲ್ಲಿ ಒಬ್ಬ ವ್ಯಕ್ತಿಗೆ ಒಂದು ಹುದ್ದೆಯನ್ನು ಮಾತ್ರ ನೀಡಬೇಕು ಎಂದು ಕಾರ್ಯಕಾರಿ ಸಮಿತಿ ನಿರ್ಧರಿಸಿದೆ. ಅದಕ್ಕೆ ಕೋರ್ ಕಮಿಟಿಯು ಅನುಮೋದನೆ ನೀಡಿದೆ’ ಎಂದೂ ಹೇಳಿದರು.

ಈ ಹಿಂದೆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಸುಬ್ರತಾ ಬಕ್ಷಿ ಅವರು ನಿರ್ವಹಿಸಿದ್ದರು. ನಟಿ ಹಾಗೂ ಟಿಎಂಸಿ ನಾಯಕಿ ಸಯೋನಿ ಘೋಷ್ ಅವರನ್ನು ಯುವ ಘಟಕದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಇದಕ್ಕೂ ಮುನ್ನ ಅಭಿಷೇಕ್ ಈ ಹುದ್ದೆ ನಿರ್ವಹಿಸುತ್ತಿದ್ದರು.

ವಿಧಾನಸಭೆ ಚುನಾವಣೆಗೂ ಮುನ್ನ ಟಿಎಂಸಿ ತೊರೆದು ಬಿಜೆಪಿ ಸೇರಿದ್ದ ಮತ್ತು ಈಗ ಪಕ್ಷಕ್ಕೆ ಹಿಂದಿರುಗಲು ಬಯಸುತ್ತಿರುವವರ ಬಗ್ಗೆ ಸಭೆಯಲ್ಲಿ ಯಾವುದೇ ಚರ್ಚೆ ನಡೆದಿಲ್ಲ’ ಎಂದು ಪಾರ್ಥ ಚಟರ್ಜಿ ಹೇಳಿದರು.

ಲಸಿಕೆ ಪಡೆದವರಿಗೆ ಮಮತಾ ಭಾವಚಿತ್ರದ ಪ್ರಮಾಣಪತ್ರ

ಕೋಲ್ಕತ್ತ (ಪಿಟಿಐ): ರಾಜ್ಯದಲ್ಲಿ ಕೋವಿಡ್ ಲಸಿಕೆ ಪಡೆದ, 18ರಿಂದ 44ವರ್ಷ ವಯೋಮಾನದವರಿಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಭಾವಚಿತ್ರ-ವಿರುವ ಪ್ರಮಾಣಪತ್ರವನ್ನು ನೀಡಲಾಗುತ್ತಿದೆ.

‘ರಾಜ್ಯ ಸರ್ಕಾರವು ತನ್ನ ಸ್ವಂತ ಸಂಪನ್ಮೂಲಗಳನ್ನು ಬಳಸಿ ಉತ್ಪಾದಕರಿಂದ ಲಸಿಕೆ ಖರೀದಿಸಿ ನೀಡುತ್ತಿರುವುದರಿಂದ ಪ್ರಮಾಣಪತ್ರದಲ್ಲಿ ಮುಖ್ಯಮಂತ್ರಿಯ ಚಿತ್ರ ಬಳಸಲಾಗುತ್ತಿದೆ. ಕೆಲವು ರಾಜ್ಯಗಳು ಈಗಾಗಲೇ ಈ ಕ್ರಮ ಜಾರಿ ಮಾಡಿದ್ದರಿಂದ ಇದರಲ್ಲಿ ಅಸ್ವಾಭಾವಿಕವೇನೂ ಇಲ್ಲ’ ಎಂದು ಅಧಿಕಾರಿ-ಯೊಬ್ಬರು ಹೇಳಿದ್ದಾರೆ.

ಲಸಿಕೆ ಪಡೆಯುವ, 44 ವರ್ಷ ಮೇಲ್ಪಟ್ಟವರಿ-ಗೆ ಮೋದಿ ಅವರ ಭಾವಚಿತ್ರವಿರುವ ಪ್ರಮಾಣಪತ್ರ ನೀಡಲಾಗುತ್ತಿದೆ. ಅದಕ್ಕೂ ಸಣ್ಣ ವಯಸ್ಸಿನವರಿಗೆ ಕೇಂದ್ರ ಸರ್ಕಾರ ಲಸಿಕೆ ಪೂರೈಸುತ್ತಿಲ್ಲ. ರಾಜ್ಯವೇ ಹಣ ವೆಚ್ಚ ಮಾಡುವುದರಿಂದ ಮುಖ್ಯಮಂತ್ರಿಯ ಚಿತ್ರ ಬಳಸಲಾಗುತ್ತಿದೆ’ ಎಂದು ವಸತಿ ಸಚಿವ ಫಿರ್ಹಾದ್ ಹಕೀಮ್ ಅವರು ಸರ್ಕಾರದ ಈ ಕ್ರಮವನ್ನು ಸಮರ್ಥಿ-ಸಿಕೊಂಡಿದ್ದಾರೆ.

ಆದರೆ, ಹೀಗೆ ಲಸಿಕೆ ಪಡೆದವರಿಗೆ ಕೇಂದ್ರ ಸರ್ಕಾರದಿಂದಲೂ (ಮೋದಿ ಭಾವಚಿತ್ರವಿರುವ) ಪ್ರಮಾಣಪತ್ರ ನೀಡುತ್ತಿರುವುದು ಗೊಂದಲಕ್ಕೆ ಕಾರಣವಾಗಿದೆ.

18–44 ವಯೋಮಾನದವರಿಗೆ ಲಸಿಕೆ ನೀಡಲು ರಾಜ್ಯ ಸರ್ಕಾರ ಈವರೆಗೆ ಸುಮಾರು ₹150 ಕೋಟಿ ಖರ್ಚು ಮಾಡಿದೆ. 29 ಲಕ್ಷ ಮಂದಿಗೆ ಲಸಿಕೆ ನೀಡಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಧರ್ಮಪ್ರಚಾರಕ್ಕೆ ಐಎಂಎ ವೇದಿಕೆ ಬಳಕೆ ಬೇಡ: ತಾಕೀತು

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಭಾರತೀಯ ವೈದ್ಯಕೀಯ ಸಂಘವನ್ನು (ಐಎಂಎ) ಧರ್ಮ ಪ್ರಚಾರಕ್ಕೆ ವೇದಿಕೆಯನ್ನಾಗಿ ಬಳಸಿಕೊಳ್ಳಬೇಡಿ’ ಎಂದು ಸಂಘದ ಮುಖ್ಯಸ್ಥ ಜೆ.ಎ. ಜಯಲಾಲ್ ಅವರಿಗೆ ದೆಹಲಿ ಕೋರ್ಟ್ ಶನಿವಾರ ಸೂಚಿಸಿದೆ. ಅದರ ಬದಲು, ವೈದ್ಯಕೀಯ ಸಮುದಾಯದ ಏಳ್ಗೆ ಹಾಗೂ ವೈದ್ಯ ಕ್ಷೇತ್ರದ ಬೆಳವಣಿಗೆಯತ್ತ ಗಮನ ಹರಿಸಲು ಸೂಚಿಸಿದೆ.

‘ಕ್ರಿಶ್ಚಿಯನ್‌ಟುಡೆ’ ಮಾಧ್ಯಮಕ್ಕೆ ಜಯಲಾಲ್ ಅವರು ನೀಡಿದ್ದಾರೆ ಎನ್ನಲಾದ ಹೇಳಿಕೆಯೊಂದನ್ನು ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ಅಜಯ್ ಗೋಯಲ್ ಅವರು ಪರಿಶೀಲಿಸಿದರು. ‘ಏಸು ಕ್ರಿಸ್ತನಿಂದ ಕೊರೊನಾ ವೈರಸ್ ನಿಯಂತ್ರಣಕ್ಕೆ ಬಂದಿದೆ’ ಎಂದು ಅವರು ಹೇಳಿರುವುದು ಸರಿಯಲ್ಲ. ಈ ಹೇಳಿಕೆ ಸಂವಿಧಾನದ ಆಶಯಕ್ಕೆ ತಾಳೆಯಾಗುವುದಿಲ್ಲ ಎಂದು ನ್ಯಾಯಾಧೀಶರು ಹೇಳಿದರು.

‘ಕ್ರಿಶ್ಚಿಯನ್ ಧರ್ಮ ಮತ್ತು ಅಲೋಪಥಿ– ಎರಡೂ ಒಂದೇ ಎನ್ನುವುದು ಮತ್ತು ಇವರೆಡೂ ಪಾಶ್ಚಿಮಾತ್ಯ ಪ್ರಪಂಚದ ಉಡುಗೊರೆ ಎಂದು ಹೇಳುವುದು ತಪ್ಪಾದ ಪ್ರತಿಪಾದನೆ. ಭಾರತೀಯ ವೈದ್ಯ ಸುಶ್ರುತ ಅವರನ್ನು ಶಸ್ತ್ರಚಿಕಿತ್ಸೆಯ ಪಿತಾಮಹ ಎಂದು ಪರಿಗಣಿಸಲಾಗುತ್ತದೆ. ಶಸ್ತ್ರಚಿಕಿತ್ಸೆಯು ಇಂದು ಅಲೋಪಥಿ ವೈದ್ಯ ಪದ್ಧತಿಯ ಅವಿಭಾಜ್ಯ ಅಂಶವಾಗಿದೆ’ ಎಂದು ನ್ಯಾಯಾಲಯ ಹೇಳಿತು.

ಹಿಂದೂ ಧರ್ಮ ಮತ್ತು ಆಯುರ್ವೇದವನ್ನು ಖಂಡಿಸಿದ ಜಯಲಾಲ್ ಅವರಿಗೆ ನಿಯಂತ್ರಣ ಹೇರಬೇಕು ಎಂದು ಕೋರಿ ರೋಹಿತ್ ಝಾ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಮುಂದೆ ಇಂತಹ ವಿಚಾರಗಳನ್ನು ಪ್ರಸ್ತಾಪಿಸುವುದಿಲ್ಲ ಎಂದು ಜಯಲಾಲ್ ಅವರು ಭರವಸೆ ನೀಡಿರುವ ಕಾರಣ, ಅವರ ವಿರುದ್ಧ ತಡೆಯಾಜ್ಞೆ ನೀಡುವುದಿಲ್ಲ ಎಂದು ಹೇಳಿತು.

‘ಎನ್‌ಪಿಎ ವರ್ಗೀಕರಣ ಬೇಡ’

ನವದೆಹಲಿ (ಪಿಟಿಐ): ಕೋವಿಡ್ ಎರಡನೇ ಅಲೆಯ ಹೊಡೆತದಿಂದ ಆರ್ಥಿಕ ಸಂಕಷ್ಟ ಉಂಟಾಗಿರುವ ಕಾರಣ, ಸಾಲದ ಕಂತು ಮರುಪಾವತಿ ಮುಂದೂಡಲು ಸೂಚನೆ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಸಲ್ಲಿಸಲಾಗಿದೆ.

ಮೊರಟೋರಿಯಂ ನೀಡುವ ಸಂಬಂಧ ಬ್ಯಾಂಕ್‌ಗಳಿಗೆ ಅನುಮತಿ ನೀಡಲು ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಟ್ರಸ್ಟ್ ಡಿಸ್ಟ್ರೆಸ್ ಮ್ಯಾನೇಜ್‌ಮೆಂಟ್ ಕಲೆಕ್ಟಿವ್ ಎಂಬ ಸಂಘಟನೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಶೀಘ್ರವೇ ವಿಚಾರಣೆಗೆ ಬರುವ ಸಾಧ್ಯತೆಯಿದೆ.

ಏಪ್ರಿಲ್– ಆಗಸ್ಟ್ ಅವಧಿಯಲ್ಲಿ ಸಾಲದ ಕಂತು ಪಾವತಿಸದ ಖಾತೆಗಳನ್ನು ಎನ್‌ಪಿಎ ಎಂದು ವರ್ಗೀಕರಿಸದಂತೆ ಬ್ಯಾಂಕ್‌ಗಳಿಗೆ ಸೂಚಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಕರ್ನಾಟಕ ಸರ್ಕಾರ




ಶ್ರೀ ಬಿ.ಎಸ್.ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು

ಭೂ ಸುಧಾರಣೆ ಮತ್ತು ಉಳುವವನೇ ಹೊಲದೊಡೆಯ
ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದ,
ದಲಿತ, ಹಿಂದುಳಿದ ವರ್ಗಗಳ ಅಭಿವೃದ್ಧಿಯ ಹರಿಕಾರ
ಅಡಳಿತದಲ್ಲಿ ಸಾಮಾಜಿಕ ನ್ಯಾಯವನ್ನು ಅತ್ಯಂತ
ಪರಿಣಾಮಕಾರಿಯಾಗಿ ಅಳವಡಿಸಿಕೊಂಡ ಮಾಜಿ ಮುಖ್ಯಮಂತ್ರಿ
ಡಿ.ದೇವರಾಜ ಅರಸು ಅವರ
39ನೇ ಪುಣ್ಯಸ್ಮರಣೆ
ಅವರನ್ನು ಗೌರವ ಪೂರ್ವಕವಾಗಿ ನೆನೆಯೋಣ

ಆರ್. ರಘು ಕೌಟಿಲ್ಯ
ಅಧ್ಯಕ್ಷರು

DBCDC
ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
ಕರ್ನಾಟಕ ಸರ್ಕಾರದ ಉದ್ಯಮ

ಚೀನಾದ 'ಬೀಜ ಭಯೋತ್ಪಾದನೆ'

ಬೆಂಗಳೂರು: ಹಿಂದಿನ ವರ್ಷ ಗದಗ ಮತ್ತು ಶಿರಹಟ್ಟಿ ತಾಲ್ಲೂಕಿನ ಹಳ್ಳಿಯ ಕೆಲವು ರೈತರಿಗೆ ಅನಾಮಧೇಯ ಕಂಪನಿಯ ಬಿತ್ತನೆ ಬೀಜದ ಪೊಟ್ಟಣಗಳ ಪಾರ್ಸೆಲ್ ಬಂದಿತ್ತು. ದೇಶದ ವಿವಿಧೆಡೆ ಇಂತಹದ್ದೇ ಪ್ರಕರಣಗಳು ವರದಿಯಾಗಿದ್ದವು. ಚೀನಾವೇ ಈ 'ರಹಸ್ಯ' ಬಿತ್ತನೆ ಬೀಜದ ರವಾನೆ ಮಾಡಿದೆ ಎಂದು ಕೇಂದ್ರ ಸರ್ಕಾರ ಘೋಷಿಸಿತ್ತು. 'ಜೈವಿಕ ಅಸ್ತ್ರ'ವಾಗಿ ಚೀನಾ ಬಿತ್ತನೆ ಬೀಜ ಕಳುಹಿಸುತ್ತಿದೆ ಎಂದು ಕೇಂದ್ರ ಎಲ್ಲಾ ರಾಜ್ಯಗಳಿಗೂ ಪತ್ರ ಬರೆದು ಎಚ್ಚರಿಸಿತ್ತು.

ಕೆಲವು ತಿಂಗಳ ಹಿಂದೆ ಅಮೆರಿಕ, ನ್ಯೂಜಿಲೆಂಡ್, ಜಪಾನ್ ಜೊತೆಗೆ ಬ್ರಿಟನ್ ಸೇರಿದಂತೆ ಯುರೋಪಿಯನ್ ದೇಶಗಳ ಹಲವು ರೈತರಿಗೆ ಮೂಲ ಇಲ್ಲದ ಬಿತ್ತನೆ ಬೀಜದ ಪಾರ್ಸೆಲ್ ರವಾನೆಯಾಗಿದೆ. ಸಾವಿರಾರು ಬೀಜಗಳ ಕಳ್ಳಸಾಗಣೆಯ ವ್ಯವಹಾರ ಇದು. ಇದನ್ನು ಅಮೆರಿಕ 'ಬ್ರಶಿಂಗ್ ಸ್ಕ್ಯಾಮ್', 'ಅಗ್ರಿಕಲ್ಚರ್ ಸ್ಮಗ್ಲಿಂಗ್' ಎಂದು ಕರೆದಿದೆ. 'ಸೀಡ್ ಟೆರರಿಸಂ'(ಬೀಜ ಭಯೋತ್ಪಾದನೆ) ಎಂತಲೂ ಕರೆಯಲಾಗುತ್ತದೆ.

ರಾಜ್ಯ ಮಟ್ಟದಲ್ಲಿ ಇಂತಹ ಕಳ್ಳಸಾಗಣೆ ಮೇಲೆ ನಿಗಾ ಇಟ್ಟಿಲ್ಲ. ಸೀಡ್ ಆಕ್ಟ್ ಅನ್ನು ಬಲಪಡಿಸಿಲ್ಲ. ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳು, ಬಿತ್ತನೆ ಬೀಜ ಪ್ರಮಾಣೀಕೃತ ಸಂಸ್ಥೆಗಳು, ಬಿತ್ತನೆ ಬೀಜ ಉತ್ಪಾದನಾ ಕಂಪನಿಗಳು, ಬೀಜ ನಿಗಮಗಳು ಈ ಕುರಿತು ಅನ್ನದಾತರಲ್ಲಿ ಜಾಗೃತಿ ಮೂಡಿಸುವಲ್ಲಿ ವಿಫಲವಾಗಿವೆ. ಇಂತಹ ಬೀಜಗಳ ಬಿತ್ತನೆಯಿಂದ ಹೊಸ ರೋಗ ಮತ್ತು ಕೀಟ ಬಾಧೆ ಕಂಡುಬರುವ ಸಾಧ್ಯತೆ ಹೆಚ್ಚು.

ಅಸ್ತಿತ್ವಕ್ಕೆ ಕಂಟಕ: ಈ ವಿದೇಶಿ ವೈರಿಗಳ ಜೊತೆಗೆ ಸ್ಪರ್ಧಿಸಲಾಗದೆ ಸ್ಥಳೀಯ ಸಸ್ಯಗಳು ಕಂಗೆಡುತ್ತವೆ. ಲಕ್ಷಾಂತರ ವರ್ಷಗಳಿಂದ ಈ ಮಣ್ಣಿನಲ್ಲಿ ವಿಕಸಿಸಿ ನೆಲೆ ಕಂಡುಕೊಂಡಿರುವ ಸ್ಥಳೀಯ ಸಸ್ಯಕೋಟಿಯ ಅಸ್ತಿತ್ವವನ್ನೇ ಇವು ನಾಶಗೊಳಿಸುತ್ತವೆ. ಸಸ್ಯ ನಂಬಿ ಬದುಕುವ ಜೀವಿಗಳಿಗೂ ಕಂಟಕ ತರಲಿವೆ. ಭೂಮಿ ಬಂಜರಾಗುವ ಸಾಧ್ಯತೆಯಿದೆ. ರಾಷ್ಟ್ರೀಯ ಭದ್ರತೆಗೂ ಅಪಾಯ ಕಟ್ಟಿಟ್ಟಬುತ್ತಿ.

ಅನಾಮಧೇಯ ಕಂಪನಿಗಳ ಮೂಲಕ ಪೋಸ್ಟ್, ಕೊರಿಯರ್ ಮೂಲಕ ಪಾರ್ಸೆಲ್ ಬರುವ ಬಿತ್ತನೆ ಬೀಜಗಳನ್ನು ರೈತರು ಸ್ವೀಕರಿಸಬಾರದು. ಒಂದು ವೇಳೆ ಸ್ವೀಕರಿಸಿದರೂ ಸುಟ್ಟು ಹಾಕಬೇಕು. 'ಇಲ್ಲವಾದರೆ ಕೃಷಿ ಇಲಾಖೆ ಅಥವಾ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು' ಎನ್ನುತ್ತಾರೆ ಕೃಷಿ ಇಲಾಖೆಯ ಅಧಿಕಾರಿಗಳು.

ಈ ಬಾರಿಯೂ ತುಮಕೂರು, ಕಲಬುರ್ಗಿ ಸೇರಿದಂತೆ ಉತ್ತರ ಕರ್ನಾಟಕದ ಹಲವೆಡೆ ಚೀನಾದ ನಕಲಿ ಬೀಜಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ ಎಂಬ ವರದಿಗಳಿವೆ. 'ಇಂಥ ಬೀಜಗಳ ಬಗ್ಗೆ ಎಚ್ಚರವಹಿಸಬೇಕು' ಎಂದು ಕೃಷಿ ಇಲಾಖೆ ಅಧಿಕಾರಿಗಳು ಕೃಷಿಕ ಸಮುದಾಯವನ್ನು ಎಚ್ಚರಿಸಿದೆ.

ಲಾಕ್ ಡೌನ್ ಸಮಯದಲ್ಲಿ ಹುಬ್ಬಳ್ಳಿಯ ಕಾಟನ್ ಮಾರ್ಕೆಟ್ ಬಳಿ ಆಗ್ರೋ ಅಂಗಡಿಯ ಮುಂದೆ ಶುಕ್ರವಾರ ರಸಗೊಬ್ಬರ ಖರೀದಿಗೆ ವಿವಿಧ ಹಳ್ಳಿಯಿಂದ ಬಂದ ರೈತರು ಸಾಲಿನಲ್ಲಿ ನಿಂತರು – ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ನಕಲಿ ಬೀಜಗಳ ವಿಷವರ್ತುಲ

ದಾವಣಗೆರೆ: ಬಿತ್ತನೆ ಬೀಜಗಳಿಗೆ ಹೆಸರುವಾಸಿಯಾಗಿರುವ ರಾಣೆಬೆನ್ನೂರಿನಲ್ಲಿ ಕಡಿಮೆ ಬೆಲೆಗೆ ಸಿಗುವ ಮೆಕ್ಕೆಜೋಳ ಬೀಜಗಳನ್ನು ಕೃಷಿಕರು ಖರೀದಿಸುತ್ತಿದ್ದಾರೆ. ಕೆಲವು ವರ್ತಕರು ಕಳಪೆ ಗುಣಮಟ್ಟದ ಬಿತ್ತನೆ ಬೀಜ ಮಾರಾಟ ಮಾಡುವ ಮೂಲಕ ರೈತರನ್ನು ವಂಚಿಸುತ್ತಿದ್ದಾರೆ ಎಂಬ ದೂರು ಇದೆ.

ಕೃಷಿ ವಿಚಕ್ಷಣಾ ದಳವು ಈಚೆಗೆ ರಾಣೆಬೆನ್ನೂರಿನ ಶ್ರೀರಾಮ ಸೀಡ್ಸ್, ನಿಸರ್ಗ ಸೀಡ್ಸ್ ಮಾರಾಟ ಮಳಿಗೆ ಹಾಗೂ ಕ್ವಾಲಿಟಿ ಬೀಜ ಸಂಸ್ಕರಣ ಘಟಕದ ಮೇಲೆ ದಾಳಿ ನಡೆಸಿ, ಅಕ್ರಮವಾಗಿ ದಾಸ್ತಾನು ಮಾಡಿದ್ದ ₹ 74.15 ಲಕ್ಷ ಮೌಲ್ಯದ 186 ಕ್ವಿಂಟಲ್ ಮೆಕ್ಕೆಜೋಳದ ಬಿತ್ತನೆ ಬೀಜವನ್ನು ವಶಪಡಿಸಿಕೊಂಡಿರುವುದೇ ಇದಕ್ಕೆ ಸಾಕ್ಷಿ.

ಕೊರತೆ ಇಲ್ಲ, ತುಸು ದುಬಾರಿ: ಪೂರ್ವ ಮುಂಗಾರು ಮಳೆ ಬೀಳುತ್ತಿದ್ದಂತೆ ಮೆಕ್ಕೆಜೋಳ ಬಿತ್ತನೆಗೆ ರೈತರು ಸಿದ್ಧತೆ ಮಾಡಿಕೊಂಡಿದ್ದಾರೆ. ದಾವಣಗೆರೆ, ಬೆಳಗಾವಿ, ಶಿವಮೊಗ್ಗ, ಹಾವೇರಿ, ಬಾಗಲಕೋಟೆ ಸೇರಿದಂತೆ ಹಲವು ಜಿಲ್ಲೆಗಳ ಮಳೆಯಾಶ್ರಿತ ಪ್ರದೇಶಗಳಲ್ಲಿ ಪ್ರಮುಖ ಬೆಳೆಯನ್ನಾಗಿ ಮೆಕ್ಕೆಜೋಳ ಬಿತ್ತನೆ ಮಾಡಲಾಗುತ್ತಿದೆ.

ಕೃಷಿ ಇಲಾಖೆಯು ಸಾಕಷ್ಟು ಪ್ರಮಾಣದಲ್ಲಿ ಬಿತ್ತನೆ ಬೀಜವನ್ನು ದಾಸ್ತಾನು ಮಾಡಿಕೊಂಡಿದ್ದು, ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಿಸಲು ವ್ಯವಸ್ಥೆ ಮಾಡಿಕೊಂಡಿದೆ. ಸದ್ಯಕ್ಕೆ ಬಿತ್ತನೆ ಬೀಜದ ಕೊರತೆ ಕಾಣಿಸಿಕೊಂಡಿಲ್ಲ. ಕಳೆದ ವರ್ಷಕ್ಕೆ ಹೋಲಿಸಿದರೆ ಬೆಲೆಯಲ್ಲಿ ತುಸು ಏರಿಕೆಯಾಗಿದೆ.

ಸೋಯಾ, ತೊಗರಿ ಬೀಜ ದುಬಾರಿ

ಕಲಬುರ್ಗಿ: ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ತೊಗರಿಯ ಜೊತೆಗೆ ಕಡಿಮೆ ಅವಧಿಯಲ್ಲಿ ಬರುವ ಉದ್ದು, ಹೆಸರು, ಅಲಸಂದೆ ಧಾನ್ಯಗಳನ್ನೂ ಬೆಳೆಯ-ಲಾಗುತ್ತದೆ. ಲಾಕ್‌ಡೌನ್‌ನಿಂದ ಜನರ ಬಳಿ ಹೊಲ ಹಸನು ಮಾಡಲು, ಬಿತ್ತನೆ ಬೀಜ ಹಾಗೂ ಗೊಬ್ಬರ ಖರೀದಿಸಲು ಹಣವಿಲ್ಲದಂತಾಗಿದೆ.

ಲಾಕ್‌ಡೌನ್ ಕಾರಣಕ್ಕೆ ಅಂಗಡಿಗಳು ಬಂದ್ ಆಗಿದ್ದು ರೈತರಿಗೆ ಅಗತ್ಯ ಕೃಷಿ ಉಪಕರಣ ಖರೀದಿಸಲು ಸಾಧ್ಯವಾಗದೆ ಜಮೀನು ಹದ ಮಾಡುವ ಪ್ರಕ್ರಿಯೆ ಚುರುಕುಗೊಂಡಿಲ್ಲ. ಕೃಷಿ ಸಂಬಂಧಿ ಅಂಗಡಿಗಳನ್ನು ತೆರೆಯುವುದಕ್ಕೆ ಅನುಮತಿ ನೀಡಬೇಕು ಎಂದು ರೈತರು ಕೋರುತ್ತಿದ್ದಾರೆ.

'ಕಳೆದ ವರ್ಷ 5 ಕೆಜಿ ತೊಗರಿ ಬೀಜದ ಪ್ಯಾಕೆಟ್ ದರ ₹ 250 ಇತ್ತು. ಈ ವರ್ಷ ₹ 400ಕ್ಕೆ ಏರಿಕೆಯಾಗಿದೆ. ಬೀದರ್ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಪ್ರಮುಖ ಬೆಳೆಗಳ ಬಿತ್ತನೆ ಬೀಜ ಸರ್ಕಾರ ನಿಗದಿ ಪಡಿಸಿದ ದರದಲ್ಲಿ ಜಿಲ್ಲೆಯ ಎಲ್ಲ ರೈತ ಸಂಪರ್ಕ ಕೇಂದ್ರಗಳಲ್ಲಿ ಲಭ್ಯವಿದೆ. ಆದರೆ, ಬೆಲೆ ಹೆಚ್ಚಳ ರೈತರನ್ನು ಆತಂಕಕ್ಕೀಡು ಮಾಡಿದೆ.

ಜಿಲ್ಲೆಯ ರೈತರು 1.80 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸೋಯಾ ಬಿತ್ತನೆಗೆ ಮುಂದಾಗಿದ್ದಾರೆ. ಸೋಯಾ ಬೀಜದ ಕೊರತೆ ಇದ್ದು, ಪರ್ಯಾಯ ಬೆಳೆ ಬೆಳೆಸುವಂತೆ ಸರ್ಕಾರ ಸಲಹೆ ನೀಡುತ್ತಿದೆ ಎಂದು ರೈತರು ಹೇಳುತ್ತಾರೆ.

ಕಳೆದ ವರ್ಷ 30 ಕೆ.ಜಿ ಸೋಯಾ ಬೆಲೆ ₹ 1,260 ಇತ್ತು. ಈ ವರ್ಷ ₹2,370 ನಿಗದಿಪಡಿಸಲಾಗಿದೆ. ಶೇ 50 ರಿಯಾಯಿತಿ ದರದಲ್ಲಿ ಬೀಜ ಮಾರಾಟ ಮಾಡಬೇಕು ಎಂದು ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ರಾಮಪ್ಪ ಅಣದೂರೆ ಒತ್ತಾಯಿಸಿದ್ದಾರೆ.

'ಜಿಲ್ಲೆಗೆ 1.15 ಲಕ್ಷ ಕ್ವಿಂಟಲ್ ಸೋಯಾಬಿನ್ ಅಗತ್ಯವಿದೆ. 94 ಸಾವಿರ ಕ್ವಿಂಟಲ್‌ಗೆ ಬೇಡಿಕೆ ಸಲ್ಲಿಸಲಾಗಿದೆ. ಪ್ರಸ್ತುತ 76 ಸಾವಿರ ಕ್ವಿಂಟಲ್ ದಾಸ್ತಾನು ಇದೆ' ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕಿ ತಾರಾಮಣಿ ಜಿ.ಎಚ್. ತಿಳಿಸಿದ್ದಾರೆ.

ಮಾಹಿತಿ: ಚಂದ್ರಕಾಂತ ಮಸಾನಿ, ನಾಗರಾಜ ಚಿನಗುಂಡಿ, ಮನೋಜಕುಮಾರ್ ಗುದ್ದಿ, ಬಿ.ಜಿ. ಪ್ರವೀಣಕುಮಾರ

ಕಲಬುರ್ಗಿಯ ಬೀಜ ನಿಗಮದ ಕಚೇರಿಯಲ್ಲಿ ಕಾರ್ಮಿಕರು ತೊಗರಿ ಬೀಜಗಳನ್ನು ಪ್ಯಾಕ್ ಮಾಡುತ್ತಿರುವುದು..

ಅನ್ನದಾತರ ಸುತ್ತ ಸಮಸ್ಯೆಗಳ ಸುಳಿ

ಒಂದನೇ ಪುಟದಿಂದ...

ಇದರಿಂದಾಗಿ ಸೋಯಾಬಿನ್ ಬೀಜದ ದರ ವಿಪರೀತ ಏರಿಕೆಯಾಗಿದೆ. ಒಂದು ಕೆ.ಜಿ ಬಿತ್ತನೆ ಬೀಜದ ದರ ₹104 ರಿಂದ ₹110 ರವರೆಗೆ ತಲುಪಿದೆ. ಸಾಮಾನ್ಯವಾಗಿ ₹55 ರಿಂದ ₹65 ರವರೆಗೆ ಇರುತ್ತಿತ್ತು. ಎಂಎಸ್‌ಪಿ ಮತ್ತು ಮಾರುಕಟ್ಟೆ ದರದ ಆಧಾರದ ಮೇಲೆ ಬಿತ್ತನೆ ಬೀಜದ ದರ ನಿಗದಿ ಆಗುತ್ತದೆ ಎನ್ನುತ್ತಾರೆ ಕೃಷಿ ಇಲಾಖೆ ಅಧಿಕಾರಿಗಳು.

ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಸೋಯಾಬಿನ್ ಬಿತ್ತನೆ ಬೀಜದ ಉತ್ಪಾದನೆ ಆಗಿಲ್ಲ. ಬೀದರ್‌ನಲ್ಲಿ ಸೋಯಾಬಿನ್ ಬಿತ್ತನೆ ಬೀಜ ಉತ್ಪಾದನೆ ಆಗುತ್ತಿತ್ತು. ಭಾರಿ ಮಳೆಯ ಕಾರಣ ಬಿತ್ತನೆ ಬೀಜ ಉತ್ಪಾದನೆಯೇ ನಿಂತು ಹೋಗಿದೆ. ಅಲ್ಲದೆ, ಇದರ ಬಿತ್ತನೆ ಬೀಜದ ಕೋಟ್ ಅತ್ಯಂತ ಸೂಕ್ಷ್ಮ. ಭತ್ತ ಅಥವಾ ರಾಗಿಯ ಬೀಜದಂತಲ್ಲ. ಹೆಚ್ಚು ನೀರು, ಹೆಚ್ಚು ತೇವ, ಹೆಚ್ಚು ಬಿಸಿಲು ಬಿದ್ದರೂ ಮೊಳಕೆ ಬರುವುದಿಲ್ಲ. ಹೀಗಾಗಿ ಇದರ ಬಿತ್ತನೆ ಬೀಜಕ್ಕೆ ಮಧ್ಯಪ್ರದೇಶವನ್ನೇ ಅವಲಂಬಿಸಲಾಗಿದೆ. ಆ ರಾಜ್ಯದಲ್ಲೂ ನಿರೀಕ್ಷಿತ ಪ್ರಮಾಣದಲ್ಲಿ ಬಿತ್ತನೆ ಬೀಜ ಉತ್ಪಾದನೆ ಆಗಿಲ್ಲ. ಇದರ ಪರಿಣಾಮ ಮಾರುಕಟ್ಟೆಯಲ್ಲೂ ಅದರ ದರ ಹೆಚ್ಚಾಗಿದೆ ಎಂದು ಕೃಷಿ ಇಲಾಖೆ ಜಂಟಿ ಕಾರ್ಯದರ್ಶಿಯೊಬ್ಬರು ತಿಳಿಸಿದರು.

ಹೆಸರು ಕಾಳಿನ ಕಥೆಯೂ ಅಷ್ಟೇ; ಗದಗ, ಧಾರವಾಡ ಪ್ರದೇಶದಲ್ಲಿ ಹೆಸರು ಬಿತ್ತನೆ ಬೀಜ ಉತ್ಪಾದಿಸಲಾಗುತ್ತದೆ. ಕಳೆದ ವರ್ಷ ಕಟಾವು ಸಂದರ್ಭದಲ್ಲಿ ಅಧಿಕ ಮಳೆಯಿಂದ, ಹೆಸರುಕಾಳು ನೀರಿನಲ್ಲಿ ಒದ್ದೆಯಾಗಿ ಬೀಜ ಕಪ್ಪಾಯಿತು. ಬಿತ್ತನೆ ಬೀಜ ಸಿಕ್ಕಿದ್ದೂ ಅತ್ಯಲ್ಪ. ಗುಣಮಟ್ಟವೂ ಉತ್ತಮವಾಗಿರಲಿಲ್ಲ. ಹೀಗಾಗಿ ಬೇರೆ ಕಡೆಯಿಂದ ಹೆಚ್ಚು ದರಕ್ಕೆ ತರಿಸಬೇಕಾಯಿತು. ರಾಜ್ಯದಲ್ಲಿ ಉತ್ತಮ ಮಳೆಯಿಂದ ಇಳುವರಿ ಉತ್ತಮವಾಗಿದ್ದರೂ ಗುಣಮಟ್ಟದ ಬಿತ್ತನೆ ಬೀಜ ಅಭಾವ ಸೃಷ್ಟಿಯಾಯಿತು. ಭತ್ತದ ದರ ಕಳೆದ ವರ್ಷದಷ್ಟಿದ್ದರೆ, ರಾಗಿ ದರ ಕಳೆದ ವರ್ಷಕ್ಕಿಂತ ಕಡಿಮೆ ಆಗಿದೆ. ಶೇಂಗಾ ಮತ್ತು ಉದ್ದು ಕಳೆದ ವರ್ಷದಷ್ಟೇ ದರ ಇದೆ ಎಂದು ಅವರು ತಿಳಿಸಿದರು.

ಮತ್ತೊಂದೆಡೆ ರಸಗೊಬ್ಬರ ಬೆಲೆಯೂ ಏರಿದೆ. ವಿವಿಧ ಬಗೆಯ ರಸಗೊಬ್ಬಗಳ ಬೆಲೆ ಶೇ 14 ರಿಂದ ಶೇ 42 ರಷ್ಟು ಹೆಚ್ಚಿದೆ. ರಸಗೊಬ್ಬರಗಳ ತಯಾರಿಕೆಗೆ ಅಗತ್ಯ ಕಚ್ಚಾ ವಸ್ತುಗಳನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಕಚ್ಚಾ ವಸ್ತುಗಳ ಬೆಲೆ ತೀವ್ರವಾಗಿ ಏರಿಕೆ ಆಗಿರುವುದರಿಂದ ಉತ್ಪಾದನಾ ವೆಚ್ಚವೂ ಏರಿಕೆಯಾಗಿದೆ. ಎಲ್ಲ ರಸಗೊಬ್ಬರ ಕಂಪನಿಗಳು ಬೆಲೆ ಏರಿಕೆ ಮಾಡಿವೆ. ಹಳೆ ದಾಸ್ತಾನನ್ನು ಹಳೇ ದರದಲ್ಲಿ ಮಾರಾಟ ಮಾಡಲು ಕಂಪನಿಗಳನ್ನು ಒಪ್ಪಿಸುವ ಕೆಲಸ ಕೇಂದ್ರ ಮಾಡಿದೆ.

ಕಳೆದ ವರ್ಷ ಭಾರಿ ಮಳೆ, ಕೋವಿಡ್ ಸಂಕಷ್ಟ, ಬೆಲೆ ಮತ್ತು ಬೇಡಿಕೆ ಕುಸಿತದಿಂದ ರೈತ ಹೈರಾಣಾಗಿದ್ದಾನೆ. ಹಲವು ರೈತರು ತಾವು ಬೆಳೆದ ಹಣ್ಣು ತರಕಾರಿಗಳಿಗೆ ಬೆಲೆ ಸಿಗದ ಕಾರಣ ಬೀದಿಗೆ ಎಸೆದಿದ್ದರು. ಈಗಲೂ ಪರಿಸ್ಥಿತಿ ಸುಧಾರಿಸಿಲ್ಲ. ಉತ್ತಮ ಮಳೆ ಕೋಲ್ಮಿಂಚು ಬಿಟ್ಟರೆ, ಉಳಿದಂತೆ ರೈತನ ಪಾಲಿಗೆ ಕಗ್ಗತ್ತಲೆಯೇ ಆವರಿಸಿದೆ.

ಬಿತ್ತನೆ ಬೀಜ, ರಸಗೊಬ್ಬರ ವಾಸ್ತವ ಸ್ಥಿತಿ

ಇದೇ ಮುಂಗಾರು ಹಂಗಾಮಿಗೆ 6 ಲಕ್ಷ ಕ್ವಿಂಟಲ್ ಬಿತ್ತನೆ ಬೀಜಕ್ಕೆ ಬೇಡಿಕೆ ಇದೆ. ಮೇ ಅಂತ್ಯದವರೆಗೆ ಒಟ್ಟು 19,675 ಕ್ವಿಂಟಲ್ ಬಿತ್ತನೆ ಬೀಜ ಪೂರೈಕೆ ಮಾಡಲಾಗಿದೆ. 1,74,653 ಕ್ವಿಂಟಲ್‌ಗಳಷ್ಟು ದಾಸ್ತಾನು ಇದೆ. ರೈತರ ಅಗತ್ಯಕ್ಕೆ ತಕ್ಕಷ್ಟು ಬಿತ್ತನೆ ಬೀಜ ಪೂರೈಕೆ ಮಾಡಲಾಗುತ್ತದೆ ಎಂದು ಕೃಷಿ ಇಲಾಖೆ ನಿರ್ದೇಶಕ ಬಿ.ವೈ.ಶ್ರೀನಿವಾಸ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಅಲ್ಲದೆ, ರಾಜ್ಯದಲ್ಲಿ 26.47 ಲಕ್ಷ ಟನ್ ವಿವಿಧ ರೀತಿಯ ರಸಗೊಬ್ಬರಗಳಿಗೆ ಬೇಡಿಕೆ ಇದ್ದು, ಮೇ ಅಂತ್ಯದವರೆಗೆ 5,67,239 ಟನ್ ರಸಗೊಬ್ಬರ ಸರಬರಾಜಾಗಿದೆ. ಒಟ್ಟು 12,38,600 ಟನ್ ರಸಗೊಬ್ಬರ ದಾಸ್ತಾನು ಇದೆ ಎಂದು ಅವರು ಹೇಳಿದ್ದಾರೆ.

ರೈತರಿಗೆ ಕಣ್ಣೀರು ತರಿಸಿದ ಈರುಳ್ಳಿ ಬೀಜ

• ಜಿ.ಬಿ.ನಾಗರಾಜ್

ಚಿತ್ರದುರ್ಗ: ಬೀಜೋತ್ಪಾದನೆ ಕುಸಿತ ಹಾಗೂ ಪೂರೈಕೆಯಲ್ಲಿ ಆಗುತ್ತಿರುವ ತೊಂದರೆಯಿಂದ ಈರುಳ್ಳಿ ಬಿತ್ತನೆ ಬೀಜದ ಬೆಲೆ ಗಗನಕ್ಕೇರಿದೆ.

ಸಾಮಾನ್ಯವಾಗಿ ಮೇ ಹಾಗೂ ಜೂನ್ ತಿಂಗಳಲ್ಲಿ ಈರುಳ್ಳಿ ಬಿತ್ತನೆ ನಡೆಯುತ್ತದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಈಗಾಗಲೇ ಬಿತ್ತನೆ ಆರಂಭವಾಗಿದೆ. ಕೋವಿಡ್ ನಿಯಂತ್ರಣಕ್ಕೆ ಹೇರಿದ ಲಾಕ್‌ಡೌನ್ ನಡುವೆಯೇ ಬಿತ್ತನೆ ನಡೆಯುತ್ತಿರುವುದು ಹಲವು ಸಮಸ್ಯೆಗಳನ್ನು ಸೃಷ್ಟಿಸಿದೆ.

ಚಿತ್ರದುರ್ಗ, ಚಿಕ್ಕಮಗಳೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ ಸೇರಿ ಹಲವು ಜಿಲ್ಲೆಯಲ್ಲಿ ಈರುಳ್ಳಿ ಪ್ರಮುಖ ಬೆಳೆ. ಮಹಾರಾಷ್ಟ್ರದ ನಾಸಿಕ್, ಪುಣೆಯಿಂದ ಬಿತ್ತನೆ ಬೀಜ ಪೂರೈಕೆ ಆಗುತ್ತದೆ. ಲಾಕ್‌ಡೌನ್ ಇದಕ್ಕೆ ಅಡ್ಡಿಯಾಗಿದೆ. ಗದಗ, ವಿಜಯಪುರ, ಬಾಗಲಕೋಟೆ ಜಿಲ್ಲೆಯಲ್ಲಿಯೂ ಬಿತ್ತನೆ ಬೀಜದ ಉತ್ಪಾದನೆಯಾಗುತ್ತದೆ. ಜನವರಿ ಹಾಗೂ ಫೆಬ್ರುವರಿಯಲ್ಲಿ ಬಿದ್ದ ಅಕಾಲಿಕ ಮಳೆಯು ಬೀಜೋತ್ಪಾದನೆ ಮೇಲೆ ಪರಿಣಾಮ ಬೀರಿದೆ. ಈ ಅವಧಿಯಲ್ಲಿ ದಟ್ಟವಾದ ಮಂಜು ಕಾಣಿಸಿಕೊಂಡ ಪರಿಣಾಮ ಬೀಜದ ಇಳುವರಿ ಕಡಿಮೆಯಾಗಿದೆ.

ಮಹಾರಾಷ್ಟ್ರದಲ್ಲಿ ಮಾರ್ಚ್ ಅಂತ್ಯದಲ್ಲೇ ಮಾರುಕಟ್ಟೆ, ವಾಹನ ಸಂಚಾರದ ನಿರ್ಬಂಧ ವಿಧಿಸಿದ್ದರಿಂದ ಈರುಳ್ಳಿ ಬಿತ್ತನೆ ಬೀಜದ ಸರಬರಾಜಿಗೆ ತೊಡಕುಂಟಾಯಿತು. ಬೇಡಿಕೆಗಿಂತ ಕಡಿಮೆ ಪೂರೈಕೆ ಆಗಿರುವುದರಿಂದ ಬೀಜದ ಬೆಲೆ ಗಗನಮುಖಿಯಾಗಿದೆ. ವರ್ಷದ ಹಿಂದೆ ₹ 2 ಸಾವಿರಕ್ಕೆ ಲಭ್ಯವಾಗುತ್ತಿದ್ದ ಒಂದು ಕೆ.ಜಿ. ಈರುಳ್ಳಿ ಬೀಜದ ದರ ಈಗ ₹ 2,500ರಿಂದ ₹ 3,500ಕ್ಕೆ ಏರಿಕೆಯಾಗಿದೆ.

ರಾಗಿಗೆ ಬೆಂಬಲ ಬೆಲೆಯ ಶ್ರೀರಕ್ಷೆ

ಬೆಂಬಲ ಬೆಲೆ ಯೋಜನೆಯಡಿ ಸರ್ಕಾರ ರಾಗಿ ಖರೀದಿಸುತ್ತಿರುವುದು ಬೆಂಗಳೂರು ಗ್ರಾಮಾಂತರ ಮತ್ತು ಮೈಸೂರು ಜಿಲ್ಲೆಯ ರೈತರ ಪಾಲಿಗೆ ವರದಾನವಾಗಿದೆ. ಬಯಲುಸೀಮೆಯ ಮಳೆಯಾಶ್ರಿತ ಬೆಳೆಯಾದ ರಾಗಿಯ ಕೃಷಿ, ಉಳಿದ ಬೆಳೆಗಳ ಬೇಸಾಯಕ್ಕಿಂತ ವಿಭಿನ್ನ. ಜೊತೆಗೆ, ಹೆಚ್ಚು ಶ್ರಮದಾಯಕವೂ ಹೌದು. ಆದರೆ, ಕಷ್ಟಕಾಲದಲ್ಲಿ ರಾಗಿ ರೈತರ ಕೈಬಿಟ್ಟಿಲ್ಲ.

ಕೃಷಿ ಇಲಾಖೆಯು ರಾಗಿಯ ದೀರ್ಘಾವಧಿ ತಳಿಯಾದ ಎಂ.ಆರ್-1/6 ಬಿತ್ತನೆ ಬೀಜವನ್ನಷ್ಟೇ ಸಹಾಯಧನದಲ್ಲಿ ವಿತರಿಸುತ್ತದೆ. ಆದರೆ, ರೈತರು ಅಧಿಕ ಇಳುವರಿ ನೀಡುವ ಇಂಡಾಫ್‌–5 ಮತ್ತು ಇಂಡಾಫ್‌–9 ತಳಿಯತ್ತ ಹೆಚ್ಚು ಆಸಕ್ತಿ ತೋರುತ್ತಿದ್ದಾರೆ.

ದೀರ್ಘಾವಧಿ ತಳಿಗಳಾದ ಎಂಆರ್–1, ಎಂಆರ್–6, ಕೆಎಂಆರ್–301, ಮಧ್ಯಮಾವಧಿ ತಳಿಗಳಾದ ಜಿಪಿಯು–66, ಎಂಎಲ್–365 ಹಾಗೂ ಅಲ್ಪಾವಧಿಯ ಜಿಪಿಯು–48 ತಳಿಯ ಬೀಜಗಳನ್ನೂ ಖರೀದಿ ಮಾಡುತ್ತಿದ್ದಾರೆ.

ಅದೇ ಹಾಡು, ಅದೇ ರಾಗ

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ಜಿಲ್ಲೆಯಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜಕ್ಕೆ ರೈತರು ಪರದಾಡುವ ಪರಿಸ್ಥಿತಿ ದಶಕದಿಂದ ನಡೆದುಬಂದಿದೆ.

ಜೂನ್ 7ರವರೆಗೆ 'ಪೂರ್ಣ ಲಾಕ್‌ಡೌನ್' ಜಾರಿಯಲ್ಲಿರುವುದರಿಂದ ಮಂಗಳವಾರ, ಗುರುವಾರ, ಶನಿವಾರ ಮಾತ್ರ ಬಿತ್ತನೆ ಬೀಜ ಮತ್ತು ರಸಗೊಬ್ಬರ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ. ಮತ್ತೊಂದೆಡೆ ಬಿತ್ತನೆ ಕಾರ್ಯ ಚುರುಕುಗೊಂಡಿದ್ದು, ಬಿತ್ತನೆ ಬೀಜ ಖರೀದಿಗಾಗಿ ರೈತರು ಬೆಳಗಿನ ಜಾವ 5 ಗಂಟೆಯಿಂದಲೇ ರೈತ ಸಂಪರ್ಕ ಕೇಂದ್ರಗಳ ಮುಂದೆ ಸಾಲಿನಲ್ಲಿ ಕಾದು ನಿಲ್ಲುತ್ತಿದ್ದಾರೆ.

'ರೈತ ಸಂಪರ್ಕ ಕೇಂದ್ರಗಳಲ್ಲಿ ಬೇಕಾದ ಬಿತ್ತನೆ ಬೀಜಗಳು ದೊರೆಯುತ್ತಿಲ್ಲ. ಕೃಷಿ ಅಧಿಕಾರಿಗಳು ಮತ್ತು ರಾಜಕಾರಣಿಗಳು ಖಾಸಗಿ ಕಂಪನಿಗಳ ಜೊತೆ ಶಾಮೀಲಾಗಿ ತಮಗೆ ಬೇಕಾದ ಕಂಪನಿಯ ಬೀಜಗಳನ್ನು ತರಿಸುತ್ತಾರೆ. ಹೀಗಾಗಿ, ಎಕರೆಗೆ 28ರಿಂದ 30 ಕ್ವಿಂಟಲ್ ಇಳುವರಿ ಬರುವ ಮೆಕ್ಕೆಜೋಳದ ಬೀಜಗಳ ಬದಲಿಗೆ, ಎಕರೆಗೆ 18ರಿಂದ 20 ಕ್ವಿಂಟಲ್ ಇಳುವರಿ ಬರುವ ಬೀಜಗಳನ್ನೇ ಬಿತ್ತನೆ ಮಾಡುವಂತಾಗಿದೆ' ಎಂದು ರೈತ ಮುಖಂಡ ಮಾಲತೇಶ ಪೂಜಾರ ಸಮಸ್ಯೆ ತೋಡಿಕೊಂಡರು.

ಗೊಬ್ಬರ ಕೊರತೆಗೆ ಕಾರಣವೇನು?

'ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದ ಗೊಬ್ಬರವನ್ನು ರೈತರು ಬಳಸುವುದರಿಂದ ವರ್ಷದಿಂದ ವರ್ಷಕ್ಕೆ ಗೊಬ್ಬರದ ಬೇಡಿಕೆ ಹೆಚ್ಚುತ್ತಿದೆ' ಎನ್ನುತ್ತಾರೆ ಕೃಷಿ ಅಧಿಕಾರಿಗಳು.

ಆದರೆ, 'ಅಕ್ರಮ ದಾಸ್ತಾನು ದಂಧೆಯಿಂದ ಗೊಬ್ಬರ ಮತ್ತು ಬೀಜದ ಕೊರತೆ ಉಂಟಾಗುತ್ತದೆ. ಕೃಷಿ ಅಧಿಕಾರಿಗಳು ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು ಮತ್ತು ಸಕಾಲದಲ್ಲಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಮತ್ತು ಗೊಬ್ಬರ ಪೂರೈಸಬೇಕು' ಎನ್ನುವುದು ಕೃಷಿಕರ ಒತ್ತಾಯ.

ಬಿತ್ತನೆ ಶೇಂಗಾಬೀಜಕ್ಕೆ ನಿಲ್ಲದ ಪರದಾಟ

ತುಮಕೂರು: ಜಿಲ್ಲೆಯಲ್ಲಿ ಶೇಂಗಾ ಬಿತ್ತನೆ ಆರಂಭವಾಗಿದೆ. ಪಾವಗಡ, ಶಿರಾ, ಮಧುಗಿರಿ, ಕೊರಟಗೆರೆ ತಾಲ್ಲೂಕಿನಲ್ಲಿ ಬಿತ್ತನೆ ಬೀಜಕ್ಕಾಗಿ ರೈತ ಸಂಪರ್ಕ ಕೇಂದ್ರದ ಮುಂದೆ ರೈತರು ಕಾದು ನಿಲ್ಲುವಂತಾಗಿದೆ.

ಸುಮಾರು ಒಂದು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಿದ್ದು, 18 ಸಾವಿರ ಕ್ವಿಂಟಲ್‌ಗೂ ಹೆಚ್ಚು ಬಿತ್ತನೆ ಬೀಜಕ್ಕೆ ಬೇಡಿಕೆ ಇದೆ. ಆದರೆ, ಈವರೆಗೆ 7,958 ಕ್ವಿಂಟಲ್ ದಾಸ್ತಾನು ಮಾಡಲಾಗಿದೆ.

ಆಲೂಗಡ್ಡೆಗೆ ಲಾಕ್‌ಡೌನ್ ಅಂಕುಶ

• ಕೆ.ಎಸ್.ಸುನಿಲ್

ಹಾಸನ: ಅಂಗಮಾರಿ ರೋಗ, ಬೆಲೆ ಕುಸಿತ, ಕಳಪೆ ಬಿತ್ತನೆ ಬೀಜ ಹಾಗೂ ಹವಾಮಾನ ವೈಪರೀತ್ಯದಿಂದ ಜಿಲ್ಲೆಯಲ್ಲಿ ಆಲೂಗಡ್ಡೆ ಬಿತ್ತನೆ ಪ್ರದೇಶ ಕಡಿಮೆಯಾಗುತ್ತಿದೆ. ಈ ನಡುವೆಯೇ ಲಾಕ್‌ಡೌನ್ ಘೋಷಣೆಯಿಂದಾಗಿ ಬಿತ್ತನೆ ಆಲೂಗಡ್ಡೆ ಖರೀದಿಸಲು ರೈತರಿಗೆ ತೊಂದರೆಯಾಗಿದೆ.

ಸೋಮವಾರ, ಬುಧವಾರ, ಶುಕ್ರವಾರ ಮಾತ್ರ ಇಲ್ಲಿನ ಎಪಿಎಂಸಿಯಲ್ಲಿ ಬೆಳಿಗ್ಗೆ 6ರಿಂದ 10 ಗಂಟೆಯೊಳಗೆ ಬಿತ್ತನೆ ಆಲೂಗಡ್ಡೆ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ. ಹಾಸನ ಮಾತ್ರವಲ್ಲದೇ ಚಿಕ್ಕಮಗಳೂರು ಮತ್ತು ಚಾಮರಾಜನಗರ ರೈತರೂ ಬಿತ್ತನೆ ಆಲೂಗಡ್ಡೆ ಖರೀದಿಸುವುದು ಇಲ್ಲಿಯೇ. ಬಿತ್ತನೆ ಬೀಜ ಸಿಗದ ಕಾರಣ ಆಲೂಗಡ್ಡೆ ಬಿತ್ತನೆ ಪ್ರದೇಶ ಕಡಿಮೆಯಾಗಿದೆ. ಈವರೆಗೆ ಶೇ 70ರಷ್ಟು ಬಿತ್ತನೆ ಆಗಬೇಕಿತ್ತು. ಆದರೆ, ಶೇ 20ರಷ್ಟು ಬಿತ್ತನೆಯಾಗಿದೆ.

ತಂಬಾಕು ಕೃಷಿ ಚುರುಕು: ಮೈಸೂರು: ಜಿಲ್ಲೆಯ ಹುಣಸೂರು ಉಪ ವಿಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಂಬಾಕು ಬೆಳೆಯಲಾಗುತ್ತಿದೆ. ಮುಂಗಾರು ಮಳೆ ಶುರುವಾದ ಬೆನ್ನಲ್ಲೇ ಎಲ್ಲಾ ಕಡೆ ತಂಬಾಕು ಸಸಿ ನಾಟಿ ಕಾರ್ಯ ಚುರುಕುಗೊಂಡಿದೆ.

ಹಾಸನ ಜಿಲ್ಲೆಯ ರಾಮನಾಥಪುರ, ಕೊಡಗು ಜಿಲ್ಲೆಯ ಗಡಿಭಾಗದಲ್ಲೂ ತಂಬಾಕು ಬೆಳೆಯಲಾಗುತ್ತದೆ. ಸಸಿ ನಾಟಿಯಿಂದ ಹಿಡಿದು ಗೊಬ್ಬರ, ಔಷಧಿ ಸೇರಿದಂತೆ ಅಗತ್ಯ ಪರಿಕರಗಳನ್ನು ಕೆಲವು ತಂಬಾಕು ಉತ್ಪನ್ನ (ಸಿಗರೇಟ್) ಕಂಪನಿಗಳೇ ಬೆಳೆಗಾರರಿಗೆ ಪೂರೈಸುತ್ತಿವೆ.

ಪೂರಕ ಮಾಹಿತಿ: ಎಚ್.ಎಸ್.ಸಚ್ಚಿತ್, ಮಹೇಶ ಭಗೀರಥ

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 06-6-1996

• **45 ಸದಸ್ಯರ ಪಟೇಲ್ ಸಂಪುಟ ಪ್ರಮಾಣ**

ಬೆಂಗಳೂರು, ಜೂನ್ 5– ಮುಖ್ಯಮಂತ್ರಿ ಜೆ.ಎಚ್. ಪಟೇಲ್ ನೇತೃತ್ವದ ರಾಜ್ಯ ಸಚಿವ ಸಂಪುಟವನ್ನು ವಿಸ್ತರಿಸಲಾಗಿದ್ದು, 24 ಕ್ಯಾಬಿನೆಟ್ ದರ್ಜೆಯ ಸಚಿವರು ಹಾಗೂ 19 ರಾಜ್ಯ ಸಚಿವರು ಇಂದು ವಿಧಾನ ಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಪಟೇಲ್ ಹಾಗೂ ಉಪ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಂಪುಟದ ಗಾತ್ರ ಇದರಿಂದಾಗಿ 45ಕ್ಕೆ ಏರಿದಂತಾಗಿದೆ. ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಅವರು ನೂತನ ಸಚಿವರಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

50 ವರ್ಷಗಳ ಹಿಂದೆ — ಭಾನುವಾರ, 06-6-1971

• **ನಿರಾಶ್ರಿತರ ಹೊಣೆ ಕೇಂದ್ರದ್ದು: ಇಂದಿರಾ**

ಕಲ್ಕತ್ತ, ಜೂ.5– ಪಶ್ಚಿಮ ಬಂಗಾಳದಲ್ಲಿ ಬಾಂಗ್ಲಾ ನಿರಾಶ್ರಿತ ಶಿಬಿರಗಳನ್ನು ನಿರ್ವಹಿಸುವ ಭಾರವನ್ನು ರಾಜ್ಯ ಸರ್ಕಾರಕ್ಕೆ ಆದಷ್ಟು ತಗ್ಗಿಸಿ ನಿರಾಶ್ರಿತರವನ್ನು ಬೇರೆ ಬೇರೆ ಕಡೆಗೆ ಕಳುಹಿಸಬೇಕೆಂಬ ಪಶ್ಚಿಮ ಬಂಗಾಳ ಸರ್ಕಾರದ ಬೇಡಿಕೆಗೆ ಪ್ರಧಾನಿ ಇಂದಿರಾ ಗಾಂಧಿಯವರು ಇಂದು ಒಪ್ಪಿಗೆಯಿತ್ತರು.

ನಿರಾಶ್ರಿತರಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಬಗ್ಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಅಜಯ್ ಮುಖರ್ಜಿ ಹಾಗೂ ಅವರ ಸಹೋದ್ಯೋಗಿಗಳ ಸಂಗಡ ಪ್ರಧಾನಿಯವರು ಗಹನವಾಗಿ ಚರ್ಚಿಸಿದ ನಂತರ ಈ ನಿರ್ಧಾರ ಹೊರಬಂದಿತು.

ದಿನ ಭವಿಷ್ಯ

ಭಾನುವಾರ 06 ಜೂನ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ರೋಹಿಣಿ ಏಕಾದಶೀ ಗಂ. 3-11 (ಬೆ. 7-17) ಭಾನುವಾರ ನಿತ್ಯ ನಕ್ಷತ ಅಶ್ವಿನಿ ಗಂ. 53-7 (ರಾ. 3-16) ಶೋಭನ ನಾಮ ಯೋಗ ಗಂ. 59-12 ಬಾಲವ ಕರಣ ಗಂ. 3-11 ವಿಷ ಗಂ. 42-29 ಅಮೃತ ಗಂ. 33-43 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 5-56 ಸೂರ್ಯಾಸ್ತ: 6-40 ಅದೃಷ್ಟ ಸಂಖ್ಯೆ 2 6

ಮೇಷ: ಬಹುದಿನಗಳಿಂದ ನಿರೀಕ್ಷಿಸಿದ ಹಣಕಾಸಿನ ಅನುಕೂಲ ಒದಗಿ ಬರಲಿದೆ. ಕೆಲಸ ಕಾರ್ಯಗಳೆಲ್ಲವೂ ಸುಗಮವಾಗಿ ನಡೆಯುವುದು. ರೈತಾಪಿ ವರ್ಗದವರಿಗೆ ದಣಿವರಿಯದ ಕೆಲಸ ಕಾರ್ಯಗಳು ಇರಲಿವೆ

ವೃಷಭ: ಸಾಮಾಜಿಕ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಿರಿ. ನಿಮ್ಮ ಕೆಲಸ ಕಾರ್ಯಗಳನ್ನು ಇತರರು ಮೆಚ್ಚಿಕೊಳ್ಳುವರು. ಆಶ್ಚರ್ಯಕರ ಸಂಗತಿಯೊಂದು ಘಟಿಸಲಿದೆ. ಹಿರಿಯರ ಆರೋಗ್ಯದಲ್ಲಿ ಸುಧಾರಣೆ.

ಮಿಥುನ: ಎಲ್ಲರೀತಿಯ ಅನುಕೂಲಗಳು ದೊರಕಲಿದೆ. ಧಾರ್ಮಿಕ ಕೆಲಸ ಕಾರ್ಯಗಳೆಡೆಗೆ ನಿಮ್ಮ ಮನಸ್ಸನ್ನು ಕೇಂದ್ರೀಕರಿಸಲಿದ್ದೀರಿ. ಕೌಟುಂಬಿಕ ಸಮಸ್ಯೆ-ಗಳೆಲ್ಲವೂ ದೂರವಾಗಿ ಸುಖ ಸಂಸಾರದ ಸವಿ ನಿಮ್ಮದಾಗಲಿದೆ.

ಕರ್ಕಾಟಕ: ನಿಮ್ಮ ಪ್ರಯತ್ನದೊಂದಿಗೆ ತಜ್ಞರ ಸಹಾಯವೂ ದೊರಕುವು-ದರಿಂದಾಗಿ ಕೆಲಸ ಕಾರ್ಯಗಳು ಚುರುಕುಗೊಳ್ಳಲಿವೆ. ಕಾರ್ಯನಿರ್ವಹಣೆ ವಿಷಯದಲ್ಲಿ ದೃಢನಿರ್ಧಾರವನ್ನು ತಳೆಯಲಿದ್ದೀರಿ.

ಸಿಂಹ: ಮನೆಯ ಕಾರ್ಯಗಳು ಭರದಿಂದ ಸಾಗುವುದರ ಜೊತೆಗೆ ಪೂರ್ಣಗೊಳ್ಳಲಿದೆ. ಮಾನಸಿಕ ಚಿಂತೆಗಳು ದೂರವಾಗಿ ಆತ್ಮವಿಶ್ವಾಸವನ್ನು ಹೊಂದುವಿರಿ. ಮನರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ

ಕನ್ಯಾ: ಬೇರೆಯವರ ಸಲುವಾಗಿ ವಿಶೇಷ ಶ್ರಮ ವಹಿಸಿ ಯಶಸ್ಸನ್ನು ಕಾಣುವಿರಿ. ಅನುನಯದ ನಡೆಯಿಂದಾಗಿ ಕಾರ್ಯಸಿದ್ಧಿಯನ್ನು ಹೊಂದುವಿರಿ. ಹೊಸ ವಿಷಯದ ಬಗೆಗೆ ಆಪ್ತರೊಡನೆ ಚಿಂತನೆ ನಡೆಸುವಿರಿ

ತುಲಾ: ಕುಟುಂಬ ಪ್ರವಾಸವೊಂದನ್ನು ಗೊತ್ತು ಮಾಡುವ ಸಾಧ್ಯತೆ ಕಂಡುಬರುತ್ತಿದೆ. ಮಕ್ಕಳ ವಿದ್ಯಾಭ್ಯಾಸದ ಬಗೆಗಿನ ಸಮಸ್ಯೆಗಳು ಬಗೆ ಹರಿದು ಸಂತಸ ಮೂಡಲಿದೆ.

ವೃಶ್ಚಿಕ: ವಿವಾಹ ಸಂಬಂಧಗಳ ಕುರಿತಂತೆ ದೃಢ ನಿರ್ಧಾರವನ್ನು ತೆಗೆದುಕೊಳ್ಳುವ ಸಾಧ್ಯತೆ ಇದೆ. ಹಿರಿಯರ ವಿರೋಧವನ್ನು ಲೆಕ್ಕಿಸದೆ ಕಾರ್ಯವೊಂದನ್ನು ಕೈಗೆತ್ತಿಕೊಳ್ಳುವಿರಿ.

ಧನು: ಸಂಬಂಧಿಕರಿಂದ ನಿಮ್ಮ ದರ್ಪದ ನಡೆಗಳಿಗೆ ಕಡಿವಾಣ ಬೀಳುವ ಸಾಧ್ಯತೆ. ಕನಸಿನ ಲೋಕದಿಂದ ಹೊರಬಂದು ವ್ಯವಹರಿಸುವುದು ಉತ್ತಮ. ಸಂಗಾತಿಯ ಮಾತುಗಳಿಗೆ ಮನ್ನಣೆ ನೀಡಿದರೆ, ನೆಮ್ಮದಿ ನಿಮ್ಮದಾಗಲಿದೆ

ಮಕರ: ಯೋಜನೆಯೊಂದರ ಪೂರ್ಣತೆಗಾಗಿ ನಿಮ್ಮ ಸಂಪೂರ್ಣ ಶಕ್ತಿ ಯುಕ್ತಿಗಳನ್ನು ವ್ಯಯಿಸುವರಿ. ಅನ್ಯರ ಸಹಕಾರವೂ ದೊರಕಲಿದೆ. ಕಠಿಣ ಕಾರ್ಯವೊಂದನ್ನು ಸಾಧನೆ ಮಾಡಿ ಸೈ ಎನಿಸಿಕೊಳ್ಳುವಿರಿ.

ಕುಂಭ: ಆಸ್ತಿ ಖರೀದಿ ವಿಚಾರವಾಗಿ ಮಾತುಕತೆಯಲ್ಲಿ ಭಾಗಿಯಾಗುವ ಲಕ್ಷಣಗಳು ಕಾಣುತ್ತಿವೆ. ರಾಜಕಾರಣಿಗಳಿಗೆ/ ಸಾಮಾಜಿಕ ಕಾರ್ಯಕರ್ತರಿಗೆ ಹೆಚ್ಚಿನ ಜವಾಬ್ದಾರಿಯ ಸ್ಥಾನ ಲಭ್ಯವಾಗಲಿದೆ.

ಮೀನ: ಹೊಸ ಯೋಜನೆಯೊಂದಕ್ಕೆ ಅಸ್ತಿಭಾರ ಹಾಕುವ ಸಾಧ್ಯತೆ ಕಂಡು ಬರುತ್ತಿದೆ. ದೊಡ್ಡಪ್ರಮಾಣದ ವ್ಯವಹಾರ ನಡೆಸುವ ಬಗ್ಗೆ ಪಾಲುದಾರರೊಂದಿಗೆ ಮಾತುಕತೆ ನಡೆಸುವಿರಿ

ನಿಮ್ಮ ಜನ್ಮದಿನ 06-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಹಿರಿಯರ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸ ಬೇಕಾದೀತು. ಪಿತ್ರಾರ್ಜಿತ ಆಸ್ತಿಗಳು ನಿಮ್ಮ ಕೈ ಸೇರುವ ಸಾಧ್ಯತೆ ಕಂಡುಬರುತ್ತಿದೆ. ನಿಮ್ಮ ಜೀವನದ ಕನಸೊಂದನ್ನು ನನಸು ಮಾಡುವ ಸಲುವಾಗಿ ಕಾರ್ಯತತ್ಪರರಾಗುವಿರಿ. ಋಣ ಮುಕ್ತರಾಗಿ ನಿರಾಳರಾಗುವ ಸಾಧ್ಯತೆ ಗೋಚರಿಸುತ್ತಿದೆ.

ಪದಬಂಧ 4619 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೀಗೆ ನೆನಪಿನಲ್ಲಿಟ್ಟುಕೊಳ್ಳುವುದು! (4)
3.ಗಾಳಿಪಟದ ಬುಡಕ್ಕೆ ಕಟ್ಟುವ ಉದ್ದನೆಯ ಪಟ್ಟಿ (4)
5.ಗುಣವಂತ ಹಿಡಿದಿರುವ ದೊಡ್ಡ ಮಡಿಕೆ (3)
6.ತೀರದ ಹತ್ತಿರ ಸಾಗುವಾಗ ಕವಿದ ಅಂಧಕಾರ (3)
8.ಉತ್ತರದವರ ಸ್ನಾನ (3)
9.ಶಕುನದ ಹತ್ತಿರವಿರುವ ಗಿಳಿ (2)
10.ಸಣ್ಣ ಸಣ್ಣ ಕಲ್ಲಿನ ಚೂರು (2)
11.ಕಳವಳದಿಂದ ತಿಂದಿರುವ ತುತ್ತು (3)
12.ಶ್ರೀಕೃಷ್ಣನ ಸ್ನೇಹಿತ (3)
14.ಲಗ್ನಕ್ಕೊಂದು ಪರ್ಯಾಯ ಪದ (3)
16.ವರನಿಗೆ ಕಾಣಿಸಿದ ಕೊಳ (4)
17.ನಗರದಲ್ಲಿರುವ ಸುಸಂಸ್ಕೃತ (4)

ಮೇಲಿಂದ ಕೆಳಕ್ಕೆ
1.ದೇವತೆ ಇಲ್ಲಿಯೇ ಪ್ರತ್ಯಕ್ಷ! (3)
2.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ! (2)
3.ಬಾದಾರಾಯಣ ಕಾಲದ ಶರ (2)
4.ಈತ ಸಿಟ್ಟಿನ ವ್ಯಕ್ತಿ (3)
7.ರುಚಿಕರವಾದ ಭೋಜನ (5)
8.ಹೆಚ್ಚು ಪ್ರಕಾಶಮಾನವಾಗಿ ಹೊಳೆ (5)
11.ದೇವಾಲಯದ ಗೋಪುರದ ತುದಿ (3)
13.ದಶಕದಿಂದಲೂ ಕಾಡುತ್ತಿರುವ ಸೊಳ್ಳೆ (3)
14.ಮಧುರ ಫಲ ನೀಡುವ ವೃಕ್ಷ (2)
15.ನಾವೆಲ್ಲರೂ ಕುಳಿತ ದೋಣಿ ಉಲ್ಟಾ ಆಗಿದೆಯಲ್ಲಾ! (2)

1			2	■	3			4
	■	■	5			■	■	
6		7	■	■	■	8		
■	■		■	■	■		■	■
■	9		■	■	■	10		■
■	■		■	■	■		■	■
11			■	■	■	12		13
	■	■	14		15	■	■	
16				■	17			

4618ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪುರದ್ವಾರ 3.ಬಾಹುಬಲ 5.ಥಳಕು 7.ನೀರು 8.ಮಿತ 11.ಗರ್ಣಸ 13.ಜಾಣೆ 14.ಬಳಗ 16.ಕರೆಯೋಲೆ 17.ರತ್ನಾಕರ

ಮೇಲಿಂದ ಕೆಳಕ್ಕೆ: 1.ಪುರೋಗಾಮಿ 2.ರಥ 3.ಬಾಕು 4.ಲಷ್ಕರು 6.ಳಬಸಂ 7.ನೀತಿಮಾರ್ಗ 9.ತಪಾಸಣೆ 10.ಕಪಾಳ 12.ಸಡಗರ 13.ಜಾತಕ 14.ಬಲೆ 16.ಗರ

ಸುಡೊಕು 5005

		7		6			1	2
	8		5		2	3		
6		2		4		7		8
	7				9			
5		9		1			3	7
	6		7					4
2		3	8		4	6		
		6		2				9
8	1		6		7	4		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5004 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೆಹಲಿ, ಮಹಾರಾಷ್ಟ್ರ: ಹಂತಹಂತವಾಗಿ ತೆರವು

ಒಂದನೇ ಪುಟದಿಂದ

ಇದರ ಆಧಾರದಲ್ಲಿ ಲಾಕ್‌ಡೌನ್‌ನ ನಿರ್ಬಂಧಗಳನ್ನು ಸಡಿಲಿಸಲಾಗುತ್ತದೆ. ಮುಂಬೈ ನಗರವು 3ನೇ ಹಂತದ ವ್ಯಾಪ್ತಿಯಲ್ಲಿ ಬರಲಿದ್ದು ಇಲ್ಲಿ ನಿರ್ಬಂಧಗಳನ್ನು ಭಾಗಶಃ ತೆರವುಗೊಳಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ದೆಹಲಿಯಲ್ಲಿ ಶೇ 50ರಷ್ಟು ಪ್ರಯಾಣಿಕರೊಂದಿಗೆ ಮೆಟ್ರೊ ರೈಲು ಸಂಚಾರ ಮಾಡಲಿವೆ. ಸರಿ–ಬೆಸ ಸಂಖ್ಯೆಯ ಆಧಾರದಲ್ಲಿ ಬೆಳಿಗ್ಗೆ 10ರಿಂದ ರಾತ್ರಿ 8ರ ವರೆಗೆ ಮಾರುಕಟ್ಟೆಗಳು ಮತ್ತು ಮಾಲ್‌ಗಳು ತೆರೆಯಲು ಅನುಮತಿ ನೀಡಲಾಗಿದೆ ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ತಿಳಿಸಿದರು.

ಶೇ 50ರಷ್ಟು ಹಾಜರಾತಿಯೊಂದಿಗೆ ಸರ್ಕಾರಿ ಮತ್ತು ಖಾಸಗಿ ಕಚೇರಿಗಳನ್ನು ತೆರೆಯಲು ಅವಕಾಶ ನೀಡಲಾಗುವುದು ಎಂದೂ ಅವರು ತಿಳಿಸಿದರು.

‘ಮನೆ ಬಾಗಿಲಿಗೆ ಪಡಿತರ ಯೋಜನೆಗೆ ಕೇಂದ್ರ ತಡೆ’

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಜನರ ಮನೆ ಬಾಗಿಲಿಗೇ ಪಡಿತರ ತಲುಪಿಸಲು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸರ್ಕಾರ ರೂಪಿಸಿದ್ದ ಯೋಜನೆಯನ್ನು ಕೇಂದ್ರ ಸರ್ಕಾರ ತಡೆ ಹಿಡಿದಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ.

‘ಯೋಜನೆಯನ್ನು ಜಾರಿಗೊಳಿಸುವ ಮುನ್ನ, ಕೇಂದ್ರದಿಂದ ಅನುಮೋದನೆ ಪಡೆದಿಲ್ಲ ಎಂಬ ಕಾರಣ ನೀಡಿ ಇಂಥ ಕ್ರಮ ಕೈಗೊಳ್ಳಲಾಗಿದೆ’ ಎಂದು ತಿಳಿಸಿವೆ.

ಮಹತ್ವಾಕಾಂಕ್ಷೆಯ ಈ ಯೋಜನೆಗೆ ಮುಂದಿನ ವಾರ ಚಾಲನೆ ನೀಡಲು ದೆಹಲಿ ಸರ್ಕಾರ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿತ್ತು ಎಂದು ಇವೇ ಮೂಲಗಳು ತಿಳಿಸಿವೆ.

ಉಪರಾಷ್ಟ್ರಪತಿ, ಆರ್‌ಎಸ್‌ಎಸ್ ನಾಯಕರ ಖಾತೆ ನಿಷ್ಕ್ರಿಯವಾಗಿದ್ದವು ಎಂಬ ಕಾರಣ ಕೊಟ್ಟ ಸಂಸ್ಥೆ

ಬ್ಲೂ ಟಿಕ್ ಮರುಸ್ಥಾಪಿಸಿದ ಟ್ವಿಟರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಸುರೇಶ್ ಸೋನಿ ಮೊದಲಾದವರ ವೈಯಕ್ತಿಕ ಟ್ವಿಟರ್ ಖಾತೆಗೆ ಇದ್ದ ‘ವೆರಿಫೈಯ್ಡ್ ಬ್ಲೂ ಟಿಕ್’ ಮಾರ್ಕ್ ಅನ್ನು ಶನಿವಾರ ಬೆಳಿಗ್ಗೆ ತೆಗೆದಿದ್ದ ಸಂಸ್ಥೆ, ಸ್ವಲ್ಪ ಸಮಯದ ಬಳಿಕ ಅದನ್ನು ಮರುಸ್ಥಾಪಿಸಿದೆ.

‘@MVenkaiahNaidu ಹೆಸರಿನ ಖಾತೆಯನ್ನು ವೆಂಕಯ್ಯ ನಾಯ್ಡು ಅವರು ಬಹಳ ದಿನಗಳಿಂದ ಬಳಸದ ಕಾರಣ, ನೀಲಿ ಬ್ಯಾಡ್ಜ್ ತಾನಾಗಿಯೇ ತೆರವುಗೊಂಡಿದೆ. ನಿಷ್ಕ್ರಿಯ ಖಾತೆಗಳನ್ನು ಗುರುತಿಸಲು ಅಲ್ಗಾರಿದಮ್ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ’ ಎಂದು ಟ್ವಿಟರ್ ತಿಳಿಸಿದೆ.

ಬ್ಲೂಟಿಕ್ ತೆಗೆದಿರುವ ಮಾಹಿತಿಯನ್ನು ಉಪರಾಷ್ಟ್ರಪತಿ ಕಚೇರಿಯು ಟ್ವಿಟರ್ ಸಂಸ್ಥೆಯ ಗಮನಕ್ಕೆ ತಂದ ಬಳಿಕ, ಕೆಲವು ಗಂಟೆಗಳಲ್ಲಿ ಅದನ್ನು ಸರಿಪಡಿಸಲಾಯಿತು. ಖಾತೆ ನಿಷ್ಕ್ರಿಯವಾಗಿವೆ ಎಂಬ ಕಾರಣ ನೀಡಿ ಆರ್‌ಎಸ್‌ಎಸ್ ನಾಯಕರ ಖಾತೆಗಳಿಂದ ತೆಗೆದಿದ್ದ ನೀಲಿ ಟಿಕ್ ಮಾರ್ಕ್ ಅನ್ನೂ ಮರುಸ್ಥಾಪಿಸಲಾಯಿತು.

‘ಟ್ವಿಟರ್ ಇಂಡಿಯಾ ಸಂಸ್ಥೆಯು ಆರ್‌ಎಸ್‌ಎಸ್ ಪದಾಧಿಕಾರಿಗಳ ಟ್ವಿಟರ್ ಹ್ಯಾಂಡಲ್‌ಗಳಿಂದ ನೀಲಿ ಗುರುತು ತೆಗೆದುಹಾಕಿದೆ. ನಾವು ಸಂಸ್ಥೆಯನ್ನು ಸಂಪರ್ಕಿಸಿದರೆ ಯಾರೂ ಪ್ರತಿಕ್ರಿಯಿಸುತ್ತಿಲ್ಲ. ಇದು ವಿಚಿತ್ರ. ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರೊಬ್ಬರಿಗೇ ಹೀಗಾಗಿಲ್ಲ.

ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರ ವೈಯಕ್ತಿಕ ಟ್ವಿಟರ್ ಖಾತೆಯ ಚಿತ್ರ

ಈ ಡಿಜಿಟಲ್ ಸಾಮ್ರಾಜ್ಯಶಾಹಿಯನ್ನು ಸಹಿಸಲಾಗುವುದಿಲ್ಲ’ ಎಂದು ದೆಹಲಿ ಆರ್‌ಎಸ್‌ಎಸ್ ನಾಯಕ ರಾಜೀವ್ ತುಲಿ ಹೇಳಿದ್ದಾರೆ.

ಆರ್‌ಎಸ್‌ಎಸ್ ಜಂಟಿ ಕಾರ್ಯದರ್ಶಿಗಳಾದ ಕೃಷ್ಣ ಗೋಪಾಲ್, ಅರುಣ್ ಕುಮಾರ್ ಹಾಗೂ ಸುರೇಶ್ ಭೈಯಾಜಿ ಜೋಶಿ ಅವರ ಟ್ವಿಟರ್ ಖಾತೆಗಳಿಂದಲೂ ಬ್ಯಾಡ್ಜ್ ತೆರವುಗೊಂಡಿತ್ತು. ಭಾಗವತ್ ಮತ್ತು ಜೋಶಿ ಅವರು 2019ರ ಮೇ ತಿಂಗಳಲ್ಲಿ ಖಾತೆ ಆರಂಭಿಸಿದ ದಿನದಿಂದಲೂ ಒಂದೇ ಒಂದು ಟ್ವೀಟ್ ಮಾಡಿಲ್ಲ. ಆದರೆ ಕೃಷ್ಣ ಗೋಪಾಲ್, ಅರುಣ್ ಕುಮಾರ್ ಅವರು ಆರ್‌ಎಸ್‌ಎಸ್‌ನ ಅಧಿಕೃತ ಟ್ವಿಟರ್ ಖಾತೆಯ ಟ್ವೀಟ್‌ಗಳನ್ನು ಸಾಕಷ್ಟು ಬಾರಿ ರಿಟ್ವೀಟ್ ಮಾಡಿದ್ದಾರೆ.

ನಾಯ್ಡು ಅವರು ತಮ್ಮ ವೈಯಕ್ತಿಕ ಟ್ವಿಟರ್ ಖಾತೆಯ ಮೂಲಕ ಕಳೆದ ವರ್ಷದ ಜುಲೈ 23ರಂದು ಕೊನೆಯ ಬಾರಿ ಟ್ವೀಟ್ ಮಾಡಿದ್ದರು.

ದೇಶದ ಗಣ್ಯರು, ಜನಪ್ರಿಯ ವ್ಯಕ್ತಿಗಳು, ಸಂಸ್ಥೆಗಳ ಖಾತೆಗಳಿಗೆ ಬ್ಲೂ ಟಿಕ್ ಬ್ಯಾಡ್ಜ್ ನೀಡುವ ಪರಿಪಾಟವನ್ನು ಟ್ವಿಟರ್ 2009ರಿಂದ ಅನುಸರಿಸುತ್ತಿದೆ. ಕಳೆದ ಆರು ತಿಂಗಳಿನಿಂದ ಖಾತೆ ಸಕ್ರಿಯವಾಗಿರಬೇಕು ಎಂಬ ನಿಯಮ ರೂಪಿಸಿದೆ.

ಟ್ವಿಟರ್‌ಗೆ ಅಂತಿಮ ನೋಟಿಸ್ ನೀಡಿದ ಕೇಂದ್ರ ಸರ್ಕಾರ

ನವದೆಹಲಿ: ಹೊಸ ಐ.ಟಿ ನಿಯಮಗಳನ್ನು ತಕ್ಷಣವೇ ಪಾಲಿಸುವಂತೆ ಟ್ವಿಟರ್ ಸಂಸ್ಥೆಗೆ ತಾಕೀತು ಮಾಡಿರುವ ಕೇಂದ್ರ ಸರ್ಕಾರ, ಶನಿವಾರ ಕೊನೆಯ ನೋಟಿಸ್ ನೀಡಿದೆ.

ಮಾನದಂಡಗಳನ್ನು ಪಾಲಿಸುವಲ್ಲಿ ವಿಫಲವಾದರೆ, ಸಾಮಾಜಿಕ ಜಾತಲಾಣ ವೇದಿಕೆಯು ಐ.ಟಿ. ಕಾಯ್ದೆಯಡಿ ಹೊಣೆಗಾರಿಕೆಯಿಂದ ಸಿಗುವ ವಿನಾಯಿತಿಯನ್ನು ಕಳೆದುಕೊಳ್ಳಲಿದೆ ಎಂದು ಎಚ್ಚರಿಸಿದೆ.

ನಿಯಮಗಳನ್ನು ಅನುಸರಿಸಲು ಟ್ವಿಟರ್ ನಿರಾಕರಿಸಿರುವುದು ಅದರ ಬದ್ಧತೆಯ ಕೊರತೆಯನ್ನು ತೋರಿಸುತ್ತದೆ ಎಂದು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಹೇಳಿದೆ.

‘ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಭಾರತದಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ ಟ್ವಿಟರ್ ಸಂಸ್ಥೆಯು ಜನರ ಸಮಸ್ಯೆಗಳನ್ನು ಪರಿಹರಿಸುವ ವ್ಯವಸ್ಥೆಯನ್ನು ರೂಪಿಸಲು ನಿರಾಕರಿಸಿದೆ ಎಂಬುದನ್ನು ನಂಬಲಾಗುತ್ತಿಲ್ಲ’ ಎಂದು ಸಚಿವಾಲಯ ಹೇಳಿದೆ.

2021ರ ಮೇ 26ರಿಂದ ಜಾರಿಗೆ ಬಂದಿರುವ ಹೊಸ ನಿಯಮಗಳನ್ನು ಪಾಲಿಸದಿದ್ದರೆ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಆದಾಗ್ಯೂ, ನಿಯಮಗಳನ್ನು ಅನುಸರಿಸಲು ಸಂಸ್ಥೆಗೆ ಕೊನೆಯ ಅವಕಾಶ ನೀಡಲಾಗಿದೆ ಎಂದು ತಿಳಿಸಿದೆ.

ನಿಯಮಗಳ ಪಾಲನೆಗೆ ಯಾವುದೇ ಗಡುವನ್ನು ಸರ್ಕಾರ ನೀಡಿಲ್ಲ.

₹ 3.5 ಕೋಟಿ ‘ಲೈಫ್‌ಸ್ಟೈಲ್’ ವಂಚನೆ

ಒಂದನೇ ಪುಟದಿಂದ

‘ಸಮಯ ಸಿಕ್ಕಾಗಲೆಲ್ಲ ಅರ್ಧ ಗಂಟೆ ಜಾಹೀರಾತು ನೋಡಿದರೆ, ದಿನಕ್ಕೆ ₹ 240 ಸಿಗುತ್ತದೆ ಎಂಬುದಾಗಿಯೂ ಆರೋಪಿ ಹೇಳುತ್ತಿದ್ದ’ ಎಂದೂ ಅಧಿಕಾರಿ ಹೇಳಿದರು.

‘ನಿತ್ಯವೂ ಜಾಹೀರಾತು ವಿಡಿಯೊ ನೋಡಿದರೆ, ಪ್ರತಿ ತಿಂಗಳು ₹ 7,200ರಿಂದ ₹ 86,400ರವರೆಗೂ ಹಣ ಸಂಪಾದಿಸಹುದು. ಹಣವೂ ಆನ್‌ಲೈನ್ ಮೂಲಕವೇ ಖಾತೆಗೆ ಜಮೆ ಆಗುವುದೆಂದು ಆರೋಪಿ ಹೇಳುತ್ತಿದ್ದ. ಆತನ ಮಾತು ನಂಬಿದ್ದ 4 ಲಕ್ಷ ಮಂದಿ ಸದಸ್ಯತ್ವ ಪಡೆದಿದ್ದರು.’

‘ಆರು ತಿಂಗಳಿನಲ್ಲೇ ₹ 4 ಕೋಟಿಗೂ ಹೆಚ್ಚು ಹಣ ಸಂಗ್ರಹಿಸಿದ್ದ ಆರೋಪಿ, ಅದರಲ್ಲಿ ₹3.50 ಕೋಟಿಯನ್ನು ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಿದ್ದರು. ಹಣದ ಸಮೇತ ಖಾತೆಗಳನ್ನು ಜಪ್ತಿ ಮಾಡಲಾಗಿದೆ. ಉಳಿದ ಹಣವನ್ನು ಬೇರೆಗೆ ಹೂಡಿಕೆ ಮಾಡಿರುವುದಾಗಿ ಆರೋಪಿ ಹೇಳುತ್ತಿದ್ದಾರೆ’ ಎಂದೂ ಅಧಿಕಾರಿ ಹೇಳಿದರು.

‘ವಂಚನೆ ಉದ್ದೇಶದಿಂದಲೇ ಆರೋಪಿ ಕಂಪನಿ ತೆರೆದಿರುವುದು ಗೊತ್ತಾಗುತ್ತಿದೆ. ಇನ್ನೊಂದು ಮೂರು ತಿಂಗಳು ಹಣ ಸಂಗ್ರಹಿಸಿ, ಕಂಪನಿ ಕಚೇರಿಗೆ ಬೀಗ ಹಾಕಿಕೊಂಡು ನಗರದಿಂದ ಪರಾರಿಯಾಗಲು ಆರೋಪಿ ಸಂಚು ರೂಪಿಸಿದ್ದ ಮಾಹಿತಿಯೂ ಸಿಕ್ಕಿದೆ’ ಎಂದು ಅಧಿಕಾರಿ ತಿಳಿಸಿದರು.

ಅತ್ಯಾಚಾರ ಆರೋಪ: ಕಿರುತೆರೆ ನಟ ಪರ್ಲ್ ಪುರಿ ಬಂಧನ

ಮುಂಬೈ: ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಕಿರುತೆರೆ ನಟ ಪರ್ಲ್ ಪುರಿ ಅವರನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ.

ಶುಕ್ರವಾರ ರಾತ್ರಿ ಅಂಬೋಲಿ ಪೊಲೀಸರ ನೆರವಿನೊಂದಿಗೆ ಮೀರಾ ಭಯಾಂದರ್ ವಸೈ ವಿರಾರ್‌ಅ ಪೊಲೀಸರು ನಟನನ್ನು ಬಂಧಿಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ನಾಗಿನ್ 3, ಬ್ರಹ್ಮರಾಕ್ಷಸ್ 2 ಧಾರಾವಾಹಿಗಳ ಮೂಲಕ ಪರ್ಲ್ ಪುರಿ ಹೆಸರುವಾಸಿಯಾಗಿದ್ದರು.

ನಟನ ವಿರುದ್ಧ ಸಂತ್ರಸ್ತ ಬಾಲಕಿ ಮತ್ತು ಆಕೆಯ ಕುಟುಂಬ ಸದಸ್ಯರು ದೂರು ದಾಖಲಿಸಿರುವುದಾಗಿ ಪೊಲೀಸರು ಹೇಳಿದ್ದಾರೆ. ದೂರು ಆಧರಿಸಿ ವಸೈ ಪ್ರದೇಶದ ವಾಲಿವ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ನಟನ ವಿರುದ್ಧ ಐಪಿಸಿ ಸೆಕ್ಷನ್ 376(ಅತ್ಯಾಚಾರ) ಮತ್ತು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿರುವುದಾಗಿ ಪೊಲೀಸರು ಹೇಳಿದ್ದಾರೆ

ರಾಜ್ಯದಲ್ಲಿ 1,784 ಮಂದಿಗೆ ಕಪ್ಪು ಶಿಲೀಂಧ್ರ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಈವರೆಗೆ 1,784 ಕಪ್ಪು ಶಿಲೀಂಧ್ರ ಪ್ರಕರಣಗಳು ವರದಿಯಾಗಿವೆ. ಈ ಸೋಂಕಿಗೆ ಒಳಗಾದವರಲ್ಲಿ 111 ಮಂದಿ ಮೃತಪಟ್ಟಿದ್ದಾರೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಇಲ್ಲಿನ ಸರ್ ಸಿ.ವಿ. ರಾಮನ್ ಜನರಲ್ ಆಸ್ಪತ್ರೆ ಹಾಗೂ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಗೆ ಶನಿವಾರ ಭೇಟಿ ನೀಡಿ ಪರಿಶೀಲಿಸಿದ ಅವರು, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ‘ಕಪ್ಪು ಶಿಲೀಂಧ್ರ ಸೋಂಕಿನ ಮಾಹಿತಿಯನ್ನು ಜಿಲ್ಲಾವಾರು ಕಲೆಹಾಕಲಾಗಿದೆ. ಸದ್ಯ 1,564 ಸೋಂಕಿತರಿಗೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕಾಯಿಲೆಗೆ ಒಳಗಾದವರಲ್ಲಿ ಈವರೆಗೆ 62 ಮಂದಿ ಗುಣಮುಖರಾಗಿದ್ದಾರೆ. ಇದಕ್ಕೆ ಬೇಕಾದ ಔಷಧಿ ಲಭ್ಯ ಇದೆ’ ಎಂದರು.

ಇದರ ಈ ಚಿಕಿತ್ಸೆಗೆ ‘ಲಿಪೋಸೋಮಲ್ ಆ್ಯಂಫೊಟೆರಿಸಿನ್’ ಔಷಧ ಬೇಕಾಗುತ್ತದೆ. ಕೇಂದ್ರ ಸರ್ಕಾರವು ಈ ಔಷಧದ 9,750 ಶೀಸೆಗಳನ್ನು (ವಯಲ್) ರಾಜ್ಯಕ್ಕೆ ಹಂಚಿಕೆ ಮಾಡಿದೆ. ಇದರಲ್ಲಿ 8,860 ಶೀಸೆಗಳು ಶುಕ್ರವಾರ ಬಂದಿವೆ. ಒಟ್ಟು 18,650 ಶೀಸೆಗಳು ರಾಜ್ಯಕ್ಕೆ ದೊರೆತಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ 8,860 ಶೀಸೆಗಳನ್ನು ಬಳಸಲಾಗಿದೆ. ಖಾಸಗಿ ಆಸ್ಪತ್ರೆಗಳಿಗೆ 9,740 ಶೀಸೆಗಳನ್ನು ನೀಡಲಾಗಿದೆ’ ಎಂದು ಮಾಹಿತಿ ನೀಡಿದರು.

ಈ ತಿಂಗಳು 75 ಲಕ್ಷ ಜನರಿಗೆ ಲಸಿಕೆ: ‘ಈ ತಿಂಗಳು 70 ಲಕ್ಷದಿಂದ 75 ಲಕ್ಷ ಜನರಿಗೆ ಕೋವಿಡ್ ಲಸಿಕೆ ಹಾಕಲಾಗುವುದು. ರಾಜ್ಯದಲ್ಲಿ ಈವರೆಗೆ ಒಂದೂವರೆ ಕೋಟಿ ಜನರಿಗೆ ಲಸಿಕೆ ನೀಡಲಾಗಿದೆ. ಜೂನ್ ಅಂತ್ಯಕ್ಕೆ ರಾಜ್ಯದ 2.25 ಕೋಟಿ ಜನರಿಗೆ ಲಸಿಕೆ ನೀಡಲಾಗುವುದು. ಆದಷ್ಟು ಶೀಘ್ರ ಎಲ್ಲರಿಗೂ ಲಸಿಕೆ ದೊರೆಯಲಿದೆ’ ಎಂದರು.

ಜೂನ್ ಅಂತ್ಯಕ್ಕೆ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖವಾಗಬಹುದು. ಆದರೆ, ಎಲ್ಲರೂ ಕೋವಿಡ್ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು

ಡಾ.ಕೆ. ಸುಧಾಕರ್, ಆರೋಗ್ಯ ಸಚಿವ

ಆಯುಷ್ಮಾನ್ ಭಾರತ್ ಅಡಿ ಚಿಕಿತ್ಸೆ

‘ಸರ್ಕಾರಿ ಆಸ್ಪತ್ರೆಗಳಲ್ಲಿ ಕಪ್ಪು ಶಿಲೀಂಧ್ರಕ್ಕೆ ಎಲ್ಲರಿಗೂ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ. ಒಬ್ಬರಿಗೆ ₹ 2 ಲಕ್ಷದಿಂದ ₹ 3 ಲಕ್ಷ ಖರ್ಚಾಗಲಿದ್ದು, ಇದನ್ನು ಸರ್ಕಾರವೇ ಭರಿಸುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಕೂಡ ‘ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ’ ಯೋಜನೆಯಡಿ ಈ ಕಾಯಿಲೆಗೆ ಉಚಿತವಾಗಿ ಚಿಕಿತ್ಸೆ ನೀಡಬೇಕೆಂಬ ಸಲಹೆಗಳು ಬಂದಿವೆ. ಈ ಕುರಿತು ಮುಖ್ಯಮಂತ್ರಿ ಜತೆಗೆ ಚರ್ಚೆ ನಡೆಸಿ, ಕ್ರಮಕೈಗೊಳ್ಳಲಾಗುವುದು’ ಎಂದು ಸುಧಾಕರ್ ಹೇಳಿದರು.

‘ಕೋವಿಡ್: 28 ಮಕ್ಕಳು ಅನಾಥ’

ಕಾರವಾರ: ‘ರಾಜ್ಯದಲ್ಲಿ ಕೋವಿಡ್‌ನಿಂದ ತಂದೆ, ತಾಯಿ ಇಬ್ಬರನ್ನೂ ಕಳೆದುಕೊಂಡ 28 ಮಕ್ಕಳನ್ನು ಗುರುತಿಸಲಾಗಿದೆ. 21 ಕುಟುಂಬಗಳಲ್ಲಿ ಹೀಗಾಗಿದೆ’ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮೋಹನರಾಜ್ ತಿಳಿಸಿದರು.

ಕೋವಿಡ್‌ನಿಂದ ಅನಾಥರಾದ ಮಕ್ಕಳ ಆರೈಕೆ ಮತ್ತು ಪೋಷಣೆ ಸಂಬಂಧ ನೋಡಲ್ ಅಧಿಕಾರಿಯನ್ನಾಗಿ ಇವರನ್ನು ರಾಜ್ಯ ಸರ್ಕಾರ ನಿಯುಕ್ತಿಗೊಳಿಸಿದೆ.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಇಂಥ ಮಕ್ಕಳನ್ನು ಗುರುತಿಸಿ ಅವರಿಗೆ ಅಗತ್ಯ ನೆರವು ನೀಡಲಾಗುತ್ತಿದೆ. ಶನಿವಾರದ ಮಾಹಿತಿಯಂತೆ ರಾಯಚೂರು ಜಿಲ್ಲೆಯಲ್ಲಿ ನಾಲ್ವರು, ಬಾಗಲಕೋಟೆ ಜಿಲ್ಲೆಯಲ್ಲಿ ಮೂವರು, ಬೆಳಗಾವಿ, ಬೆಂಗಳೂರು ನಗರ, ಬೀದರ್, ಗದಗ, ಹಾಸನ, ಕೊಡಗು, ಮೈಸೂರು ಹಾಗೂ ರಾಮನಗರ ಜಿಲ್ಲೆಗಳಲ್ಲಿ ತಲಾ ಇಬ್ಬರು, ಚಾಮರಾಜನಗರ, ಚಿಕ್ಕಮಗಳೂರು, ದಾವಣಗೆರೆ, ಕೋಲಾರ ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ತಲಾ ಒಬ್ಬರು ಅನಾಥರಾಗಿದ್ದಾರೆ’ ಎಂದರು.

ರಾಜ್ಯ ಲಾಂಛನಕ್ಕೆ ಅವಮಾನ !

ಒಂದನೇ ಪುಟದಿಂದ

ಕಾನೂನು ಕ್ರಮಕ್ಕೆ ಪಟ್ಟು: ‘ಅಮೆಜಾನ್ ಸಂಸ್ಥೆ ಕೂಡಲೇ ಕ್ಷಮೆಯಾಚಿಸಬೇಕು. ಒಳಉಡುಪುಗಳ ಮೇಲೆ ರಾಜ್ಯದ ಲಾಂಛನ ಬಳಸಲು ಆದೇಶಿಸಿದವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು’ ಎಂದೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಒತ್ತಾಯಿಸಿದ್ದಾರೆ. ‘ಕನ್ನಡ ಭಾಷೆ ಮತ್ತು ನಾಡಿನ ಬಗ್ಗೆ ಯಾರೇ ಅವಹೇಳನ ಮಾಡಿದರೂ ಸೈಬರ್ ಅಪರಾಧದ ಅಡಿ ಶಿಕ್ಷಿಸಬೇಕು’ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್‌ಕುಮಾರ ಶೆಟ್ಟಿ ಒತ್ತಾಯಿಸಿದ್ದಾರೆ.

ಇಂದಿನ ಪಾಡ್‌ಕಾಸ್ಟ್ ವಿಶೇಷ
ವೈದ್ಯ ಮಿತ್ರ ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

WORK FROM home, earn upto 30k, training online, fees 1050 - 7605058339

WORK FROM home, MNC jobs - Anudip Foundation 7605058338, 8884606485

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ.9686114647, 9900229091

Wanted

ಕಾರ್ ಗ್ಯಾರಿಜಿಗೆ ಕೆಲಸಗಾರರು ಬೇಕಾಗಿದ್ದಾರೆ. ಹಳೆ ಕಾರು, ವಿಂಟೇಜ್ ಕಾರು ಗಳ ರೇಪರಿ ಮಾಡುವ ಮೆಕ್ಯಾನಿಕ್, ಸಹಾಯಕ ಮೆಕ್ಯಾನಿಕ್, ಟಿಂಕರ್, ಬೆಂಗಳೂರಿನಲ್ಲಿ ಬೇಕಾಗಿದ್ದಾರೆ ಸಂಪರ್ಕಿಸಿ: 9880600009

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★ಅಂಭಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ. 9886755306

★ವಶೀಕರಣ ಸ್ಪೆಷಲಿಸ್ಟ್ ಗುರೂಜಿ. 9663631199★ ಓಂ ಶ್ರೀ ದುರ್ಗಾದೇವಿ ಅನುಗ್ರಹ ಜ್ಯೋತಿಷ್ಯಾಲಯ ಕಟೀಲು ದುರ್ಗಾಪರಮೇಶ್ವರಿ ಅಮ್ಮನವರ ಆರಾಧಕರು. ಪಂಡಿತ್ ಮೋಹನ್ ದಾಸ್ ಶರ್ಮ ಗುರೂಜಿ (ಉಡುಪಿ) ನಿಮ್ಮ ಕುಟುಂಬದ ಸಮಸ್ಯೆಗಳಾದ ನಿಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಬುದ್ದಿ ಜ್ಞಾನಶಕ್ತಿ ಆರೋಗ್ಯ ಸಮಸ್ಯೆ ತೊಂದರೆ ಇದ್ದರೆ, ನಿಮ್ಮ ಗಂಡ ಪರಸ್ತ್ರೀಯಿಂದ ನಿಮ್ಮ ಸಂಸಾರದಲ್ಲಿತೊಂದರೆ, ನಿಮ್ಮ ಅತ್ತೆ, ಸೊಸೆ, ನಾದಿನಿಯಿಂದ ನಿಮ್ಮ ಸಂಸಾರದಲ್ಲಿ ತೊಂದರೆ ಆಗುತ್ತಿದೆಯೇ? ಪ್ರೀತಿಯಲ್ಲಿ ನಂಬಿ ಮೋಸ ಹೋಗಿದ್ದೀರಾ, ನೀವು ಇಷ್ಟಪಟ್ಟಂತಹ ಸ್ತ್ರೀ/ಪುರುಷ ನಿಮ್ಮಂತೆ ವಶೀಕರಣ ಆಗಲು ನಿಮ್ಮ ಜನ್ಮ ಲಗ್ನದಲ್ಲಿ ಮದುವೆ ವಿಚಾರದಲ್ಲಿ ಕಂಕಣ ತೊಂದರೆ ಆಗುತ್ತಿದ್ದರೆ,ಗಂಡಹೆಂಡತಿ ಕಿರಿಕಿರಿ ಇಂದ ಡೈವರ್ಸ್ ಪ್ರಾಬ್ಲಮ್ ಇರುವುದರಿಂದ ನಿಮ್ಮ ಸಂಸಾರ ಹಾಳಾಗುತ್ತಿದೆ , ಅಣ್ಣ- ತಮ್ಮಂದಿರ ಅಸ್ತಿಯಲ್ಲಿ ತೊಂದರೆ, ಶತ್ರುಗಳಿಂದ ನಿಮ್ಮ ಕುಟುಂಬಕ್ಕೆ ತೊಂದರೆ,ನಿಮ್ಮ ಕುಟುಂಬದಲ್ಲಿ ಮಾಟ ಮಂತ್ರ ಪ್ರಯೋಗದಿಂದ ನಿಮ್ಮ ಕುಟುಂಬ ಸರ್ವನಾಶ ಆಗುತ್ತಿದೆ, ನಿಮ್ಮ ಎಲ್ಲಾ ಕಠಿಣ ಸಮಸ್ಯೆಗಳಿಗೂ ತಾಯಿ ಕೇರಳ ಭಗವತಿ ದೇವಿ ಮತ್ತು ಕಟೀಲು ದುರ್ಗಾಪರಮೇಶ್ವರಿದೇವಿ ಅಮ್ಮನವರ ಪೂಜಾ ಶಕ್ತಿಯಿಂದ ಅಮಾವಾಸ್ಯೆ ಹುಣ್ಣಿಮೆ ಸೂರ್ಯಚಂದ್ರ ಗ್ರಹಣದಿಂದ ಜಪ ಸಿದ್ದಿಗಳಿಂದ ಕೇವಲ ೧ದಿನದಲ್ಲಿ ೧೦೦% ಶಾಶ್ವತ ಪರಿಹಾರ ಮಾಡುತ್ತಾರೆ. ಮಲ್ಲೇಶ್ವರಂ, ಬೆಂಗಳೂರು

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★॥ಸ್ತ್ರೀವಶೀಕರಣ ಸ್ಪೆಷಲಿಸ್ಟ್॥★ ಕೇರಳ ಅಘೋರಿ_ನಾಗಸಾಧು. ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ_ಕರೆಮಾಡಿ. ಪಂಡಿತ್.ರಾವ್. 9901724082

ವ್ಯಾಪಾರ

Business to Business

Finance

ಮುದ್ರಾ ಯೋಜನೆಯಲ್ಲಿ ಕೃಷಿ, ಸ್ಥಿರಾಸ್ತಿ, ವೈಯಕ್ತಿಕ, ಬಿಸಿನೆಸ್, ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲ ಲಭ್ಯ 9172930942, 9449896870

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
condition apply*
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE JOB NOTICE NAME CHANGE ANY OTHER CATEGORY
WWW.DHCLASSIFIEDS.COM
9880856233
9886213331
E-mail: dhclassified@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಜನನ :19.03.1974 – ಮರಣ : 27.05.2021
ಬಿ.ಎಮ್. ವಿಜಯ್
S/o. ಮಾರಣ್ಣ (ತಮ್ಮಯ್ಯ)
ಇವರು ದಿನಾಂಕ 27.05.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಪುಣ್ಯಾಹ ವನ್ನು ದಿನಾಂಕ : 06.06.2021 ಭಾನುವಾರ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ಮೃತರ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.
ಇಂತಿ ದುಃಖತಪ್ತರು
ಕುಟುಂಬ ವರ್ಗದವರು ಮತ್ತು ಬಂಧು –ಮಿತ್ರರು.
ಜಯ ಇಂಜಿನಿಯರಿಂಗ್ ವರ್ಕ್ಸ್, ಬೆಂಗಳೂರು-09

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ರೋಹಿಣಿ ಬಿ.ಎನ್.
ಇವರು ನಮ್ಮ ಬ್ಯಾಂಕಿನ ನಿರ್ದೇಶಕರಾಗಿದ್ದು
ದಿನಾಂಕ: 05–06–2021ನೇ ಶನಿವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರ ಆತ್ಮಕ್ಕೆ ಶಾಂತಿ ಕೋರುವ,
ಅಧ್ಯಕ್ಷರು, ನಿರ್ದೇಶಕರು ಮತ್ತು ಸಿಬ್ಬಂದಿವರ್ಗ
ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ,
ಕೋರಮಂಗಲ, ಬೆಂಗಳೂರು
ಹಾಗೂ ಕುಟುಂಬ ವರ್ಗದವರು

ವಿ ಎಸ್ ಅಯ್ಯಂಗಾರ್ ಮೆಮೊರಿಯಲ್ ಚಾರಿಟಬಲ್ ಟ್ರಸ್ಟ್
(https://www.help-educate.org)
ಇವರ ಪರವಾಗಿ
ವಿ ಎಸ್ ಅಯ್ಯಂಗಾರ್ ಅವರ 125 ನೇ ಜನ್ಮ ದಿನದಂದು ಅವರ ಮಕ್ಕಳು ಮತ್ತು ಕುಟುಂಬದವರು ಆದರದಿಂದ ಸ್ಮರಿಸಿ ನಮಿಸುತ್ತಾರೆ
06 Jun 1896 - 2021

ವಿ ಎಸ್ ಅಯ್ಯಂಗಾರ್

ಶ್ರೀಮತಿ ತಂಗಮ್ಮ

ಕೊಳ್ಳೇಗಾಲದಲ್ಲಿ ‘ನಂಜನಗೂಡು ವಕೀಲರು’ ಎಂದು ಕರೆಯಲ್ಪಟ್ಟ ಶ್ರೀ ವಿ ಎಸ್ ಅಯಂಗಾರ್ (ವೃತ್ತಮಣಿ ಶ್ರೀನಿವಾಸ ಅಯ್ಯಂಗಾರ್) 1928 ರಿಂದ 1976 ರಲ್ಲಿ ಅವರ ನಿಧನದ ವರೆಗೂ ವಕೀಲರಾಗಿದ್ದರು 1962ರ ಚುನಾವಣೆಯಲ್ಲಿ ದೀನ್ ದಯಾಲಜಿ ಮತ್ತು ವಾಜಪೇಯಿ ಅವರ ನೇತೃತ್ವದಲ್ಲಿ ಸ್ಪರ್ಧಿಸಿದ ನಂತರ ಜನ ಸಂಘದ ಕರ್ನಾಟಕ ಉಪಾಧ್ಯಕ್ಷರಾದರು ತಮ್ಮ ಸಹೋದರಿ ನಂಜನಗೂಡು ತಿರುಮಲಾಂಬಾ (ಮೊದಲ ಕನ್ನಡ ಮಹಿಳಾ ಪ್ರಕಾಶಕಿ ಮತ್ತು ಲೇಖಕಿ) ಅವರ ಸಾಹಿತ್ಯ ಪ್ರಕಾಶನಕ್ಕೆ ನೆರವಾಗಿದ್ದರು.
https://www.help-educate.org
ಮೇಲ್ಪಟ್ಟ ಟ್ರಸ್ಟ್ (ದತ್ತಿ) ಅವರ ಸ್ಮರಣೆಯಲ್ಲಿ ಸ್ಥಾಪಿತವಾಗಿದೆ. ಅವರ ನೆನಪಿನಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಬಡ ವಿದ್ಯಾರ್ಥಿನಿಯರಿಗೆ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣಕ್ಕಾಗಿ 4 ವರ್ಷದವರೆವಿಗೂ ವಿದ್ಯಾರ್ಥಿ ವೇತನ ಪ್ರಶಸ್ತಿ ನೀಡಲಾಗುತ್ತಿದೆ.

ವೈಕುಂಠ ಸಮಾರಾಧನೆ
ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿ ದೇವಸ್ಥಾನದ ಧರ್ಮಕರ್ತರು, ಜೆ. ಪಿ. ನಗರ 1ನೇ ಹಂತ, ಬೆಂಗಳೂರು.



ಶ್ರೀ ಜೆ. ಜಯರಾಮರೆಡ್ಡಿರವರು
(ಲೇ. ಸಾರಕ್ಕಿ ಶ್ರೀ ಗುರುಪ್ಪರೆಡ್ಡಿರವರ ಮಗ)
ಇವರು ದಿನಾಂಕ 23–05–2021ನೇ ಭಾನುವಾರ ಸಂಜೆ 5:25 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿಗಳನ್ನು ದಿನಾಂಕ 06–06–2021 ನೇ ಭಾನುವಾರ ಬೆಳಿಗ್ಗೆ 09:00 ಘಂಟೆಗೆ ಪುಣ್ಯಾಹ ಮತ್ತು ಮಧ್ಯಾಹ್ನ 12:30ಕ್ಕೆ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ಬಯಸುವ:
ಇಂತಿ ದು:ಖತಪ್ತರು: ಮೃತರ ಪತ್ನಿ ಶ್ರೀಮತಿ ಬಿ.ವಿ. ಕಮಲಮ್ಮ ಮತ್ತು ಮಕ್ಕಳು ಹಾಗೂ ಸಾರಕ್ಕಿ ಕುಟುಂಬದವರು



ಶ್ರೀ ಜೆ. ಚಂದ್ರಶೇಖರ್‌ರವರು
(ಸಾರಕ್ಕಿ ಶ್ರೀ ಜಯರಾಮರೆಡ್ಡಿರವರ ಮಗ)
ಇವರು ದಿನಾಂಕ 20–05–2021ನೇ ಗುರುವಾರ ಸಂಜೆ 07:00 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿಗಳನ್ನು ದಿನಾಂಕ 06–06–2021 ನೇ ಭಾನುವಾರ ಬೆಳಿಗ್ಗೆ 09:00 ಘಂಟೆಗೆ ಪುಣ್ಯಾಹ ಮತ್ತು ಮಧ್ಯಾಹ್ನ 12:30ಕ್ಕೆ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ಬಯಸುವ:
ಇಂತಿ ದು:ಖತಪ್ತರು: ಮೃತರ ಪತ್ನಿ ಎಸ್. ಸ್ನೇಹ ಮತ್ತು ಮಕ್ಕಳು ಹಾಗೂ ಸಾರಕ್ಕಿ ಕುಟುಂಬದವರು

ಶ್ರೀಮತಿ ಸರಸ್ವತಮ್ಮ ಮತ್ತು ಸಾರಕ್ಕಿ ಶ್ರೀ ವೆಂಕಟೇಶ ರೆಡ್ಡಿ, ನನ್ನ ಹಿರಿಯ ಮಗನಾದ
ಶ್ರೀ ವಿ. ಗೋಪಾಲರೆಡ್ಡಿರವರು
ದಿನಾಂಕ 25–05–2021ನೇ ಮಂಗಳವಾರ ಬೆಳಿಗ್ಗೆ 06–52 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿಗಳನ್ನು ದಿನಾಂಕ 06–06–2021 ನೇ ಭಾನುವಾರ ಬೆಳಿಗ್ಗೆ 09:00 ಘಂಟೆಗೆ ಪುಣ್ಯಾಹ ಮತ್ತು ಮಧ್ಯಾಹ್ನ 12:30ಕ್ಕೆ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ಬಯಸುವ:
ಇಂತಿ ದು:ಖತಪ್ತರು: ಮೃತರ ಪತ್ನಿ ಶ್ರೀಮತಿ ರೂಪ ಮತ್ತು ಮಕ್ಕಳು ಹಾಗೂ ಸಾರಕ್ಕಿ ಕುಟುಂಬದವರು

ವಿಳಾಸ: ನಂ.47, 12ನೇ ಕ್ರಾಸ್, ಬೆಳ್ಳಂದೂರು, ಬೆಂಗಳೂರು–560103

ವೈಕುಂಠ ಸಮಾರಾಧನೆ

(ಶ್ರೀಮತಿ ಶಾರದಮ್ಮ ರವರು ಧರ್ಮಪತ್ನಿ)
ನನ್ನ ಪೂಜ್ಯ ಪತಿಯವರಾದ
ಶ್ರೀ. ದಿ. ಕೆಂಪೇಗೌಡರವರು 27–05–2021ನೇ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿನಾಂಕ 07–06–2021ನೇ ಸೋಮವಾರ ಬೆಳಿಗ್ಗೆ 9:00 ಕ್ಕೆ ಹಾಲು–ತುಪ್ಪ ಮತ್ತು ಪುಣ್ಯವನ್ನು ಬೆಳಿಗ್ಗೆ 9:30 ರಿಂದ 10:30ರ ಸಮಯಕ್ಕೆ ಉತ್ತರ ಕ್ರಿಯಾದಿಗಳು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವೆಲ್ಲರೂ ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಮಕ್ಕಳು, ಅಳಿಯಂದಿರು, ಹಾಗೂ ಮೊಮ್ಮಕ್ಕಳು, ಕುಟುಂಬದವರು ಹಾಗೂ ಬಂಧು ಮಿತ್ರರು
ಸ್ಥಳ: ನಂ. 1, ಚನ್ನಿಗಪ್ಪ ಬಡಾವಣೆ, ಕೆಬ್ಬೆಹಳ್ಳ, ಸುಂಕದಕಟ್ಟೆ, ಬೆಂಗಳೂರು–91
ಭೋಜನ: 12:30 ಘಂಟೆಗೆ

FOR CLASSIFIED ADVERTISEMENTS
EDUCATION
Contact:
Santhosh: 9880856233
Vishal : 9845114560
Ravi : 9606912256

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Tanveer : 9886213331
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ scan the QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

FOR CLASSIFIED ADVERTISEMENTS
EDUCATION
Contact:
Santhosh: 9880856233
Vishal : 9845114560
Ravi : 9606912256

ಜಾತಿ ಜಾಡ್ಯದ ಕೊಳಕು ಮುಖಗಳು 9

ಪಾಂಡಿತ್ಯದಿಂದ ಬೆಳಗಿದ 'ಭಾಸ್ಕರ' 10

ಹಳೆ ಕಥೆಗಳ ಬೀಡು 11

ಸುತ್ತೆಲ್ಲ ನೋಡ ಕೂಡ್ಯಾವ ಮೋಡ

ಮುಂಗಾರು ಮಾರುತದ ಜಾಡು ಹಿಡಿದು...

ಮುಂಗಾರು ಮಳೆಯ ಪ್ರಮಾಣವನ್ನು ನಿರ್ಧರಿಸುವುದು ಮೋಡಗಳಲ್ಲ ಗಾಳಿ. ಹೌದು..ಮುಂಗಾರು, ಚಂಡಮಾರುತಗಳ ತರ ಅವಾಂತರಿಯಲ್ಲ. ಅದೇನಿದ್ದರೂ ಗುಡುಗು, ಮಿಂಚುಗಳ ಅದ್ಧೂರಿಯಿಂದ ಬರುವ ರಾಜ ಮೆರವಣಿಗೆ. ಕೇರಳದ ಸಮುದ್ರ ತೀರದಿಂದ ಹಿಮಾಲಯದವರೆಗೆ ನಡೆಯುವ ಆ ಭವ್ಯ ಮೆರವಣಿಗೆಯ ಮೇಲೊಂದು ಪಕ್ಷಿನೋಟ...

ಚಿತ್ರ: ರಂಜು ಪಿ

ಜಿ.ಕೃಷ್ಣಪ್ರಸಾದ್

ಅದೊಂದು ವರ್ಷ ತೋಟದ ಮನೆಯಲ್ಲಿದ್ದ ನನಗೆ ಸರಿರಾತ್ರಿಯಲ್ಲಿ ಎಚ್ಚರವಾಯಿತು. ಮೈಮೇಲೆ ಏನೋ ಓಡಾಡಿದ ಅನುಭವ. ಟಾರ್ಚ್ ಹತ್ತಿಸಿ ನೋಡುತ್ತೇನೆ, ಮನೆಯ ಗೋಡೆಯ ಮೇಲೆಲ್ಲ ಇರುವೆಗಳೇ! ಮೊಟ್ಟೆ ಹೊತ್ತು ರಾಶಿ ರಾಶಿ ಇರುವೆಗಳು ಹೊರಗಿನಿಂದ ಮನೆಯೊಳಗೆ ಬರುತ್ತಿದ್ದವು. ಇರುವೆಗಳಿಲ್ಲದ ಕಡೆ ಚಾಪೆ ಹಾಸಿ ಮಲಗುವುದಕ್ಕೂ ಸ್ವಲ್ಪ ಹೊತ್ತಿಗೆ ಸಾವಿರಾರು ಇರುವೆಗಳು ಚಾಪೆಯ ಅಡಿ ಬಂದು, ನನ್ನ ಮೈಮೇಲೆ ಓಡಾಡಿ ಕಚಗುಳಿ ಇಡುವುದಕ್ಕೂ ಸರಿಹೋಯಿತು. ಅಲ್ಲಿಂದ ಎದ್ದು, ಇನ್ನೊಂದೆಡೆ ಮಲಗಿದಾಗಲೂ ಅದೇ ಕಥೆ. ಕೊನೆಗೆ ಬೇಸತ್ತು ಮನೆ ಮುಂದಿನ ಹಾಸುಗಲ್ಲಿನ ಮೇಲೆ ಮಲಗಿ ರಾತ್ರಿ ಕಳೆದೆ.

ಮರುದಿನ ರಾತ್ರಿ ಭರ್ಜರಿ ಮಳೆ ಬಂತು. ಅದು ಆ ವರ್ಷದ ಮೊದಲ ಮುಂಗಾರು ಮಳೆ. 'ನಿನ್ನೆ ಇರುವೆ ಮೊಟ್ಟೆ ಹೊತ್ತವು ನೋಡಿ. ಅದಕ್ಕೇ ಮಳೆ ಯೋಗ ಬಂತು' ತೋಟದ ಕಾವಲುಗಾರ ನಂಜಪ್ಪ ಇರುವೆ ಗೂಡಿನತ್ತ ಕೈ ಮುಗಿದರು. ಮಳೆ ಬರುವ ಮುನ್ನ ಬೆಚ್ಚನೆ ಜಾಗ ಹುಡುಕಿಕೊಂಡು ಬಂದ ಇರುವೆಗಳ ಅಲೌಕಿಕ ಶಕ್ತಿ ಕಂಡು ನನಗೆ ಸೋಜಿಗವಾಯಿತು.

ಮುಂಗಾರು ಮಳೆಯ ಮಾಂತ್ರಿಕತೆಯೇ ಅಂಥದ್ದು. ಇಳೆಗೆ ಕಳೆ ತರುವ, ಜಡಬಿದ್ದ ಕೃಷಿ ಕೆಲಸಕ್ಕೆ ಚೈತನ್ಯ ತುಂಬುವ ಜೀವದಾಯಿನಿ. ಪ್ರಪಂಚದ ಅರ್ಧಭಾಗ ಮುಂಗಾರು ಮಳೆಯನ್ನೇ ಅವಲಂಬಿಸಿದೆ. ಸಂಕ್ರಾಂತಿ ಮುಗಿಯುತ್ತಿದ್ದಂತೆ ಹಳ್ಳಿಗರು ಮುಂಗಾರಿನ ಲೆಕ್ಕಾಚಾರ ಹಾಕಲು ಶುರುಮಾಡುತ್ತಾರೆ. ಭರತ ಹುಣ್ಣಿಮೆಯ ದಿನ ಮಕೋಟ್ ಚುಕ್ಕೆ ನೋಡುವ ಮೂಲಕ ಬರುವ ವರ್ಷದ ಮಳೆ ಬೆಳೆಯ ಅಂದಾಜು ಮಾಡುತ್ತಾರೆ. ಚುಕ್ಕೆ ಯಾವ ದಿಕ್ಕಿಗೆ ಮೂಡುತ್ತದೋ ಆ ದಿಕ್ಕಿನ ಭಾಗದಲ್ಲಿ ಮಳೆ ಬೆಳೆ ಸಮೃದ್ಧಿಯಾಗುತ್ತದೆ ಎಂಬ ನಂಬಿಕೆ. 'ನನ್ನ ಅನುಭವದಲ್ಲಿ ಮಕೋಟ್ ಚುಕ್ಕೆ ಅಂದಾಜು ಸುಳ್ಳು ಆಗಿಲ್ಲ ನೋಡಿ' ಕನಕಪುರದ ಕಾಡುಹಳ್ಳಿಯ ಹಲಗಪ್ಪ ಆತ್ಮವಿಶ್ವಾಸದಿಂದ ನುಡಿಯುತ್ತಾರೆ.

ಯುಗಾದಿಯ ದಿನ ಚಂದ್ರನ ಕೋಡು ಹೆಚ್ಚು ಬಾಗಿದ ದಿಕ್ಕಿಗೆ ಮಳೆ ಬೆಳೆ ಸಮೃದ್ಧಿಯಾಗಿ ಆಗುತ್ತದೆ ಎಂಬ ನಂಬಿಕೆಯೂ ಇದೆ. ಉಗನಿ ಹಂಬು ಹೆಚ್ಚು ಹಬ್ಬಿದ, ಹುಣಸೆ ಚೆನ್ನಾಗಿ ಹೂಬಿಟ್ಟ, ಮುಳ್ಳು ಗೆಣಸಿನ ಬಳ್ಳಿ ಬಾಡದೆ ಹುಲುಸಾಗಿ ಬೆಳೆದ ವರ್ಷ ಸಮೃದ್ಧ ಮಳೆ ಬರುತ್ತದೆ ಎಂದು ಹಳ್ಳಿಗರು ನಂಬುತ್ತಾರೆ.

ಮುಂಗಾರಿಗೆ ಮುನ್ನುಡಿ ಬರೆಯುವುದು ಗೆಡ್ಡೆ ಗೆಣಸುಗಳು. ನೋಡಲು ಒಣಗಿದ ಕಟ್ಟಿಗೆ ಥರ ಕಾಣುವ ಮುಳ್ಳು ಗೆಣಸು, ಹೆಡಿಗೆ ಗೆಣಸು, ಮರ ಆಲೂಗೆಡ್ಡೆ, ಉತ್ತರಿ ಗೆಡ್ಡೆಗಳಿಗೆ ಮೊದಲ ಮಳೆಯಿಂದ ಜೀವ ಬರುತ್ತದೆ. ರಾತ್ರೋ ರಾತ್ರಿ ಮೊಳಕೈ ಉದ್ದದ ಬಳ್ಳಿಗಳು ಇಣುಕಿ ಹಾಕಿ ಅಚ್ಚರಿ ಮೂಡಿಸುತ್ತವೆ. ಬಿಸಿಲಿಗೂ ಜಪ್ಪೆನ್ನದೆ ಮರ, ಗಿಡಗಳ ಕಾಂಡ ತಬ್ಬಿ ಬೆಳೆಯುತ್ತವೆ. ಮುಂಗಾರು ಮಳೆ ಬರುವ ಹೊತ್ತಿಗೆ ಇವು ಬೇರು ಬಿಟ್ಟು ಬಳ್ಳಿ ಹರಿಸಿ, ಹಸಿರಿನ ಚಪ್ಪರ ಹಾಕಲು ಕಾಯುತ್ತಿರುತ್ತವೆ. ಅಣ್ಣೇಸೊಪ್ಪು, ಅಣಬೆ, ಬಿದಿರು ಕಳಲೆ, ಸೀಗೇಸೊಪ್ಪು ಸಿಗುವುದು ಕೂಡ ಮುಂಗಾರಿನಲ್ಲೇ. ನವಿಲು ರೆಕ್ಕೆ ಬಿಚ್ಚಿ ನರ್ತನ ಮಾಡುವುದೂ ಮುಂಗಾರಿನಲ್ಲೇ. ಗಿಡ ಮರ ನೆಡುವ, ಒಡ್ಡು ಹಾಕುವ ಕೆಲಸಕ್ಕೆ ಮುಂಗಾರಿನದೇ ಮುಹೂರ್ತ.

'ಧಗೆಯೋ ಧಗೆ. ಹೊರಗೆ ನಿಲ್ಲಲಾಗದ ಬಿಸಿಲು. ದೇವ ಮೂಲೆಯಲ್ಲಿ ಮಿಂಚ್‌ತದೆ. ಇವತ್ತು ಮಳೆ ಬಂದೇ ಬರ್ತದೆ' ಎಂದು ಹಳ್ಳಿಗರು ಆಸೆಗಣ್ಣಿನಿಂದ ಆಕಾಶದತ್ತ ಮುಖಮಾಡುತ್ತಾರೆ. ಮಳೆ ಆಚರಣೆಗಳನ್ನು ನೆರವೇರಿಸಿ 'ಬಾರಪ್ಪೋ ಮಳೆರಾಯ' ಎಂದು ಅಂಗಲಾಚುತ್ತಾರೆ. ಮಳೆ ಆಚರಣೆಗಳ ಜೊತೆ ತಲೆಬುಡ ಇಲ್ಲದ ನಂಬಿಕೆಗಳೂ ತಳುಕು ಹಾಕಿಕೊಂಡಿವೆ. ತೊನ್ನು ಇರೋರ ಹೆಣ ಸುಡದೆ ಮಣ್ಣು ಮಾಡಿದ್ದರೆ ಮಳೆ ಬರದು, ಅದನ್ನು ಕಿತ್ತು ಸುಟ್ಟು ಹಾಕಿದರೆ ಮಳೆ ಬರುತ್ತದೆ ಎಂಬ ನಂಬಿಕೆ. ಇದರಿಂದ ಹಳ್ಳಿಗಳಲ್ಲಿ ಪರಸ್ಪರ ಜಗಳ, ವೈಮನಸ್ಯ.

ಕೊಳ್ಳೇಗಾಲದ ಒಡೆಯರಪಾಳ್ಯದ ಟಿಬೆಟನ್ ಕಾಲೊನಿಯಲ್ಲಿದ್ದೆ, ಆ ವರ್ಷ ಮುಂಗಾರು ಮಳೆ ಬರುವುದು ನಿಧಾನವಾಯಿತು. ನೆಲ ಸಿದ್ಧ ಮಾಡಿಟ್ಟುಕೊಂಡು ತಿಂಗಳಾದರೂ ಮಳೆರಾಯ ಮೊಗ ತೋರಲಿಲ್ಲ. 'ಮುಂಡಗೋಡದಲ್ಲಿ ರೈನ್ ಲಾಮ ಇದಾರೆ. ಅವರು ಕುಮಟಾ ಸಮುದ್ರದಿಂದ ಮೋಡ ಕರ್ಕೊಂಡು ಬರ್ತಾರೆ. ಅವರ ಬಳಿ ಹೋಗಿ ಬರ್ತೀನಿ' ಕಾಲೊನಿಯ ಮುಖ್ಯಸ್ಥ ದೋರ್ಜಿ ನನಗೆ ಹೇಳಿದರು. ಆ ಕ್ಷಣ ಕಾಳಿದಾಸನ ಮೇಘದೂತ ನೆನಪಾದ.

ತನ್ನ ಕೆಲಸದಲ್ಲಿ ನಿರ್ಲಕ್ಷ್ಯ ತೋರಿದ್ದಕ್ಕೆ ರಾಜ ಕುಬೇರನಿಂದ ಮಧ್ಯ ಭಾರತಕ್ಕೆ ಗಡಿಪಾರಾಗುವ ಯಕ್ಷನಿಗೆ ಮಡದಿಯ ನೆನಪು ಬರುತ್ತದೆ. ಅವನು ತನ್ನ ಪ್ರೇಮ ಸಂದೇಶವನ್ನು ತನಗಾಗಿ ಕಾಯುತ್ತಿರುವ ಮಡದಿಗೆ ತಲುಪಿಸಲು ಮೋಡವನ್ನು ಕೋರುತ್ತಾನೆ. ಮೋಡವು ಯಕ್ಷನ ಪ್ರೇಮ ಸಂದೇಶವನ್ನು ಹಿಮಾಲಯದ ಕೈಲಾಸ ಪರ್ವತದಲ್ಲಿರುವ ಅವನ ಮಡದಿಗೆ ತಲುಪಿಸುವ ಚಿತ್ರಣ ಮೇಘದೂತ ಕಾವ್ಯದಲ್ಲಿದೆ. ಕಾಳಿದಾಸನ ಮೇಘದೂತ ಕಾವ್ಯ ಮುಂಗಾರಿನ ಮೋಡಗಳನ್ನು ವರ್ಣಿಸುತ್ತದೆ. ಮುಂಗಾರು ಮಾರುತಗಳ ಜಾಡು ಹಿಡಿದುಹೋದ ವಿಜ್ಞಾನಿಗಳು, ಕಾಳಿದಾಸನ ಮೇಘದೂತ ಕಾವ್ಯದ ವರ್ಣನೆಗೂ ವಾಸ್ತವಕ್ಕೂ ಸಾಮ್ಯತೆ ಇದೆ ಎಂಬುದನ್ನು ಕಂಡುಕೊಂಡಿದ್ದಾರೆ.

ಮುಂಗಾರು ಮಳೆಯ ಕಾಲಕ್ಕೆ ದಟ್ಟೈಸುವ ಮೋಡಗಳು ಯಾವತ್ತೂ ಕವಿಗಳ ಸ್ಫೂರ್ತಿ. 'ಮೂಡಣ ಮನೆಯ ಮುತ್ತಿನ ನೀರಿನ ಎರಕಾವ ಹೊಯ್ದ' ಎಂದು ದ.ರಾ. ಬೇಂದ್ರೆ ಕವನ ಕಟ್ಟಿದಾರೆ.

> ಮುಂಗಾರು ಬರುವ ಮುನ್ನಾ ದಿನಗಳಲ್ಲಿ ಜೀವ ಜಗತ್ತಿನಲ್ಲಿ ಇನ್ನಿಲ್ಲದ ಗಡಿಬಿಡಿ; ಯಾಕೋ?

ಮಳೆಯ ಜಾಡು

ಮುಂಗಾರು ಎಂಬುದು ಋತುಮಾನಕ್ಕೆ ತಕ್ಕಂತೆ ಬದಲಾಗುವ ಗಾಳಿಯ ದಿಕ್ಕು. ಮುಂಗಾರು ಮಳೆಯ ಪ್ರಮಾಣವನ್ನು ನಿರ್ಧರಿಸುವುದು ಮೋಡಗಳಲ್ಲ ಗಾಳಿ. ಗಾಳಿಯ ಚಲನೆ ವರ್ಷದಲ್ಲಿ ಎರಡು ಬಾರಿ ಬದಲಾಗುತ್ತದೆ. ಮೇ ಮಧ್ಯ ಭಾಗದಿಂದ ಸೆಪ್ಟೆಂಬರ್‌ವರೆಗೆ ಹಿಂದೂ ಮಹಾಸಾಗರದಿಂದ ಬರುವ ನೈರುತ್ಯ ಮುಂಗಾರಿನ ಮಾರುತಗಳು ಭರ್ಜರಿ ಮಳೆಯನ್ನು ತರುತ್ತವೆ. ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗಿನ ಚಳಿಗಾಲದ ಈಶಾನ್ಯ ಮುಂಗಾರು, ಭಾರತ ಮತ್ತು ಚೀನಾಕ್ಕೆ ತಂಪಾದ ಒಣ ಹವೆ ಮತ್ತು ಇಂಡೋನೇಷ್ಯ, ಆಸ್ಟ್ರೇಲಿಯಾಕ್ಕೆ ಮಳೆಯನ್ನು ತರುತ್ತವೆ.

ನೈರುತ್ಯ ಮುಂಗಾರು ಸಮುದ್ರದ ಕಡೆಯಿಂದ ಭೂಭಾಗದ ಕಡೆಗೆ, ಈಶಾನ್ಯ ಮುಂಗಾರು ಭೂಭಾಗದಿಂದ ಸಮುದ್ರದ ಕಡೆಗೆ ಚಲಿಸುತ್ತವೆ. ದೇಶದಲ್ಲಿ ಒಟ್ಟು ಸುರಿಯುವ ಮಳೆಯ ಪೈಕಿ ಶೇಕಡ 70ರಷ್ಟು ಮುಂಗಾರಿನದ್ದು. ದೇಶವನ್ನು ಸುತ್ತುವರಿದಿರುವ ಬಂಗಾಳ ಕೊಲ್ಲಿ, ಅರಬ್ಬಿ ಸಮುದ್ರ ಮತ್ತು ಹಿಂದೂ ಮಹಾಸಾಗರ ಮುಂಗಾರು ಮಳೆಯ ಪ್ರಮಾಣವನ್ನು ನಿರ್ಧರಿಸುತ್ತವೆ.

ಮುಂಗಾರು ಮಾರುತ ಕೇರಳಕ್ಕೆ ಅಪ್ಪಳಿಸುವ ಕಾಲಕ್ಕೆ ಟಿಬೆಟನ್ ಪ್ರಸ್ಥಭೂಮಿಯಲ್ಲಿ ವಾಯುಭಾರ ಕುಸಿತ ಇರುತ್ತದೆ. ಹಾಗಾಗಿ ಮಳೆ ಮೋಡ ಭಾರತದ ಹೃದಯ ಭಾಗದತ್ತ ಚಲಿಸಲು ಶುರುಮಾಡುತ್ತದೆ.

ಚಲಿಸುತ್ತಿರುವ ಮುಂಗಾರು ಮಾರುತಗಳಿಗೆ ಪಶ್ಚಿಮಘಟ್ಟಗಳು ಎದುರಾಗುತ್ತವೆ. ಇಲ್ಲಿ ಮುಂಗಾರು ಮಾರುತಗಳು ಎರಡು ಕವಲಾಗಿ ಒಡೆಯುತ್ತವೆ. ಒಂದು ಕವಲು ಅರಬ್ಬಿ ಸಮುದ್ರದ ಮೇಲೆ ಚಲಿಸುತ್ತಾ ಉತ್ತರಕ್ಕೆ, ಪಶ್ಚಿಮ ಘಟ್ಟಗಳ ಅಂಚಿನ ಕರಾವಳಿಯನ್ನು ಸವರುತ್ತ ಮುಂಬೈ ಕಡೆ ಹೋಗುತ್ತದೆ. ಇನ್ನೊಂದು ಕವಲು ಬಂಗಾಳ ಕೊಲ್ಲಿಯ ಮೇಲೆ ಅಸ್ಸಾಂವರೆಗೆ ಚಲಿಸಿ, ಈಶಾನ್ಯ ಹಿಮಾಲಯದ ಶ್ರೇಣಿಯನ್ನು ತಟ್ಟುತ್ತದೆ. ಈ ದಿಕ್ಕಿನಲ್ಲಿ ಸಾಗುವ ಮಾರುತಗಳ ಜೊತೆ ಬಂಗಾಳ ಕೊಲ್ಲಿಯ ತೇವಾಂಶವೂ ಜೊತೆಗೂಡುವುದರಿಂದ ಮಳೆಯ ತೀವ್ರತೆ ಅಧಿಕ. ಪಶ್ಚಿಮ ಬಂಗಾಳ, ಅಸ್ಸಾಂ, ಬಾಂಗ್ಲಾದೇಶ ಪ್ರವಾಹದಿಂದ ತತ್ತರಿಸುತ್ತವೆ.

ಮುಂದಿನ ಪುಟಕ್ಕೆ...

ಸುಳ್ಳಿನ ನಿಜವಾದ ಪುರಾಣ

ನಡಹಳ್ಳಿ ವಸಂತ್

ಪುರಾಣಗಳು ಸುಳ್ಳು ಎಂದು ಇಲ್ಲಿ ಹೇಳುತ್ತಿಲ್ಲ. ಇದು ಸುಳ್ಳಿನ ಕುರಿತಾದ ಪುರಾಣ!

ಮನುಷ್ಯ ಯಾವಾಗಿನಿಂದ ಸುಳ್ಳು ಹೇಳುವುದನ್ನು ಕಲಿತಿರಬಹುದು ಎನ್ನುವ ಪ್ರಶ್ನೆ ಎಲ್ಲರಿಗೂ ಅಸಂಬದ್ಧ ಎನ್ನಿಸಿದರೂ ಉತ್ತರ ಯಾರಲ್ಲಿಯೂ ಇಲ್ಲ! ವಿಕಾಸವಾದದಲ್ಲಿಯೂ ಇದರ ಬಗೆಗೆ ಚರ್ಚೆಯಾದಂತಿಲ್ಲ! ಹಾಗಾಗಿ ನಾವೇ ಮಾನವಶಾಸ್ತ್ರಜ್ಞರಾಗಿ ಯೋಚಿಸೋಣ. ಪ್ರಾಣಿ ಪ್ರಪಂಚದಲ್ಲಿಯೂ ಸುಳ್ಳುಗಳು ಇವೆ. ಆತ್ಮರಕ್ಷಣೆಗೆ, ಆಹಾರ ಸಂಪಾದನೆಗೆ ಮತ್ತು ಸಂಗಾತಿಯ ಓಲೈಕೆಗೆ ದೇಹದ ಬಣ್ಣ, ವಾಸನೆಗಳನ್ನು ಬದಲಾಯಿಸುವುದು, ಭಿನ್ನ ಧ್ವನಿಗಳಲ್ಲಿ ಉಲಿಯುವುದು, ಸತ್ತಂತೆ ನಟಿಸುವುದು, ಇಲ್ಲದ ಬಲವನ್ನು ಪ್ರದರ್ಶಿಸುವುದು-ಹೀಗೆ ವಿಧವಿಧವಾದ ತಂತ್ರಗಳನ್ನು ಪ್ರಾಣಿಪಕ್ಷಿ ಕ್ರಿಮಿಕೀಟಗಳು ಬಳಸುತ್ತವೆ.

ವಯಸ್ಸಿನಿಂದ ನಿತ್ರಾಣಗೊಂಡು ಓಡಲಾಗದ ಹುಲಿ ಸತ್ತಂತೆ ನಿಶ್ಚಲವಾಗಿ ಮಲಗಿ ಜಿಂಕೆ ಹೈನಾಗಳನ್ನು ಆಕರ್ಷಿಸಿ ಅವು ಹತ್ತಿರ ಬಂದ ಕೂಡಲೇ ಆಕ್ರಮಣ ಮಾಡುತ್ತದೆ. ಆಮೆ ದುರ್ವಾಸನೆಯ ಹೂಸನ್ನು ಬಿಟ್ಟು ಶತ್ರುಗಳನ್ನು ಓಡಿಸಲು ಪ್ರಯತ್ನಿಸುತ್ತದೆ! ಹಿಂದಿನಿಂದ ಬಾಲವನ್ನು ಹಿಡಿದು ಆಕ್ರಮಣ ಮಾಡಲು ಪ್ರಯತ್ನಿಸಿದಾಗ ಹಲ್ಲಿ ಬಾಲವನ್ನೇ ಕಳಚಿಕೊಂಡು ತಪ್ಪಿಸಿಕೊಳ್ಳುತ್ತದೆ. ಇವೆಲ್ಲವೂ ಒಂದು ರೀತಿಯ ಸುಳ್ಳುಗಳೇ. ಹಾಗಿದ್ದರೂ ಈ ಸುಳ್ಳುಗಳು ಸೀಮಿತ ಉದ್ದೇಶಕ್ಕಾಗಿ ಮಾತ್ರ ಇರುತ್ತವೆ ಮತ್ತು ಸಾಂದರ್ಭಿಕವಾಗಿರುತ್ತವೆ. ಉಳಿದಂತೆ ಪ್ರಾಣಿಪಕ್ಷಿಗಳು ಕ್ರಿಮಿಕೀಟಗಳು ಸುಳ್ಳು ಹೇಳಲು ಸಾಧ್ಯವೇ ಇಲ್ಲ. ಏಕೆಂದರೆ, ಸಂವಹನಕ್ಕೆ ಅವು ದೇಹಭಾಷೆಯನ್ನು ಮಾತ್ರ ಬಳಸುತ್ತವೆ. ದೇಹಭಾಷೆಯಲ್ಲಿ ಸುಳ್ಳುಗಳನ್ನು ಹೇಳುವುದು ಸುಲಭವಲ್ಲ. ಆದರೆ, ಮಾತನಾಡುವ ಮತ್ತು ಬರೆಯುವ ಭಾಷೆ ಬಳಸುವ ಮಾನವ ಮಾತ್ರ ಅತ್ಯಂತ ನವಿರಾದ ಸುಳ್ಳುಗಳನ್ನು ಹೇಳುತ್ತಾನೆ. ಅಂದರೆ ಭಾಷೆಯ ಉಗಮವಾದಾಗಿನಿಂದಲೇ ಮಾನವನ ಸುಳ್ಳುಗಾರಿಕೆಯ ಕಲೆಯೂ ಪ್ರಾರಂಭವಾಗಿರಬಹುದೇ? ಮುಂದೊಂದು ದಿನ ಮಾನವಶಾಸ್ತ್ರಜ್ಞರು ಇದರ ಬಗೆಗೆ ಸಂಶೋಧನೆ ಮಾಡಬಹುದು!

> ಮನುಷ್ಯ, ಸತ್ಯದ ತಲೆ ಮೇಲೆ ಹೊಡೆಯುವಂಥ ಸುಳ್ಳಗಳನ್ನು ಹೇಳಲು ಯಾವಾಗ ಕಲಿತ? ಎಷ್ಟೇ ಸತ್ಯನಾರಾಯಣ ವ್ರತ ಮಾಡಿದರೂ ಸುಳ್ಳಿನ ಬಂಧ ಗಟ್ಟಿಯಾಗುತ್ತಲೇ ಹೊರಟಿದ್ದೇಕೆ?

ಸುಳ್ಳಿನ ಉಗಮದ ಕಥೆಗಾಗಿ 'ಇನ್ವೆನ್ಷನ್ ಆಫ್ ಲೈಯಿಂಗ್' ಎನ್ನುವ ತಮಾಷೆಯ ಇಂಗ್ಲಿಷ್ ಚಿತ್ರ ನೋಡಬಹುದು. ಜನರಿಗೆ ಸುಳ್ಳೇ ಗೊತ್ತಿರದಿದ್ದ ಕಾಲವದು. ನಿಘಂಟುಗಳಲ್ಲಿ ಅಂತಹ ಶಬ್ದವೂ ಇರಲಿಲ್ಲ. ಕಥಾನಾಯಕ ಮಧ್ಯವಯಸ್ಸಿನ ಅನಾಕರ್ಷಕ ವಿಫಲ ಚಿತ್ರಕಥೆಗಾರ. ಬಾಡಿಗೆ ಕಟ್ಟದಿದ್ದರೆ ಮನೆ ಖಾಲಿ ಮಾಡಬೇಕಾದ ದುಃಸ್ಥಿತಿಯಲ್ಲಿ ಬ್ಯಾಂಕಿನ ಖಾತೆಯಲ್ಲಿ ಇರುವಷ್ಟು ಹಣ ತೆಗೆಯಲು ಹೋಗುತ್ತಾನೆ. ಆ ದಿನ ಬ್ಯಾಂಕಿನ ಯಂತ್ರಗಳು ಕೆಟ್ಟು ಹೋಗಿದ್ದರಿಂದ, ನಿಮ್ಮ ಖಾತೆಯಲ್ಲಿ ಎಷ್ಟು ಹಣವಿತ್ತು ಎಂದು ಗುಮಾಸ್ತೆ ಕೇಳುತ್ತಾಳೆ. ಅವನ ಖಾತೆಯಲ್ಲಿ ಕೆಲವೇ ಡಾಲರ್ ಇತ್ತೆಂದು ಅವನಿಗೂ ಗೊತ್ತಿತ್ತು. ಆದರೆ ತನ್ನ ದುಃಸ್ಥಿತಿಯನ್ನು ನೆನೆಸಿಕೊಂಡು ತಾನು ಕೊಡಬೇಕಾದ ಬಾಡಿಗೆ ಬಾಕಿ ಹಣವಾದ 800 ಡಾಲರ್‌ಗಳಿತ್ತು ಎಂದು ಸುಳ್ಳು ಹೇಳುತ್ತಾನೆ.

ಅಷ್ಟರಲ್ಲಿ ಯಂತ್ರಗಳು ಸರಿಯಾಗಿ ಇವನ ಖಾತೆಯಲ್ಲಿ ಅತ್ಯಂತ ಕಡಿಮೆ ಹಣವಿದೆ ಎಂದು ತಿಳಿದಮೇಲೂ ಸುಳ್ಳಿನ ಕಲ್ಪನೆಯೇ ಇಲ್ಲದ ಗುಮಾಸ್ತೆ ಯಂತ್ರಗಳದ್ದೇ ತಪ್ಪಿರಬೇಕು ಎಂದು ಇವನನ್ನೇ ನಂಬಿ 800 ಡಾಲರ್ ಕೊಟ್ಟು ಕಳಿಸುತ್ತಾಳೆ! ಹೀಗೆ ಹೊಸದೇನನ್ನೋ ಕಂಡುಹಿಡಿದ ಖುಷಿಯಲ್ಲಿ ಅವನು ಸ್ನೇಹಿತರಿಗೆ ಸುಳ್ಳಿನ ಬಗೆಗೆ ವಿವರಿಸಲು ಯತ್ನಿಸಿ ಸೋಲುತ್ತಾನೆ. ಕೊನೆಗೆ ಸುಳ್ಳಿನ ಆಧಾರದ ಮೇಲೆ ಅದ್ಭುತ ಚಿತ್ರಕಥೆಯೊಂದನ್ನು ರಚಿಸಿ ಹಣ ಗಳಿಸುತ್ತಾನೆ. ಸುಳ್ಳಿನಿಂದ ಜನರನ್ನು ಖುಷಿಪಡಿಸಬಹುದು ಎಂದು ತಿಳಿದಾಗ ಅದು ಅಷ್ಟೇನೂ ಕೆಟ್ಟದಿರಲಾರದು ಎಂದುಕೊಳ್ಳುತ್ತಾನೆ. ಆದರೆ ಪ್ರೀತಿಸುವ ಹುಡುಗಿಗೆ ಮಾತ್ರ ಸುಳ್ಳು ಹೇಳುವುದನ್ನು ಇಷ್ಟಪಡದೆಯೇ ಅವಳನ್ನು ಗೆಲ್ಲುತ್ತಾನೆ.

10ನೇ ಪುಟಕ್ಕೆ...

ಕೊರೊನಾ ಸಂಗೀತದ ಮಂದ್ರ ರಾಗ!

> ಆನ್‌ಲೈನ್ ಕಛೇರಿಗಳು ಕಲಾವಿದರೊಳಗಿನ ಜೀವರಸವನ್ನು ಬತ್ತದಂತೆ ಇಟ್ಟುಕೊಳ್ಳಲು ನೆರವಾಗಿದ್ದರೂ ಬದುಕಿಗೆ ಬೇಕಾದ ಮೂಲ ದ್ರವ್ಯವಾದ 'ಆದಾಯ' ಇಲ್ಲಿ ದೊಡ್ಡ ಪ್ರಶ್ನೆಯೇ ಆಗಿದೆ.

ಶ್ರೀಮತಿ ದೇವಿ

ಹಿಂದಿನ ವರ್ಷ ಮಾರ್ಚ್‌ನಲ್ಲಿ ಕೊರೊನಾದ ಹಾವಳಿ ಆರಂಭವಾದಾಗ ಉಳಿದೆಲ್ಲಾ ಕ್ಷೇತ್ರಗಳಂತೆ ಸಂಗೀತ ಲೋಕವೂ ನಲುಗಿಹೋಗಿತ್ತು. ಲಕ್ಷಗಳಲ್ಲಿ ಆದಾಯ ಗಳಿಸುತ್ತಾ ದೇಶ ವಿದೇಶಗಳಲ್ಲಿ ಕಾರ್ಯಕ್ರಮ ನೀಡುತ್ತಾ ಓಡಾಡಿಕೊಂಡಿದ್ದ ಹಿರಿಯ, ಹೆಸರಾದ ಸಂಗೀತಗಾರರಿಂದ ಹಿಡಿದು, ಆಗಷ್ಟೇ ಬೆಳಕಿಗೆ ಬರುತ್ತಿದ್ದ ಯುವ ಕಲಾವಿದರು, ಸಣ್ಣ ಪುಟ್ಟ ಕಾರ್ಯಕ್ರಮಗಳೊಂದಿಗೆ ಹೊಟ್ಟೆಪಾಡಿಗಾಗಿ ಸಂಗೀತ ತರಗತಿಗಳನ್ನು ನಡೆಸುತ್ತಿದ್ದ ಅನೇಕ ಕಲಾವಿದರು ತೊಂದರೆಯಲ್ಲಿ ಸಿಲುಕಿದರು. ಆದರೆ, ಮುಂದೆ ಕೆಲವೇ ದಿನಗಳಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಸಾಮಾಜಿಕ ಜಾಲತಾಣಗಳನ್ನು ಉಪಯೋಗಿಸತೊಡಗಿದವರೂ ಸಂಗೀತದವರೇ ಆಗಿದ್ದರು.

ದಿನ ಬೆಳಗಾಗಿ ಫೇಸ್‌ಬುಕ್ ತೆರೆದರೆ, ಅಲ್ಲಿ 'ಫೇಸ್‌ಬುಕ್ ಲೈವ್' ಕಛೇರಿಗಳ ಸಾಲೋ ಸಾಲು. ಹಲವಾರು ಪೇಜ್‌ಗಳಲ್ಲಿ ನಿಗದಿತ ಹೊತ್ತಿಗೆ ಸರಿಯಾಗಿ ನಡೆಯುತ್ತಿದ್ದ ಕಾರ್ಯಕ್ರಮಗಳಿಗೆ ಅವರದ್ದೇ ಆದ ಕೇಳುಗರ ವರ್ಗ ಸೃಷ್ಟಿಯಾಗಿತ್ತು ಮತ್ತು ಅವರು ಪ್ರತಿದಿನ ನಿಗದಿತ ಕಾರ್ಯಕ್ರಮದಲ್ಲಿ ಭಾಗಿಯಾಗಿ ಕಲಾವಿದರ ಬಗ್ಗೆ, ರಾಗದ ಬಗ್ಗೆ ಕಮೆಂಟುಗಳ ಮೂಲಕ ಮಾತಾಡಿಕೊಳ್ಳುವುದು ಇವೆಲ್ಲಾ ನಡೆದಿತ್ತು. ಇವುಗಳಲ್ಲಿ ಕೆಲವು ಪೇಜ್‌ಗಳು ಮೊದಲಿನಿಂದಲೂ ಸಂಗೀತ ಕಾರ್ಯಕ್ರಮಗಳನ್ನು ಸಾರ್ವಜನಿಕವಾಗಿ ನಡೆಸುತ್ತಿದ್ದ ಸಂಸ್ಥೆಗಳಿಗೆ ಸೇರಿದವಾಗಿದ್ದರೆ, ಇನ್ನೂ ಕೆಲವು ಬದಲಾದ ಸಂದರ್ಭದಲ್ಲಿ ಲೈವ್ ಕಾರ್ಯಕ್ರಮಗಳನ್ನು ನಡೆಸಲೆಂದೇ ರೂಪುಗೊಂಡವು.

ಮೊದಲ ಬಾರಿಗೆ ಹಿಂದೂಸ್ತಾನಿ ಕಛೇರಿಗಳನ್ನು ಆರಂಭಿಸಿದ ಪೇಜ್‌ಗಳೆಂದರೆ ಮಹಾರಾಷ್ಟ್ರದ 'ಹಿಂದೂಸ್ತಾನಿ ಕ್ಲಾಸಿಕಲ್ ಮ್ಯೂಸಿಕ್ ಆ್ಯಂಡ್ ಎವ್ರಿಥಿಂಗ್' ಹಾಗೂ 'ಆರ್ಟಿಸ್ಟ್ಸ್ ಯುನೈಟೆಡ್'. ಈ ಎರಡು ಪೇಜ್‌ಗಳು ಪ್ರತಿನಿತ್ಯ ಗಾಯನ, ವಾದನ, ನೃತ್ಯ ಕಾರ್ಯಕ್ರಮಗಳನ್ನು ಶಿಸ್ತುಬದ್ಧವಾಗಿ ಆಯೋಜಿಸಿದವಲ್ಲದೆ, ಭಾಗವಹಿಸಿದ ಯುವ ಕಲಾವಿದರನ್ನು ಗೌರವದಿಂದ ನಡೆಸಿಕೊಂಡಿದ್ದವು. ಮುಂದೆ ಕೆಲವೇ ದಿನಗಳಲ್ಲಿ ಸ್ವರಸಂಪದ, ಇಂದೋರ್‌ನ ತಾಲಸ್ವರಾಂಜಲಿ, ಲಾತೂರಿನ ಶ್ರುತಿನಾದ್, ಉತ್ತರಭಾರತದ ರಾಷ್ಟ್ರೀಯ ಸಂಗೀತಜ್ಞ ಪರಿವಾರ್, ಆರ್ಟ್ ಆ್ಯಂಡ್ ಸೌಲ್ ಫೌಂಡೇಷನ್, ಬ್ಯಾನ್ಯನ್ ಟ್ರೀ, ಕೋಲ್ಕತ್ತದ ಕೆಲವು ಪೇಜ್‌ಗಳಲ್ಲೆಲ್ಲಾ ಕಾರ್ಯಕ್ರಮಗಳು ನಡೆಯತೊಡಗಿದವು. ಅವುಗಳಲ್ಲಿ ವಿಶೇಷ ಜನಾದರವನ್ನು ಪಡೆದು, ಇನ್ನೂ ಮುಂದುವರಿಯುತ್ತಿರುವುದು ಪಂ.ಜಸರಾಜ್ ಅವರ ಮಗಳು ದುರ್ಗಾ ಜಸರಾಜ್ ನಡೆಸುತ್ತಿರುವ 'ಉತ್ಸಾಹ್' ಎಂಬ ಹೆಸರಿನ ಕಾರ್ಯಕ್ರಮ, ಪ್ರತಿಷ್ಠಿತ 'ಎಚ್‌ಸಿಎಲ್ ಕಛೇರಿಗಳು', 'ಫಸ್ಟ್ ಎಡಿಷನ್ ಆರ್ಟ್ಸ್' ನಡೆಸುವ ಸಂಗೀತ ಕಛೇರಿಗಳು.

'ಕೆಡೆನ್ಸ್ ಎಂಟರ್‌ಟೇನ್‌ಮೆಂಟ್' ಹಾಗೂ ಇತರ ಕೆಲವು ಸಂಸ್ಥೆಗಳು ಟಿಕೆಟ್‌ಗಳನ್ನು ಇರಿಸಿ ಇದರ ಮೂಲಕ ಕಲಾವಿದರಿಗೆ ಒಳ್ಳೆಯ ಗೌರವಧನ ನೀಡಿ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಕರ್ನಾಟಕದ ಆಯೋಜಕರಲ್ಲಿ ಆನ್‌ಲೈನ್ ಕಾರ್ಯಕ್ರಮಗಳನ್ನು ನಡೆಸಿದ್ದು 'ಬಿಜಾಪುರೆ ಹಾರ್ಮೋನಿಯಂ ಫೌಂಡೇಷನ್', 'ಪರಂಪರಾ ಸಂಗೀತ ಪ್ರತಿಷ್ಠಾನ', 'ಗಂಧಾರ ಸಂಗೀತ ಸಭಾ', 'ನಟರಾಜ ಸಂಗೀತ ವಿದ್ಯಾಲಯ', ಬೆಳಗಾವಿಯ 'ಸ್ವರಮಲ್ಹಾರ್' ಸಂಸ್ಥೆಗಳು. ಕರ್ನಾಟಕಿ ಸಂಗೀತದಲ್ಲೂ 'ಮಣಿಕೃಷ್ಣಸ್ವಾಮಿ ಅಕಾಡೆಮಿ', 'ಲೈವ್ ಫಾರ್ ಯು' ಈ ಪೇಜ್‌ಗಳಲ್ಲಿ ಈಗಲೂ ಕಾರ್ಯಕ್ರಮಗಳು ನಡೆಯುತ್ತಿವೆ. ಇವುಗಳ ಪೈಕಿ ಮರೆಯಲ್ಲುಳಿದ ಪ್ರತಿಭಾವಂತರನ್ನು ಹುಡುಕಿ, ವೇದಿಕೆ ನೀಡಿ ಅವಿರತವಾಗಿ ಕಾರ್ಯಕ್ರಮ ನಡೆಸುತ್ತಾ ಬಂದವರೆಂದರೆ, ಮೈಸೂರಿನ 'ಗಾಯನ ಸಭಾ' ನಡೆಸುವ ಹರ್ಷ ಹಾಗೂ ಅಹಮದಾಬಾದ್‌ನಲ್ಲಿ ನೆಲೆಸಿರುವ ವಕೀಲರಾದ ಮಿಹಿರ್ ಠಾಕೋರೆ.

11ನೇ ಪುಟಕ್ಕೆ...

ಜಾತಿ ಜಾಡ್ಯದ **ಕೊಳಕು ಮುಖಗಳು**

ದಯಾನಂದ

'ಕೋರ್ಟ್ ಮಾರ್ಷಲ್' ದೃಶ್ಯ

ಹಿಮಾದಾಸ್ 2018ರ ವರ್ಲ್ಡ್ ಜೂನಿಯರ್ ಅಥ್ಲೆಟಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಾಗ ಆಕೆಯ ಈ ಸಾಧನೆಯ ಜತೆಗೆ ಆಕೆಯ ಜಾತಿಯನ್ನು ಭಾರತೀಯರು ಅಂತರ್ಜಾಲದಲ್ಲಿ ಜಾಲಾಡಿದ್ದು ದೊಡ್ಡ ಸುದ್ದಿಯಾಗಿತ್ತು. ಭಾರತದ ಮಟ್ಟಿಗೆ ಪ್ರತಿಭೆ, ಸಾಧನೆಗಳ ಜತೆಗೆ ಜಾತಿಯೂ ಸುತ್ತಿಕೊಳ್ಳುವುದು ಇಲ್ಲಿನ ಎಲ್ಲಕ್ಕಿಂತಲೂ ವಿಪರೀತವಾದ ಕಾಯಿಲೆ. ಈ ಕಾಯಿಲೆಯನ್ನು ಸೇನಾ ವಿಚಾರಣೆಯ ಭಿತ್ತಿಯಲ್ಲಿ ಬಿಚ್ಚಿಡುತ್ತಾ ಹೋಗುವ ನಾಟಕ 'ಕೋರ್ಟ್ ಮಾರ್ಷಲ್' ಈಚೆಗೆ (ಲಾಕ್‌ಡೌನ್‌ಗೂ ಮೊದಲು) ಬೆಂಗಳೂರಿನಲ್ಲಿ ಪ್ರದರ್ಶನಗೊಂಡಿತು.

ಹಿಂದಿ ಲೇಖಕ ಸ್ವದೇಶ್ ದೀಪಕ್ ರಚನೆಯ ಮೂರು ದಶಕಗಳ ಹಿಂದಿನ ನಾಟಕ 'ಕೋರ್ಟ್ ಮಾರ್ಷಲ್' ಅನ್ನು ವರ್ತಮಾನದಲ್ಲಿ ನಮ್ಮ ಸಂದರ್ಭಕ್ಕೆ ಒಗ್ಗುವಂತೆ ವಿನ್ಯಾಸ ಮಾಡಿದ್ದು ನಿರ್ದೇಶಕ ಕೆ.ಪಿ. ಲಕ್ಷ್ಮಣ್. 'ಹಳೆಯ' ನಾಟಕಗಳನ್ನು ಹೊಸತೆನ್ನುವಂತೆ ಮರುರೂಪಿಸುವ ಲಕ್ಷ್ಮಣ್ ಈ ಹಿಂದೆ 'ದಿ ಲೀಡರ್', 'ದ್ವೀಪ'ದಂತಹ ನಾಟಕಗಳನ್ನು ವರ್ತಮಾನಕ್ಕೆ ಒಪ್ಪುವಂತೆ ರೂಪಿಸಿರುವಂತೆಯೇ 'ಕೋರ್ಟ್ ಮಾರ್ಷಲ್' ನಾಟಕದಿಂದಲೂ 'ಹಳೆಯ' ಲೇಬಲ್ ಕಿತ್ತುಹಾಕಿದ್ದಾರೆ.

ಕಾಲದೇಶಗಳ ಮೇರೆ ಮೀರಿ ನಾಟಕ ಶಿಲ್ಪವನ್ನು ವಿಸ್ತರಿಸುವ ಲಕ್ಷ್ಮಣ್‌ರ ನಿರ್ದೇಶನದಲ್ಲಿ ಮೂಡಿದ 'ಕೋರ್ಟ್ ಮಾರ್ಷಲ್' ಕೂಡಾ ಇಂದಿನ ನಮ್ಮದೇ ಸಂದರ್ಭದ ಒಂದು ಘಟನೆಗೆ ನೋಡುಗರು ಪ್ರತ್ಯಕ್ಷದರ್ಶಿಗಳಾಗಿರುವಂತೆ ಮಾಡಿತ್ತು. ಅಭಿನಯ ತರಂಗದ ವಿದ್ಯಾರ್ಥಿನಿ/ವಿದ್ಯಾರ್ಥಿಗಳ ತಂಡವು ನುರಿತ ಕಲಾವಿದರಂತೆ ಅಭಿನಯಿಸಿದ್ದು ಕೂಡಾ ಈ ನಾಟಕದ ಪರಿಣಾಮವನ್ನು ಹೆಚ್ಚಿಸಿತ್ತು.

ಸೇನಾಧಿಕಾರಿ ಕ್ಯಾಪ್ಟನ್ ವರ್ಮಾನನ್ನು ಕೊಂದ, ಮತ್ತೊಬ್ಬ ಸೇನಾಧಿಕಾರಿ ಕ್ಯಾಪ್ಟನ್ ಕಪೂರ್ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಿದ ಆರೋಪ ಎದುರಿಸುತ್ತಿರುವ 'ಸವಾರ್' ರಾಮಚಂದ್ರನ ವಿಚಾರಣೆಯೊಂದಿಗೆ ಆರಂಭಗೊಳ್ಳುವ ನಾಟಕ, ವ್ಯವಸ್ಥೆಯಲ್ಲಿ ನಿಜವಾದ ಅಪರಾಧಿಗಳು ಯಾರು, ತಪ್ಪಿತಸ್ಥರ ಜಾಗದಲ್ಲಿ ನಿಲ್ಲಬೇಕಾದವರು ಯಾರು, ಯಾರ ಅಹಮ್ಮಿಗೆ, ಅಂತಸ್ತು-ಅಧಿಕಾರದ ಅಮಲಿಗೆ ಯಾರೆಲ್ಲಾ ಹೇಗೆ ಹೇಗೆ ಬಲಿಯಾಗುತ್ತಾರೆ ಎಂಬುದನ್ನು ತಣ್ಣಗೆ ತೆರೆದಿಡುಯುತ್ತಾ ಹೋಗುತ್ತದೆ.

ರಾಮಚಂದ್ರನ ಪ್ರತಿಭೆಯ ಭಯ ಕ್ಯಾಪ್ಟನ್ ಕಪೂರ್‌ನ ಅಸಹನೆಯನ್ನು ಹೆಚ್ಚಿಸಿರುತ್ತದೆ. ತನ್ನ ಮೇಲಾಗುವ ಶೋಷಣೆ-ಅಪಮಾನಗಳನ್ನು ಸಹಿಸಿಕೊಂಡು ಬರುವ ರಾಮಚಂದ್ರ ಒಂದು ಹಂತದಲ್ಲಿ ಸಹನೆಯ ಕಟ್ಟೆಯೊಡೆದು ಕ್ಯಾಪ್ಟನ್ ವರ್ಮಾ ಮತ್ತು ಕ್ಯಾಪ್ಟನ್ ಕಪೂರ್ ಮೇಲೆ ಗುಂಡು ಹಾರಿಸಿರುತ್ತಾನೆ. ಈ ಪ್ರಕರಣದ ವಿಚಾರಣೆಯಲ್ಲಿ ಸತ್ಯದ ಮೇಲೆ ಹೊದಿಸಿರುವ ಪೊರೆಗಳನ್ನು ಕಳಚುತ್ತಾ ಹೋಗುವುದು ನಾಟಕದ ಹೆಚ್ಚುಗಾರಿಕೆ.

> ಕೋರ್ಟ್ ಮಾರ್ಷಲ್ ನಾಟಕವನ್ನು ಕೇವಲ ಪ್ರತೀಕಾರದ ನೆಲೆಯಲ್ಲಿ ನೋಡಿದರೆ ಸಾಮಾಜಿಕ ಆಯಾಮಗಳ ಬೇರೆ ಬೇರೆ ಬಾಗಿಲುಗಳನ್ನು ಮುಚ್ಚಿದಂತೆಯೇ. ದೇಶಕಾಲಗಳ ಮೇರೆ ಮೀರಿ ವಿಸ್ತಾರಗೊಳ್ಳುವ ಈ ನಾಟಕ ಜಾತಿ ಜಾಡ್ಯವನ್ನು ಮುಖಕ್ಕೆ ರಾಚಿದಂತೆ ಎತ್ತಿ ತೋರುತ್ತದೆ...

ರಂಗಭೂಮಿ

ಸ್ವಾತಂತ್ರ್ಯಪೂರ್ವದ ಕಂಪೆನಿಯ ಸೇನಾ ವ್ಯವಸ್ಥೆಗಿಂತಲೂ ಹಿಂದೆ ಕೂಡಾ ಈ ದೇಶದ ಸಂಸ್ಥಾನಗಳ ಸೇನೆಯಲ್ಲಿ ಕಾಲಾಳುಗಳಾಗಿ 'ಸೇವೆ'ಯಲ್ಲಿದ್ದ ಹೆಚ್ಚಿನವರು ಯಾರು, ಇವತ್ತಿಗೂ ಸೇನೆಯಲ್ಲಿ 'ಜವಾನ'ರಾಗಿರುವ ಹೆಚ್ಚಿನವರು ಯಾರು ಎಂಬುದನ್ನು ನೋಡಿದರೆ ಸೇನೆಯ ಇತಿಹಾಸ ಹಾಗೂ ವರ್ತಮಾನ ಎರಡರಲ್ಲೂ ತಳಸಮುದಾಯಗಳ ಬಹುಜನರೇ ಕಾಣುತ್ತಾರೆ. ಸಾಮಾಜಿಕ-ಆರ್ಥಿಕ ಎಂಬುದು ಬೇರೆಬೇರೆಯಾಗಿಲ್ಲದ ಭಾರತದಲ್ಲಿ ಬಡತನದ ಕಾರಣಕ್ಕೆ ತಳಸಮುದಾಯಗಳ ಯುವಜನರು ಸೇನೆಯ ಕಾಲಾಳುಗಳಾಗುವ 'ಸತ್ಯ'ವನ್ನು ಮುಚ್ಚಿಡುವ ಕುಯತ್ನಗಳ ಮಧ್ಯೆಯೇ 'ಕೋರ್ಟ್ ಮಾರ್ಷಲ್' ನಾಟಕ ಸೇನೆಯೊಳಗೂ ಇರುವ ಜಾತಿ ತಾರತಮ್ಯದ ಸತ್ಯವನ್ನು ಬಿಚ್ಚಿಡುವ ಪ್ರಯತ್ನ ಮಾಡುತ್ತದೆ.

ಮೇಲ್ವರ್ಗ ಎಂಬುದೂ ಪ್ರಬಲ ಜಾತಿಗಳ ಹಿಡಿತದಲ್ಲೇ ಇರುವ ಭಾರತದಲ್ಲಿ ಅಧಿಕಾರವೂ ಪ್ರಬಲ ಜಾತಿಗಳ ಸುತ್ತಲೇ ಗಿರಕಿ ಹೊಡೆಯುತ್ತಿದೆ. ಸೇನೆಯಲ್ಲಿ ಜಾತಿ ಆಧಾರಿತ ಮೀಸಲಾತಿ ಇಲ್ಲದೇ ಇದ್ದರೂ ಜಾತಿಯ ಕಾರಣಕ್ಕೆ ತಳಸಮುದಾಯಗಳ, ಅಸ್ಪೃಶ್ಯರ ಶೋಷಣೆಯು ಸೇನೆಯೊಳಗಿನ ಅಧಿಕಾರ ವ್ಯವಸ್ಥೆಯ ನೆರಳಲ್ಲೇ ತಣ್ಣಗೆ ನಡೆಯುತ್ತಿದೆ ಎಂಬುದನ್ನು ಈ ನಾಟಕ ಎತ್ತಿತೋರುತ್ತದೆ. ಬ್ರಿಟಿಷ್ ವ್ಯವಸ್ಥೆಯ ಕಲೋನಿಯಲ್ ಕುರುಹುಗಳು ಸೇನೆಯೊಳಗೆ ಹೇಗೆಲ್ಲಾ ಜೀವಂತವಾಗಿದ್ದು ದಲಿತರನ್ನು ಶೋಷಿಸುತ್ತಿವೆ ಎಂಬುದು ರಾಮಚಂದ್ರನ ವಿಚಾರಣೆಯ ಕಲಾಪದಲ್ಲಿ ಬಹಿರಂಗವಾಗುತ್ತಾ ಸಾಗುತ್ತದೆ. ಜತೆಜತೆಗೆ ಸೇನಾ ವ್ಯವಸ್ಥೆಯ ಆಚೆಗೂ ಇರುವ ಶೋಷಣೆಯ ಸ್ವರೂಪಗಳ ಕಡೆಗೂ ನಾಟಕ ವಿಸ್ತರಿಸಿಕೊಳ್ಳುತ್ತದೆ.

ನಾಟಕದಲ್ಲಿ ವಿಚಾರಣೆ ನಡೆಯುತ್ತಾ ಹೋಗುವುದು ಆರೋಪಿ ಸ್ಥಾನದಲ್ಲಿರುವ ರಾಮಚಂದ್ರನದ್ದಾದರೂ ನಾಟಕ ಬೆಳೆಯುತ್ತಾ ಹೋದಹಾಗೆ ಆತನ ಮೇಲೆ ಕೊಲೆಯ ಆರೋಪ ಹೊರಿಸಿರುವವರೇ ತಮ್ಮ ಬುದ್ಧಿಭಾವಗಳಲ್ಲಿ ಮಾನವೀಯತೆಯನ್ನು ಕೊಂದುಕೊಂಡು ಘೋರ ಪಾತಕ ಮಾಡಿದ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾದ ಅನಿವಾರ್ಯಕ್ಕೆ ಸಿಕ್ಕಿಬೀಳುತ್ತಾರೆ.

ರಾಮಚಂದ್ರನ ಪರ ವಾದ ಮಾಡುವ ಕ್ಯಾಪ್ಟನ್ ಬಿಕಾಶ್ ರಾಯ್ ಪಾತ್ರ ಹಾಗೂ ಆರೋಪಿಯ ಸ್ಥಾನದಲ್ಲಿ ಕೂತು ನಿಸ್ತೇಜಗೊಳ್ಳುತ್ತಾ ಹೋಗುವ ರಾಮಚಂದ್ರನ ಪಾತ್ರ ಹೆಚ್ಚು ಕಾಡುತ್ತವೆ.

ಶೋಷಣೆಯ ವಿರುದ್ಧ ಹಿಂಸೆ ಅನಿವಾರ್ಯ ಅಲ್ಲ ಎಂದರೂ ವ್ಯಕ್ತಿಘನತೆಯನ್ನು ಇನ್ನಿಲ್ಲದಂತೆ ಕುಗ್ಗಿಸಿಬಿಡುವ ಸಂದರ್ಭದಲ್ಲಿ ನಡೆಯುವ ಹಿಂಸೆಗೆ ವ್ಯಾಖ್ಯಾನ ಕೊಡುವುದು ಕಷ್ಟ. ಇದನ್ನು ಪ್ರತೀಕಾರದ ನೆಲೆಯಲ್ಲಷ್ಟೇ ನೋಡಿದರೆ ಸಾಮಾಜಿಕ ಆಯಾಮಗಳ ಬೇರೆ ಬೇರೆ ಬಾಗಿಲುಗಳನ್ನು ಮುಚ್ಚಿದಂತೆಯೇ. ಜಾತಿ ಜಾಡ್ಯಕ್ಕೆ ಶಸ್ತ್ರಚಿಕಿತ್ಸೆಗಳ ಉದಾಹರಣೆಗಳು ನಮ್ಮ ಕಾಲದಲ್ಲೇ ನಡೆಯುತ್ತಿರುವಾಗ ಈ ನಾಟಕವನ್ನು ಕೇವಲ ನಾಟಕವಾಗಷ್ಟೇ ನೋಡಲು ಸಾಧ್ಯವಿಲ್ಲ.

ಕೂಡ್ಯಾವ ಮೋಡ...

ಮಳೆಯ ನಡುವೆ ನೆಟ್ಟಿ ಕೆಲಸ...

8ನೇ ಪುಟದಿಂದ...

ಈ ಚಲನೆಗೆ 40-50 ದಿನ ಬೇಕು. ಈ ಮಾರುತಗಳು ಹಿಮಾಲಯ ಪರ್ವತ ಶ್ರೇಣಿಗೆ ಡಿಕ್ಕಿ ಹೊಡೆದು ಬಳಿಕ ಪೂರ್ವದತ್ತ ಚಲಿಸಿ ಗಂಗಾ ನದಿಯ ತಪ್ಪಲು ಪ್ರದೇಶದಲ್ಲಿ ಸಾಗುತ್ತವೆ. ತಪ್ಪಲು ಪ್ರದೇಶದಲ್ಲಿ ಈ ಮಾರುತಗಳು ವೇಗ ಪಡೆದುಕೊಳ್ಳುತ್ತವೆ. ಜುಲೈ ಹದಿನೈದರ ಹಾಗೆ ಮಳೆ ಮಾರುತಗಳು ದೆಹಲಿ ಸುತ್ತಲಿನ ಪ್ರದೇಶವನ್ನು ಪ್ರವೇಶಿಸುತ್ತವೆ. ಇದೇ ಅವಧಿಯಲ್ಲಿ ಪಂಜಾಬ್, ಹರಿಯಾಣ ಭಾಗದಲ್ಲಿ ಪ್ರವಾಹ ಸ್ಥಿತಿ ಏರ್ಪಡುತ್ತದೆ. ಇಲ್ಲಿಂದ ಮುಂದೆ ಸಾಗುವ ಮಳೆ ಮಾರುತಗಳು ರಾಜಸ್ಥಾನದಿಂದ ಹಿಮಾಚಲ ಪ್ರದೇಶದವರೆಗೆ ಹಬ್ಬಿರುವ ಅರಾವಳಿ ಪರ್ವತವನ್ನು ಅಪ್ಪಳಿಸುತ್ತವೆ. ಈ ಪರ್ವತ ಶ್ರೇಣಿಯನ್ನು ದಾಟಲಾರದ ಮಳೆ ಮಾರುತಗಳು ಮತ್ತೆ ಹಿಂತಿರುಗಲು ಶುರುಮಾಡುತ್ತವೆ. ಗಂಗಾ ನದಿಯ ತಪ್ಪಲು ಪ್ರದೇಶಗುಂಟ ಸಾಗಿ ಹಿಮಾಲಯ ತಲುಪಿ ಮತ್ತೆ ದಕ್ಷಿಣದತ್ತ ಮುಖ ಮಾಡುತ್ತವೆ. ಇದೇ ಈಶಾನ್ಯ ಮುಂಗಾರು.

ತಮಿಳುನಾಡು, ಪುದುಚೇರಿ ಹಿಂಗಾರು ಮಳೆಯನ್ನೇ ನಂಬಿದ ರಾಜ್ಯಗಳು. ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತವಾದಂತೆಯೇ ಈ ಮಾರುತಗಳಿಗೆ ಮತ್ತೆ ವೇಗ ಬರುತ್ತದೆ. ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಈಶಾನ್ಯ ಮುಂಗಾರಿನ ಆರ್ಭಟ ಹೆಚ್ಚು. ಮುಂಗಾರು ಚಂಡಮಾರುತಗಳ ಥರ ಅವಾಂತರಿಯಲ್ಲ. ಇದೇನಿದ್ದರೂ ಗುಡುಗು, ಮಿಂಚುಗಳ ಅದ್ಧೂರಿಯಿಂದ ಬರುವ ರಾಜ ಮೆರವಣಿಗೆ.

ಕೆಲವು ಪ್ರದೇಶಗಳಿಗೆ ಮುಖ ತೋರಿಸದೆ ಮುನಿಸಿಕೊಂಡು ಹೋಗಿ ಬಿಡುವ ಮುಂಗಾರು, ಕೆಲವೊಮ್ಮೆ ವಾರಗಟ್ಟಲೆ ಸುರಿದು ಇಳೆಗೆ ಹಸಿರು ಸೀರೆ ಉಡಿಸಿ ಹೋಗುತ್ತದೆ. ಕೆಲವು ವಾರ ಶುಭ್ರ ಆಕಾಶ. ಆಗಾಗ ಜಡಿ ಮಳೆ, ಸಾಕೆನಿಸುವಷ್ಟು ಸುರಿದು ವಿದಾಯ ಹೇಳುತ್ತದೆ. ಆಗ್ನೇಯ ಏಷ್ಯಾದ ಕೃಷಿ ಭವಿಷ್ಯ ಮತ್ತು ಅರ್ಧ ಭೂಮಂಡಲದ ಬದುಕಿನ ಹಣೆಬರಹವನ್ನು ಮುಂಗಾರು ನಿರ್ಧರಿಸುತ್ತದೆ. ಭಾರತದ ಆರ್ಥಿಕತೆ, ನೆರೆ ಪರಿಹಾರ, ಸರ್ಕಾರಿ ನೆರವು, ಮಾರುಕಟ್ಟೆಯ ಬೆಲೆ ಮುಂಗಾರಿನ ಮೇಲೆ ಅವಲಂಬಿತವಾಗಿವೆ. ನಿಜ ಅರ್ಥದಲ್ಲಿ ಮುಂಗಾರೇ ಈ ದೇಶದ ಹಣಕಾಸು ಮಂತ್ರಿ. ಮುಂಗಾರು ವಿಳಂಬ ದೇಶದ ಆರ್ಥಿಕತೆಯ ಮೇಲೆ ಗಾಢ ಪರಿಣಾಮ ಬೀರುತ್ತದೆ.

ಕೋಣೆಯೊಂದರಲ್ಲಿ ಸಿಗರೇಟ್ ದಂ ಎಳೆದು ಹೊಗೆ ಬಿಡುವುದನ್ನು ನೋಡಿ. ಎರಡನೇ ಬಾರಿ ಬಿಟ್ಟ ಹೊಗೆ ಸುರುಳಿ ಮೊದಲಿನಂತಿರದು. ಪ್ರತೀ ಬಾರಿಯೂ ಹೊಗೆ ಸುರುಳಿ ನಮ್ಮ ನಿರೀಕ್ಷೆಗೆ ಸಿಗದೆ ಬೇರೆ ಬೇರೆ ಆಕಾರ ಪಡೆಯುತ್ತದೆ. ವಾತಾವರಣದಲ್ಲಿ ಗಾಳಿಯ ಚಲನೆ ಕೂಡ ಇದೇ ರೀತಿ. ಯಾವಾಗ ಯಾವ ದಿಕ್ಕಿನತ್ತ ಗಾಳಿ, ಮುಂಗಾರು ಮಾರುತಗಳನ್ನು ಕರೆದೊಯ್ಯುತ್ತದೆ ಎಂದು ಯಾರೂ ಅಂದಾಜು ಮಾಡಲಾಗದು.

ಮುಂಗಾರಿನ ಸಂಭ್ರಮ

ಮುಂಗಾರು ಬಂತೆಂದರೆ ಮೀನುಪ್ರಿಯರಿಗೆ ಇನ್ನಿಲ್ಲದ ಉತ್ಸಾಹ. ಮೀನಿನ ಬಲೆ, ಕೊಡುಮೆ ಹಿಡಿದು ಮೀನುಬೇಟೆಗೆ ಹೊರಡುತ್ತಾರೆ. ಈ ಸೀಸನಲ್ ಮೀನುಗಾರರ ಕಥೆಗಳ ಕೇಳುವುದೇ ಒಂದು ಸೊಗಸು. ನಮ್ಮ ತೋಟದ ಕೆಲಸಕ್ಕೆ ಬರುತ್ತಿದ್ದ ಕೆಲಸಗಾರರು ಜವರಪ್ಪ ಎಂಬುವನತ್ತ ಕೈ ತೋರಿ 'ಹಾವು ಹಿಡಿದು ತಂದ ಶೂರ ಇವ' ಎಂದು ನಗಾಡುತ್ತಿದ್ದರು. ಜವರಪ್ಪ ಮೀನು ಹಿಡಿಯಲು ಹೋದನಂತೆ. 'ಹಾವುಮೀನು ಅನ್ಕೊಂಡು ನೀರಳೆ ಹಾವು ಹಿಡ್ಕೊ ಬಂದವನೆ' ಅಂತ ಊರಲ್ಲಿ ಗುಲ್ಲಾಯಿತು. 'ಏನ್ ಜವರಪ್ಪ? ನಿಜಾನಾ' ಎಂದೆ. 'ಅಯ್ಯೋ ಬಿಡಿ ಸಾ! ಅವೆಲ್ಲ ನೋಡವೆ ಹಾವುಮೀನು. ಬಲೇ ಟೇಸ್ಟ್ ಇರುತ್ತೆ' ಎಂದು ಜವರಪ್ಪ ನಗಾಡಿದ.

ಒಮ್ಮೆ ಆನೇಕಲ್ ಗಡಿಗೆ ಹೊಂದಿಕೊಂಡ ಡೆಂಕಣಿಕೋಟದ ಅಂಚೆಟ್ಟಿ ಕಾಡಿಗೆ ಹೊರಟಿದ್ದೆವು. ರಸ್ತೆಯಲ್ಲಿ ಸೊಳ್ಳೆ ಪರದೆ ಮಾರಾಟಗಾರನೊಬ್ಬ ಸಿಕ್ಕ. 'ಬಿಜಿನೆಸ್ಸೇ ಇಲ್ದಂಗ ಸರ್. ಸೊಳ್ಳೇನೇ ಎದ್ದಿಲ್ಲ. ಕೊಡಗಿನಲ್ಲಿ ಮಳೆ ಕಡಿಮೆ ಅಲ್ವಾ ಸರ್ ಅದಕ್ಕೆ' ಎಂದ.

ಅರೇ! ಕೊಡಗಲ್ಲಿ ಮಳೆ ಕಡಿಮೆ ಆಗೋಕೂ, ಸೊಳ್ಳೆ ಜಾಸ್ತಿ ಆಗೋಕೂ ಎಲ್ಲಿ ಸಂಬಂಧ ಎಂದು ತಲೆ ಕೆರೆದುಕೊಂಡೆವು. 'ಕೊಡಗನಾಗೆ ಜೋರು ಮಳೆ ಆದ್ರೆ ಮೇಟೂರು ಡ್ಯಾಂ ತುಂಬುತ್ತೆ. ಜನ ಜಾಸ್ತಿ ಭತ್ತ ಬೆಳೀತಾರೆ. ಕಟ್ ಮಾಡಿದ ಕೂಳೆನಾಗೆ ಸೊಳ್ಳೆ ಮೊಟ್ಟೆ ಇಟ್ಟು ಮರೀಮಾಡ್ತವೆ. ಜಾಸ್ತಿ ಸೊಳ್ಳೆ ಏಳ್ತಾವೆ. ಅವಾಗ ನಮ್ಮ ಸೊಳ್ಳೆ ಪರದೆಗೂ ಡಿಮಾಂಡ್' ಎಂದು ಕಣ್ಣುಹೊಡೆದು ನಕ್ಕ. ಆತನ ಸೊಳ್ಳೆ ಪರದೆ ಮಾರಾಟದ ಬ್ಯುಸಿನೆಸ್ ಪ್ಲಾನ್ ಕೇಳಿ ನಾವು ದಂಗಾಗಿ ನಿಂತೆವು.

'ಮಳೆ ಬರಬೇಕು ಸಾರ್ ಮಳೆ' ಎಂದು ಟಿವಿಎಸ್ ಮೊಪೆಡ್ ಚಾಲೂ ಮಾಡಿದ.

ಬದಲಾದ ಮುಂಗಾರು

ಹವಾಮಾನ ಬದಲಾವಣೆ ಎನ್ನುವುದು ಕೆಲವು ವರ್ಷಗಳ ಹಿಂದೆ ಬರೀ ಕಾಲ್ಪನಿಕ ವಿದ್ಯಮಾನ ಎಂಬಂತೆ ಆಗಿತ್ತು. ಆದರೆ ಇತ್ತೀಚಿನ ಮಳೆ ವೈಪರೀತ್ಯಗಳನ್ನು ಗಮನಿಸಿದರೆ ಅದು ಬರೀ ಕಲ್ಪನೆಯಾಗಿ ಉಳಿದಿಲ್ಲ. ಮುಂಗಾರು ಪ್ರವೇಶಿಸುವುದು ವಿಳಂಬವಾಗುತ್ತಿದೆ. ಜೂನ್ ಮೊದಲವಾರ ಬಂದರೂ ಮತ್ತೆ ಮುಂದೆ ಕೈ ಕೊಡುತ್ತದೆ.

ಮಳೆ ಅವಧಿ ಸ್ಥಿತ್ಯಂತರವಾಗಿರುವುದರಿಂದ ಅನಿಶ್ಚಿತತೆಯಲ್ಲಿ ಕೃಷಿಮಾಡುವ ಸಂಕಷ್ಟ ರೈತಾಪಿಗಳಿಗೆ ಬಂದಿದೆ. ಮುಂಗಾರು ತಡವಾಗುತ್ತಿದೆ; ಹಿಂಗಾರು ಅವಧಿಗೆ ಮುನ್ನವೇ ಬರುತ್ತಿದೆ. ಇವೆರಡು ಹಂಗಾಮುಗಳಿಗೆ ಸಂಯೋಜಿಸಿ ಬೆಳೆಯುತ್ತಿದ್ದ ಬೆಳೆಗಳು ವಿಫಲವಾಗುತ್ತಿರುವುದಕ್ಕೆ ಇದೇ ಕಾರಣ. ಬದಲಾದ ಮಳೆಗಾಲಕ್ಕೆ ಅನುಗುಣವಾಗಿ ಯೋಜನೆಗಳನ್ನು ರೂಪಿಸುವಲ್ಲಿ ಸರ್ಕಾರಗಳು ಸೋತಿವೆ.

ಮುಂಗಾರು ಮಳೆ ಸಂಭ್ರಮದ ಜೊತೆ ದುಗುಡ ಕೂಡ ತರುತ್ತದೆ. 'ಲಾಕ್‌ಡೌನ್ ಜತೆ ಮಳೇನೂ ಶುರುವಾಯ್ತಲ್ಲ ಸಾರ್. ಮಾವು, ಕಲ್ಲಂಗಡಿ ಯಾರೂ ಕೊಳ್ಳಲ್ಲ. ಬರೀ ಲುಕ್ಸಾನು' ಬೀದಿ ಬದಿ ವ್ಯಾಪಾರಿ ಖಲಂದರ್ ಸೋತ ದನಿಯಲ್ಲಿ ಹೇಳುತ್ತಾರೆ. ಮೊನ್ನೆ, ನಮ್ಮ ತೋಟದ ಅಂಚಿನ ನೀಲಗಿರಿ ತೋಪಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿ ಗಿಡ ನೆಡ್ತಿದ್ರು. 'ಏನ್ರಿ ಇಷ್ಟು ಬಿಸಿಲು ಇದೆ. ಗಿಡ ನೆಡ್ತೀರಲ್ಲ' ಎಂದೆ. 'ಜೂನ್ ಮೊದಲನೆ ವಾರ ಅಲ್ವಾ ಸಾರ್. ಮಳೆ ಬಂದೇ ಬರ್ತದೆ' ಎಂದರು. ಅವರು ಹೇಳಿದಂತೆ ಅವತ್ತೇ ಮಳೆ ಬಂತು.

ಮುಂಗಾರು ಮಳೆಯೇ ಏನು ನಿನ್ನ ಹನಿಗಳ ಲೀಲೆ ಹಾಡು ನೆನಪಾಯ್ತು.

ಮುಂಬೈ ನಗರದ ಮೇಲೆ ಮುಂಗಾರು ಮೋಡಗಳು

ನಿಮ್ಮ ಆಸನದ ಬೆಲ್ಟ್ ಕಟ್ಟಿಕೊಳ್ಳಿ

ಕಳೆದ ಮುನ್ನೂರು ವರ್ಷಗಳಿಂದ ಮುಂಗಾರು ಮಳೆಯ ಮೇಲೆ ಅನೇಕ ಅಧ್ಯಯನಗಳಾಗಿವೆ. ಬ್ರಿಟಿಷರು ಸಹ ಮುಂಗಾರನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನ ಮಾಡಿದರು. ಬ್ರಿಟಿಷ್ ಸಾಮ್ರಾಜ್ಯದ ಆರ್ಥಿಕತೆಗೆ ಇಲ್ಲಿನ ಕೃಷಿ ಗಣನೀಯ ಕೊಡುಗೆ ನೀಡುತ್ತಿದ್ದುದರಿಂದ ಅವರಿಗೆ ಮುಂಗಾರು ಮುಖ್ಯವಾಗಿತ್ತು. ಇವತ್ತಿನವರೆಗೂ ಮುಂಗಾರನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಯಾರಿಗೂ ಸಾಧ್ಯವಾಗಿಲ್ಲ.

* ಮುಂಗಾರು ಬರುವ ಮುನ್ನಾ ದಿನಗಳಲ್ಲಿ ಜೀವ ಜಗತ್ತಿನಲ್ಲಿ ಇನ್ನಿಲ್ಲದ ಗಡಿಬಿಡಿ. ನೆಲದ ಜೊತೆ ಅವಿನಾಭಾವ ಸಂಬಂಧ ಹೊಂದಿದ ಪ್ರಾಣಿ, ಕ್ರಿಮಿ ಕೀಟ ಹಾಗೂ ಸಸ್ಯಗಳು ಹೆಚ್ಚು ಸೂಕ್ಷ್ಮ ಮತ್ತು ಸಂವೇದನೆಯನ್ನು ಉಳ್ಳವಾಗಿರುತ್ತವೆ. ಪ್ರಕೃತಿಯಲ್ಲಾಗುವ ಬದಲಾವಣೆಯನ್ನು ಬಹುಬೇಗ ಗುರುತಿಸುತ್ತವೆ ಮತ್ತು ಅದನ್ನು ತಮ್ಮ ಚಟುವಟಿಕೆಗಳಲ್ಲಿ ವ್ಯಕ್ತಪಡಿಸುತ್ತವೆ. ಈ ವರ್ತನೆಗಳನ್ನು ಅನುಭವದಿಂದ ಬಲ್ಲ ರೈತ ಸಮುದಾಯ ಅವುಗಳನ್ನಾಧರಿಸಿ ಮಳೆ-ಬೆಳೆಯ ಮುನ್ಸೂಚನೆಯನ್ನು ವಿಶ್ಲೇಷಿಸುತ್ತದೆ.

* ಮಳೆಗಾಲದಲ್ಲಿ ಮಳೆ ಮೋಡದ ನಡುವೆ ಹಾರುವ ವಿಮಾನ ಅಲುಗಾಡುವುದು ಸಾಮಾನ್ಯ. ಇದಕ್ಕೆಂಬಂತೆ ಕಾದಿದ್ದ ಗಗನಸಖಿಯಿಂದ 'ಬ್ಯಾಡ್ ವೆದರ್ ಇದೆ. ನಿಮ್ಮ ಆಸನದ ಬೆಲ್ಟ್‌ಗಳನ್ನು ಕಟ್ಟಿಕೊಳ್ಳಿ. ಶೌಚಾಲಯಕ್ಕೆ ಹೋಗಬೇಡಿ' ಎಂಬ ಉದ್ಘೋಷ ಕೇಳಿಸುತ್ತದೆ. ಪ್ರಕೃತಿಯಲ್ಲಿ ಬ್ಯಾಡ್ ವೆದರ್, ಗುಡ್ ವೆದರ್ ಎಂಬುದು ಇಲ್ಲ. ನಮ್ಮ ದೃಷ್ಟಿಕೋನವೇ ಬ್ಯಾಡ್. ಮುಂಗಾರನ್ನು ಪಿರಿಪಿರಿ ಎಂಬಂತೆ ನೋಡುವ ನಮ್ಮ ಮನಃಸ್ಥಿತಿಯ ಪ್ರತಿಫಲನ.

ಮುನ್ನೋಟ 06-06-2021 ರಿಂದ 12-06-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಆಪ್ತರೊಂದಿಗೆ ವಿಚಾರ ವಿನಿಮಯ ಮಾಡಿ ಆರ್ಥಿಕ ಸಂಕಷ್ಟದಿಂದ ಹೊರ ಬರಲು ಯೋಜನೆಯೊಂದನ್ನು ರೂಪಿಸುವಿರಿ. ರಫ್ತು ಮಾರಾಟಗಾರರಿಗೆ ವ್ಯವಹಾರ ಕುದುರುವುದರಿಂದ ಲಾಭ ಹೆಚ್ಚುತ್ತದೆ. ಅನಿರೀಕ್ಷಿತ ಧನಾಗಮನದ ಸಾಧ್ಯತೆಗಳಿವೆ. ಕಲಾವಿದರುಗಳಿಗೆ ಹೆಚ್ಚಿನ ಅವಕಾಶಗಳು ದೊರೆತು ಸಂಪಾದನೆ ಹೆಚ್ಚುತ್ತದೆ. ಅವಿವಾಹಿತರಿಗೆ ವಿವಾಹ ಸಂಬಂಧಗಳು ಒದಗಿಬರುವ ಸಾಧ್ಯತೆಗಳಿವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಕೆಲವು ಸರ್ಕಾರಿ ನೌಕರರಿಗೆ ಪದೋನ್ನತಿಯು ಆಗುವ ಲಕ್ಷಣಗಳಿವೆ ಮತ್ತು ಜವಾಬ್ದಾರಿಗಳು ಹೆಚ್ಚಾಗುತ್ತವೆ. ಕಳೆದುಹೋಗಿದ್ದ ವಸ್ತುವೊಂದು ಈಗ ಸಿಕ್ಕಿ ಮನಸ್ಸಿಗೆ ನಿರಾಳವೆನಿಸುವುದು. ನಿಂತುಹೋಗಿದ್ದ ಕೆಲವು ಯೋಜನೆಗಳು ಪುನಃ ಆರಂಭವಾಗುತ್ತವೆ. ಕೈಮಗ್ಗ ನೇಕಾರರಿಗೆ ಕೈತುಂಬಾ ಕೆಲಸ ದೊರೆಯುತ್ತದೆ. ಶೃಂಗಾರ ಸಾಮಗ್ರಿಗಳನ್ನು ಮಾರುವವರ ವ್ಯವಹಾರ ಬಹಳ ವಿಸ್ತರಿಸುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಬಂಧುಗಳೊಂದಿಗೆ ನಿಮ್ಮ ಸಂಬಂಧಗಳು ಬಹಳ ಗಟ್ಟಿಯಾಗುತ್ತವೆ. ಮನೆಯ ಜವಾಬ್ದಾರಿಗಳನ್ನು ಹೊರುವುದರಲ್ಲಿ ನಿರ್ಲಕ್ಷ್ಯ ಖಂಡಿತಬೇಡ. ಹಿರಿಯರಿಂದ ಆಸ್ತಿ ಒದಗುವ ಸಾಧ್ಯತೆಗಳಿವೆ. ವಾಹನ ಮಾರಾಟಗಾರರಿಗೆ ವ್ಯವಹಾರ ಹೆಚ್ಚಾಗಿ ಲಾಭವೂ ಹೆಚ್ಚುತ್ತದೆ. ಗೃಹ ನಿರ್ಮಾಣ ಕಾರ್ಯಗಳನ್ನು ಮಾಡಬಹುದು. ಆದರೆ ಬಂಡವಾಳದ ಬಗ್ಗೆ ಸರಿಯಾಗಿ ನಿರ್ಧಾರ ಮಾಡಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಒಂದು ಅಪವಾದದಿಂದ ಪಾರಾಗಲಿದ್ದೀರಿ. ವೃತ್ತಿ ನೈಪುಣ್ಯತೆಯಿಂದ ನೌಕರರಿಗೆ ವಿಶೇಷ ಸ್ಥಾನಮಾನಗಳು ದೊರೆಯುತ್ತವೆ. ಪದೋನ್ನತಿ ಇಂದ ಕೊಂಚ ಆರ್ಥಿಕ ಸುಧಾರಣೆ ಆಗುತ್ತದೆ. ನಿತ್ಯ ಕೆಲಸದ ಜೊತೆಗೆ ಹೊಸ ಕೆಲಸವನ್ನು ಹಮ್ಮಿಕೊಂಡು ಮಾಡಿ ಮುಗಿಸುವಿರಿ. ಮಾತನಾಡುವಾಗ ಒರಟುತನ ಖಂಡಿತ ಬೇಡ. ಮಕ್ಕಳ ನಡವಳಿಕೆಯಿಂದ ಮನಸ್ಸಿಗೆ ಬೇಸರವಾಗಬಹುದು.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಅನಿರೀಕ್ಷಿತ ಧನಲಾಭ ಹರಿದುಬರುತ್ತದೆ. ಅನಗತ್ಯ ಮಾತುಗಳು ಚರ್ಚೆಗಳಲ್ಲಿ ಭಾಗವಹಿಸದಿರುವುದು ಉತ್ತಮ. ಆಸ್ತಿ ಸಂಬಂಧವಾಗಿ ಹೊಸ ವ್ಯಾಜ್ಯಗಳು ತಲೆದೋರುವುವು. ಕ್ರೀಡಾಪಟುಗಳಿಗೆ ಉತ್ತೇಜನ ಕಡಿಮೆಯಾಗಬಹುದು. ವಾಹನ ವ್ಯಾಪಾರ ಮಾಡುವವರಿಗೆ ಲಾಭವಾಗುತ್ತದೆ. ಕಚೇರಿಗಳಲ್ಲಿ ಹಿರಿಯ ಅಧಿಕಾರಿಗಳಿಗೆ ಬಡ್ತಿ ದೊರೆಯುವ ಸಾಧ್ಯತೆ ಇದೆ. ಮೂಳೆ ನೋವು ಕೆಲವರಿಗೆ ಬಾಧಿಸಬಹುದು.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವೃತ್ತಿಜೀವನದಲ್ಲಿ ವರ್ಗಾವಣೆ ಆಗುವ ಲಕ್ಷಣಗಳಿವೆ. ಹಿರಿಯರ ವಿಚಾರಗಳಲ್ಲಿ ಉದಾಸೀನ ಸಲ್ಲದು. ಕುಟುಂಬದಲ್ಲಿನ ವಿವಾದಗಳು ಇತ್ಯರ್ಥವಾಗಿ ಮನಸ್ಸಿಗೆ ಮುದವಾಗಿ ಹೊಸಜೀವನ ಆರಂಭಿಸಬಹುದು. ಆಮದು ಮತ್ತು ರಫ್ತು ವ್ಯವಹಾರವನ್ನು ಮಾಡುವವರ ಆದಾಯ ಏರಿಕೆ ಕಾಣುತ್ತದೆ. ಅವಶ್ಯಕತೆಗಿಂತ ಹೆಚ್ಚಿನ ಹಣದ ನೆರವನ್ನು ಪಡೆಯುವುದು ಬೇಡ, ಇದು ಸಾಲಬಾಧೆಗೆ ಕಾರಣವಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಪ್ರಭಾವಿ ವ್ಯಕ್ತಿಗಳ ಜೊತೆ ಒಡನಾಟವನ್ನು ಮಾಡಿಕೊಂಡು ನಿಮ್ಮ ವ್ಯಕ್ತಿತ್ವವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವಿರಿ. ರಾಜಕೀಯದಲ್ಲಿ ಹೊಸ ತಿರುವು ಪಡೆದು ನಿಮ್ಮ ಸ್ಥಾನ ಬದಲಾಗಬಹುದು. ಶಿಕ್ಷಣ ಕ್ಷೇತ್ರದಲ್ಲಿರುವ ಕೆಲವರ ಸೇವೆಯನ್ನು ಗಮನಿಸಿ ವಿದ್ಯಾರ್ಥಿಗಳು ಸನ್ಮಾನ ಮಾಡುವರು. ನಿಮ್ಮ ಪ್ರಭಾವದಿಂದ ನೆರೆಹೊರೆಯವರ ಸಮಸ್ಯೆಗಳನ್ನು ಪರಿಹರಿಸಿ ಸಂತೋಷ ಪಡುವಿರಿ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ರಾಸಾಯನಿಕ ವಸ್ತುಗಳನ್ನು ತಯಾರಿಸಿ ರಫ್ತು ಮಾಡುವವರಿಗೆ ವ್ಯವಹಾರ ವಿಸ್ತರಿಸುತ್ತದೆ. ಗೃಹ ನಿರ್ಮಾಣ ಕಾರ್ಯದಲ್ಲಿ ಪ್ರಗತಿ ಇರುತ್ತದೆ. ಬರವಣಿಗೆ ಅಥವಾ ಸಾಹಿತ್ಯ ರಚನೆಕಾರರಿಗೆ ಅನುವಾದ ಮಾಡಿಕೊಡುವ ಕೆಲಸ ದೊರೆಯುತ್ತದೆ. ಉನ್ನತಾಧಿಕಾರಿಗಳ ಸಹಕಾರದಿಂದ ನೌಕರಿಯಲ್ಲಿ ಅನುಕೂಲಗಳು ಹೆಚ್ಚಾಗುತ್ತವೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಕೃಷಿಕರಿಗೆ ಅವರು ಬೆಳೆದ ಫಸಲಿನಿಂದ ಉತ್ತಮ ಆದಾಯ ದೊರೆಯುತ್ತದೆ. ತೈಲ ಉತ್ಪನ್ನಗಳ ಮಾರಾಟಗಾರರಿಗೆ ವ್ಯವಹಾರ ವಿಸ್ತರಿಸಿ ಲಾಭವೂ ಹೆಚ್ಚುತ್ತದೆ. ಆಭರಣ ತಯಾರಿಕೆ ಮಾಡುವವರಿಗೆ ಬೇಡಿಕೆ ಹೆಚ್ಚಾಗಿ ಹೆಚ್ಚು ತಯಾರಿಕಾ ಆದೇಶಗಳು ದೊರೆಯುತ್ತವೆ. ನನೆಗುದಿಗೆ ಬಿದ್ದಿದ್ದ ಕೆಲವು ಕೆಲಸಗಳು ಈಗ ಚುರುಕುಗೊಳ್ಳುತ್ತವೆ. ಮಕ್ಕಳಿಗಾಗಿ ಕೆಲವು ಆಲಂಕಾರಿಕ ವಸ್ತುಗಳನ್ನು ಕೊಳ್ಳುವಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಉದ್ಯಮವನ್ನು ವಿಸ್ತರಿಸಬೇಕೆಂದು ಇದ್ದವರು ಈಗ ವಿಸ್ತರಣೆಯನ್ನು ಮಾಡಬಹುದು. ಕಾರ್ಯಕ್ಷೇತ್ರವನ್ನು ವಿದೇಶದಲ್ಲಿ ಸ್ಥಾಪಿಸಬೇಕೆಂದು ಇರುವವರಿಗೆ ಈಗ ಅವಕಾಶ ಒದಗಿ ಬರುತ್ತದೆ. ಮಕ್ಕಳ ಸಾಧನೆಯ ಬಗ್ಗೆ ಹೆಮ್ಮೆ ಇರುತ್ತದೆ. ಮುಂದಾಲೋಚನೆಯಿಂದ ಆಲೋಚನೆ ಮಾಡಿ ನಿಮ್ಮ ವ್ಯವಹಾರದಲ್ಲಿ ಬರುವ ತೊಂದರೆಗಳನ್ನು ನಿವಾರಣೆ ಮಾಡಿಕೊಳ್ಳುವಿರಿ. ಸಮಾಜ ಕಲ್ಯಾಣಕ್ಕಾಗಿ ನೀವು ಕೊಡುವ ಸಲಹೆಗೆ ಉತ್ತಮ ಬೆಲೆ ಬರುತ್ತದೆ. ಹಣದ ಒಳಹರಿವು ಉತ್ತಮವಾಗಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ನಿಂತಿದ್ದ ನಿರ್ಮಾಣ ಕಾರ್ಯಗಳು ನಿಧಾನವಾಗಿ ಆರಂಭಗೊಳ್ಳುತ್ತವೆ. ವಾಹನ ಖರೀದಿ ಮಾಡುವವರು ಈಗ ಮಾಡಬಹುದು. ಪಾಲುದಾರಿಕೆಯ ವ್ಯವಹಾರದಲ್ಲಿ ಸ್ವಲ್ಪ ಬಿರುಕು ಮೂಡುವ ಸಾಧ್ಯತೆಗಳಿವೆ. ಇದನ್ನು ಮಾತಿನಿಂದ ಸರಿಪಡಿಸಿಕೊಳ್ಳಿರಿ. ಆರ್ಥಿಕ ಸ್ಥಿತಿಯು ನಿಧಾನವಾಗಿ ಚೇತರಿಕೆಯತ್ತ ಸಾಗುತ್ತದೆ. ಸಣ್ಣ ಕೈಗಾರಿಕೆಗಳನ್ನು ನಡೆಸುತ್ತಿರುವವರು ಸ್ವಲ್ಪ ಚೇತರಿಕೆಯನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಕೆಲವರಿಗೆ ಪ್ರಮುಖ ಜಾಗಗಳಲ್ಲಿ ಸಲಹೆಗಾರರಾಗಿ ಕೆಲಸ ಮಾಡುವ ಅವಕಾಶ ಒದಗುತ್ತದೆ. ಜಾಹೀರಾತು ಕಂಪನಿಗಳು ಸ್ವಲ್ಪ ಏಳಿಗೆಯನ್ನು ಕಾಣಬಹುದು. ಕೆಲಸ ಕಾರ್ಯಗಳಲ್ಲಿ ಸ್ವಲ್ಪ ಹಿನ್ನಡೆಯಾದರೂ ನಂತರ ಸರಿಯಾಗುತ್ತದೆ. ಹಣದ ಹರಿವು ಸಾಕಷ್ಟಿರುತ್ತದೆ. ಕೆಲವರಿಗೆ ಸರ್ಕಾರಿ ಕೆಲಸಗಳಲ್ಲಿ ಹೆಚ್ಚಿನ ಅನುಕೂಲ ಸಿಗುತ್ತದೆ. ಕೋರ್ಟ್ ಕಚೇರಿ ವ್ಯವಹಾರಗಳಲ್ಲಿ ಮುನ್ನಡೆಯನ್ನು ಕಾಣಬಹುದು. ಕ್ರೀಡಾಪಟುಗಳಿಗೆ ಅವರ ಸಾಧನೆಯನ್ನು ತೋರಿಸಲು ಅವಕಾಶ ಸಿಗುತ್ತದೆ.

ಪದಬಂಧ 2690



ಮೇಲಿನಿಂದ ಕೆಳಕ್ಕೆ

1. ಸಿಹಿಯಾದ ಮಧುರ ನುಡಿ 4
2. ಕಷ್ಟವೇ ಪಡದ ಗಂಡು 5
3. ಕಾವ್ಯಸೃಷ್ಟಿಕರ್ತರ ಗುಂಪು 4
4. ಮಲ್ಲಿಗೆಯಂತೆ ಪರಿಮಳಯುಕ್ತ 3
6. ಹರನಿಗಾಗಿ ಮುಡಿಪಿಡುವ ಕಾಣಿಕೆ 3
8. ಮಧುರವಾದ ದ್ರವದಿಂದ ಕೂಡಿದ ಭೋಜನ ಕೂಟವೇ ಇದು 5
9. ಕಲ್ಪನೆಯನ್ನು ಸಾಲುಗಳಲ್ಲಿ ಕಟ್ಟುತ್ತಾ ಆವರಿಸಿ ಬರುವವ 2
10. ಉಪ್ಪಿಟ್ಟಿಗೆ ಬೇಕಾಗುವ ಮೂಲ ಪದಾರ್ಥ 2
11. ಹಾವಿನ ನೆಲೆಯಾದ ಸುವಾಸಿತ ತಾಳೆ ತೋಟ 5
13. ಸಂಗ್ರಹಿಸುವ ಶಿವ 3
14. ಒಟ್ಟುಗೂಡಿಸು 3
15. ರಾಗದ ಜೊತೆ ಲಯಕ್ಕೆ ಹೆಜ್ಜೆ ಕೂಡಿಸುವ ಪದ 2
17. ಸಿಗುವ ಬಿಡುವು 2
18. ಜೀವಕ್ಕೆ ಹತ್ತಿರವಾದ ಶ್ರೀರಾಮ ಪ್ರಿಯೆ 3
19. ಆತಂಕದಿಂದ ಕಾತರಿಸು 4
21. ಎಡಪಂಥದ ಪ್ರಭು 4
22. ಉಗ್ರನಾದ ಈಶ್ವರ 3

ಎಡದಿಂದ ಬಲಕ್ಕೆ

1. ಸಮುದಾಯವನ್ನೇ ಉದ್ಧರಿಸುವ ಪ್ರವರ್ತಕ 7
4. ಮನ: ಪೂರ್ವಕ ಅಹವಾಲು 3
5. ಅಗಲಿಕೆಯ ನೋವು 3
7. ಕೈಯಲ್ಲಿ ಕರಣಿ ಹಿಡಿದಿರುವ ಲೆಕ್ಕಾಧಿಕಾರಿ 4
10. ಯುದ್ಧದಲ್ಲಿ ಮುಗಿಲುಮುಟ್ಟುವ ಬೊಬ್ಬೆ 4
12. ಆಪತ್ಕಾಲದಲ್ಲಿ ದೇವಸ್ಥಾನಗಳಲ್ಲಿ ಸಲ್ಲಿಸುವ ಹೆಚ್ಚಿನ ಕೈಂಕರ್ಯ 5
15. ಉಚ್ಛಸ್ವರದ ರಾಕ್ಷಸ 5
18. ವಿವೇಕ ಬುದ್ಧಿವಂತಿಕೆಯ ಗುಣ 4
20. ದೇಶಕ್ಕಾಗಿ ಹೋರಾಡುವ ಯುವ ಯೋಧರು 4
23. ಗಾಳಿ ಬೆಳಕು ಬರಲು ಮನೆಗೆ ಇದು ಬೇಕು 3
24. ಪರಮಾತ್ಮ ಈಶ್ವರ ರೂಪಿ 3
25. ಚಿನ್ನದಂತಹ ಐವತ್ತು ವರ್ಷಗಳ ಸಂಭ್ರಮಾಚರಣೆ 7

ಪದಬಂಧ ಉತ್ತರ -2689

ಮೇಲಿಂದ ಕೆಳಕ್ಕೆ

1.ಪಾಲಿಸೀ 2.ನಗುಮುಖ 3.ಹೊಣೆಗಾರ 4.ನಜರು 6.ದಳವಿ 8.ತಾಟಕಿ 10.ತೇಕಡಿ 12.ಗಗನಯಾನ 13.ಹಾಸುಗಂಬಳಿ 15.ರಮಣಿ 16.ಸರ್ವಸ್ವ 20.ಗಾರಿಗೆ 22.ಗರಲ 23.ಧರ್ಮಪಾಲ 24.ಗಹನ 25.ಕೆಳಮನೆ 26.ನರಕ 28.ಕಡಿತ

ಎಡದಿಂದ ಬಲಕ್ಕೆ

1.ಪಾಲುಜನ 3.ಹೊಸತನ 5.ಗುರುದಕ್ಷಿಣೆ 7.ಸೀತಾರಾಮು 9.ಗಾಳಿತೇರು 11.ಖಗವಿಹಾರ 14.ಕಿಂಕಿಣಿ 16.ಸಡಿಲ 17.ಮಜ್ಜನ 18.ಗಂಧರ್ವ 19.ಬಂಗಾರ 21.ಸ್ವಗತ 23.ಧನಗಳಿಕೆ 26.ನಗೆಧರ್ಮ 27.ಆವಳಕ 29.ಪಾವನನಾಮ 30.ಕಲಿಕಾಲ 31.ನೆಲಗತ

ಪಾಂಡಿತ್ಯದಿಂದ ಬೆಳಗಿದ 'ಭಾಸ್ಕರ'

ಭಾಸ್ಕರ ಮಯ್ಯ

ನೆನಪು

ಎಸ್.ಆರ್. ವಿಜಯಶಂಕರ

ಗೆಳೆಯ ಡಾ. ಜಿ. ಭಾಸ್ಕರ ಮಯ್ಯ ತೀರಿಕೊಂಡರೆಂದು ಯು.ಆರ್. ಜಯವಂತ ತಿಳಿಸಿದಾಗ, ನಮ್ಮ ವೈಚಾರಿಕ ಸಾಹಿತ್ಯದ ಪ್ರಮುಖ ಚಿಂತಕ-ವಿದ್ವಾಂಸರನ್ನು ಕಳೆದುಕೊಂಡೆವಲ್ಲ ಎಂದು ಮನಸ್ಸು ಭಾರವಾಯಿತು. ಮಯ್ಯರು ಕುಂದಾಪುರದ ಭಂಡಾರ್ಕರ್ಸ್ ಕಾಲೇಜಿನಲ್ಲಿ ಹಿಂದಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದರು. ಪ್ರಮುಖ ಎಡಪಂಥೀಯ ಚಿಂತಕರಾಗಿದ್ದ ಅವರು ತಮಗೆ ಅನಿಸಿದ್ದನ್ನು ತಾತ್ವಿಕ ನಿಷ್ಠೆಯಿಂದ ಯಾರಿಗೂ ಹೆದರದೆ, ಲೌಕಿಕ ಯಾವ ಲಾಭವನ್ನೂ ಕಳಕೊಳ್ಳಲು ಭಯಪಡದೆ ಹೇಳುತ್ತಿದ್ದರು. ಯಾರನ್ನು ಮೆಚ್ಚಿಸಲೂ ಅವರು ಬರೆದಿಲ್ಲ. ಯಾರಿಗೋ, ಯಾವುದಕ್ಕೋ ಹೆದರಿ ಹೇಳಬೇಕಾದ್ದನ್ನು ಹೇಳದೆ ಇದ್ದವರೂ ಅಲ್ಲ. ಇ.ಎಂ.ಎಸ್. ನಂಬೂದಿರಿಪಾಡ್, ರಾಹುಲ್ ಸಾಂಕೃತ್ಯಾಯನ, ಶಂ.ಬಾ. ಜೋಶಿ, ಬಿಪಿನ್ ಚಂದ್ರ ಪಾಲ್ ಮೊದಲಾದವರ ಬರಹ ಚಿಂತನೆಗಳ ಬಗ್ಗೆ ಅಧ್ಯಯನಪೂರ್ವಕವಾಗಿ ಮಾತನಾಡಬಲ್ಲವರಾಗಿದ್ದರು.

ಮಯ್ಯರು ಒಣ ಮಾರ್ಕ್ಸ್‌ವಾದಿಯಾಗಿರಲಿಲ್ಲ. ಅವರ ಮಾತು, ಬರಹ ಎರಡರಲ್ಲೂ ಸಾಕಷ್ಟು ವೈವಿಧ್ಯವೂ, ತಲಸ್ಪರ್ಶಿ ಪಾಂಡಿತ್ಯವೂ, ಸಮರ್ಥ ಉದಾಹರಣೆಗಳೂ, ದಾಖಲೆ, ಪುರಾವೆಸಹಿತ ಸತ್ಯಗಳೂ ಇರುತ್ತಿದ್ದವು. ನನಗೆ ಹತ್ತು ಕೃತಿಗಳಿದ್ದರೆ ಅವುಗಳಲ್ಲಿ ಮಾರ್ಕ್ಸ್‌ವಾದ ಮಾತ್ರವಲ್ಲ ವೇದಗಳು, ಉಪನಿಷತ್ತು, ತತ್ವಶಾಸ್ತ್ರ, ರಾಮಾಯಣ, ಮಹಾಭಾರತ – ಹೀಗೆ ಎಲ್ಲವನ್ನೂ ಬಿಗಿಯಾಗಿ ಹಿಡಿದುಕೊಳ್ಳುತ್ತಿದ್ದೆ ಎಂದು ನಂಬೂದಿರಿಪಾಡ್ ಹೇಳಿದ್ದರು. ಅವರ ಮಾತುಗಳನ್ನು ಮಯ್ಯರು ಸ್ವತಃ ಕಾರ್ಯರೂಪಕ್ಕೆ ತಂದವರು. ಅದಕ್ಕೊಂದು ಉದಾಹರಣೆಯಾಗಿ ಅವರ ಈಚಿನ ಐದು ಪುಸ್ತಕಗಳನ್ನು ಹೆಸರಿಸುತ್ತೇನೆ: 'ಜಾತಿ, ಮತ, ಮತಾಂತರ ಮತ್ತು ಮಾರ್ಕ್ಸ್‌ವಾದಿ ವಿಶ್ವದೃಷ್ಟಿ', 'ಜಾಗತೀಕರಣದ ನಾಗಪಾಶ', 'ಋಗ್ವೇದ ಮತ್ತು ಜನಸಂಸ್ಕೃತಿ', 'ವಾದ ಪ್ರತಿವಾದ ಮತ್ತು ಸಂವಾದ', 'ನಿಕಷಕ್ಕೊಡ್ಡಿದ ನಿರ್ಣಯಗಳು'. ಇವುಗಳಲ್ಲದೆ ಅವರ, 'ಶಂಬಾ: ವ್ಯಕ್ತಿತ್ವ ಮತ್ತು ಕೃತಿತ್ವ', 'ಮಾರ್ಕ್ಸ್‌ವಾದ ಮತ್ತು ಸೌಂದರ್ಯ ಪ್ರಜ್ಞೆ', 'ನಾಮವರ್ ಸಿಂಹ: ಆಯ್ದ ಲೇಖನಗಳು' (ನಾಮವರ್ ಸಿಂಹ - ಹಿಂದಿ ಸಾಹಿತ್ಯದಲ್ಲಿ ಉಚ್ಚ ಶ್ರೇಣಿಯ ವಿಮರ್ಶಕರ ಪಂಕ್ತಿಯಲ್ಲಿ ಅಗ್ರಗಣ್ಯ ಹೆಸರು) – ಹೀಗೆ ಹಲವು ಕೃತಿಗಳನ್ನು ಕೂಡ ಹೆಸರಿಸಬಹುದು. ಕನ್ನಡ, ಹಿಂದಿ ಮತ್ತು ಅನುವಾದಗಳು ಸೇರಿ ಅವರ ಕೃತಿಗಳ ಸಂಖ್ಯೆ ಐವತ್ತಕ್ಕೂ ಹೆಚ್ಚಿದೆ.

ಭಾಸ್ಕರ ಮಯ್ಯರ ಊರು ಕುಂದಾಪುರ ಸಮೀಪದ ಗುಂಡ್ಮಿ. ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ ಪದವಿ ಪಡೆದ ಬಳಿಕ ಬಿ.ಇಡಿ ಮಾಡಿದರು. ಹೀಗಾಗಿ ಅವರಿಗೆ ವಿಜ್ಞಾನದ ಅಧ್ಯಯನ ಕ್ರಮದ ತರಬೇತಿ ಮೊದಲಿನಿಂದಲೂ ಇತ್ತು. ಹಿಂದಿಯಲ್ಲಿ ಸ್ನಾತಕೋತ್ತರ ಪದವಿ ಪಡೆದು ಕಾಲೇಜು ಅಧ್ಯಾಪಕರಾದರು. ಹಿಂದಿ ಸಾಹಿತ್ಯದಲ್ಲಿ ಸಂಶೋಧನಾ ಅಧ್ಯಯನಕ್ಕೆ ಪಿಎಚ್.ಡಿ ಪದವಿ ಪಡೆದರು. ಮುಂದೆ ಸತತವಾಗಿ ಅವರು ಫಿಲಾಸಫಿ, ಜೈನಾಲಜಿ ಮತ್ತು ತೌಲನಿಕ ಧಾರ್ಮಿಕ ಅಧ್ಯಯನ, ಪ್ರಾಕೃತ, ಸಂಸ್ಕೃತ, ಇಂಗ್ಲಿಷ್ ಸಾಹಿತ್ಯ – ಹೀಗೆ ಆರು ಎಂ.ಎ ಪದವಿಗಳನ್ನು ಪಡೆದರು.

ಯಾವುದೇ ಒಂದು ವಿಚಾರದ ತಲಸ್ಪರ್ಶಿ ಅಧ್ಯಯನಕ್ಕೆ ಎಂ.ಎ ಓದುವಿಕೆ ಕ್ರಮಬದ್ಧವಾದ್ದೊಂದು ವ್ಯವಸ್ಥೆ ಮಾಡಿಕೊಡುತ್ತದೆ. ಸುಮ್ಮನೆ ಓದಲು ಇಷ್ಟವಾಗದ ಕೃತಿಗಳನ್ನು ಸಿಲೆಬಸ್‌ನಲ್ಲಿ ಇರುವುದರಿಂದ ಪರೀಕ್ಷೆಗಾಗಿ ಓದಲೇಬೇಕಾಗುತ್ತದೆ. ಆಗ ಒಂದು ಶಾಸ್ತ್ರೀಯ ಕಲಿಕೆ ಆದಂತಾಗುತ್ತದೆ ಎಂದವರು ಹೇಳುತ್ತಿದ್ದರು. ಅವರು ಜೈನಾಲಜಿ, ವೈದಿಕ-ಸಂಸ್ಕೃತ ಮೊದಲಾದವುಗಳ ಬಗ್ಗೆ ಬರೆದ ಕೃತಿಗಳಿಂದ ಅವರ ಓದಿನ ಆಳ-ವಿಸ್ತಾರಗಳು ತಿಳಿಯುತ್ತವೆ.

ಮಯ್ಯರ ಮನೋಭಾವದಲ್ಲೇ ಪ್ರಶ್ನಿಸುವ ಮತ್ತು ಸಂಶೋಧನಾತ್ಮಕವಾಗಿ ಅರಿಯುವ ಗುಣವಿತ್ತು. ಅದಕ್ಕಾಗಿ ಮಂದಾರ್ತಿ ಎಂಬ ಪ್ರಖ್ಯಾತ ದೇವಸ್ಥಾನದ ಬಗ್ಗೆ ಬರೆದ 'ಮಂದಾರ್ತಿ: ವೇದಿಕೆ ಮತ್ತು ಪ್ರಶ್ನೆಗಳು' ಎಂಬ ಲೇಖನವನ್ನು ಗಮನಿಸಬಹುದು. ಮಂದಾರ್ತಿ ದೇವಸ್ಥಾನದ ಹೆಸರಲ್ಲಿ ಹೊರಡುವ ಯಕ್ಷಗಾನ ಮೇಳದಿಂದಾಗಿಯೂ ಆ ದೇವಸ್ಥಾನ ಬಹಳ ಕಡೆ ಪ್ರಸಿದ್ಧ. ಕರಾವಳಿಯ ಹೆಚ್ಚಿನ ದೇವಸ್ಥಾನಗಳಂತೆ ಅಲ್ಲೂ ಬಂಟ ಜಾತಿಯವರು ಆಡಳಿತ ಮುಕ್ತೇಸರರು. ಅವರಲ್ಲಿ ಹೆಚ್ಚಿನವರು ಭೂಮಾಲೀಕರು. ಬ್ರಾಹ್ಮಣರು ಅರ್ಚಕರು.

ಮಂದಾರ್ತಿ ಯಕ್ಷಗಾನ ಮೇಳದ ಕಲಾವಿದರಲ್ಲಿ ಬಿಲ್ಲವ ಜಾತಿಗೆ ಸೇರಿದವರು ಅಭಿನಯಿಸುವಂತಿಲ್ಲ ಎಂಬ ಕಟ್ಟಳೆ ಇತ್ತು. ಅದನ್ನು ಯಕ್ಷಗಾನ ಕಲಾವಿದರಾದ ಐರೋಡಿ ಗೋವಿಂದಪ್ಪ, ಅರಾಟೆ ಮಂಜು ಹಾಗೂ ಇನ್ನಿತರ ಕಲಾವಿದರು ವಿರೋಧಿಸಿದರು. ಆ ಸಂದರ್ಭದಲ್ಲಿ ಮಯ್ಯರು ಉಡುಪಿ ಜಿಲ್ಲಾ ವಿಚಾರವಾದಿ ವೇದಿಕೆ ಅಧ್ಯಕ್ಷರು. ವೇದಿಕೆಯು ಯಕ್ಷಗಾನ ಕಲಾವಿದರ ಪರವಾಗಿ ನಿಂತಿತು. ಆಗ ನಡೆದ ಚರ್ಚೆಗಳಿಂದ ಅಂತಿಮವಾಗಿ ಜಾತಿಭೇದವಿಲ್ಲದೆ ಎಲ್ಲ ಕಲಾವಿದರು ಅಭಿನಯಿಸಬಹುದು ಎಂಬ ನಿರ್ಣಯವಾಗಿ ಕಲಾವಿದರಿಗೆ ಜಯವಾಯಿತು. ಮಯ್ಯರು ಕಲಾವಿದರ ಪರವಾಗಿ ಮಂಡಿಸಿದ ವಾದಗಳ ಕೆಲವು ಅಂಶಗಳು ಅವರ ಚಿಂತನಾಕ್ರಮಕ್ಕೆ ಕನ್ನಡಿ ಹಿಡಿಯಬಲ್ಲವು. ಅದಕ್ಕಾಗಿ ಈ ಕೆಳಗಿನ ಕೆಲವು ಉದಾಹರಣೆಗಳು.

ಮೊದಲಿಗೆ ಅವರು ಸ್ಥಳ ಪುರಾಣದ ಮಹತ್ವ, ಸಂಸ್ಕೃತಿ ಮತ್ತು ಧಾರ್ಮಿಕ ಹಿತದ ಪ್ರಶ್ನೆಗಳಿಗೆ ಉತ್ತರಿಸಿದರು. ಆ ಬಳಿಕ ದೇವಸ್ಥಾನದಲ್ಲಿ ಅನಾದಿ ಕಾಲದಿಂದಲೂ ಬಿಲ್ಲವರು ಅಭಿನಯಿಸುವಂತಿಲ್ಲ ಎಂಬುದಕ್ಕೆ 'ಅನಾದಿ ಕಾಲ' ಎಂದರೆ ಏನೆಂದು ಆ ಕಾಲಕಲ್ಪನೆಯನ್ನು ಪ್ರಶ್ನಿಸಿದರು. ಮಯ್ಯರು ನೀಡಿದ ಆಧಾರಗಳ ಪ್ರಕಾರ ದೇವಸ್ಥಾನವನ್ನು ಎಂಟನೇ ಶತಮಾನಕ್ಕಿಂತ ಹಿಂದಕ್ಕೆ ಕೊಂಡೊಯ್ಯುವುದು ಐತಿಹಾಸಿಕ ತಿಳಿವಳಿಕೆಯಂತೆ ಅಸಾಧ್ಯ. ಅನಾದಿ ಕಾಲದ ಹಿನ್ನೆಲೆಯಲ್ಲಿ 'ದುರ್ಗೆ'ಯ ಸ್ಥಾಪನೆಗಾಗಿ ದೇವಳವು ಋಗ್ವೇದದ 'ಜಾತವೇದಸೇ ಸುನವಾಮ ಸೋಮ ಮರಾತೀಯತೋ ನಿದಹಾತಿ ವೇದಃ...' ಮಂತ್ರವನ್ನು ಉಲ್ಲೇಖಿಸಿತು.

ಅದಕ್ಕೆ ಉತ್ತರವಾಗಿ ಮಯ್ಯರು, ಅದು ಅಗ್ನಿಯನ್ನು ಅರ್ಚಿಸುವ ಮಂತ್ರ. ದುರ್ಗಾ ಎಂದರೆ ಈ ದೇವಸ್ಥಾನದ ದೇವಿಯಲ್ಲ. ದುರ್ಗಾಣಿ ಎಂದರೆ ಕಷ್ಟಕಾರ್ಪಣ್ಯಗಳು ಎಂದು ಅರ್ಥ. ಇಂಥ ಅರ್ಥವುಳ್ಳ ದುರ್ಗಾ-ದುರ್ಗ ಶಬ್ದವನ್ನು ಬಿಟ್ಟರೆ ಯಾವುದೇ 'ದುರ್ಗೆ' ಎಂಬ ದೈವತವೂ ವೇದಗಳಲ್ಲಿ ಇಲ್ಲ. ಕೆಲವೊಂದು ಕಡೆ ವೇದಗಳಲ್ಲಿ 'ದುರ್ಗಾ' ಎಂಬ ಪದವು 'ಅಗ್ನಿ'ಯನ್ನು ಸೂಚಿಸುತ್ತದೆ ಅಷ್ಟೇ ಎಂದು ವಿವರಿಸಿದರು.

ಇದಲ್ಲದೆ 1954ನೆಯ ಇಸವಿವರೆಗೆ ಶ್ರೀಕ್ಷೇತ್ರ ಮಂದಾರ್ತಿ ದೇವಳವು ಮುಳಿಹುಲ್ಲಿನ ಮಾಡನ್ನು ಹೊಂದಿತ್ತು. ಮುಳಿಹುಲ್ಲಿನ ಮಾಡಿರುವ ದೇವಳದ ರಚನೆ ಬಗ್ಗೆ ಯಾವ ಆಗಮದಲ್ಲಿ ಹೇಳಿದೆ? ಭೂತಾರಾಧನೆ ಎಂದೆಂದಿಗೂ ವೈದಿಕವಲ್ಲ. ದೇವಳದ ಒಳ ಆವರಣದಲ್ಲಿ ವೀರಭದ್ರ, ಒಳ ಪ್ರಾಕಾರದಲ್ಲಿ ಬೊಬ್ಬರ್ಯ ಅಲ್ಲದೆ ಚಿಕ್ಕು, ಚಾಮುಂಡಿ, ಕಲ್ಲುಕುಟಿಗ ಇತ್ಯಾದಿ ಕರಾವಳಿಯ ಭೂತ-ದೈವಗಳಿವೆ. ಅದು ಹೇಗೆ ವೈದಿಕ ? ಇತ್ಯಾದಿ 20 ಪ್ರಶ್ನೆಗಳನ್ನು ಮುಂದಿಟ್ಟರು. ಅದಕ್ಕೆ ಸಂಶೋಧನಾ ಆಧಾರಗಳನ್ನು ಕೊಟ್ಟರು.

ದೇವಸ್ಥಾನದಲ್ಲಿ ದೇವಿಯನ್ನು ಸ್ತುತಿಸುವ 'ಶಂಖಾರಿಚಾಪಶರ ಭಿನ್ನ ಕರಾಂ...' ಮಂತ್ರ ಮಂದಾರ್ತಿ ದೇವಿಯ ವಿಗ್ರಹಕ್ಕೆ ಸಂಬಂಧಿಸಿದ್ದಾಗಲಾರದು. ಯಾಕೆಂದರೆ ಈಗಿನ ದೇವಿಯ ಶಿಲಾಮೂರ್ತಿಯ ಕೈಯಲ್ಲಿ ಶಂಖ, ಅರಿ, ಚಾಪ, ಶರಗಳಿಲ್ಲ. ಬದಲಾಗಿ ತ್ರಿಶೂಲ ಚಕ್ರ ಮಾತ್ರ ಇದೆ ಎಂದು ವಾದಿಸಿದರಲ್ಲದೆ ದೇವಿಯ ಮುಖವಾಡಗಳ ಬಗ್ಗೆ ತೌಲನಿಕ ಮಾಹಿತಿಯನ್ನೂ ನೀಡಿದರು. ಹೀಗೆ, ವಿಚಾರ, ವಿಜ್ಞಾನ, ತರ್ಕ, ಹೋಲಿಕೆ, ಸಂಶೋಧನೆಗಳಿಂದ ಆಧಾರಸಹಿತ ವಿಶ್ಲೇಷಿಸುವುದು, ಪ್ರಶ್ನಿಸುವುದು ಮಯ್ಯರ ಬರಹಗಳಲ್ಲೆಲ್ಲ ಕಾಣಬಹುದಾದ ಒಂದು ಸಾಮಾನ್ಯ ಅಂಶ.

> ಇತ್ತೀಚೆಗಷ್ಟೆ ಅಗಲಿದ ಚಿಂತಕ ಭಾಸ್ಕರ ಮಯ್ಯ ತಲಸ್ಪರ್ಶಿ ಪಾಂಡಿತ್ಯಕ್ಕೆ ಹೆಸರಾದವರು. ಮಾರ್ಕ್ಸ್‌ವಾದ ಮಾತ್ರವಲ್ಲ, ವೇದ, ಉಪನಿಷತ್ತುಗಳನ್ನೂ ಬಿಗಿಯಾಗಿ ಹಿಡಿದವರು...

ನಮ್ಮ ದೇಶದಲ್ಲಿರುವ ಹಿಂದೂ-ಮುಸ್ಲಿಂ ಸಾಮರಸ್ಯದ ಬಗ್ಗೆ ಹಳ್ಳಿಗಳ ಹಲವಾರು ಉದಾಹರಣೆಗಳನ್ನು ಬಿಪಿನ್ ಚಂದ್ರಪಾಲ್, ರಾಜೇಂದ್ರ ಪ್ರಸಾದ್, ಸಾವರ್‌ಕರ್ ಮೊದಲಾದವರ ಜೀವನ ಚರಿತ್ರೆ ಮತ್ತಿತರ ಕೃತಿಗಳಿಂದಲೂ ಎತ್ತಿ ತೋರಿಸಿದ್ದರು. ಗಂಭೀರವಲ್ಲದ ಉಡಾಫೆಯ ಬರಹದ ಕ್ರಮವೇ ಅವರದ್ದಾಗಿರಲಿಲ್ಲ. 'ಪರೀಕ್ಷೆಗೆ ಒಡ್ಡದ ಜೀವನ ಬದುಕಲು ಯೋಗ್ಯವಲ್ಲ' ಎಂಬ ಸಾಕ್ರೇಟಿಸ್‌ನ ಮಾತು ಅವರಿಗೆ ಬಹಳ ಪ್ರಿಯವಾದುದು.

ಪುತ್ತೂರಿನ ಬಾಲವನದಿಂದ ಸಾಲಿಗ್ರಾಮಕ್ಕೆ 1970ರ ದಶಕದಲ್ಲಿ ಹಿಂತಿರುಗಿದ್ದ ಶಿವರಾಮ ಕಾರಂತರು, ಮಯ್ಯರ ಬರಹಗಳನ್ನು ಗಮನಿಸಿದ್ದರು. ಸಾಲಿಗ್ರಾಮ- ಗುಂಡ್ಮಿ-ಕುಂದಾಪುರಗಳು ಬಹಳ ದೂರದ ಊರುಗಳೂ ಅಲ್ಲ. 'ವೋಲ್ಗಾದಿಂದ ಗಂಗೆವರೆಗೆ' ಕೃತಿಯ ಪ್ರಖ್ಯಾತ ಚಿಂತಕ ರಾಹುಲ ಸಾಂಕೃತ್ಯಾಯನ, ಮಯ್ಯರ ಪ್ರಿಯ ಲೇಖಕರಲ್ಲೊಬ್ಬರು. ಅವರ ಬಗ್ಗೆ ಮಯ್ಯರು ಅಲ್ಲಿ ಇಲ್ಲಿ ಬರೆಯುತ್ತಲೇ ಇದ್ದರು. ಆದರೆ, ಕಾರಂತರು ಅಂತಹ ಮಯ್ಯರ ಬರಹಗಳಿಂದ ವಿಶೇಷ ಆಕರ್ಷಿತರಾಗಿರಲಿಲ್ಲ. ಇದನ್ನರಿತ ಪ್ರೊ. ಶ್ರೀಪತಿ ತಂತ್ರಿಯವರು ಸಮಯ ನೋಡಿ, ಮಯ್ಯರನ್ನು ಕರಕೊಂಡು ಕಾರಂತರ ಮನೆಗೆ ಹೋದರು. ಅದು ಸಾಂಕೃತ್ಯಾಯನರ ಜನ್ಮಶತಮಾನ ಸಮಾರಂಭದಲ್ಲಿ ಮಾತನಾಡಲು ಕಾರಂತರನ್ನು ದೆಹಲಿಗೆ ಆಹ್ವಾನಿಸಲಾಗಿದ್ದ ಸಮಯ. ಆ ಸಂದರ್ಭದಲ್ಲಿ ಮಯ್ಯರೊಡನೆ ಕಾರಂತರು ಮಾತನಾಡುತ್ತಾ ಸಾಂಕೃತ್ಯಾಯನರ ಬರಹ ಚಿಂತನೆಗಳ ಬಗ್ಗೆ ಆಳವೂ ಸುದೀರ್ಘವೂ ಆದ ಸಂಭಾಷಣೆಯಲ್ಲಿ ತೊಡಗಿಕೊಂಡಿದ್ದರು. ಮಯ್ಯರ ಓದಿನ ಪರಿಶ್ರಮ ತಿಳಿವಳಿಕೆಯ ಆಳವನ್ನರಿತ ಕಾರಂತರು ಅವರ ಅಧ್ಯಯನದ ಬಗ್ಗೆ ಮೆಚ್ಚುಗೆ ಸೂಚಿಸಿದ್ದರು. ಮೊನ್ನೆ ತಂತ್ರಿಯವರು ಆ ಘಟನೆಯನ್ನು ಇನ್ನೊಮ್ಮೆ ನೆನಪಿಸಿಕೊಂಡರು.

ಉಡುಪಿಯಲ್ಲಿ 1980ರಲ್ಲಿ ಮಯ್ಯರನ್ನು ನನಗೆ ಲೇಖಕ, ಗೆಳೆಯ, ನಾಟಕ ನಿರ್ದೇಶಕ ವಸಂತ ಬನ್ನಾಡಿಯವರು ಮೊದಲು ಪರಿಚಯಿಸಿದರು. ಸಾಹಿತ್ಯ ವಿಮರ್ಶೆಗಿಂತ ಹೆಚ್ಚು ರಾಜಕೀಯ ಹಾಗೂ ವೈಚಾರಿಕ ನೆಲೆಗಳಿಗೆ ಮಯ್ಯರು ವಾಲುತ್ತಾರೆ ಎಂದು ನಾನು, ಫಣಿರಾಜ್, ಬನ್ನಾಡಿ ಮೊದಲಾದವರು ಮಾತನಾಡಿಕೊಳ್ಳುತ್ತಿದ್ದೆವು. ಮಯ್ಯರು 'ಅಜನಬೀ ಪನ್ ಏಕ್ ಸೈದ್ಧಾಂತಿಕ್ ಅನುಶೀಲನ್' ಎಂಬ ಕೃತಿಗೆ ರಾಷ್ಟ್ರೀಯ ಪುರಸ್ಕಾರ (2002) ಪಡೆದರು. ಅಂದಿನ ಪ್ರಧಾನಿ ವಾಜಪೇಯಿ ಅವರ ಕೈಯಿಂದ ಪ್ರಶಸ್ತಿ ಪಡೆದ ಫೋಟೊವನ್ನು ಪತ್ರಿಕೆಗಳಲ್ಲಿ ನೋಡಿ ಅಭಿನಂದಿಸಿದ್ದೆ.

ಪಾಶ್ಚಾತ್ಯ ಹಾಗೂ ಪೌರಾತ್ಯ ತತ್ವಶಾಸ್ತ್ರ ಎರಡರಲ್ಲೂ ಅವರಿಗೆ ಸದಾ ಆಸಕ್ತಿ. ಅವರು ಯಾವುದೇ ಒಂದು ಕೆಲಸದಲ್ಲಿ ತೊಡಗಿದರೆ ಅದರಲ್ಲಿ ಸಂಪೂರ್ಣ ಮುಳುಗಿಬಿಡುತ್ತಿದ್ದರು. ಒಂದು ಹಂತದಲ್ಲಿ ಅವರು ಸಂಸ್ಕೃತ, ವೇದ, ಆಗಮ ಮೊದಲಾದವುಗಳ ಅಧ್ಯಯನದಲ್ಲಿ ಸಂಪೂರ್ಣ ತೊಡಗಿಕೊಂಡಿದ್ದರು. ಅವರ ಸಂಸ್ಕೃತ ಅಧ್ಯಯನದಿಂದ ಅವರ ಮಗ ಪ್ರಜ್ಞಾನ ವೈಶ್ವಾನರ ಬಹಳಷ್ಟು ಪ್ರಭಾವಿತರಾದರು. ವೇದಾಧ್ಯಯನದ ಜೊತೆ ಪೌರೋಹಿತ್ಯ ಕಲಿತರು. ಪೌರೋಹಿತ್ಯ ವೃತ್ತಿಯನ್ನೇ ಸ್ವೀಕರಿಸಿದರು. ಮಯ್ಯರೊಡನೆ ಮಾತನಾಡುತ್ತಿದ್ದಾಗ ಅದು ಅವನ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಪ್ರೀತಿ, ಅವನಿಗೆ ಬೇಕಾಗಿದ್ದು ಮಾಡಲಿ ಎಂದಿದ್ದರು. ಅವರ ಮಗಳು ಓದಿ ಮದುವೆಯಾದ ಬಳಿಕ ಅಮೆರಿಕದಲ್ಲಿ ನೆಲೆಸಿದ್ದಾರೆ. ಹಿರಿಯ ಮಗ ಬೆಂಗಳೂರಲ್ಲಿ ಉದ್ಯೋಗಿಯಾಗಿದ್ದರು. ಅದಕ್ಕೆ ತೀರಾ ಭಿನ್ನವಾಗಿ ಒಬ್ಬ ಮಗ ಪೌರೋಹಿತ್ಯ ಸ್ವೀಕರಿಸಿದರೆ ಅದೂ ಸಹಜ ಎಂದರು. 'ಮಯ್ಯರೆ, ನೀವು ಎಷ್ಟೇ ನಿಷ್ಠುರ ಮಾರ್ಕ್ಸ್‌ವಾದಿಯಾದರೂ, ಒಳಗಿನಿಂದ ಶುದ್ಧ ಪ್ರಜಾಪ್ರಭುತ್ವವಾದಿ. ಉದಾರ ಮಾನವತಾವಾದಿ. ವ್ಯಕ್ತಿ ಸ್ವಾತಂತ್ರ್ಯವನ್ನು ಎಲ್ಲಕ್ಕಿಂತ ಹೆಚ್ಚಾಗಿ ಬಯಸುವವರು' ಎಂದೆ. ದೊಡ್ಡದಾಗಿ ನಕ್ಕಿದ್ದರು. ನಾನೂ ನಕ್ಕಿದ್ದೆ.

ಮಯ್ಯರು ತೀರಿಕೊಂಡ ಸುದ್ದಿ ತಿಳಿದಾಗ ಎಷ್ಟೊಂದು ನೆನಪುಗಳು. ಆನ್‌ಲೈನ್‌ನಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಗೆಳೆಯ ಫಣಿರಾಜ್ ಮಾತನಾಡುತ್ತಾ, 'ಮಯ್ಯರ ಸತತ ಪ್ರಯತ್ನ ಭಾರತೀಯ ಮಾರ್ಕ್ಸ್‌ವಾದವೊಂದನ್ನು ನಮಗೆ ನಾವು ಹೇಗೆ ಸೃಷ್ಟಿಸಿಕೊಳ್ಳಬಹುದು ಎಂಬುದರ ಹುಡುಕಾಟವಾಗಿತ್ತು' ಎಂದರು. ಅವರ ಋಗ್ವೇದ ಅಧ್ಯಯನದ ಹಿಂದೆ ಇದ್ದುದು ವಸಾಹತುಶಾಹಿ ಚಿಂತನೆಯ ಪ್ರಭಾವದಲ್ಲಿದ್ದ ವಿದ್ವಾಂಸರ ಬುಡವನ್ನು ಅಲುಗಾಡಿಸಿ ಸತ್ಯದರ್ಶನ ಮಾಡಿಸುವ ಪ್ರಯತ್ನ. ಅದು ಕೂಡ ಫಣಿರಾಜ್ ಅವರು ಸೂಚಿಸಿದ ಉದ್ದೇಶವೇ ಆಗಿದೆ ಎಂದು ಆಗ ನನಗನಿಸಿತು.

ತಮ್ಮ ವಿಚಾರವನ್ನು ಹಬ್ಬಿಸುವುದಕ್ಕಾಗಿ ಅವರು ಎಲ್ಲಾ ಕಡೆ ಬರೆದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪತ್ರಿಕೆ 'ಜನಶಕ್ತಿ'ಯಲ್ಲಿ ನಿರಂತರವಾಗಿ ಲೇಖನಗಳನ್ನು ಪ್ರಕಟಿಸಿದರು. ಹಲವು ಸಂಘಟನೆಗಳಲ್ಲಿ ತೊಡಗಿಕೊಂಡು ಸೈದ್ಧಾಂತಿಕ ಕೆಲಸ ಮಾಡಿದರು. ಮಯ್ಯರು ತೀರಿಕೊಂಡಾಗ ಪ್ರಾಮಾಣಿಕ ವಿದ್ವಾಂಸ, ನಿರ್ಭಿಡೆಯಿಂದ ವೈಚಾರಿಕ ವಿಶ್ಲೇಷಣೆ ಮಾಡಬಲ್ಲ ಒಬ್ಬ ಚಿಂತಕ ಇನ್ನು ನಮ್ಮೊಂದಿಗೆ ಇಲ್ಲವಾದರು. ಆದರೆ ಅವರ ವಿಚಾರಗಳು ನಮ್ಮೊಡನೆ ಇರುತ್ತವೆ. ❖

ನೆರಳಿನಲ್ಲಿ ಕಾಣದ ಮರದ ಆಕಾರ

ಎಸ್. ದಿವಾಕರ್

ವಿಮರ್ಶೆ



ಕ್ಷಿತಿಜ (ಜಗತ್ತಿನ ಕೆಲ ಶ್ರೇಷ್ಠ ಕವನಗಳ ಕನ್ನಡ ಅನುವಾದ)
ಅನುವಾದ: ಪ್ರಮೋದ ಮುತಾಲಿಕ
ಪ್ರ: ತುಲನ ಪ್ರಕಾಶನ
ಸಂ: 9480184985
ಪು: 150 ₹125

ಪ್ರಮೋದ ಮುತಾಲಿಕರು ಇಂಗ್ಲಿಷ್ ಪ್ರಾಧ್ಯಾಪಕರಾಗಿ ನಿವೃತ್ತರಾದವರು; ಕೆಲವು ಕತೆ, ಕಾದಂಬರಿಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೂ ಕನ್ನಡದಿಂದ ಇಂಗ್ಲಿಷಿಗೂ ಅನುವಾದಿಸಿರುವವರು. ಈ ಸಂಕಲನದಲ್ಲಿ ಅವರು ಅನುವಾದಿಸಿರುವ 38 ಕವಿಗಳ 64 ಕವನಗಳಿವೆ. ಡಾ. ಪುರುಷೋತ್ತಮ ಬಿಳಿಮಲೆಯವರು ಮುನ್ನುಡಿಯ ರೂಪದಲ್ಲಿ ಇಲ್ಲಿನ ಈ ಕವನಗಳ ವಸ್ತು, ಆಶಯಗಳ ಬಗೆಗೆ ಅಮೋಘವಾಗಿ ಬರೆದಿದ್ದಾರೆ.

ಕಾವ್ಯವನ್ನು ಅನುವಾದಿಸುವಾಗ ಯಾವುದು ಕಳೆದುಹೋಗುವುದೋ ಅದೇ ಕಾವ್ಯ ಎಂಬ ಮಾತನ್ನು ನಾವು ಕೇಳಿದ್ದೇವಲ್ಲವೆ? ಬೇಂದ್ರೆಯವರು ಕಾವ್ಯಾನುವಾದವೆಂದರೆ 'ನೆರಳು' ಎಂದು ಎಲ್ಲೋ ಬರೆದಂತೆ ನೆನಪು. ಮರದ ನೆರಳಿನಲ್ಲಿ ಮರ ಇರುವುದಿಲ್ಲ, ನಿಜ. ಆದರೆ, ಮರದ ಆಕಾರವಂತೂ ಇದ್ದೇ ಇರುತ್ತದೆ. ಕಾವ್ಯವನ್ನು ಅನುವಾದಿಸುವವರು ಮೂಲದ ಕಾವ್ಯಭಾಷೆ, ಲಯ, ಧ್ವನಿ, ಪ್ರತಿಮಾ ವಿಧಾನ, ಮೂಲ ಕವಿಯ ನಿಲುವು, ಆಶಯ ಮೊದಲಾದವುಗಳನ್ನು ಆಳವಾಗಿ ಅರಿತಿದ್ದರೆ ಒಳ್ಳೆಯದು. ಜೊತೆಗೆ ತಾವು ಅನುವಾದಿಸುತ್ತಿರುವ ಭಾಷೆಯಲ್ಲಿ ಸ್ವತಃ ಕವಿಯಾಗಿದ್ದರೆ ಇನ್ನೂ ಒಳ್ಳೆಯದು. ಯು.ಆರ್. ಅನಂತಮೂರ್ತಿಯವರ ಅನುವಾದಗಳನ್ನು ಓದುವಾಗಲೆಲ್ಲ ನನಗೆ ಹೀಗೆಯೇ ಮತ್ತೆ ಮತ್ತೆ ಅನ್ನಿಸುವುದುಂಟು.

ಸಮರ್ಥ ಕವಿಯಾಗಿದ್ದರೆ ಅವರಿಗೆ ವ್ಯುತ್ಪತ್ತಿ ಇರುತ್ತದೆ, ಛಂದೋವೈವಿಧ್ಯ ಗೊತ್ತಿರುತ್ತದೆ, ಭಾಷೆಯಲ್ಲಿ ಭಾವವನ್ನು ಅಭಿನಯಿಸಿ ತೋರಿಸುವ ಪ್ರತಿಭೆಯಿರುತ್ತದೆ, ಗದ್ಯದಲ್ಲೂ ಪದ್ಯದ ಲಯವನ್ನು ಸಾಧಿಸುವ ಸಾಮರ್ಥ್ಯವಿರುತ್ತದೆ, ಅಗತ್ಯವೆನ್ನಿಸಿದಾಗ ವ್ಯಾಕರಣವನ್ನೂ ಧಿಕ್ಕರಿಸಿ ಮುಂದೆ ಸಾಗುವ ಧೈರ್ಯವಿರುತ್ತದೆ. ಇವೆಲ್ಲ ಇದ್ದಾಗ ಅನುವಾದಿತ ಕವನ ಮೂಲ ಕವಿತೆಯ ಸ್ವರೂಪ, ಅಂತರ್ಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಹೀರಿಕೊಂಡಿರುವುದಷ್ಟೇ ಅಲ್ಲ, ಆಧುನಿಕ ಕನ್ನಡ ಕಾವ್ಯ ಪರಂಪರೆಯೊಡನೆ ಒಂದು ಹೊಸ ಸಂಬಂಧವನ್ನೂ ಕಟ್ಟಿಕೊಂಡಿರುತ್ತದೆ.

ಸ್ವತಃ ಕವಿಯಾಗಿರುವ ಅನುವಾದಕನಿಗೆ ತಾನು ಅನುವಾದಕ್ಕಾಗಿ ಆಯ್ದುಕೊಳ್ಳುವ ಒಂದೊಂದು ಕವನವೂ ಒಂದೊಂದು ಸವಾಲೇ. ಆ ಸವಾಲಿನಲ್ಲಿ ಸ್ವಲ್ಪ ಮಟ್ಟಿಗಾದರೂ ಯಶಸ್ಸು ಕಂಡಾಗ ಅವನು ಅನುವಾದಿಸಿದ ಕವನ ಅವನ ಭಾಷೆಯ ಕಾವ್ಯದ ಜೊತೆ ಮತ್ತು ಅವನದೇ ಕಾವ್ಯದ ಜೊತೆ ಯಾವ ತಕರಾರೂ ಇಲ್ಲದೆ ಬೆರೆತುಕೊಳ್ಳುತ್ತದೆ.

ಪ್ರಸಿದ್ಧ ವಿಮರ್ಶಕ ಜಾರ್ಜ್ ಸ್ಟೈನರ್ ಸಂಪಾದಿಸಿರುವ 'ಪೊಯೆಮ್ ಟು ಪೊಯೆಮ್' ಎಂಬ ಸಂಕಲನದಲ್ಲಿ ವರ್ಜಿಲ್, ಸಾಫೊಕ್ಲಿಸ್, ಬೋದಿಲೇರ್, ರಿಲ್ಕ್, ಬ್ರೆಖ್ಟ್, ಮಯಾಕೋವ್‌ಸ್ಕಿ, ಪಾಸ್ತರ್ನಾಕ್, ಲೋರ್ಕ ಮುಂತಾದವರ ಕವನಗಳಿವೆ. ಇವುಗಳನ್ನು ಇಂಗ್ಲಿಷಿಗೆ ಅನುವಾದಿಸಿರುವ ಹಾಪ್ಕಿನ್ಸ್, ಯೇಟ್ಸ್, ಎಜ್ರಾ ಪೌಂಡ್, ಮರಿಯನ್ ಮೂರ್, ಅಲೆನ್ ಟೇಟ್, ರಾಯ್ ಕ್ಯಾಂಪ್‌ಬೆಲ್, ರಾಬರ್ಟ್ ಲವೆಲ್, ಸ್ಟೀಫನ್ ಸ್ಪೆಂಡರ್, ರಿಚರ್ಡ್ ವಿಲ್ಬರ್ ಮುಂತಾದವರು ಸ್ವತಃ ಉತ್ತಮ ಕವಿಗಳು. ಇವರು ಬಹುಮಟ್ಟಿಗೆ ತಮ್ಮ ಅನುವಾದಗಳಲ್ಲಿ ಆಯಾ ಕವಿಗಳ ಸ್ಟಾಂಜಾ ಕ್ರಮವನ್ನೂ ಲಯವಿನ್ಯಾಸವನ್ನೂ ಅಂತ್ಯಪ್ರಾಸವನ್ನೂ ತರಲು ಪ್ರಯತ್ನಿಸಿರುವುದುಂಟು.

ಕನ್ನಡಕ್ಕೆ ಬಂದರೆ ಬಿ.ಎಂ.ಶ್ರೀ.ಯವರು ತಮ್ಮ 'ಇಂಗ್ಲಿಷ್ ಗೀತೆ'ಗಳಲ್ಲಿ 'ಇಂಗ್ಲಿಷ್ ಕವನಗಳಲ್ಲಿನ ನಡೆಗೆ ಸಮಾನವಾಗಬಹುದಾದ್ದನ್ನು' ಕನ್ನಡದಲ್ಲಿ ಗುರುತಿಸಿದರು. ರಾಮಚಂದ್ರ ಶರ್ಮರ 'ಈ ಶತಮಾನದ ನೂರು ಇಂಗ್ಲಿಷ್ ಕವನಗಳು' ಮತ್ತು ಎಚ್.ಎಸ್. ಶಿವಪ್ರಕಾಶರ 'ಮರುರೂಪಗಳು' ಸಂಕಲನಗಳಲ್ಲಿ, ನಿಸಾರ್ ಅಹಮದರ 'ಸುಮುಹೂರ್ತ' ಸಂಕಲನದ ಎರಡನೆಯ ಭಾಗದಲ್ಲಿ (ಶಿವಪ್ರಕಾಶರೇ ಬರೆದಿರುವಂತೆ) 'ಪ್ರತೀ ಕವಿತೆಯ ಸ್ವಧರ್ಮವೇ ತರ್ಜುಮೆಯ ದಿಕ್ಕನ್ನೂ ತೋರಿಸಿದಂತಿದೆ'. ಈ ಮಾತು ಇನ್ನಷ್ಟು ಸ್ಪಷ್ಟವಾಗಬೇಕಾದರೆ ಮುತಾಲಿಕರು ಇಲ್ಲಿ ಅನುವಾದಿಸಿರುವ ರಾಬರ್ಟ್ ಸದೆಯ 'ಬ್ಲೆನ್‌ಹೀಮ್ ಕದನ', ಡಬ್ಲ್ಯು.ಎಚ್. ಆಡೆನ್ನನ 'ನಿರಾಶ್ರಿತರು' ಕವನಗಳ ಜೊತೆಗೆ ಬಿ.ಎಂ.ಶ್ರೀ. ಮತ್ತು ರಾಮಚಂದ್ರ ಶರ್ಮರ ಇದೇ ಕವನಗಳ ಅನುವಾದವನ್ನೂ ಇಟ್ಟುಕೊಂಡು ಓದಬೇಕು.

ಕಾವ್ಯವೆನ್ನುವುದು ವಿಚಾರಗಳ ವಾಹಕವಲ್ಲ, ತತ್ತ್ವಶಾಸ್ತ್ರವೂ ಅಲ್ಲ. ಅದು ಶಬ್ದಗಳ ರಿಂಗಣಗುಣಿತ. ಆ ರಿಂಗಣಗುಣಿತದ ಮೂಲಕ ಕವಿಯು ಓದುಗನಲ್ಲೊಂದು ಧ್ವನಿಯ ಅಲೆ ಎಬ್ಬಿಸುತ್ತಾನೆ. ಅದನ್ನು ಆಗಮಾಡಿಸುವುದಕ್ಕಾಗಿ ಕವಿತೆ ತನ್ನ ವಸ್ತುವನ್ನು ಹೇಗೋ ಹಾಗೆ ತನ್ನ ಆಕೃತಿಯನ್ನೂ ಆಶ್ರಯಿಸುತ್ತದೆ. ಜೊತೆಗೆ ಅದು ತನ್ನದೇ ಭಾಷೆಗೆ ಅಂಟಿಕೊಂಡಿರುತ್ತದೆ ಮತ್ತು ಭಾಷಿಕ ಸಾಧ್ಯತೆಗಳ ಇಡೀ ಶ್ರೇಣಿಯನ್ನೇ ಉಪಯೋಗಿಸಿಕೊಂಡಿರುತ್ತದೆ. ಅಂದರೆ ಅದರ ಭಾಷೆಗೆ ಸಂಬಂಧಿಸಿದ ಅನನ್ಯ ಅರ್ಥ, ನುಡಿಗಟ್ಟು, ಸಂಸ್ಕೃತಿ, ಪ್ರಾಸ, ಲಯ, ಧ್ವನಿ, ನಾದ, ಸಂವೇದನೆ, ಅಷ್ಟೇಕೆ ಅದರ ಹ್ರಸ್ವ, ದೀರ್ಘ ಶಬ್ದಗಳು - ಹೀಗೆ ಎಲ್ಲವೂ ಒಂದು ಕಾವ್ಯದ ಭಾಷೆಯಲ್ಲಿರುತ್ತವೆ.

ವಿಭಿನ್ನ ಭಾಷೆಗಳ ನಡುವೆ ಇರುವ ಶಬ್ದಗಳ ಹಾಗೂ ಧ್ವನಿಗಳ ವ್ಯತ್ಯಾಸಗಳಿಂದಾಗಿ ಅನುವಾದದಲ್ಲಿ ಒಡಮೂಡಿರುವ ಕವನ, ಮೂಲ ಕವನದ ಶಬ್ದಗಳನ್ನಷ್ಟೇ ಅಲ್ಲ, ಇಡೀ ಕವನದ ಆಕೃತಿಯನ್ನೇ ಬದಲಾಯಿಸಿಬಿಟ್ಟಿರುತ್ತದೆ.

ಅನುವಾದಕನಾದವನು ಪ್ರಾಸ ಬೇಕೇ ಬೇಕೆಂದು ಅನ್ನಿಸಿದಾಗ ಮೂಲ ಕವನದ ಪದಶಃ ಅರ್ಥಕ್ಕೆ ಸಂಬಂಧಿಸಿದಂತೆ ಅಗತ್ಯವಿದ್ದಷ್ಟು ಸ್ವಾತಂತ್ರ್ಯ ವಹಿಸಲೇಬೇಕು. ಮೂಲ ಕವನದ ಕಲಾತ್ಮಕ ಸಂವೇದನೆಯನ್ನೂ ಅರ್ಥವನ್ನೂ ಉಳಿಸಿಕೊಳ್ಳಬೇಕೆನಿಸಿದಾಗಲೆಲ್ಲ ಒಳ್ಳೆಯ ಅನುವಾದಕ ಪದಶಃ ಅನುವಾದಕ್ಕೆ ಪಕ್ಕಾಗದೆ ಸ್ವತಂತ್ರ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತಾನೆ. ಬಹುಶಃ ಇದೇ ಕಾರಣದಿಂದಲೇ ಉತ್ತಮ ಅನುವಾದವೊಂದು ಮೂಲ ಕವನದಷ್ಟೇ ಸ್ವತಂತ್ರ ಕಲಾತ್ಮಕ ಸೃಷ್ಟಿಯಾಗಿರುತ್ತದೆ ಅಥವಾ ಮೂಲದ ಅನುಸೃಷ್ಟಿಯಾಗಿರುತ್ತದೆ.

ಪ್ರಸ್ತುತ ಸಂಕಲನದಲ್ಲಿರುವ ಕವಿಗಳಲ್ಲಿ ಒಬ್ಬೊಬ್ಬರದೂ ತಮ್ಮ ತಮ್ಮ ಕಾಲಧರ್ಮಕ್ಕನುಗುಣವಾದ, ವಿವಿಧ ರಚನಾ ಕ್ರಮಗಳನ್ನು ಅನುಸರಿಸಿದ ವಿಶಿಷ್ಟ ಧ್ವನಿ. ಆದರೆ ಮುತಾಲಿಕರು ಈ ಕವಿಗಳನ್ನು ಜೋಡಿಸುವಲ್ಲಿ ಯಾವುದೇ ಕಾಲಾನುಕ್ರಮವನ್ನು ಅನುಸರಿಸದೆ 'ಸರ್ವರಿಗೆ ಸಮಬಾಳು' ಕಲ್ಪಿಸಿದ್ದಾರೆ. ಇಲ್ಲಿ ಮಾಯಾ ಏಂಜಲೋ ಮೊದಲ ಕವಿಯಾಗಿದ್ದರೆ ಶೇಕ್ಸ್‌ಪಿಯರ್‌ಗೆ 27ನೆಯ ಸ್ಥಾನ ಸಿಕ್ಕಿದೆ! ಮಧ್ಯದಲ್ಲೆಲ್ಲೋ ನಮ್ಮ ವೈಯೆನ್ಕೆ ಮತ್ತು ಎಚ್.ಎಸ್. ಬಿಳಿಗಿರಿ ಇಬ್ಬರೂ ಸೇರಿ ಬರೆದರೆ ಹೇಗೋ ಹಾಗೆ ನಾನ್‌ಸೆನ್ಸ್ ಕವಿತೆಗಳನ್ನು ಬರೆದ ಓಗ್ಡನ್ ನ್ಯಾಶ್ ಕೂಡ ನುಸುಳಿಬಿಟ್ಟಿದ್ದಾನೆ. ಈ ಅನುವಾದಗಳಲ್ಲಿ ಕೆಲವು ನನಗೆ ಒಂದೇ ರೀತಿ ಕೇಳಿಸುತ್ತಿರುವುದಕ್ಕೆ ಬಹುಶಃ ಇದೂ ಒಂದು ಕಾರಣವಿದ್ದೀತು.

ಮುತಾಲಿಕರದು ಮುಖ್ಯವಾಗಿ ಪದ್ಯಲಯಕ್ಕಿಂತ ಗದ್ಯಲಯಕ್ಕೇ ಒಲಿದ ಮನಸ್ಸು ಎಂದು ತೋರುತ್ತದೆ. ಆದ್ದರಿಂದಲೇ ಇರಬೇಕು, ಇಲ್ಲಿ ಬ್ರೆಖ್ಟ್, ಮಾಯಾ ಏಂಜಲೋ, ಗೇಬ್ರಿಯಲ್ ಒಕಾರ, ಚಾರ್ಲ್ಸ್ ಬುಕೋವ್‌ಸ್ಕಿ, ಅರುಣ್ ಕೋಲಟ್ಕರ್, ಜೀವ ಪಟೇಲ್ ಮುಂತಾದವರ ಕೆಲವು ಕವನಗಳು ತಕ್ಕಮಟ್ಟಿಗೆ ಯಶಸ್ವಿಯಾಗಿವೆ.

ಒಟ್ಟಿನಲ್ಲಿ ಅನುವಾದಿತ ಕವನವೊಂದರ ಯಶಸ್ಸು ಅಥವಾ ಅಪಯಶಸ್ಸು ಅದು ಹೇಗೆ ಕನ್ನಡದಲ್ಲಿ ಉಸಿರಾಡುತ್ತಿದೆ ಎನ್ನುವುದನ್ನು ಅವಲಂಬಿಸಿರುತ್ತದೆ. ಒಳ್ಳೆಯ ಓದುಗರಿಗೆ ಅನುವಾದಗೊಂಡ ಒಂದು ಕವನದ ಮೂಲ ಯಾವುದೆಂದು ತಿಳಿಯದ ಸಂದರ್ಭದಲ್ಲಿ ಕೂಡ ಅನುವಾದಗೊಂಡಿರುವುದು ಚೆನ್ನಾಗಿದೆಯೋ ಇಲ್ಲವೋ ಎಂದು ಸುಲಭವಾಗಿ ತಿಳಿದುಬಿಡುತ್ತದೆ. ❖

ಕಥೆ
ಮುನವ್ವರ್ ಜೋಗಿಬೆಟ್ಟು ಬರೆದ ಕಥೆ
ಮೈನಾ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ
ಎಚ್.ಸಿ. ಭವ್ಯ ನವೀನ್ ಬರೆದ ಕವಿತೆ
ಬದುಕುವುದೇ ಜರೂರಿ...
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಚಿಣ್ಣರ ಲೋಕದಿ ಹೊಸ ಮಳೆಬಿಲ್ಲು

ರಘುನಾಥ ಚ.ಹ.

ಒಳನೋಟ

ನೋಟ್‌ಬುಕ್
ಲೇ: ಕೆ. ಶಿವಲಿಂಗಪ್ಪ ಹಂದಿಹಾಳು
ಪ್ರ: ಕವನ ಪ್ರಕಾಶನ, ಬಳ್ಳಾರಿ.
ಫೋನ್: 99803 46474.
ಪು: 148 ₹300

ಬಳ್ಳಾರಿ ಜಿಲ್ಲೆಯ ಹಂದಿಹಾಳು ಗ್ರಾಮದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿರುವ ಕೆ. ಶಿವಲಿಂಗಪ್ಪ ಹಂದಿಹಾಳು, ಮಕ್ಕಳ ಸಾಹಿತ್ಯ ರಚನೆಯನ್ನು ಗಂಭೀರವಾಗಿ ಪರಿಗಣಿಸಿರುವ ಬರಹಗಾರ. ಶಿಕ್ಷಕರಾಗಿ ಮಕ್ಕಳೊಂದಿಗೆ ನಿತ್ಯ ಒಡನಾಟದಲ್ಲಿರುವ ಅವರು, ಎಳೆಯರ ಮನಸ್ಸನ್ನು ಬಲ್ಲವರು ಹಾಗೂ ಆ ಮನಸ್ಸಿಗೆ ಯಾವುದು ರುಚಿಸುತ್ತದೆಂದು ಬಲ್ಲವರು; ಆ ರುಚಿಯ ಅಡುಗೆಯನ್ನು ರೂಪಿಸಲು ಪ್ರಯತ್ನಿಸುತ್ತಿರುವವರು.

ನೀತಿ ಸಾಹಿತ್ಯದ ಚೌಕಟ್ಟಿನಿಂದ ಹೊರಗಿಣುಕಿ ಮಕ್ಕಳ ಮನೋವಿಕಾಸ ಮತ್ತು ಮನರಂಜನೆಗೆ ಪೂರಕವಾದ ಸಾಹಿತ್ಯವನ್ನು ಸೃಷ್ಟಿಸುವುದು ಯಾವುದೇ ಬರಹಗಾರನಿಗೆ ಸವಾಲಿನ ಸಂಗತಿ. ಈ ಸವಾಲನ್ನು ಸ್ವೀಕರಿಸುವ ಮಾತಿರಲಿ, ಅರ್ಥ ಮಾಡಿಕೊಳ್ಳಲಿಕ್ಕೂ ಪ್ರಯತ್ನಿಸದೆ ಮಕ್ಕಳ ಗಂಟಲಲ್ಲಿ ನೀತಿಬೋಧೆಯ ಕಥೆ-ಕವಿತೆಯ ಕಡುಬು ತುರುಕುವ ಜೀವಮಾನ ಸಾಧನೆಯ ಬರಹಗಾರರಿದ್ದಾರೆ. ಆದರೆ, 'ಕನ್ನಡ ಮಕ್ಕಳ ಸಾಹಿತ್ಯ: ಫ್ಯಾಂಟಸಿಯ ಸ್ವರೂಪ' ವಿಷಯದ ಬಗ್ಗೆ ಪಿಎಚ್.ಡಿ. ಪದವಿ ಪಡೆದಿರುವ ಶಿವಲಿಂಗಪ್ಪ, ಮಕ್ಕಳ ಸಾಹಿತ್ಯದಲ್ಲಿ ಹೊಸ ಚಲನೆ ಸಾಧ್ಯವಾಗಬೇಕೆಂಬ ಹಂಬಲವುಳ್ಳವರು. ಆ ಹಂಬಲದ ಭಾಗವಾಗಿಯೇ 'ನೋಟ್‌ಬುಕ್' ಸಂಕಲನದ ಮಕ್ಕಳ ಕಥೆಗಳನ್ನು ಗಮನಿಸಬಹುದು.

'ನೋಟ್‌ಬುಕ್' ಕನ್ನಡದ ಮಟ್ಟಿಗೆ ವಿಶಿಷ್ಟವಾದ ಮಕ್ಕಳ ಕೃತಿ. ಹೊಳಪು ಹಾಗೂ ಬಣ್ಣದ ಚಿತ್ರಗಳ ಮಕ್ಕಳ ಕೃತಿಗಳು ಇಂಗ್ಲಿಷಿನಲ್ಲಿ ಸಹಜ; ಕನ್ನಡದಂಥ ದೇಸಿ ಭಾಷೆಗಳಲ್ಲಿ ದುರ್ಲಭ ಎನ್ನುವಂಥ ಸಂದರ್ಭದಲ್ಲಿ 'ನೋಟ್‌ಬುಕ್' ಅಚ್ಚರಿಯ ಕೃತಿಯಾಗಿ ಸಹೃದಯರನ್ನು ಎದುರುಗೊಳ್ಳುತ್ತದೆ. ಹೊಳಪು ಕಾಗದ ಹಾಗೂ ಬಣ್ಣದ ಚಿತ್ರಗಳ ಜೊತೆಗೆ, ಪ್ರತೀ ಕಥೆಯ ಆರಂಭದಲ್ಲಿ ಕಥಾವಾಚನ ವಿಡಿಯೊದ ಕ್ಯೂಆರ್ ಸಂಕೇತವಿದೆ. ಓದುವುದು, ಕೇಳುವುದು ಮತ್ತು ನೋಡುವುದು, ಮೂರೂ ಸಾಧ್ಯತೆಗಳ ಈ ಕೃತಿ ಹೊಸಕಾಲದ ಕಂದಮ್ಮಗಳಿಗೆ ಇಷ್ಟವಾಗುವಂತಿದೆ.

ಶಿವಲಿಂಗಪ್ಪನವರು ತಮ್ಮ ಪುಸ್ತಕವನ್ನು ಸರ್ಕಾರಿ ಶಾಲೆ ಮತ್ತು ಮಕ್ಕಳಿಗೆ ಅರ್ಪಿಸಿದ್ದಾರೆ. ಗ್ರಾಮೀಣ ಭಾಗದ ಮಕ್ಕಳ ತವಕತಲ್ಲಣಗಳೇ ಇಲ್ಲಿನ ಕಥೆಗಳಲ್ಲಿ ಕಾಣಿಸಿಕೊಂಡಿವೆ. 'ನನಗೂ ಬಟಗೊಳು ಕೊಡ್ರಿ ಸಾ...ರ್' ಎನ್ನುವ, ಕಲಿಕೆಯ ಸುಖದಿಂದ ವಂಚಿತನಾದ 'ನಾನು ಶಾಲೆಗೆ ಸೇರಿದೆ' ಕಥೆಯ ವೆಂಕಟೇಶಿ, ಶಿವಣ್ಣ ಮೇಷ್ಟ್ರ ಕಾಳಜಿಯಿಂದಾಗಿ ಶಾಲೆಗೆ ಸೇರುತ್ತಾನೆ. 'ಖುಷಿ' ಕಥೆಯ ಖುಷಿ, ಕುಟುಂಬದ ಬಡತನದಿಂದಾಗಿ ಕನಸುಗಳನ್ನು ಕಳೆದುಕೊಂಡ ನತದೃಷ್ಟೆ. ಗೆಳತಿಯರಂತೆ ಹೊಸ ಬಟ್ಟೆ ಹೊಲಿಸಿಕೊಳ್ಳಲು ಸಾಧ್ಯವಾಗದ ಮತ್ತೊಬ್ಬಳು ಖುಷಿಯ ಕಥೆ 'ಹೊಸಬಟ್ಟೆ', ಇವೆಲ್ಲವೂ ಗ್ರಾಮೀಣ ಮಕ್ಕಳ ಬದುಕನ್ನು ಆವರಿಸಿಕೊಂಡಿರುವ ಬಡತನ ಹಾಗೂ ಆ ಬಡತನದ ಕಾರಣದಿಂದಾಗಿ ಅವರು ಶಿಕ್ಷಣದಿಂದ ವಂಚಿತರಾಗಿರುವ ಸಮಾಜದ ದಾರುಣ ವಾಸ್ತವವನ್ನು ಚಿತ್ರಿಸುತ್ತವೆ.

ಮಕ್ಕಳ ಮನಸ್ಸನ್ನು ಗಾಸಿಗೊಳಿಸುವಂಥ ಕಥೆಗಳ ಜೊತೆಗೆ ಮುದಗೊಳಿಸುವ ರಚನೆಗಳೂ 'ನೋಟ್‌ಬುಕ್'ನಲ್ಲಿವೆ. ಕಟ್ಟೆಗೆ ಬೀಳಲಿದ್ದ ಮೋಡದ ಮರಿಯನ್ನು ಅರುಣನೆಂಬ ಬಾಲಕ ರಕ್ಷಿಸಿ ಮನೆಯ ಫ್ರಿಜ್‌ನಲ್ಲಿ ಸಂರಕ್ಷಿಸುವ 'ಕೂಸುಮೋಡ' ಕಥೆಯ ಕಲ್ಪನೆಯೇ ಸೊಗಸಾಗಿದೆ. 'ಶಿವಣ್ಣ ಮೇಷ್ಟ್ರು ಮತ್ತು ಮಳೆಬಿಲ್ಲು' ಕಥೆ ಮಕ್ಕಳ ಕಲ್ಪನಾಲಹರಿಗೆ ಇಂಬು ನೀಡುವಂತಹದ್ದು. ವಿಜ್ಞಾನ ಮೇಷ್ಟ್ರ ಪೀರಿಯಡ್ ನಡೆಯುವಾಗ ತರಗತಿಯ ಹೊರಗೆ ಸುರಿಯುವ ಮಳೆ ವಿದ್ಯಾರ್ಥಿಗಳ ಗಮನಸೆಳೆಯುತ್ತದೆ. ತಕ್ಷಣವೇ ಮಕ್ಕಳು ಬಯಲಿಗೆ ಧಾವಿಸಿ ಮಳೆಯಲ್ಲಿ ಹಾಡಿ ಕುಣಿಯುತ್ತಾರೆ. ಮಕ್ಕಳ ಸಂಭ್ರಮದಲ್ಲಿ ಮೇಷ್ಟ್ರೂ ಸೇರಿಕೊಳ್ಳುತ್ತಾರೆ. ಆ ಸಂಭ್ರಮವನ್ನು ಹೆಚ್ಚಿಸುವಂತೆ ಮುಗಿಲ ಬಯಲಿನಲ್ಲಿ ಮೂಡುವ ಮಳೆಬಿಲ್ಲು ಮಕ್ಕಳ ಕಲ್ಪನಾಲಹರಿ ಗರಿಬಿಚ್ಚಲು ಕಾರಣವಾಗುತ್ತದೆ. ಆದರೆ, ಮಕ್ಕಳ ಸಂಭ್ರಮವನ್ನು ಕನಸಿಗೆ ಸೀಮಿತಗೊಳಿಸುವುದು ಕಥೆಯ ಮಿತಿಯೂ ಆಗಿದೆ. ಶಾಲೆಯಿಂದ ಹೊರಬಿದ್ದ ಬಡ್ಯೆಗ ಎನ್ನುವ ಬಾಲಕ, ವಿದ್ಯುತ್ ಕಂಬದ ಪ್ರೇರಣೆಯಿಂದ ಊರವರೆಲ್ಲರ ಗಮನಸೆಳೆಯುವ ಸಾಧನೆ ಮಾಡುವ 'ಲೈಟುಕಂಬ' ಕಥೆ ಕಲ್ಪನಾವಿಲಾಸದ ಕಾರಣದಿಂದ ಗಮನಸೆಳೆದರೂ, ಕಥೆಯಲ್ಲಿ ಕಲ್ಪನೆಗಿಂತಲೂ ಹೆಚ್ಚು ಒಡೆದುಕಾಣುವುದು ಬಡ್ಯೆಗನ ಬಗೆಗಿನ ಕಥೆಗಾರನ ಅಂತಃಕರಣ. ಸೈಕಲ್‌ಗಾಗಿ ಹಂಬಲಿಸಿ, ಅದರ ಚಿತ್ರವನ್ನು ಪುಸ್ತಕದಲ್ಲಿ ಬರೆದುಕೊಂಡು ಸಮಾಧಾನಪಡುವ ಸುಮಾ ಎನ್ನುವ ಬಾಲಕಿಯ ಬದುಕಿನಲ್ಲಿ ಸಂಭವಿಸುವ ಜಾದೂ ಕೂಡ ಕಥೆಗಾರನ ಕರುಣೆಯಂತೆಯೇ ಕಾಣಿಸುತ್ತದೆ.

ಕಾಮನಬಿಲ್ಲು, ಸೈಕಲ್ಲು, ಹೊಸಬಟ್ಟೆ, ಐಸ್‌ಕ್ರೀಂ, ಇವೆಲ್ಲವೂ ಸೌಲಭ್ಯ ವಂಚಿತ ಗ್ರಾಮೀಣ ಕಾರ್ಮಿಕ ಕುಟುಂಬಗಳ ಮಕ್ಕಳ ಅಸಹಾಯಕತೆಯನ್ನು ಸೂಚಿಸುವ ರೂಪಕಗಳಾಗಿ ಶಿವಲಿಂಗಪ್ಪನವರಿಗೆ (ಕಥೆಗಳಲ್ಲಿನ ಶಿವಣ್ಣ ಮೇಷ್ಟ್ರಿಗೆ) ಒದಗಿಬಂದಿವೆ. ಶಿಕ್ಷಕರಾಗಿ ಮಕ್ಕಳ ಬಗೆಗಿನ ಕಥೆಗಾರರ ಕಾಳಜಿಯನ್ನು ಈ ಕಥೆಗಳು ಸೂಚಿಸುತ್ತವೆ. ಸಂಕಟಗಳ ಲೋಕವನ್ನು ಮಕ್ಕಳಿಗೆ ಪರಿಚಯಿಸುವ ಉದ್ದೇಶ ಒಳ್ಳೆಯದೇ. ಆದರೆ, ಈ ಕಥೆಗಳು ಮಕ್ಕಳ ಮನಸ್ಸಿನಲ್ಲಿ ಸಂತೋಷಕ್ಕಿಂತಲೂ ಹೆಚ್ಚಾಗಿ ಸಂಕಟವನ್ನು ಉಳಿಸುವುದಿಲ್ಲವೇ? ಮಕ್ಕಳ ಸಾಹಿತ್ಯದ ಪ್ರಮುಖ ಉದ್ದೇಶಗಳಾದ ಮನೋವಿಕಾಸ ಮತ್ತು ಮನರಂಜನೆ ಸಾಧ್ಯತೆ ಹಿನ್ನೆಲೆಗೆ ಸರಿಯುವುದಿಲ್ಲವೇ? ಶಿವಲಿಂಗಪ್ಪನವರ ಜೊತೆಗೆ ಮಕ್ಕಳ ಸಾಹಿತ್ಯದ ಬಗ್ಗೆ ಗಂಭೀರವಾದ ಆಸಕ್ತಿಯುಳ್ಳವರೆಲ್ಲರೂ ಉತ್ತರ ಕಂಡುಕೊಳ್ಳಬೇಕಾದ ಪ್ರಶ್ನೆಗಳಿವು. ❖

ಸುಳ್ಳಿನ ನಿಜವಾದ ಪುರಾಣ...

8ನೇ ಪುಟದಿಂದ...

ಸುಳ್ಳು ಮಾನವ ಕುಲಕ್ಕೆ ಹೊಸದೇನಲ್ಲ. ಸತ್ಯದ ಮೌಲ್ಯವನ್ನು ಹೊಗಳಲು ಪ್ರಾರಂಭಿಸಿದಾಗಲೇ ಸುಳ್ಳಿನ ಯುಗ ಪ್ರಾರಂಭವಾಗಿತ್ತು ಎಂದು ತೀರ್ಮಾನಿಸುವುದು ಸುಲಭ. ಸತ್ಯದ ತಲೆಯ ಮೇಲೆ ಹೊಡೆದಂತಹ ಸುಳ್ಳುಗಳನ್ನು ಹೇಳುವುದನ್ನು ಕರಗತ ಮಾಡಿಕೊಂಡ ಮೇಲೆ ಮಾನವನಿಗೆ ಅದರ ಬಗೆಗೆ ಪಾಪಪ್ರಜ್ಞೆ ಕಾಡಿರಲೇಬೇಕು. ಹಾಗಾಗಿಯೇ ಸತ್ಯದ ಮಹಿಮೆಯನ್ನು ಸಾರುವ ಕಥೆಗಳು, ಗಾದೆಗಳು, ನಾಣ್ಣುಡಿಗಳು ಹುಟ್ಟಿಕೊಂಡವು. ಸತ್ಯಹರಿಶ್ಚಂದ್ರನ ಕಥೆ, ಗೋವಿನ ಹಾಡು ನಮ್ಮ ಸಂಸ್ಕೃತಿಯಲ್ಲಿ ಕಾಣುವ ಕೆಲವು ಉದಾಹರಣೆಗಳು. ಈ ರೀತಿಯ ಕಥೆಗಳು ಎಲ್ಲಾ ಸಂಸ್ಕೃತಿಗಳಲ್ಲಿಯೂ ಇರಲೇಬೇಕು. ಏಕೆಂದರೆ, ದೇಶ ಭಾಷೆ ಬಣ್ಣ ಊಟ ದಿರಿಸುಗಳು ಬದಲಾದರೂ ಸಮಾನವಾದ ಅಂತರಂಗದ ತುಡಿತ, ಜಿಜ್ಞಾಸೆಗಳು ಎಲ್ಲಾ ಮಾನವರಲ್ಲಿಯೂ ಕಂಡುಬರುತ್ತವೆ.

ಸತ್ಯವನ್ನು ವೈಭವೀಕರಿಸುವ ಭರದಲ್ಲಿ ಅಸತ್ಯಗಳನ್ನು ಇಂತಹ ಕಥೆಗಳಿಗೆ ಆಧಾರವಾಗಿ ಬಳಸಲಾಯಿತು. ಅತ್ಯಂತ ಜನಪ್ರಿಯ ಗೋವಿನ ಹಾಡನ್ನೇ ನೋಡಿ. ಹುಲಿ ಹಸುವನ್ನು ತಿನ್ನುವುದು ಅಥವಾ ಹಸು ಹೇಗಾದರೂ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸುವುದು ಪ್ರಕೃತಿ ನಿಯಮ. ಆದರೆ ಕೈಗೆ ಸಿಕ್ಕಿದ ಹಸುವನ್ನು ತಿನ್ನದೆ ಬಿಡುವುದು, ತಪ್ಪಿಸಿಕೊಂಡು ಹೋಗುವ ಹಸು ಮತ್ತೆ ಬಲಿಯಾಗಲು ಬರುವುದು ಮತ್ತು ಹುಲಿ ತನ್ನ ಸಹಜಸ್ವಭಾವವನ್ನೇ ಕ್ರೌರ್ಯವೆಂದುಕೊಳ್ಳುತ್ತಾ ನೊಂದುಕೊಂಡು ಹಾರಿ ಪ್ರಾಣ ಬಿಡುವುದು- ಇವು ಸೃಷ್ಟಿಯ ಅಸತ್ಯಗಳು. ಅಸತ್ಯಗಳ ಮೂಲಕ ಸತ್ಯದ ಮೌಲ್ಯವನ್ನು ಹೇಳುವುದಾದರೂ ಹೇಗೆ?

ಅಗತ್ಯವಿದ್ದಾಗಲೆಲ್ಲಾ ಸುಳ್ಳಿಗೆ ಮೊರೆಹೋಗುವ ಮಾನವನ ಸಹಜಸ್ವಭಾವ ಒಂದುಕಡೆಯಾದರೆ ಸುಳ್ಳನ್ನಾಡುವ ಬಗೆಗಿನ ತನ್ನ ಪಾಪಪ್ರಜ್ಞೆ ಇನ್ನೊಂದು ಕಡೆ-ಈ ಎರಡರ ಹೋರಾಟದಲ್ಲಿ ಸತ್ಯ ಸುಳ್ಳುಗಳಿಗೆ ದೊಡ್ಡದೊಡ್ಡ ಬೌದ್ಧಿಕ ವ್ಯಾಖ್ಯೆಗಳನ್ನು ಕಟ್ಟಲಾಯಿತು. ಸುಳ್ಳು ಹೇಳುವುದು ಅಂತಹ ಪಾಪವೇನಲ್ಲ, ಆದರೆ ಅದರಿಂದ ಯಾರಿಗೂ ಹಾನಿಯಾಗಬಾರದು ಎನ್ನುವ ರೀತಿಯ ತಾತ್ವಿಕ ಸಮರ್ಥನೆಗಳು ಹುಟ್ಟಿಕೊಂಡವು. 'ಸತ್ಯಂ ಭ್ರೂಯಾತ್ ಪ್ರಿಯಂ ಭ್ರೂಯಾತ್, ನ ಭ್ರೂಯಾತ್ ಸತ್ಯಮಪ್ರಿಯಂ' (ಸತ್ಯವನ್ನು ಹೇಳು, ಪ್ರಿಯವಾದದ್ದನ್ನು ಹೇಳು. ಅಪ್ರಿಯವಾದ ಸತ್ಯಗಳನ್ನು ಹೇಳಬೇಡ) ಎನ್ನುವ ಶ್ಲೋಕಕ್ಕೆ ಆಧಾರವಾಗಿ ಕಥೆಯೊಂದಿದೆ. ಕಥೆಯ ಸಂದರ್ಭವನ್ನು ಮರೆತು ನಾವೆಲ್ಲಾ ಯಾವಾಗಲೂ ಸುಳ್ಳುಗಳನ್ನು ಹೇಳಲು ಈ ಶ್ಲೋಕವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತೇವೆ! ಇಷ್ಟವಿಲ್ಲದ ಸತ್ಯ ಪ್ರಿಯವಾಗಿರಲು ಸಾಧ್ಯವೇ ಎನ್ನುವುದನ್ನು ಬುದ್ಧಿವಂತಿಕೆಯಿಂದ ಮರೆಮಾಚುತ್ತೇವೆ.

ಎಷ್ಟೇ ಸತ್ಯನಾರಾಯಣ ವ್ರತಗಳನ್ನು ಮಾಡಲಿ, ಗೋವಿನ ಹಾಡನ್ನು ಪಠಿಸಲಿ, ಬೇರೆಯವರಿಗೆಲ್ಲಾ ಸತ್ಯದ ಬಗೆಗೆ ಉಪದೇಶ ಮಾಡಲಿ, ಸತ್ಯವಾದ ವಿಷಯವೆಂದರೆ ನಾವೆಲ್ಲಾ ನಮ್ಮನಮ್ಮ ಅನುಕೂಲಕ್ಕಾಗಿ ಸುಳ್ಳನ್ನು ಹೇಳುತ್ತೇವೆ! ಅಂತಹ ಸುಳ್ಳನ್ನು ಹೇಳುವುದು ಏಕೆ ಅನಿವಾರ್ಯವಾಗಿತ್ತು ಎಂದು ಯಾರೂ ಕೇಳದಿದ್ದರೂ ನಮ್ಮೊಳಗೆ ಸಮರ್ಥಿಸಿಕೊಳ್ಳುತ್ತಾ ನಾವೆಂತಹ ಸತ್ಯವಂತರೆಂದು ನಮ್ಮನ್ನು ನಾವೇ ಸುಳ್ಳೇ ನಂಬಿಸಿಕೊಳ್ಳುತ್ತೇವೆ! ಹೊರಗಡೆ ಹೊರಟಾಗ ತಾನೂ ಬರುತ್ತೇನೆಂದು ಹಟ ಹಿಡಿಯುವ ಮಗುವಿಗೆ, ಡಾಕ್ಟರ್ ಹತ್ರ ಹೋಗುತ್ತೇನೆ, ನೀನು ಬಂದ್ರೆ ಚುಚ್ಚಿ ಕೊಡ್ತಾರೆ ಎಂದು ನಂಬಿಸಿ ಹೋಗುವುದು ನಮ್ಮ ದೃಷ್ಟಿಯಲ್ಲಿ ಸುಳ್ಳಲ್ಲ.

ಗೋವಿನ ಕಥೆಯನ್ನು ನಿತ್ಯವೂ ಕೇಳಿದ ಮೇಲೆಯೂ ದೊಡ್ಡವರ ಇಂತಹ ನವಿರಾದ ಸುಳ್ಳುಗಳನ್ನು ಗುರುತಿಸುತ್ತಾ ಬರುವ ಮಗು ಅವರವರ ಅನುಕೂಲಕ್ಕೆ ತಕ್ಕಂತೆ ಸುಳ್ಳುಗಳನ್ನು ಹೇಳುವುದು ಸತ್ಯವನ್ನು ಹೇಳುವುದಕ್ಕೆ ಸಮಾನ ಎನ್ನುವುದನ್ನು ಕಲಿಯುತ್ತದೆ! ಕೆಲವೊಮ್ಮೆ ಸುಳ್ಳನ್ನು ಹೇಳಿ ಏನನ್ನಾದರೂ ಸಾಧಿಸಿಕೊಂಡು ಬಂದಾಗ, ಎಷ್ಟು ಚೂಟಿ ನೋಡು ಎನ್ನುವ ಹೊಗಳಿಕೆಯೂ ಮಗುವಿಗೆ ಸಿಕ್ಕಿರಬಹುದು. ಆದರೆ ನಿಧಾನವಾಗಿ ಮಗು ತನ್ನ ಅನುಕೂಲಕ್ಕಾಗಿ ನಮಗೇ ಸುಳ್ಳುಗಳನ್ನು ಹೇಳತೊಡಗಿದಾಗ ಕೆಂಡಾಮಂಡಲವಾಗಿ ನಾವೇ ಹೇಳದಿರುವ ಸತ್ಯದ ಬಗೆಗಿನ ಭಾಷಣವನ್ನು ಮುಂದುವರೆಸುತ್ತೇವೆ.

ಸುಳ್ಳನ್ನು ಆಡಬಾರದು ಸತ್ಯವನ್ನೇ ಹೇಳಬೇಕು ಎನ್ನುವುದನ್ನು ಸಾರಲು ಕಥೆ ಗಾದೆ ಮುಂತಾದವುಗಳು ಏಕೆ ಬೇಕು? ಎಲ್ಲರೂ ಎಲ್ಲಾ ಸಂದರ್ಭಗಳಲ್ಲಿಯೂ ಗಾಂಧೀಜಿಯಂತೆ ಸತ್ಯವನ್ನು ಹೇಳತೊಡಗಿದರೆ ಸಾಕು. ಇನ್ನೆರಡು ಶತಮಾನಗಳ ನಂತರವಾದರೂ ಸುಳ್ಳು ಎನ್ನುವ ಶಬ್ದ ನಿಘಂಟಿನಿಂದ ಮಾಯವಾಗಬಹುದು. ಆಗ 'ಇನ್ವೆನ್ಷನ್ ಆಫ್ ಲೈಯಿಂಗ್' ಚಿತ್ರವನ್ನು ನಿಷೇಧಿಸಿದರಾಯಿತು! ❖

ಶಿವಮೊಗ್ಗ ಜಿಲ್ಲೆಯ ಈ ಊರಿನ ಪುರಾತನ ಮಂದಿರ ಮಾತ್ರವಲ್ಲದೆ ನಾವು ಎಡವುವ ಪ್ರತೀ ಕಲ್ಲೂ ಇತಿಹಾಸದ ಕಥೆ ಹೇಳುತ್ತದೆ...

ಹಾಸುಗಲ್ಲಿನ ಮೇಲೆ ಅರಳಿ ನಿಂತ 18 ಕಂಬಗಳ ನವರಂಗ

ಹೊಸಗುಂದ ಎಂಬ ಹಳೆ ಕಥೆಗಳ ಬೀಡು

ಪ್ರವಾಸ

ಶ್ರೀಧರ್ ಎಸ್. ಸಿದ್ದಾಪುರ



ಕಲ್ಲಿನ ಕಂಬಗಳ ಸೊಬಗೇನ ಹೇಳಲಿ

ಹೂ ಅರಳುವ ಹೊತ್ತು. ಮಲಗಲು ಹೋದ ರವಿ ಇನ್ನೂ ಎದ್ದಿರಲಿಲ್ಲ. ಒಮ್ನಿಯ ಲಾಟೀನು ಬೆಳಕನು ಮುಂದ್ದಾಯಿಸಿ ಮಂಜಿನ ಪರದೆ ಸೀಳಿ ನಮ್ಮ ವಾಹನ ಸಾಗರ ತಾಲ್ಲೂಕಿನ ಆನಂದಪುರದ ಸನಿಹದ ಹೊಸಗುಂದದತ್ತ ಧಾವಿಸುತಲಿತ್ತು. ಗೂಗಲ್ ಗುರುವಿಗೆ ಸಹಾಯಕ್ಕಾಗಿ ಪದೇ ಪದೇ ಯಾಚಿಸಿದರೂ ನಿಮ್ಮ ಮೊಬೈಲ್ ನೆಟ್‌ವರ್ಕ್ ಕ್ಷೇತ್ರದಲ್ಲಿಲ್ಲವೆಂದು ಸಂದೇಶ ತೋರಿಸುತ್ತಾ ಮುಷ್ಕರ ಹೂಡಿತ್ತು. ಆನಂದಪುರದಲಿ ಎಡಕ್ಕೆ ಹಾಯ್ದು, ಆಕಾಶಕ್ಕೆ ಚಪ್ಪರ ಹಾಸಿದ ಮರಗಳ ನಡುವೆ ಹುದುಗಿದ ಹೊಸಗುಂದವೆಂಬ ಹೊಸಲೋಕವನ್ನು ಹಳೇ ಒಮ್ನಿ ಕಾರಿನಲ್ಲೇ ತಲುಪಿಕೊಂಡೆವು.

ಹೊಸನಗರದಿಂದ ಉತ್ತರಾಭಿಮುಖವಾಗಿ ಹೊರಟು ಆನಂದಪುರದಲ್ಲಿ ಎಡಕ್ಕೆ ಹೊರಳಿದರೆ ಹೊಸಗುಂದದ ದೇವಾಲಯಗಳ ಹೆಬ್ಬಾಗಿಲಿಗೆ ಬಂದು ಬೀಳುತ್ತೀರಿ. ಅಲ್ಲಿಂದ ಕೇವಲ 12 ಕಿಲೊ ಮೀಟರ್. ಸುತ್ತಲೂ ಆವರಿಸಿದ ಭತ್ತದ ಬಯಲು. ಊರಿಗೆ ಹೊಸಗುಂದ ಹೆಸರು ಹೇಗೆ ಬಂತೆಂದು ಇಲ್ಲಿನವರಿಗಿನ್ನೂ ಗೊತ್ತಿಲ್ಲ. ಮನಸೆಳೆವ ಆಕರ್ಷಕ ಶೈಲಿಯ 12ನೆಯ ಶತಮಾನದ ದೇಗುಲ.

ಪನ್ನೀರ ಪುಷ್ಕರಿಣಿಯಲಿ ಕಾಲು ತೋಯಿಸಿ ಮೆಟ್ಟಿಲೇರಿದಾಗ ಕಾಣಿಸಿದ್ದು ರಾಶಿ ರಾಶಿ ವೀರಗಲ್ಲು. ಕಾಲನ ಹೊಡೆತಕ್ಕೆ ಕೆಲವು ಕಂಗಾಲಾಗಿ ಮಲಗಿದ್ದರೆ ಕೆಲವೇ ಕೆಲವು ನಿಂತಿದ್ದವು. ತಮ್ಮ ಮೇಲಿನ ಅಕ್ಷರಗಳನ್ನೆಲ್ಲಾ ನುಂಗಿಕೊಂಡಿದ್ದವು ಕೆಲವು! ವೀರಗಲ್ಲಿನ ಮೇಲೂ ಕಲಾ ನೈಪುಣ್ಯ. ಚಿತ್ರ ವಿಚಿತ್ರ ಚಿತ್ರಗಳ ವಿಶಿಷ್ಟ ವೀರಗಲ್ಲುಗಳ ಸಮೂಹವೇ ಇಲ್ಲಿದೆ. ಇಲ್ಲಿ ನಡೆದಿರಬಹುದಾದ ಯುದ್ಧಗಳ ಸಣ್ಣ ಚಳಕನ್ನು ಈ ವೀರಗಲ್ಲುಗಳು ನಮಗೆ ತೋರಿಸುತ್ತವೆ. ನಮ್ಮವರ ಇತಿಹಾಸದ ದರ್ಪಣಗಳಿವು ಎಂಬುದನ್ನೂ ಅರಿಯದೆ ಸಾಯಲು ಬಿಟ್ಟಂತಿದೆ. ಕಲ್ಲಿಗೆ ಭಾಷೆ ಬಂದಿದ್ದರೆ ಹರಟಬಹುದಿತ್ತು, ಇತಿಹಾಸ ಕೆದಕಬಹುದಿತ್ತು!

ಮುಂದೆ ಸಿಗುವುದೇ ದೇವಾಲಯ ಸಮುಚ್ಚಯ. ಹಾಸುಗಲ್ಲಿನ 18 ಕಂಬಗಳ ಮೇಲೆ ಅರಳಿ ನಿಂತ ನವರಂಗದ ಶೋಭೆ. ಕಲಾತ್ಮಕತೆಯಂತೂ ಅತ್ಯದ್ಭುತ. ಸ್ಫಟಿಕರೂಪಿ ಶಿವಲಿಂಗ ಲಿಪ್‌ಸ್ಟಿಕ್ ಹಾಕಿದಂತೆ ಕೆಂಪು. ಉಳಿದರ್ಧ ಕಂದು! ವರ್ಣನಾತೀತ. ನೇಪಾಳದಿಂದ ತರಿಸಲಾದ ಶಿವಲಿಂಗ ಎಂಬುದು ಅರ್ಚಕರ ಅಂಬೋಣ. ದಕ್ಷಿಣ ಭಾರತದಲ್ಲೆಲ್ಲೂ ಇಂತಹ ಅಪೂರ್ವ ಲಿಂಗವಿಲ್ಲವೆನ್ನುತ್ತಾರೆ! ಮತ್ತೆ ಮತ್ತೆ ನೋಡುವಷ್ಟು ಚೆಲುವು. ಶಿವಲಿಂಗ ಜೊತೆಗಿರುವ ಪ್ರಸನ್ನ ನಾರಾಯಣ ದೇವಾಲಯವೋ ಮಹದದ್ಭುತಗಳಲ್ಲೊಂದು. ನಾರಾಯಣನ ಮೂರುತಿ ಪೀಠ ಸೇರಿದಂತೆ ಸುಮಾರು ಏಳು ಅಡಿ ಎತ್ತರ. ಶಿವಲಿಂಗದೊಂದಿಗೆ ಪೈಪೋಟಿಗಿಳಿದಂತಿರುವ ಪ್ರಸನ್ನ ನಾರಾಯಣನ ಮೂರುತಿ. ನವರಂಗದ ಹೊರ ಭಿತ್ತಿಯಲ್ಲಿ ಅನೇಕ ಕತೆಗಳನ್ನು, ಮಿಥುನ ಶಿಲ್ಪಗಳನ್ನು ಕೆತ್ತಲಾಗಿದೆ! ಕೆತ್ತನೆಯ ನಾಜೂಕು ನಿಮ್ಮನ್ನು ಸೂರೆಗೊಳಿಸುತ್ತದೆ.

ದೇವಾಲಯದ ಸನಿಹದಲ್ಲೇ 12 ಅಡಿಗಳಷ್ಟು ಎತ್ತರದ ಮಣ್ಣಿನ ಗೋಡೆಗಳಿವೆ. ಯಾವುದೋ ಸಾಮಂತ ರಾಜ ಆಳ್ವಿಕೆ ಮಾಡಿರುವ ಸಾಧ್ಯತೆಗಳಿವೆ. ಕೆದಕಿದರೆ ಇತಿಹಾಸದ ಕುರುಹುಗಳು ಕಾಣ ಸಿಕ್ಕಾವು. ದೇವಾಲಯದ ಸನಿಹದ ಕಾಡು ಅಮೂಲ್ಯ ವನ ಸಂಪತ್ತಿನ ಆಗರ. 600 ವರುಷ ಹಳೆಯ ಮಾವಿನ ಮರವೊಂದು ನಾವು ಆರು ಜನ ಮುತ್ತಿಗೆ ಹಾಕಿದರೂ ಕೈ ಸಾಲದಾಯಿತು! 500 ವರುಷ ಹಳೆಯ ಬಳ್ಳಿಗಳು, ವಿಶಿಷ್ಟ ಪೊದೆಗಳು ಅನೇಕ ದಿನಗಳವರೆಗೆ ನಿಮ್ಮ ಮನಸ್ಸನ್ನು ಆವರಿಸದೇ ಬಿಡವು. 600 ಎಕರೆಯಲಿ ಹರಡಿದ ಹೊಸಗುಂದದ ದೇವಾಲಯ ನಿಶ್ಚಯವಾಗಿ ನಿಮಗೆ ಹೊಸ ಸ್ಟೋರಿ ನೀಡುವಲ್ಲಿ ಖಂಡಿತ ಸೋಲದು. ಇಲ್ಲಿನ ವನ ಸಂಪತ್ತನ್ನು ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕಾ ಇಲಾಖೆ ಸರ್ವೆ ನಡೆಸಿ 540ಕ್ಕೂ ಹೆಚ್ಚು ಅಳಿವಿನಂಚಿನ ಗಿಡಗಳಿವೆಯೆಂದು ಗುರುತಿಸಿದೆ! ಅಬ್ಬಾ ಎಂದಿತು ಮನ.

ಸರಿಯಾದ ರಕ್ಷಣೆಯಿಲ್ಲದೆ ನಿಂತಿರುವ ವೀರಗಲ್ಲುಗಳು

ವಿಶಿಷ್ಟ ವಿನ್ಯಾಸದ ಕಾಳಿ ದೇವಾಲಯವನ್ನು ನೋಡದೇ ಬಂದರೆ ಖಂಡಿತ ಏನೋ ಒಂದನ್ನು ಕಳೆದುಕೊಂಡಂತೆ. ಕೇರಳೀಯ ಶೈಲಿಯಲ್ಲಿ ಕೆಂಪು ಕಲ್ಲಿನಲ್ಲಿ ಕಡೆದು ಕೆತ್ತಿದ್ದಾರೆ. ಅಂದವಾಗಿ ಅದಕ್ಕೆ ಮಂಗಳೂರು ಹೆಂಚು ಹೊದಿಸಲಾಗಿದೆ. ಸುತ್ತಲೂ ಸುಂದರ ಪೌಳಿಯನ್ನು ನಿರ್ಮಿಸಿದ್ದಾರೆ.

ಇತಿಹಾಸವನು ಕೆದಕಿದರೆ ಕ್ರಿ.ಶ. 9ನೆಯ ಶತಮಾನಕ್ಕೆ ನಮ್ಮನ್ನು ಒಯ್ಯುತ್ತದೆ. ಕೆಲವೇ ವರ್ಷಗಳ ಕೆಳಗೆ ಮಣ್ಣಿನಡಿಯಲ್ಲಿ ಮಲಗಿದ್ದ ದೇವಾಲಯವು ಊರಿನವರ (ನಾರಾಯಣ ಶಾಸ್ತ್ರಿ ದಂಪತಿ) ಮತ್ತು ಉಮಾ ಮಹೇಶ್ವರ ಸೇವಾ ಟ್ರಸ್ಟ್ ಕಾಳಜಿಯಿಂದ ಜೀರ್ಣೋದ್ಧಾರಗೊಂಡಿದೆ. ಎಲ್ಲಾ ದೇವಾಲಯಗಳನ್ನು ಮೊದಲಿನಂತೆ ನಿರ್ಮಿಸಲಾಗಿದೆ.

ಎ. ಸುಂದರಂ, ಜಿ.ವಿ. ಕಲ್ಲಾಪುರ, ಸಾಮಕ್ ಅವರ ಸಂಶೋಧನೆಯ ಪರಿಶ್ರಮ ಎದ್ದು ಕಾಣುತ್ತದೆ. ಇಲ್ಲಿನ ಶಾಸನಗಳನ್ನು ಓದಿ ಇದರ ಐತಿಹ್ಯದ ಗಂಟನ್ನು ಬಿಡಿಸಿದ್ದಾರೆ. ಉತ್ಖನನಗೊಂಡಾಗ ಶಿಲಾಯುಗದ ಆಯುಧಗಳೂ, ಗಂಗರ ಕಾಲದ ನಾಣ್ಯಗಳೂ ಸಿಕ್ಕಿವೆ ಎಂದು ಹೇಳಲಾಗುತ್ತದೆ.

ಪ್ರಸನ್ನ ನಾರಾಯಣ ದೇವಾಲಯವನ್ನು ಬಲದೇವನೆಂಬುವವನು 1242ರಲ್ಲಿ ನಿರ್ಮಿಸಿದನೆಂದು ಐತಿಹ್ಯ ಹೇಳುತ್ತದೆ. ಕ್ರಿ.ಶ. 1320ರಲ್ಲಿ ಹೊಯ್ಸಳರ ವೀರ ಬಲ್ಲಾಳ ದೇವರಸನು ಕಂಚಿ ಕಾಳಮ್ಮ ದೇವಾಲಯಕ್ಕೆ ಭೂದಾನ ನೀಡಿದ ಶಾಸನ ಪತ್ತೆಯಾಗಿದೆ. ಗಣಪತಿ, ವೀರಭದ್ರ, ಮಹಿಷ ಮರ್ದಿನಿ, ಸುಬ್ರಹ್ಮಣ್ಯ ದೇವಾಲಯ ನಿರ್ಮಿಸಿದನೆಂದು ಅಳಿಯದೇ ಉಳಿದ ಶಾಸನಗಳು ಸಾರುತ್ತವೆ.

ಇಲ್ಲಿನ ದೇವಾಲಯಗಳನ್ನು ದ್ರಾವಿಡ, ಹೊಯ್ಸಳ, ಪಲ್ಲವ, ಕೇರಳೀಯ ಶೈಲಿಗಳಲ್ಲಿ ನಿರ್ಮಿಸಲಾಗಿದೆ. ಅತ್ಯದ್ಭುತವಾದ ದೇವಾಲಯ ಸಮುಚ್ಚಯದ ಜೊತೆಗೆ 600 ಎಕರೆ ದೇವರಕಾಡು ಪರಿಸರಾಸಕ್ತರಿಗೆ, ಇತಿಹಾಸಪ್ರಿಯರಿಗೆ ಸುಗ್ರಾಸ ಭೋಜನವನ್ನು ಉಣ ಬಡಿಸುವುದರಲ್ಲಿ ಯಾವುದೇ ಸಂಶಯವಿಲ್ಲ.

ಸಂಗೀತದ ಮಂದ್ರರಾಗ!

8ನೇ ಪುಟದಿಂದ...

ಗಾಯನ ಸಭಾದ ಮೂಲಕ ದೇಶದ ಯಾವ್ಯಾವುದೋ ಮೂಲೆಯಲ್ಲಿನ ಸಂಗೀತ ಹಾಗೂ ನೃತ್ಯ ಕಲಾವಿದರು ತಮ್ಮ ಕೇಳುಗರನ್ನು ಪಡೆದುಕೊಂಡರು.

ಹೊರಗೆ ಕಾಲಿಡಲಾಗದಂಥ ಸನ್ನಿವೇಶ ಬಂದ ಕೂಡಲೇ ಯಾಕೆ ಈ ರೀತಿ ಕಾರ್ಯಕ್ರಮಗಳ ಸಂಖ್ಯೆ 'ಅತಿ' ಎನಿಸುವಷ್ಟು ಹೆಚ್ಚಿತು ಎಂಬುದರ ಬಗ್ಗೆ ಯೋಚಿಸಿದಾಗ ಕೆಳಗಿನ ಹಲವು ಅಂಶಗಳು ಗಮನಕ್ಕೆ ಬಂದವು. ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಕಾರ್ಯಕ್ರಮದ ಆಯೋಜಕರು ಹೆಚ್ಚಾಗಿ ಕಲಾವಿದರೇ ಆಗಿದ್ದಾರೆ. ಕರ್ನಾಟಕಿ ಸಂಗೀತದಲ್ಲಿದ್ದಂತೆ ಇಲ್ಲಿ ಸಭಾಗಳು, ಆಯೋಜಕರು ಎಂಬಂಥ ಪ್ರತ್ಯೇಕವಾದ ಗುಂಪು ಇಲ್ಲ. ಆದ್ದರಿಂದ ಸಂಗೀತಗಾರ ಸ್ನೇಹಿತರ ಗುಂಪು ಸರಳವಾಗಿ, ಏನೂ ಶಿಷ್ಟಾಚಾರ (ಪ್ರೋಟೊಕಾಲ್) ಇಲ್ಲದೆ ಸಂಗೀತ ಕಛೇರಿಗಳನ್ನು ಏರ್ಪಡಿಸುವುದು ಸುಲಭ ಸಾಧ್ಯ.

ಹಿಂದಿನ ತಲೆಮಾರಿನ ಸಂಗೀತಗಾರರಂತಲ್ಲದೆ ಇಂದಿನ ಯುವ ಸಂಗೀತಗಾರರು ತಂತ್ರಜ್ಞಾನದ ವಿಷಯದಲ್ಲಿ ಬಹಳ ಮುಂದುವರಿದವರು. ಸಂಗೀತದೊಂದಿಗೆ ಎಂಜಿನಿಯರಿಂಗ್, ವ್ಯವಹಾರ ಕೌಶಲ, ಮ್ಯಾನೇಜ್‌ಮೆಂಟ್ ಮುಂತಾದ ವಿಷಯಗಳಲ್ಲಿ ಪದವಿ ಪಡೆದ, ಚಿಮ್ಮುವ ಉತ್ಸಾಹದ ಯುವಕರಿಗೆ ಬದಲಾದ ಸನ್ನಿವೇಶದಲ್ಲಿ ಹೊಸದನ್ನು ಮಾಡಲು ಹುಮ್ಮಸ್ಸು ಬಂದಿತ್ತು. ಸಮಾನಮನಸ್ಸುಳ್ಳ ಸಹ ಕಲಾವಿದ ಸ್ನೇಹಿತರೊಂದಿಗೆ ಬೆರೆತು ಅನೇಕರು ಸಾಹಸಕ್ಕೆ ಕೈ ಹಾಕಿದರು.

ಸಂಗೀತ ಕ್ಷೇತ್ರದಲ್ಲಿದ್ದ ದೊಡ್ಡ ಕೊರತೆಯೆಂದರೆ, ಅನೇಕರು ಈಗಾಗಲೇ ಗುರುತಿಸಿರುವಂತೆ ಎಳೆಯ, ಬೆಳೆಯುವ, ಯುವ ಸಂಗೀತಗಾರರಿಗೆ ಸಿಗುವ ಅವಕಾಶದ ಕೊರತೆ. ಒಮ್ಮೆ ಹೆಸರಾದ ಕಲಾವಿದರೇ ದೇಶದ ದೊಡ್ಡ ಕಾರ್ಯಕ್ರಮಗಳಲ್ಲಿ ಪ್ರತಿಬಾರಿಯೂ ಕಾಣಿಸಿಕೊಳ್ಳುತ್ತಿರುತ್ತಾರಲ್ಲದೆ ಪ್ರತಿಭಾವಂತ ಎಳೆಯರಿಗೆ ಅವಕಾಶ ದೊರಕುವುದು ತುಂಬಾ ವಿರಳ. ಜೊತೆಗೆ, ಸ್ವಂತ ಪ್ರತಿಭೆಯಿಂದ ಗುರುತಿಸಿಕೊಂಡು ಹೆಸರಾದವರೂ ಬೆರಳೆಣಿಕೆಯಷ್ಟೇ. ಇಲ್ಲಿ ವೇದಿಕೆ ಗಿಟ್ಟಿಸಿಕೊಳ್ಳಲು ಹಲವು ಬಗೆಯ ವಶೀಲಿ, ರಾಜಕೀಯ, ಓಲೈಸುವಿಕೆ ಕೆಲಸ ಮಾಡುತ್ತದೆ. ಇಂಥ ಸಂದರ್ಭದಲ್ಲಿ ಇವು ಯಾವುದರ ಅಗತ್ಯವೂ ಇಲ್ಲದೆ ವೇದಿಕೆ ದೊರಕಿದ್ದು ಯುವ ಗಾಯಕರಿಗೆ ಪ್ರೋತ್ಸಾಹದಾಯಕವಾಗಿ ಕಂಡಿತು. ಅಲ್ಲದೆ, ನೃತ್ಯ, ನಾಟಕ, ವಾದನ ಮುಂತಾದ ಕಲೆಗಳಿಗೆ ಹೋಲಿಸಿದಲ್ಲಿ ಹಾಡುವುದು ಹೆಚ್ಚಿನ ಪರಿಕರ, ಪೂರಕ ಅಂಶಗಳನ್ನು ಬಯಸದೇ ಇರುವ ಕಾರಣ ಇದರ ಆನ್‌ಲೈನ್ ಪ್ರಸ್ತುತಿ ಉಳಿದವಕ್ಕಿಂತ ಸುಲಭ.

ಅವಿರತವಾಗಿ 8-10 ತಿಂಗಳುಗಳ ಕಾಲ ನಡೆದ ಆನ್‌ಲೈನ್ ಕಾರ್ಯಕ್ರಮಗಳು, ಬದಲಾವಣೆಯ ಅಲೆಯನ್ನೇ ಉಂಟುಮಾಡಿದವು. ಇವುಗಳಿಂದ ಹಲವಾರು ಅನುಕೂಲಗಳೂ ಆಗಿವೆ. ಬಹು ಮುಖ್ಯವಾಗಿ ಇದರಿಂದ ಹಾಡುವವರು ನೇರವಾಗಿ ದೊಡ್ಡ ಸಂಖ್ಯೆಯ ಶ್ರೋತೃಗಳನ್ನು, ಪೋಷಕರನ್ನು ತಲುಪಲು ಸಾಧ್ಯವಾಯಿತು. ತಮ್ಮ ತಮ್ಮ ಪ್ರತಿಭೆಯನ್ನು ಮುಕ್ತವಾಗಿ ಕೇಳುಗರ ಮುಂದೆ ಇಟ್ಟು, ತೀರ್ಮಾನವನ್ನು ಅವರಿಗೇ ಬಿಡುವುದು ಸಾಧ್ಯವಾಯಿತು. ದೇಶದ ಯಾವ್ಯಾವುದೋ ಮೂಲೆಯಲ್ಲಿರುವ ಆಸಕ್ತರನ್ನು ಇದು ತಲುಪಿತು. ಮಾತ್ರವಲ್ಲ ಹೊರದೇಶದ ಸಂಗೀತಪ್ರೇಮಿಗಳವರೆಗೂ ಇದು ತಲುಪಿತು. ನಾನು ಗಮನಿಸಿದಂತೆ ಕಳೆದ ಒಂದು ವರ್ಷದಲ್ಲಿ ಬೆಳಕಿಗೆ ಬಂದ ಪ್ರತಿಭಾವಂತರಲ್ಲಿ ಕೋಲ್ಕತ್ತದವರದ್ದು ಅಗ್ರಪಾಲು. ಕರ್ನಾಟಕದ ಹಲವರೂ ಮಹಾರಾಷ್ಟ್ರ, ಮಧ್ಯಪ್ರದೇಶ ಮುಂತಾದೆಡೆಯ ಪೋಷಕರನ್ನು ತಲುಪಿದ್ದಾರೆ.

ಧ್ವನಿವರ್ಧಕಕ್ಕಾಗಿ ದೊಡ್ಡ, ದುಬಾರಿ ಸಭಾಂಗಣಗಳನ್ನು ಬಳಸಿಕೊಳ್ಳಲಾಗದ ಸಂದರ್ಭದಲ್ಲಿ ಅನೇಕರು ಅವಶ್ಯ ಪರಿಕರಗಳಾದ ಮೈಕ್, ಆ್ಯಂಪ್ಲಿಫೈಯರ್, ಮಿಕ್ಸರ್ ಮುಂತಾದವುಗಳನ್ನು ತಮ್ಮ ಮನೆಯಲ್ಲೇ ಜೋಡಿಸಿಕೊಂಡರು. ಇದರಿಂದಾಗಿ ಹಲವರು ತಮ್ಮ ತಂತ್ರಜ್ಞಾನದ ತಿಳಿವಳಿಕೆಯನ್ನು ಬೆಳೆಸಿಕೊಂಡು, ತಮ್ಮ ದನಿಗೆ ಬೇಕಾದಂತೆ ಸೌಂಡ್ ಅನ್ನು ಸೆಟ್ಟಿಂಗ್ ಮಾಡಿಕೊಳ್ಳುವ ರೀತಿ, ಲೈವ್ ಹೋಗುವ ರೀತಿ, ಪ್ರೀಮಿಯರ್, ವಿಡಿಯೊ-ಆಡಿಯೊ ಮಿಕ್ಸಿಂಗ್, ವಿಡಿಯೊ ಎಡಿಟಿಂಗ್ ಇವನ್ನೆಲ್ಲಾ ಕಲಿತರು.

ಕೇಳುಗರಿಗಾದ ಅನುಕೂಲವೆಂದರೆ ಕುಳಿತಲ್ಲೇ, ತಮ್ಮ ಮನೆಯ ಟಿವಿ-ಫೋನ್‌ನಲ್ಲೇ ಸಂಗೀತವನ್ನು ಕೇಳಬಹುದಾದದ್ದು. ಬೆಂಗಳೂರು, ದೆಹಲಿ, ಮುಂಬೈಯಂಥ ದೊಡ್ಡ ನಗರಗಳಲ್ಲಿ ಟ್ರಾಫಿಕ್ ಕಾರಣದಿಂದ ಎಷ್ಟೋ ಬಾರಿ ಕಾರ್ಯಕ್ರಮಗಳಿಗೆ ಹೋಗಲು ಸಾಧ್ಯವಾಗುವುದಿಲ್ಲ. ನಡೆದ ಕಾರ್ಯಕ್ರಮಗಳನ್ನು ಭಾಗವಹಿಸದ ಹೊರತು ಹೊರಗೆ ಕೇಳಲಾಗುವುದಿಲ್ಲ. ಕೊರೊನಾ ಕಾಲದಲ್ಲಿ ಅಂಗೈಯಲ್ಲೇ ಸಂಗೀತ ದೊರಕಿದ್ದು ಮಾತ್ರವಲ್ಲ, ತಮಗಿಷ್ಟವಾದದ್ದನ್ನು ಮತ್ತೆ ಮತ್ತೆ ಕೇಳುವ, ಕೆಲಸ ಮುಗಿಸಿ ವಿರಾಮದಲ್ಲಿ ಕೇಳುವ ಅವಕಾಶಗಳೂ ದೊರಕಿದವು. ಉಡುಪಿಯ 'ರಂಜನಿ ಮೆಮೋರಿಯಲ್ ಟ್ರಸ್ಟ್', ಮೈಸೂರಿನಲ್ಲಿನ ಪ್ರತಿಷ್ಠಿತ ಸಂಸ್ಥೆಯಾದ 'ಗಾನಭಾರತಿ' ಇವುಗಳು ಸಂಗೀತದ ಕೆಲಸವನ್ನು ಹಲವು ಬಗೆಯಲ್ಲಿ ಮಾಡಿವೆ. ಅನೇಕರಿಗೆ ಗಡಿಬಿಡಿಯ ಓಡಾಟವನ್ನು ಒಮ್ಮೆ ನಿಲ್ಲಿಸಿ ತಮ್ಮ ಸಂಗೀತವನ್ನು ಅರಿತು, ಸುಧಾರಿಸಿಕೊಳ್ಳಲು ಅನುವಾಗಿದೆ. ನನ್ನ ಗುರುಗಳಾದ ಪಂ.ನಾರಾಯಣ ಪಂಡಿತರು ರಚಿಸಿದ 100 ಬಂದಿಶ್‌ಗಳನ್ನು ಅವರ ಶಿಷ್ಯರು ಸೇರಿ ಯೂಟ್ಯೂಬ್‌ಗೆ ಸೇರಿಸಿದ್ದೇವೆ ಮತ್ತು ಇಂತಹ ಇನ್ನೂ ಅನೇಕ ಕೆಲಸಗಳಾಗಿವೆ.

ಈ ಎಲ್ಲಾ ಪ್ರಯತ್ನಗಳು ಕಲಾವಿದರೊಳಗಿನ ಜೀವರಸವನ್ನು ಬತ್ತದಂತೆ ಇಟ್ಟುಕೊಳ್ಳಲು ನೆರವಾಗಿದ್ದರೂ ಬದುಕಿಗೆ ಬೇಕಾದ ಮೂಲ ದ್ರವ್ಯವಾದ 'ಆದಾಯ' ಇಲ್ಲಿ ದೊಡ್ಡ ಪ್ರಶ್ನೆಯೇ ಆಗಿದೆ. ಹೆಚ್ಚಿನ ಫೇಸ್‌ಬುಕ್ ಲೈವ್ ಕಾರ್ಯಕ್ರಮಗಳಲ್ಲಿ ಆದಾಯವಿರುವುದಿಲ್ಲ. ಇದ್ದರೂ ಅದು ಸಣ್ಣ ಮೊತ್ತ. ಆದರೆ 'ಚಾಲ್ತಿ'ಯಲ್ಲಿದ್ದರೆ ಮಾತ್ರ ಈ ಕ್ಷೇತ್ರದಲ್ಲಿ ನೆಲೆಯೂರಲು ಸಾಧ್ಯವೆಂಬ ಅಂಶ ಅಂದಿಗೆ ಕಲಾವಿದರೆಲ್ಲರಿಗೆ ಮುಖ್ಯವಾಗಿತ್ತು ಎಂದೆನಿಸುತ್ತದೆ. ಹಾಗಾಗಿ 'ಗುಣಮಟ್ಟ'ದ ಕೊರತೆಯೂ ಇಲ್ಲಿ ಕಾಣಿಸಿಕೊಂಡಿತ್ತು. ಕಣ್ಣಮುಂದೆ ಸಹೃದಯಿ ಕೇಳುಗರು ಇಲ್ಲದೆ ಗೋಡೆ ನೋಡುತ್ತಾ ಹಾಡುವುದು ಅನೇಕ ಬಾರಿ ಅಸಹನೀಯವೆನಿಸುತ್ತದೆ. ಬೇಕಾದಂತೆ ಪಕ್ಕವಾದ್ಯದವರು ದೊರಕುವುದಿಲ್ಲ. ಆದಾಯವಿಲ್ಲದೆ, ಅವಕಾಶವಿಲ್ಲದೆ ಕಷ್ಟಪಟ್ಟವರಲ್ಲಿ ಪಕ್ಕವಾದ್ಯದ ಕಲಾವಿದರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ.

ಒಂದು ವರ್ಷದಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಎಲ್ಲರೂ ಅನೇಕ ಸಾವು-ನೋವುಗಳನ್ನು ನೋಡಿದ್ದಾಗಿದೆ. ಸಾಧಕರನ್ನು, ಆಪ್ತರನ್ನು, ಮಾದರಿಯಾಗಿದ್ದವರನ್ನು ಕಳೆದುಕೊಂಡಿದ್ದೇವೆ. ಫೇಸ್‌ಬುಕ್ ತೆರೆದರೆ ಹಿಂದಿನ ವರ್ಷದ ಲವಲವಿಕೆ ಇಲ್ಲ, ಯಾರಿಗೆ ಯಾರೂ 'ಚಾಲೆಂಜ್' ಕೊಟ್ಟುಕೊಳ್ಳುತ್ತಿಲ್ಲ, ಸಂಗೀತದ ವಿಡಿಯೊಗಳಿಲ್ಲ, ಯಾಕೋ ಬೇರೆ ಎಲ್ಲಾ ಬಗೆಯ ಸಂವೇದನೆಗಳು ಜಡವಾಗಿ, ನಮ್ಮವರ-ಸುತ್ತ ಮುತ್ತಲಿರುವವರ ಜೀವ ಮಿಡಿಯುವ ಸದ್ದು ಮಾತ್ರ ಕೇಳುತ್ತಿರಲಿ ಎಂದೆನಿಸುತ್ತದೆ.

ದಸ್ಸ ಚಕ್ಕ ಕೇಳ್ರಪ್ಪ ಕಥೆಯ — ಪೆದ್ದಗುಂಡ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



'ರಾಜಕುಮಾರಿಯನ್ನು ನಗಿಸಿದರೆ ಅವಳನ್ನೇ ಮದುವೆ ಮಾಡಿಕೊಡುತ್ತಾರಂತೆ. ನಿನಗೆ ಅದಂತೂ ಆಗಲ್ಲ, ಕೆಲಸವನ್ನಾದರೂ ಮಾಡು' ಎಂದು ಪೆದ್ದ ಗುಂಡನ ಅಜ್ಜಿ, ಆತನನ್ನು ಗೌಡರ ಮನೆ ಕೆಲಸಕ್ಕೆ ಅಟ್ಟಿದಳು



ಗೌಡರ ಮನೆಯ ಕೆಲಸಕ್ಕೆ ಹೋದ ಪೆದ್ದ ಗುಂಡ, ಕೆಲಸ ಮಾಡಿ ಬರುವಾಗ ಕೊಟ್ಟ ಕೂಲಿ ದುಡ್ಡನ್ನು ತೂರಾಡುತ್ತಾ ಬಂದ. ನೋಟುಗಳು ಗಾಳಿಯಲ್ಲಿ ಹಾರಿಹೋಗಿದ್ದರಿಂದ ಅಳುತ್ತಾ ಖಾಲಿ ಕೈಲಿ ಮನೆಗೆ ಬಂದ



'ಕೂಲಿ ಕೊಟ್ಟಾಗ ಕಿಸೆಯಲ್ಲಿ ಇಟ್ಟುಕೊಂಡು ಬರಬೇಕು' ಎಂಬ ಅಜ್ಜಿಯ ಮಾತು ನೆನಪಿಟ್ಟ ಗುಂಡ, ಮಾರನೇ ದಿನ ಗೌಡರ ಮನೆಯಲ್ಲಿ ಬೆಣ್ಣೆ ಕೊಟ್ಟಾಗ ಕಿಸೆಯಲ್ಲಿ ಇಟ್ಟ. ಮನೆಗೆ ಬರುವ ವೇಳೆಗೆ ಕರಗಿಹೋಯಿತು

'ಇಂತಹ ಕೂಲಿಯನ್ನು ಪಾತ್ರೆಯಲ್ಲಿ ನೀರು ಹಾಕಿ, ಅದರಲ್ಲಿಟ್ಟು ತರಬೇಕು' ಎಂಬ ಮಾತಿಗೆ ಓಗೊಟ್ಟ ಗುಂಡ, ಗೌಡರು ಕುರಿಮರಿ ಕೊಟ್ಟಾಗ ಪಾತ್ರೆಯಲ್ಲಿ ನೀರು ಹಾಕಿ ತಂದ. ಅದು ಚೆಂಗನೆ ನೆಗೆದು ಓಡಿಹೋಯಿತು



'ಇಂಥವನ್ನು ಹಗ್ಗ ಕಟ್ಟಿ ಎಳೆದು ತರಬೇಕು' ಎಂದು ಬುದ್ಧಿವಾದ ಕೇಳಿದ ಗುಂಡ, ಗೌಡರು ಹಿಟ್ಟಿನ ಚೀಲ ಕೊಟ್ಟಾಗ ಅದಕ್ಕೆ ಹಗ್ಗ ಕಟ್ಟಿ ದರದರ ಎಳೆದುಕೊಂಡು ಬಂದ. ಹಿಟ್ಟು ರಸ್ತೆಯಲ್ಲೇ ಚೆಲ್ಲಿ ಹೋಯಿತು



'ಇಂಥದನ್ನೆಲ್ಲ ಹೊತ್ತು ತರಬೇಕಪ್ಪ' ಎಂಬ ಅಜ್ಜಿ ಮಾತು ನೆನಪಿಟ್ಟಿದ್ದ ಗುಂಡ, ಮಾರನೇ ದಿನ ಕತ್ತೆ ಸಿಕ್ಕಾಗ ಹೊತ್ತು ತಂದ. ಅದನ್ನು ನೋಡಿದ ರಾಜಕುಮಾರಿ ನಕ್ಕುಬಿಟ್ಟಳು. ಅವಳನ್ನು ಮದುವೆಯಾದ ಗುಂಡ ರಾಜನಾದ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಪದ–ಬದಲಾಟ

ಇಲ್ಲಿರುವ ಪದಗಳ ಅಕ್ಷರಗಳನ್ನೇ ಬಳಸಿಕೊಂಡು ಅಷ್ಟೇ ಅಕ್ಷರದ ಇನ್ನೊಂದು ಪದ ರಚಿಸಿ

1.	ಮ	ಗ	ನ	ಹಾ	ರ	=
2.	ಇ	ಡಿ	ಗ	ವ	ನ	=
3.	ಟ	ಪಾ	ಲು	ಪ	ಡಿ	=
4.	ಆ	ತ	ನ	ಗು	ಡಿ	=

ಶಬ್ದಗಳಲ್ಲಿ ಸರಸ...

ಇಲ್ಲಿ ಕೊಟ್ಟಿರುವ ಶಬ್ದಗಳನ್ನು ಆರಂಭದಿಂದ ಎರಡೆರಡು ಅಕ್ಷರ ಸೇರಿಸಿ ಓದಿದರೂ ಎಲ್ಲವೂ ಅರ್ಥಬದ್ಧ ಪದಗಳೇ!

ರಾ ಜಾ ಜಿ ನ ಗ ರ

ದೂ ರ ವಿ ಮಾ ನ ರ ದ್ದು

ಗಣಿತದಲ್ಲಿ ಗರ್ದಿ ಗಮ್ಮತ್ತು

ಸರಸಾಟ

2	1	3
5	4	-

ಇಲ್ಲಿ ಆರು ಚೌಕಗಳಿವೆ. ಅದರಲ್ಲಿ ಐದು ಅಂಕಿ ಇರುವ ಬಿಲ್ಲೆಗಳನ್ನು ಇಡಲಾಗಿದೆ (ರಟ್ಟಿನ ತುಂಡು). ನೀವು ಈಗ ಖಾಲಿ ಇದ್ದ ಮನೆಗೆ ತುಂಡುಗಳನ್ನು ಸರಿಸುತ್ತಾ, **1-2-3-4-5** ಹೀಗೆ ಕ್ರಮವಾಗಿ ತುಂಡುಗಳನ್ನು ಸರಿಹೊಂದಿಸಬೇಕು. **13** ಬಾರಿ ಚಲನೆಯಲ್ಲಿ ಹೊಂದಿಸಿದರೆ ಇನ್ನೂ ಚೆನ್ನ. ಪ್ರಯತ್ನಿಸಿ.

ನೀನೇ ಗುಣಿಸಿ ಮಜಾ ನೋಡು

8745231
X 96

ಸ್ವಾರಸ್ಯ: ಗುಣ್ಯ ಗುಣಕದಲ್ಲಿ ಒಂದರಿಂದ ಒಂಬತ್ತು ಅಂಕಿಗಳು ಒಮ್ಮೆ ಮಾತ್ರ ಬಂದಿದ್ದು ಮರಳಿ ಗುಣಲಬ್ಧದಲ್ಲೂ ಅವೇ ಅಂಕಿಗಳು ಮತ್ತೆ ಬಂದಿರುವುದು.

ಟ್ವೆಂಟಿ – 20 ಮ್ಯಾಚ್

ಇಲ್ಲಿರುವ ರೋಮನ್ ಸಂಖ್ಯೆಗಳಿಗೂ ಇಂಗ್ಲಿಷ್ ಸಂಖ್ಯೆಗಳಿಗೂ ಹೊಂದಿಸಿ

1	XXV	A	200
2	DCCC	B	50
3	CDL	C	25
4	CCCL	D	350
5	XLV	E	800
6	XVII	F	3000
7	L	G	150
8	XIX	H	1500
9	CD	I	80
10	CC	J	60
11	DC	K	9
12	XI	L	600
13	XL	M	40
14	IX	N	400
15	MMM	O	19
16	MD	P	17
17	LX	Q	45
18	CL	R	450
19	LXXX	S	900
20	CM	T	11

ನೆನಪಿಗಾಗಿ ಕೊಂಚತಂತ್ರ

ಇಲ್ಲಿ ಕೊಟ್ಟಿರುವ ಸಂಕ್ಷಿಪ್ತಾಕ್ಷರಗಳಿಂದ ಸಾಮಾನ್ಯ ಜ್ಞಾನದ ಕೆಲವು ಅಂಶಗಳನ್ನು ಸುಲಭವಾಗಿ ನೆನಪಿಡಬಹುದು.

- ***MG*** = ಮೈತ್ರೇಯಿ, ಗಾರ್ಗಿ (ಪ್ರಾಚೀನ ಕಾಲದ ಇಬ್ಬರು ಮಹಿಳಾ ವಿದ್ವಾಂಸರು)
- ***KT*** = ಕಾರಿಯಪ್ಪ, ತಿಮ್ಮಯ್ಯ (ಕರ್ನಾಟಕ ಮೂಲದ ಇಬ್ಬರು ಸೇನಾ ದಂಡ ನಾಯಕರು)
- ***BA*** = ಭೀಮಪ್ಪಯ್ಯ, ಅಬ್ಬಲಬ್ಬೆ(ಪಂಪನ ತಂದೆ ತಾಯಿಯ ಹೆಸರು)

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಖ ಡಿ ಡ ಡಿ ಡ

ಗು ಚ ಡ ಚ ಭ

◯	ಂ	◯	ಬೂಟಾಟಿಕೆ
◯	ಂ	◯	ತೀಕ್ಷ್ಣವಾದ
◯	ಂ	◯	ಹಟಮಾರಿ ಹೆಣ್ಣು
◯	ಂ	◯	ಮಾಂಸ
◯	ಂ	◯	ಒಂದು ಕ್ರುದ್ಧ ದೇವತೆ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ
1–ಕುಂಕಿ 2–ಕಂಕಿ 3–ಕುಂಚ 4–ಕುಂಡ 5–ಕುಂದ

ಶಬ್ದಗಳಲ್ಲಿ ಸರಸ: 1–ಸೊಸೆ 2–ಸೇಸೆ 3–ಸಸಿ 4–ಸೀಸೆ 5–ಸೋಸು 6–ಸಂಸ 7–ಸೂಸು 8–ಸೀಸ

ಟ್ವೆಂಟಿ– 20 ಮ್ಯಾಚ್: 1-S, 2-Q, 3-I, 4-P, 5-J, 6-H, 7-G, 8-E, 9-M, 10-N, 11-R, 12-T, 13-O, 14-B, 15-L, 16-C, 17-K, 18-D, 19-F, 20-A

ಪದಬದಲಾಟ: 1–ವಿಮಾನಚಾಲಕ 2–ಮಂತ್ರಿಯಗಾತ್ರ 3–ಮಾವಿನಮರ

ಮಜ ಮಜ ಮಜಕೂರದ ಮೇ 30ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಪವನ್ ಭಂಡಾರೆ, ಹುಬ್ಬಳ್ಳಿ

ಪ್ರತೀಕ್ಷಾ ಬಿ., ಹಡಗಲಿ (ವಿಜಯನಗರ)

ವಿಶ್ರುತ ಆರ್., ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಅಮೆರಿಕದ ಸ್ಲಾನೆ ಸ್ಟೀಫನ್ಸ್‌ಗೆ ಗೆಲುವು; ಎಲಿನಾಗೆ ಆಘಾತ

ಪ್ರೀಕ್ವಾರ್ಟರ್‌ಗೆ ನಡಾಲ್, ನೊವಾಕ್

ನೊವಾಕ್ ಜೊಕೊವಿಚ್ ಸಂಭ್ರಮ –ರಾಯಿಟರ್ಸ್ ಚಿತ್ರ

ಅಮೆರಿಕದ ಸ್ಲಾನೆ ಸ್ಟೀಫನ್ಸ್ ಅವರ ಆಟದ ಭಂಗಿ –ಎಎಫ್‌ಪಿ ಚಿತ್ರ

ಪ್ಯಾರಿಸ್ (ರಾಯಿಟರ್ಸ್/ಎಪಿ): ಪಂದ್ಯದುದ್ದಕ್ಕೂ ಆಧಿಪತ್ಯ ಸ್ಥಾಪಿಸಿದ ವಿಶ್ವದ ಒಂದನೇ ಕ್ರಮಾಂಕದ ಆಟಗಾರ ನೊವಾಕ್ ಜೊಕೊವಿಚ್ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಶನಿವಾರ ನಡೆದ ಹಣಾಹಣಿಯಲ್ಲಿ ಅವರು ಲಿಥುವೇನಿಯಾದ ರಿಕಾರ್ಡಸ್ ಬೆರಂಕಿಸ್ ಎದುರು 6-1 6-4 6-1ರಲ್ಲಿ ಗೆದ್ದರು.

ಹಾಲಿ ಚಾಂಪಿಯನ್ ಸ್ಪೇನ್‌ನ ರಫೆಲ್ ನಡಾಲ್ ಕೂಡ 16ರ ಘಟ್ಟ ಪ್ರವೇಶಿಸಿದರು. ಬ್ರಿಟನ್‌ನ ಕ್ಯಾಮರಾನ್ ನೋರಿ ವಿರುದ್ಧ 6–3, 6–3, 6–3ರಲ್ಲಿ ಅವರು ಜಯ ಗಳಿಸಿದರು.

34 ವರ್ಷದ ಜೊಕೊವಿಚ್ ಈ ಹಿಂದೆ ಮೂರು ಬಾರಿ ಬೆರಂಕಿಸ್ ವಿರುದ್ಧ ಆಡಿದ್ದರು. ಮೂರರಲ್ಲೂ ಜಯ ಸಾಧಿಸಿದ್ದರು. ಫಿಲಿಪ್ ಚಾಟ್ರಿಯರ್ ಕೋರ್ಟ್‌ನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಆರು ಬಾರಿ ಎದುರಾಳಿಯ ಸರ್ವ್ ಮುರಿದರು. 30 ವಿನ್ನರ್‌ಗಳನ್ನೂ ಸಿಡಿಸಿದರು.

ಮಹಿಳಾ ವಿಭಾಗದ ಮೂರನೇ ಸುತ್ತಿನ ಪಂದ್ಯದಲ್ಲಿ ಜೆಕ್ ಗಣರಾಜ್ಯದ ಕರೋಲಿನಾ ಮುಚೋವ ವಿರುದ್ಧ ಅಮೆರಿಕದ ಸ್ಲಾನೆ ಸ್ಟೀಫನ್ಸ್ 6-3, 7-5ರಲ್ಲಿ ಜಯ ಗಳಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಈ ಹಿಂದೆ ಮೂರನೇ ಸ್ಥಾನಕ್ಕೇರಿದ್ದ ಸ್ಟೀಫನ್ಸ್ ಈಗ 59ನೇ ಸ್ಥಾನದಲ್ಲಿದ್ದಾರೆ.

ಸ್ವಿಟೋಲಿನಾಗೆ ಆಘಾತ: ಐದನೇ ಶ್ರೇಯಾಂಕಿತೆ ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೆಸಿಕೋವಾ ಎದುರು ಸೋತು ಹೊರಬಿದ್ದರು. 6-3, 6-2ರಲ್ಲಿ ಗೆಲುವು ಸಾಧಿಸಿದ ಕ್ರೆಸಿಕೋವ ಸತತ ಎರಡನೇ ವರ್ಷ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅವರು ವಿಶ್ವ ರ‍್ಯಾಂಕಿಂಗ್‌ನ 33ನೇ ಸ್ಥಾನದಲ್ಲಿದ್ದಾರೆ. ಎರಡೂ ಸೆಟ್‌ಗಳಲ್ಲಿ ತಲಾ ಮೂರು ಬಾರಿ ಎದುರಾಳಿಯ ಸರ್ವ ಮುರಿದ ಅವರು 38 ವಿನ್ನರ್‌ಗಳೊಂದಿಗೆ ಮಿಂಚಿದರು.

ಹಿಂದೆ ಸರಿದ ವಾವ್ರಿಂಕಾ: ಮೂರು ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳ ಒಡೆಯ ಸ್ವಾನ್ ವಾವ್ರಿಂಕಾ ಟೂರ್ನಿಯಿಂದ ಹಿಂದೆ ಸರಿದಿರುವುದಾಗಿ ಆಯೋಜಕರು ತಿಳಿಸಿದ್ದಾರೆ. ವಿಂಬಲ್ಡನ್ ಟೂರ್ನಿಯಲ್ಲಿ ಪಾದದಲ್ಲಿ ನೋವು ಕಾಣಿಸಿಕೊಂಡು ಅವರು ಹಿಂದೆ ಸರಿದಿದ್ದರು.

ಯುವ ಆಟಗಾರ ಇಟಲಿಯ ಲಾರೆನ್ಸೊ ಮೂಸೆಟಿ 3-6, 6-4, 6-3, 3-6, 6-3ರಲ್ಲಿ ಮಾರ್ಕೊ ಸೆಚಿನಾಟೊ ವಿರುದ್ಧ ಜಯ ಗಳಿಸಿ ಅಂತಿಮ 16ರ ಸುತ್ತು ಪ್ರವೇಶಿಸಿದರು. ಈ ಮೂಲಕ ಫ್ರೆಂಚ್ ಓಪನ್ ಟೂರ್ನಿಗೆ ಪದಾರ್ಪಣೆ ಮಾಡಿದ ವರ್ಷ ಪ್ರೀಕ್ವಾರ್ಟರ್ ಫೈನಲ್ ಪ್ರವೇಶಿಸಿದ ಆರನೇ ಆಟಗಾರ ಎನಿಸಿಕೊಂಡರು.

ಇತರ ಪಂದ್ಯಗಳ ಫಲಿತಾಂಶಗಳು

ಪುರುಷರ ವಿಭಾಗ: ಇಟಲಿಯ ಜನಿಕ್ ಸಿನ್ನರ್‌ಗೆ ಸ್ವಿಟ್ಜರ್ಲೆಂಡ್‌ನ ಮಿಕಾಯಲ್ ಯಮೆರ್ ವಿರುದ್ಧ 6-1, 7-5, 6-3ರಲ್ಲಿ ಗೆಲುವು. ಅರ್ಜೆಂಟೀನಾದ ಡೀಗೊ ಸ್ವಾರ್ಟ್ಸ್‌ಮನ್‌ಗೆ ಜರ್ಮನಿಯ ಫಿಲಿಪ್ ಕೊಲ್‌ಸ್ಕ್ರೈಬರ್ ವಿರುದ್ಧ 6-4, 6-2, 6-1ರಲ್ಲಿ, ಜರ್ಮನಿಯ ಜಾನ್ ಲೆನಾರ್ಡ್‌ಗೆ ಸ್ಪೇನ್‌ನ ಕಾರ್ಲೋಸ್ ಅಲ್ಕರಸ್ ವಿರುದ್ಧ 6-4, 7-6 (7/3), 6-2ರಲ್ಲಿ ಜಯ. **ಮಹಿಳೆಯರ ವಿಭಾಗ:** ಅಮೆರಿಕದ ಸೋಫಿಯಾ ಕೆನಿನ್‌ಗೆ ತಮ್ಮದೇ ದೇಶದ ಜೆಸಿಕಾ ಪೆಗುಲಾ ಎದುರು 4-6, 6-1, 6-4ರಲ್ಲಿ ಜಯ; ಉಕ್ರೇನ್‌ನ ಮಾರ್ಟ ಕೊಸ್ಯುಕ್‌ಗೆ ರಷ್ಯಾದ ವರ್ವರಾ ಗ್ರಂಚೇಗಾ ವಿರುದ್ಧ 6-1, 6-2ರಲ್ಲಿ ಜಯ; ಅಮೆರಿಕದ ಕೊಕೊ ಗಫ್‌ಗೆ ಜೆನಿಫರ್ ಬ್ರಾಡಿ ವಿರುದ್ಧ 6–1 (ನಿವೃತ್ತಿ)ರಲ್ಲಿ ಜಯ; ಪೋಲೆಂಡ್‌ನ ಇಗಾ ಸ್ವಾಟೆಕ್‌ಗೆ ಎಸ್ಟೋನಿಯಾದ ಅನೆಟ್ ಕೊಂತಾವೇಟ್ ವಿರುದ್ಧ 7–6 (7/4), 6–0ಯಿಂದ ಗೆಲುವು.

ಪ್ಯಾರಿಸ್: ಬಂಧಿತ ಆಟಗಾರ್ತಿ ಬಿಡುಗಡೆ

ಪ್ಯಾರಿಸ್ (ಎಪಿ) : ಕಳೆದ ವರ್ಷದ ಫ್ರೆಂಚ್ ಓಪನ್ ಟೂರ್ನಿಯ ವೇಳೆ ಮ್ಯಾಚ್ ಫಿಕ್ಸಿಂಗ್ ನಡೆಸಿದ ಸಂಶಯದ ಮೇಲೆ ಬಂಧಿತರಾಗಿದ್ದ ರಷ್ಯಾದ ಟೆನಿಸ್ ಆಟಗಾರ್ತಿ ಯಾನಾ ಸಿಜಿಕೊವಾ ಅವರನ್ನು ಬಿಡುಗಡೆ ಮಾಡಲಾಗಿದೆ.

ಈ ಬಾರಿ ಫ್ರೆಂಚ್ ಓಪನ್ ಟೂರ್ನಿಯ ಡಬಲ್ಸ್‌ನಲ್ಲಿ ಭಾಗವಹಿಸಿದ್ದ ಅವರನ್ನು ಗುರುವಾರ ಪ್ಯಾರಿಸ್‌ನಲ್ಲಿ ಬಂಧಿಸಲಾಗಿತ್ತು. ಅವರನ್ನು ತನಿ ಖೆಗೆ ಒಳಪಡಿಸಲಾಗಿದೆ. ಆದರೆ, ಅಧಿಕೃತವಾಗಿ ದೋಷಾರೋಪ ಮಾಡಿಲ್ಲ. ತನಿಖೆ ಮುಂದುವರಿಯಲಿದೆ ಎಂದು ಪ್ರಾಸಿಕ್ಯೂಟರ್ ಕಚೇರಿ ಮಾಹಿತಿ ನೀಡಿದೆ.

‘ಫಿಕ್ಸಿಂಗ್ ಆರೋಪಗಳನ್ನು ಯಾನಾ ಸಿಜಿಕೊವಾ ನಿರಾಕರಿಸಿದ್ದಾರೆ’ ಎಂದು ಅವರ ವಕೀಲ ಫ್ರೆಡೆರಿಕ್ ಬೆಲೊ ಹೇಳಿದ್ದಾರೆ. ಮಾನಹಾನಿಯಾಗಿದೆ ಎಂದು ದೂರು ದಾಖಲಿಸಲು ಆಟಗಾರ್ತಿ ಬಯಸಿದ್ದಾರೆ ಎಂದು ಅವರು ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

‘2020ರ ಸೆಪ್ಟೆಂಬರ್‌ನಲ್ಲಿ ನಡೆದ ಫ್ರೆಂಚ್ ಓಪನ್ ಟೂರ್ನಿಯ ವೇಳೆ ಯಾನಾ ಅವರು ಆಮಿಷ ಒಡ್ಡುವುದು ಸೇರಿದಂತೆ ಸಂಘಟಿತ ಕೃತ್ಯಗಳಲ್ಲಿ ಭಾಗಿಯಾಗಿರುವ ಸಾಧ್ಯತೆಯಿದೆ’ ಎಂದು ಹೇಳಲಾಗಿದೆ.

ಮ್ಯಾಚ್ ಫಿಕ್ಸಿಂಗ್ ಮತ್ತು ಬೆಟ್ಟಿಂಗ್ ತನಿಖೆಯಲ್ಲಿ ಪರಿಣತಿ ಪಡೆದಿರುವ ಫ್ರೆಂಚ್ ಪೊಲೀಸ್ ಘಟಕ ಕಳೆದ ವರ್ಷ ಅಕ್ಟೋಬರ್‌ನಲ್ಲಿ ಅವರ ವಿರುದ್ಧ ತನಿಖೆಯ ಪ್ರಕ್ರಿಯೆ ಆರಂಭಿಸಿತ್ತು.

ಈ ಪ್ರಕ್ರಿಯೆ ಮುಂದುವರಿದಿರುವ ಕಾರಣ ಈ ಬಗ್ಗೆ ಇನ್ನಷ್ಟು ಮಾಹಿತಿ ನೀಡಲು ಆಗದು ಎಂದು ಫ್ರೆಂಚ್ ಟೆನಿಸ್ ಫೆಡರೇಷನ್ ಶುಕ್ರವಾರ ತಿಳಿಸಿದೆ.

ಸುದ್ದಿ 2 ನಿಮಿಷ

ಮಿಲ್ಖಾ ಸಿಂಗ್ ಆರೋಗ್ಯ ಸುಧಾರಣೆ

ಚಂಡೀಗಡ (ಪಿಟಿಐ): ಕೊರೊನಾ ಸೋಂಕಿಗೆ ಚಿಕಿತ್ಸೆ ಪಡೆಯುತ್ತಿರುವ ದಿಗ್ಗಜ ಅಥ್ಲೀಟ್ ಮಿಲ್ಖಾ ಸಿಂಗ್ ಆರೋಗ್ಯದಲ್ಲಿ ಸುಧಾರಣೆ ಕಂಡುಬಂದಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. 91 ವರ್ಷದ ಮಿಲ್ಖಾ ಸಿಂಗ್ ಇಲ್ಲಿಯ ಪಿಜಿಐಎಂಇಆರ್‌ನಲ್ಲಿ (ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆ, ಸ್ನಾತಕೋತ್ತರ ಸಂಸ್ಥೆ) ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ನಿನ್ನೆ ಇದ್ದ ಸ್ಥಿತಿಗಿಂತ ಮಿಲ್ಖಾಸಿಂಗ್ ಆರೋಗ್ಯದಲ್ಲಿ ಇಂದು ಸುಧಾರಣೆ ಕಂಡುಬಂದಿದೆ ಎಂದು ಪಿಜಿಐಎಂಇಆರ್ ಆಸ್ಪತ್ರೆಯ ವಕ್ತಾರ ಪ್ರೊ. ಅಶೋಕ ಕುಮಾರ್ ತಿಳಿಸಿದ್ದಾರೆ.

ವದಂತಿಗಳನ್ನು ನಂಬಬೇಡಿ: ಮಿಲ್ಖಾ ಸಿಂಗ್ ಕುಟುಂಬದವರೂ ಅವರ ಆರೋಗ್ಯದ ಕುರಿತು ವಕ್ತಾರರ ಹೇಳಿಕೆ ಬಿಡುಗಡೆ ಮಾಡಿದ್ದು, ‘ದಿಗ್ಗಜ ಅಥ್ಲೀಟ್ ಆರೋಗ್ಯ ಸ್ಥಿರವಾಗಿದೆ. ಅವರು ಸುಧಾರಿಸಿಕೊಳ್ಳುತ್ತಿದ್ದಾರೆ. ಅವರ ಕುರಿತು ಹರಿದಾಡುತ್ತಿರುವ ಸುಳ್ಳುಸುದ್ದಿಗಳಿಗೆ ಕಿವಿಗೊಡಬೇಡಿ‘ ಎಂದಿದ್ದಾರೆ. ಶನಿವಾರ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳುಸುದ್ದಿಗಳು ಪ್ರಕಟವಾಗಿದ್ದರ ಕುರಿತು ಅವರು ಈ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಕೂಡ ವದಂತಿಗಳನ್ನು ಅಲ್ಲಗಳೆದಿದ್ದಾರೆ.

‘ಭಾರತದ ಹೆಮ್ಮೆಯ ಅಥ್ಲೀಟ್ ಮಿಲ್ಖಾ ಸಿಂಗ್ ಕುರಿತು ಯಾರೂ ಸುಳ್ಳು ಸುದ್ದಿಗಳನ್ನು ಹಬ್ಬಿಸಬೇಡಿ. ಅವರ ಆರೋಗ್ಯ ಸ್ಥಿರವಾಗಿದೆ. ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸೋಣ‘ ಎಂದು ರಿಜಿಜು ಟ್ವೀಟ್ ಮಾಡಿದ್ದಾರೆ.

ಮಿಲ್ಖಾ ಅವರ ಪತ್ನಿ ನಿರ್ಮಲ್ ಕೌರ್ ಕೂಡ ಕೋವಿಡ್‌ನಿಂದ ಬಳಲುತ್ತಿದ್ದು ಅವರು ಖಾಸಗಿ ಆಸ್ಪತ್ರೆಯಲ್ಲಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅಥ್ಲೆಟಿಕ್ಸ್: ಆಯ್ಕೆ ಟ್ರಯಲ್ಸ್ ಇಲ್ಲ

ಬೆಂಗಳೂರು: ಕೋವಿಡ್ ಭೀತಿಯ ಹಿನ್ನೆಲೆಯಲ್ಲಿ ಈ ಬಾರಿಯ ರಾಷ್ಟ್ರೀಯ ಸೀನಿಯರ್ ಚಾಂಪಿಯನ್‌ಷಿಪ್‌ಗೆ ಆಯ್ಕೆ ಟ್ರಯಲ್ಸ್ ನಡೆಸುವುದಿಲ್ಲ. ಕಳೆದ ಎರಡು ವರ್ಷಗಳ ಸಾಮರ್ಥ್ಯ ಆಧರಿಸಿ ಆಯ್ಕೆ ಮಾಡಲಾಗುತ್ತದೆ ಎಂದು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ತಿಳಿಸಿದೆ.

ಎಲ್ಲ ಜಿಲ್ಲಾ ಸಂಸ್ಥೆಗಳು, ಕ್ಲಬ್‌ಗಳು ಹಾಗೂ ಘಟಕಗಳು ತಮ್ಮ ಅಥ್ಲೀಟ್‌ಗಳ ಪಟ್ಟಿಯನ್ನು (ದಾಖಲೆಗಳೊಂದಿಗೆ) ಇದೇ 10ರೊಳಗೆ ರಾಜ್ಯ ಅಥ್ಲೆಟಿಕ್ಸ್ ಸಂಸ್ಥೆಗೆ (ಕೆಎಎ) ಇ-ಮೇಲ್ karathletic@gmail.com ಮೂಲಕ ಕಳುಹಿಸಬೇಕು. ಭಾರತ ಅಥ್ಲೆಟಿಕ್ಸ್ ಫೆಡರೇಷನ್‌ನ (ಎಎಫ್‌ಐ) ಪ್ರವೇಶ ಮಾನದಂಡಗಳ ಅನ್ವಯ ರಾಜ್ಯದ ಅಥ್ಲೀಟ್‌ಗಳ ಪಟ್ಟಿಯನ್ನು ಕೆಎಎ ಸಮಿತಿಯು 11ರಂದು ಅಂತಿಮಗೊಳಿಸಲಿದೆ.

ಮಾಹಿತಿಗೆ ಕೆಎಎ ಕಾರ್ಯದರ್ಶಿ ಎ.ರಾಜವೇಲು (9448438276) ಅವರನ್ನು ಸಂಪರ್ಕಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

25ರಿಂದ ಚಾಂಪಿಯನ್‌ಷಿಪ್: ರಾಷ್ಟ್ರೀಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಜೂನ್ 25ರಿಂದ 29ರವರೆಗೆ ಪಟಿಯಾಲದ ಎರಡು ತಾಣಗಳಲ್ಲಿ ನಡೆಯಲಿದೆ ಎಂದು ಎಎಫ್‌ಐ ತಿಳಿಸಿದೆ. ಟೋಕಿಯೊ ಒಲಿಂಪಿಕ್ಸ್ ಅರ್ಹತೆ ಗಳಿಸಲು ಇದು ಕೊನೆಯ ಅವಕಾಶವಾಗಿದೆ.

ಚಾಲನೆ ನೀಡಿದ ವಿಜಯಲಕ್ಷ್ಮಿ

ಚೆಸ್ ಪಂದ್ಯಗಳಿಗೆ ಚಾಲನೆ

ಬೆಂಗಳೂರು: ಯುನೈಟೆಡ್ ಕರ್ನಾಟಕ ಸಂಸ್ಥೆಯು ಆಯೋಜಿಸಿರುವ ರಾಜ್ಯ ಮಟ್ಟದ ಚೆಸ್ ಟೂರ್ನಿಯ 16 ವರ್ಷದೊಳಗಿನವರ ವಿಭಾಗದ ಪಂದ್ಯಗಳಿಗೆ ದೇಶದ ಮೊದಲ ಮಹಿಳಾ ಗ್ರ್ಯಾಂಡ್ ಮಾಸ್ಟರ್ ವಿಜಯಲಕ್ಷ್ಮಿ ಶನಿವಾರ ಚಾಲನೆ ನೀಡಿದರು.

ಬಾಲಕರ ವಿಭಾಗದಲ್ಲಿ 135ಕ್ಕೂ ಹೆಚ್ಚು ಸ್ಪರ್ಧಿಗಳು ಹಾಗೂ ಬಾಲಕಿಯರ ವಿಭಾಗದಲ್ಲಿ 70 ಸ್ಪರ್ಧಿಗಳು ಇದ್ದಾರೆ. ಜೂನ್ 3ರಿಂದ ಈ ಟೂರ್ನಿ ನಡೆಯುತ್ತಿದ್ದು, ಪ್ರತಿ ವಿಭಾಗದಲ್ಲಿ ಮೊದಲ ಎರಡು ಸ್ಥಾನ ಗಳಿಸುವ ಇಬ್ಬರನ್ನು ರಾಷ್ಟ್ರೀಯ ಯುವ ಚೆಸ್ ಟೂರ್ನಿಗೆ ರಾಜ್ಯದಿಂದ ಕಳುಹಿಸಲಾಗುತ್ತದೆ.

ಐಸಿಸಿ ನಿರ್ಧಾರ; ಬಿಸಿಸಿಐಗೆ ಆಂತರಿಕ ಮಾಹಿತಿ ರವಾನೆ

ಯುಎಇಯಲ್ಲಿ ಟಿ20 ವಿಶ್ವಕಪ್

ನವದೆಹಲಿ (ಪಿಟಿಐ): ಭಾರತವು ಇದೇ ಅಕ್ಟೋಬರ್–ನವೆಂಬರ್‌ನಲ್ಲಿ ನಡೆಸಲಿರುವ ಟ್ವೆಂಟಿ–20 ವಿಶ್ವಕಪ್ ಟೂರ್ನಿಯನ್ನು ಯುನೈಟೆಡ್ ಅರಬ್ ಎಮಿರೇಟ್ಸ್ ಗೆ ಸ್ಥಳಾಂತರಿಸಲು ಅಂತರ ರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ನಿರ್ಧಾರ ಮಾಡಿದೆ. ಈ ಕುರಿತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೂ (ಬಿಸಿಸಿಐ) ಆಂತರಿಕವಾಗಿ ಮಾಹಿತಿ ನೀಡಿದೆ ಎನ್ನಲಾಗಿದೆ.

ಯುಎಇಯ ಅಬುದಾಭಿ, ದುಬೈ ಮತ್ತು ಶಾರ್ಜಾದಲ್ಲಿ ಪಂದ್ಯ ಗಳು ನಡೆಯಲಿದ್ದು, ಒಮನ್‌ನ ರಾಜಧಾನಿ ಮಸ್ಕತ್ ಕೂಡ ನಾಲ್ಕನೇ ತಾಣವಾಗಲಿದೆ. ಅಕ್ಟೋಬರ್ ಕೊನೆಯ ವಾರದಲ್ಲಿ ಟೂರ್ನಿ ಆರಂಭವಾಗುವುದು.

‘ಈಚೆಗೆ ಐಸಿಸಿಯ ಸಭೆಯಲ್ಲಿ ವಿಶ್ವಕಪ್ ಟೂರ್ನಿಯನ್ನು ಭಾರತದಲ್ಲಿ ನಡೆಸುವ ಕುರಿತು ನಿರ್ಧರಿಸಲು ಬಿಸಿಸಿಐಗೆ ನಾಲ್ಕು ವಾರಗಳ ಸಮಯಾವಕಾಶ ನೀಡಲಾಗಿದೆ. ಆದರೆ ಟೂರ್ನಿಯನ್ನು ತಟಸ್ಥ ತಾಣವಾದ ಯುಎಇಯಲ್ಲಿ ಆಯೋಜಿಸಲು ಸಿದ್ಧರಾಗಿರುವಂತೆ ಬಿಸಿಸಿಐಗೆ ಆಂತರಿಕವಾಗಿ ತಿಳಿಸಲಾಗಿದೆ‘ ಎಂದು ಮಂಡಳಿಯ ಹಿರಿಯ ಪದಾಧಿಕಾರಿಯೊಬ್ಬರು ತಿಳಿಸಿ ದ್ದಾರೆ. 16 ತಂಡಗಳು ಆಡುವ ಟೂರ್ನಿಯ ಪ್ರಥಮ ಹಂತರದಲ್ಲಿ ಮಸ್ಕತ್ ಬಗ್ಗೆ ಪ್ರಸ್ತಾಪವಾಗಿಲ್ಲ. ಸೆಪ್ಟೆಂಬರ್‌ನಲ್ಲಿ ಯುಎಇಯ ಮೂರು ತಾಣಗಳಲ್ಲಿ ಐಪಿಎಲ್‌ನ 31 ಪಂದ್ಯಗಳು ನಡೆ ಯಲಿವೆ. ಅದರ ನಂತರ ವಿಶ್ವಕಪ್ ಟೂರ್ನಿಗೆ ಆ ಮೂರು ತಾಣಗಳನ್ನು ಸಿದ್ಧಪಡಿಸಲಾಗುವುದು.

‘ಐಪಿಎಲ್ ಅಕ್ಟೋಬರ್ 10ರಂದು ಮುಕ್ತಾಯವಾಗುತ್ತದೆ. ಅದಾಗಿ ಮೂರು ವಾರಗಳ ನಂತರ ವಿಶ್ವಕಪ್ ಟೂರ್ನಿ ಆರಂಭವಾಗುತ್ತದೆ. ಈ ಅವಧಿಯಲ್ಲಿ ಪಿಚ್, ಕ್ರೀಡಾಂಗಣ ಸೌಲಭ್ಯಗಳನ್ನು ಸಿದ್ಧಗೊಳಿಸಲು ಐಸಿಸಿ ಯೋಜಿಸಿದೆ‘ ಎಂದು ಹೇಳಿದ್ದಾರೆ.

‘ಭಾರತದಲ್ಲಿ ಸದ್ಯ 1.20 ಲಕ್ಷ ಕೋವಿಡ್ ಸೋಂಕು ಪ್ರಕರಣಗಳು ವರದಿಯಾಗುತ್ತಿವೆ. ಜೂನ್ 28ರಂದು ಬಿಸಿಸಿಐ ತನ್ನ ನಿರ್ಧಾರ ಪ್ರಕಟಿಸುವ ದಿನದಂದು ಎಷ್ಟು ಪ್ರಕರಣಗಳಿರುತ್ತವೆ ಎಂದು ಈಗಲೇ ಹೇಳಲು ಆಗುವುದಿಲ್ಲ. ಅಲ್ಲದೇ ಈ ತಿಂಗಳು ಇದ್ದಂತಹ ಪರಿಸ್ಥಿತಿ ವಿಶ್ವಕಪ್ ಟೂರ್ನಿ ನಡೆಯುವ ಹೊತ್ತಿನಲ್ಲಿಯೂ ಇರುತ್ತದೆಯೆಂದು ಭಾವಿಸಲೂ ಸಾಧ್ಯವಿಲ್ಲ’ ಎಂದು ಅಧಿಕಾರಿಯು ತಿಳಿಸಿದ್ದಾರೆ.

‘ಆಟಗಾರರು, ಸಿಬ್ಬಂದಿ ಮತ್ತಿತರರ ಆರೋಗ್ಯ ಸುರಕ್ಷತೆಯೇ ಪ್ರಮುಖ ಆದ್ಯತೆಯಾಗಿದೆ. ಆದ್ದರಿಂದ ಐಸಿಸಿಯು ಈಗಾಗಲೇ ಟೂರ್ನಿಯನ್ನು ಯುಎಇಯಲ್ಲಿ ನಡೆಸುವ ಕುರಿತು ನಿರ್ಧಾರ ಕೈಗೊಂಡಿರಬಹುದು‘ ಎಂದು ಹೇಳಿದ್ದಾರೆ.

ಟೆಸ್ಟ್: ಸೌಥಿಗೆ 6 ವಿಕೆಟ್

ಟಿಮ್ ಸೌಥಿ –ಎಎಫ್‌ಪಿ ಚಿತ್ರ

ಲಂಡನ್ (ಎಎಫ್‌ಪಿ): ಆರಂಭಿಕ ಬ್ಯಾಟ್ಸ್‌ಮನ್ ರೋರಿ ಬರ್ನ್ಸ್ (132; ಎಸೆತ 297, 16 ಬೌಂಡರಿ, 1 ಸಿಕ್ಸರ್) ಇಂಗ್ಲೆಂಡ್ ತಂಡದ ನೆರವಿಗೆ ನಿಂತರು. ನ್ಯೂಜಿಲೆಂಡ್ ಎದುರಿನ ಮೊದಲ ಟೆಸ್ಟ್ ಪಂದ್ಯದ ನಾಲ್ಕನೇ ದಿನ ಟಿಮ್ ಸೌಥಿ ಅವರ ಅಮೋಘ ದಾಳಿಯಿಂದ ಪತನದತ್ತ ಸಾಗಿದ್ದ ಆತಿಥೇಯ ತಂಡಕ್ಕೆ ಬರ್ನ್ಸ್ ಆಸರೆಯಾದರು.

ನ್ಯೂಜಿಲೆಂಡ್‌ನ ಮೊದಲ ಇನಿಂಗ್ಸ್ ಮೊತ್ತವಾದ 378 ರನ್‌ಗಳಿಗೆ ಉತ್ತರವಾಗಿ ಎರಡನೇ ದಿನ ಇಂಗ್ಲೆಂಡ್ ಎರಡು ವಿಕೆಟ್ ಕಳೆದುಕೊಂಡು 111 ರನ್ ಗಳಿಸಿತ್ತು. ಮೂರನೇ ದಿನವಾದ ಶುಕ್ರವಾರ ಮಳೆ ಅಡ್ಡಿಯಾಗಿತ್ತು.

42 ರನ್ ಗಳಿಸಿದ್ದ ನಾಯಕ ಜೋ ರೂಟ್ ಶನಿವಾರ ಮೊದಲ ಎಸೆತದಲ್ಲೇ ಔಟಾದರು. ನಂತರ ತಂಡ ಕುಸಿತದತ್ತ ಸಾಗಿತು. ಬರ್ನ್ಸ್ ಮತ್ತು ಒಲಿ ರಾಬಿನ್ಸನ್ 63 ರನ್‌ಗಳ ಜೊತೆಯಾಟವಾಡಿದರು. ಕೊನೆಯ ವಿಕೆಟ್‌ಗೆ ಬರ್ನ್ಸ್ ಮತ್ತು ಆ್ಯಂಡರ್ಸನ್ 52 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 378; **ಇಂಗ್ಲೆಂಡ್:** 101.1 ಓವರ್‌ಗಳಲ್ಲಿ 275 (ರೋರಿ ಬರ್ನ್ಸ್ 132, ಜೋ ರೂಟ್ 42, ಒಲಿ ಪೋಪ್ 22, ಒಲಿ ರಾಬಿನ್ಸನ್ 42; ಟಿಮ್ ಸೌಥಿ 43ಕ್ಕೆ6, ಕೈಲ್ ಜೆಮೀಸನ್ 85ಕ್ಕೆ3, ನೀಲ್ ವ್ಯಾಗ್ನರ್ 83ಕ್ಕೆ1); **ಎರಡನೇ ಇನಿಂಗ್ಸ್: ನ್ಯೂಜಿಲೆಂಡ್:** 30 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 62 (ಟಾಮ್ ಲಥಾಮ್ ಬ್ಯಾಟಿಂಗ್ 30, ಕಾನ್ವೆ 23; ಒಲಿ ರಾಬಿನ್ಸನ್ 8ಕ್ಕೆ2).

ಫಿನಾಗೆ ನಾನಾವತಿ ಆಯ್ಕೆ

ನವದೆಹಲಿ (ಪಿಟಿಐ): ಭಾರತದ ವೀರೇಂದ್ರ ನಾನಾವತಿ ಅವರು ಅಂತರರಾಷ್ಟ್ರೀಯ ಈಜು ಫೆಡರೇಷನ್‌ನ (ಫಿನಾ) ಬ್ಯೂರೊ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ದೋಹಾದ ಕತಾರ್‌ನಲ್ಲಿ ನಡೆದ ಫೆಡರೇಷನ್‌ನ ಸಭೆಯಲ್ಲಿ ಈ ಆಯ್ಕೆ ನಡೆಯಿತು.

ವೀರೇಂದ್ರ ಅವರು ಸದ್ಯ ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಉಪಾಧ್ಯಕ್ಷ ಮತ್ತು ಭಾರತ ಈಜು ಫೆಡರೇಷನ್‌ನ (ಎಸ್‌ಎಫ್‌ಐ) ಕಾರ್ಯನಿರ್ವಾಹಕ ನಿರ್ದೇಶಕ ಹುದ್ದೆಯಲ್ಲಿದ್ದಾರೆ. ಫಿನಾ ಬ್ಯೂರೊಗೆ ಆಯ್ಕೆಯಾದ ಭಾರತದ ದೇಶದ ಮೊದಲ ವ್ಯಕ್ತಿ ಅವರು. 2025ರವರೆಗೆ ಅವರ ಅಧಿಕಾರಾವಧಿ ಇದೆ.

ವೀರೇಂದ್ರ ಫಿನಾದ ತಾಂತ್ರಿಕ ಈಜು ಸಮಿತಿಯ ಉಪಾಧ್ಯಕ್ಷರೂ ಆಗಿದ್ದಾರೆ. ಅಲ್ಲದೆ ಏಷ್ಯಾ ಈಜು ಫೆಡರೇಷನ್‌ನ ಹಿರಿಯ ಉಪಾಧ್ಯಕ್ಷರು ಕೂಡ.

ಮೇನಲ್ಲಿ ₹ 1.02 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಮೇ ತಿಂಗಳಿನಲ್ಲಿ ₹ 1.02 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಇದರಿಂದಾಗಿ ಸತತ ಎಂಟನೇ ತಿಂಗಳಿನಲ್ಲಿಯೂ ಜಿಎಸ್‌ಟಿ ವರಮಾನ ಸಂಗ್ರಹವು ₹ 1 ಲಕ್ಷ ಕೋಟಿಯ ಗಡಿ ದಾಟಿದಂತಾಗಿದೆ.

2020ರ ಮೇ ತಿಂಗಳಿಗೆ ಹೋಲಿಸಿದರೆ 2021ರ ಮೇ ತಿಂಗಳಿನಲ್ಲಿ ಶೇ 65ರಷ್ಟು ಹೆಚ್ಚು ತೆರಿಗೆ ಸಂಗ್ರಹ ಆಗಿದೆ. ದೇಶದಾದ್ಯಂತ ಲಾಕ್‌ಡೌನ್ ಜಾರಿಯಲ್ಲಿದ್ದ ಕಾರಣ 2020ರ ಮೇನಲ್ಲಿ ₹ 62,009 ಕೋಟಿಗಳಷ್ಟು ಮಾತ್ರವೇ ತೆರಿಗೆ ಸಂಗ್ರಹ ಆಗಿತ್ತು. ಈ ವರ್ಷದ ಏಪ್ರಿಲ್‌ನಲ್ಲಿ ಸಂಗ್ರಹ ಆಗಿದ್ದ ದಾಖಲೆಯ ₹ 1.41 ಲಕ್ಷ ಕೋಟಿಗೆ ಹೋಲಿಸಿದರೆ ಮೇನಲ್ಲಿ ₹ 38,675 ಕೋಟಿಗಳಷ್ಟು ಕಡಿಮೆ ಸಂಗ್ರಹ ಆಗಿದೆ.

ಜಿಎಸ್‌ಟಿ ಸಂಗ್ರಹದ ವಿವರ (ಕೋಟಿಗಳಲ್ಲಿ)	
ಜನವರಿ	₹1,19,847
ಫೆಬ್ರುವರಿ	₹1,13,143
ಮಾರ್ಚ್	₹1,23,902
ಏಪ್ರಿಲ್	₹1,41,384
ಮೇ	₹1,02,709

ಕೋವಿಡ್‌ನ ಎರಡನೇ ಅಲೆ ನಿಯಂತ್ರಿಸಲು ಬಹುತೇಕ ರಾಜ್ಯಗಳಲ್ಲಿ ಕಠಿಣ ಸ್ವರೂಪದ ಲಾಕ್‌ಡೌನ್ ಜಾರಿಯಲ್ಲಿದೆ. ಹೀಗಿದ್ದರೂ ಜಿಎಸ್‌ಟಿ ಸಂಗ್ರಹವು ₹ 1 ಲಕ್ಷ ಕೋಟಿಯ ಗಡಿಯನ್ನು ದಾಟಿದೆ ಎಂದು ಕೇಂದ್ರ ಸಚಿವಾಲಯ ಹೇಳಿದೆ. ಮೇನಲ್ಲಿ ಆಗಿರುವ ಒಟ್ಟಾರೆ ಮೊತ್ತದಲ್ಲಿ ಸಿಜಿಎಸ್‌ಟಿ ಮೂಲಕ ₹ 17,592 ಕೋಟಿ, ಎಸ್‌ಜಿಎಸ್‌ಟಿ ಮೂಲಕ ₹ 22,653 ಕೋಟಿ, ಐಜಿಎಸ್‌ಟಿ ಮೂಲಕ ₹ 53,199 ಕೋಟಿ ಹಾಗೂ ಸೆಸ್‌ನಿಂದ ₹ 9,265 ಕೋಟಿ ಸಂಗ್ರಹ ಆಗಿದೆ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಕೋವಿಡ್ ಸಾಂಕ್ರಾಮಿಕವನ್ನು ಗಮನದಲ್ಲಿ ಇಟ್ಟುಕೊಂಡು, ವಾರ್ಷಿಕ ₹ 5 ಕೋಟಿಗಿಂತ ಹೆಚ್ಚಿನ ವಹಿವಾಟು ನಡೆಸುವವರಿಗೆ ರಿಟರ್ನ್ಸ್ ಸಲ್ಲಿಸಲು ಜೂನ್ 4ರವರೆಗೆ ಅವಕಾಶ ನೀಡಲಾಗಿದೆ. ಅದೇ ರೀತಿ ₹ 5 ಕೋಟಿಗಿಂತಲೂ ಕಡಿಮೆ ವಹಿವಾಟು ನಡೆಸುವವರಿಗೆ ಯಾವುದೇ ವಿಳಂಬ ಶುಲ್ಕ ಮತ್ತು ಬಡ್ಡಿ ಇಲ್ಲದೇ ಜುಲೈ ಮೊದಲ ವಾರದವರೆಗೂ ರಿಟರ್ನ್ಸ್ ಸಲ್ಲಿಸಲು ಅವಕಾಶ ನೀಡಲಾಗಿದೆ. ಈ ಎಲ್ಲಾ ವಿಸ್ತರಿತ ದಿನಾಂಕಗಳು ಮುಗಿದ ಬಳಿಕ ಮೇ ತಿಂಗಳ ನಿಜವಾದ ತೆರಿಗೆ ವರಮಾನ ತಿಳಿಯಲಿದ್ದು, ಅದು ಹೆಚ್ಚಿನ ಮಟ್ಟದಲ್ಲಿಯೇ ಇರಲಿದೆ ಎಂದು ಸಚಿವಾಲಯ ತಿಳಿಸಿದೆ.

‘ಆರ್ಥಿಕತೆಯ ಮೇಲೆ ಲಾಕ್‌ಡೌನ್ ಪರಿಣಾಮವು ನಿರೀಕ್ಷೆ ಮಾಡಿದ್ದಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಆಗಿದೆ ಎನ್ನುವುದನ್ನು ಇದು ಸೂಚಿಸುತ್ತಿದೆ’ ಎಂದು ಡೆಲಾಯ್ಟ್ ಇಂಡಿಯಾದ ಹಿರಿಯ ನಿರ್ದೇಶಕ ಎಂ.ಎಸ್. ಮಣಿ ಹೇಳಿದ್ದಾರೆ.

‘ಏಪ್ರಿಲ್‌ನಲ್ಲಿ ಆಗಿದ್ದ ಪೂರೈಕೆಗೆ ಸಂಬಂಧಿಸಿದಂತೆ ಮೇನಲ್ಲಿ ಈ ಪ್ರಮಾಣದ ತೆರಿಗೆ ಸಂಗ್ರಹ ಆಗಿದೆ. ಲಾಕ್‌ಡೌನ್‌ನಿಂದಾಗಿ ಏಪ್ರಿಲ್‌ನಲ್ಲಿ ಬಹತೇಕ ವಾಣಿಜ್ಯ ವಹಿವಾಟುಗಳು ನಡೆದಿಲ್ಲ. ಹೀಗಿರುವಾಗ ಈ ಮೊತ್ತವು ಅಚ್ಚರಿದಾಯಕ ಆಗಿದೆ’ ಎಂದು ಶಾರ್ದೂಲ್ ಅಮರ್‌ಚಂದ್ ಮಂಗಲ್‌ದಾಸ್ ಆ್ಯಂಡ್ ಕಂಪನಿಯ ಪಾಲುದಾರ ರಜತ್ ಬೋಸ್ ಹೇಳಿದ್ದಾರೆ.

ಥಾಪಾಗೆ ಕೋವಿಡ್

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ಮಿಡ್‌ಫೀಲ್ಡರ್ ಅನಿರುದ್ಧ ಥಾಪಾ ಅವರಿಗೆ ಕೋವಿಡ್ ಇರುವುದು ದೃಢಪಟ್ಟಿದೆ. ತಂಡವು ಸದ್ಯ ದೋಹಾದಲ್ಲಿದ್ದು, ಥಾಪಾ ಕ್ವಾರಂಟೈನ್‌ನಲ್ಲಿದ್ದಾರೆ.

ಏಷ್ಯಾಕಪ್ ಜಂಟಿ ಅರ್ಹತಾ ಟೂರ್ನಿಯಲ್ಲಿ ಪಾಲ್ಗೊಂಡಿರುವ ಭಾರತ ತಂಡ ಗುರುವಾರ ಕತಾರ್ ಎದುರು ಸೋತಿತ್ತು.

‘ಥಾಪಾ ಅವರಿಗೆ ಕೋವಿಡ್ ದೃಢಪಟ್ಟಿದೆ. ತಂಡದ ಸದಸ್ಯರಿಂದ ಅವರು ಪ್ರತ್ಯೇಕವಾಗಿದ್ದಾರೆ’ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕುಶಲ್ ದಾಸ್ ತಿಳಿಸಿದ್ದಾರೆ.

ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಚೆನ್ನೈಯಿನ್ ಎಫ್‌ಸಿ ಪರ ಆಡುವ ಥಾಪಾ ಅವರು ಕೆಲವು ದಿನಗಳ ಬಳಿಕ ಇನ್ನೊಮ್ಮೆ ಪರೀಕ್ಷೆಗೆ ಒಳಪಡಲಿದ್ದಾರೆ. ಭಾರತ ತಂಡದ ಪರ ಅವರು 20ಕ್ಕಿಂತ ಹೆಚ್ಚು ಪಂದ್ಯಗಳನ್ನು ಆಡಿದ್ದಾರೆ.

ಫೇಸ್‌ಬುಕ್ ಖಾತೆ ಅಮಾನತು: ‘ಅಪಮಾನ’ ಎಂದ ಟ್ರಂಪ್

ಡೊನಾಲ್ಡ್ ಟ್ರಂಪ್

ಸ್ಯಾನ್ ಫ್ರಾನ್ಸಿಸ್ಕೊ (ಪಿಟಿಐ): ಜನವರಿ 6ರ ಕ್ಯಾಪಿಟಲ್ ಭವನದ ಮೇಲಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ್ದಕ್ಕಾಗಿ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಖಾತೆಯನ್ನು ಎರಡು ವರ್ಷಗಳ ಕಾಲ ಅಮಾನತಿನಲ್ಲಿಟ್ಟಿರುವುದಾಗಿ ಫೇಸ್‌ಬುಕ್ ತಿಳಿಸಿದೆ.

‘ಈ ಅವಧಿ ಮುಗಿದ ಬಳಿಕ, ಅವರಿಂದ ಸಾರ್ವಜನಿಕ ಸುರಕ್ಷತೆಗೆ ಅಪಾಯವು ಕಡಿಮೆಯಾಗಿದೆಯೇ ಎಂದು ತಜ್ಞರು ಪರಿಶೀಲಿಸುತ್ತಾರೆ. ಹಿಂಸಾಚಾರದ ನಿದರ್ಶನಗಳು, ಶಾಂತಿಯುತ ಸಭೆಗೆ ಅಡ್ಡಿ ಮತ್ತು ನಾಗರಿಕ ಅಶಾಂತಿ ಇನ್ನಿತರ ಬಾಹ್ಯ ಅಂಶಗಳನ್ನು ನಾವು ಮೌಲ್ಯಮಾಪನ ಮಾಡುತ್ತೇವೆ’ ಎಂದು ಫೇಸ್‌ಬುಕ್‌ನ ಜಾಗತಿಕ ವ್ಯವಹಾರಗಳ ಉಪಾಧ್ಯಕ್ಷ ನಿಕ್ ಕ್ಲೆಗ್ ಬ್ಲಾಗ್ ಪೋಸ್ಟ್‌ನಲ್ಲಿ ಬರೆದಿದ್ದಾರೆ. ಟ್ರಂಪ್ ಫೇಸ್‌ಬುಕ್ ಖಾತೆಯ ಎರಡು ವರ್ಷಗಳ ಅಮಾನತು ನಿರ್ಣಯ ಜನವರಿ 7 ರಿಂದ ಜಾರಿಯಾಗಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿರುವ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಫೇಸ್‌ಬುಕ್‌ನ ಈ ನಿರ್ಧಾರ ನನಗೆ ಮಾಡಿದ ‘ಅವಮಾನ’ ಎಂದು ಗುಡುಗಿದ್ದಾರೆ.

ಮುಂಬೈ ಧಾರಣೆ

ಶೇಂಗಾ

5-6-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1470 (1490)
ಒಂದು ವಾರದ ಡೆಲಿವರಿ	1465 (1485)
ಸೋಯಾ ಕಚ್ಚಾ	1385 (1390)
ಪಾಮ್ ವಾರದ ಡೆಲಿವರಿ	1243 (1238)
ಸೂರ್ಯಕಾಂತಿ ಎಣ್ಣೆ ಕಚ್ಚಾ	1480 (1500)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,600 (48,600)
ಬೆಳ್ಳಿ ಕೆ.ಜಿ 71,500 (70,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಿಮೆ ಪರಿಹಾರ ವಿತರಣೆ ತ್ವರಿತಗೊಳಿಸಿ: ನಿರ್ಮಲಾ

ನಿರ್ಮಲಾ ಸೀತಾರಾಮನ್

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ವಿಮೆ ಕಂಪನಿಗಳ ಮುಖ್ಯಸ್ಥರ ಜೊತೆ ಶನಿವಾರ ಸಭೆ ನಡೆಸಿದ್ದು, ವಿಮಾ ಪರಿಹಾರ ಹಣವನ್ನು ಬೇಗನೆ ಇತ್ಯರ್ಥಪಡಿಸುವಂತೆ ಕಂಪನಿಗಳಿಗೆ ತಿಳಿಸಿದ್ದಾರೆ.

ವರ್ಚುವಲ್ ಸಭೆ ನಡೆಸಿದ ಅವರು, ಕೋವಿಡ್–19 ಸಾಂಕ್ರಾಮಿಕದ ವಿರುದ್ಧ ಹೋರಾಡುತ್ತಿರುವ ಆರೋಗ್ಯ ಕಾರ್ಯಕರ್ತರಿಗೆ ಇರುವ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಪ್ಯಾಕೇಜ್ (ಪಿಎಂಜಿಕೆಪಿ) ವಿಮೆ ಯೋಜನೆಯ ಪ್ರಗತಿ ಪರಿಶೀಲನೆ ನಡೆಸಿದರು. ಇದೇ ವೇಳೆ, ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ (ಪಿಎಂಜೆಜೆಬಿವೈ) ಅಡಿ ಬಾಕಿ ಇರುವ ವಿಮೆ ಪರಿಹಾರಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವಂತೆಯೂ ಕಂಪನಿಗಳಿಗೆ ಸೂಚನೆ ನೀಡಿದರು ಎಂದು ಅಧಿಕೃತ ಪ್ರಟಕಣೆ ತಿಳಿಸಿದೆ.

ರೈತರ ನೆರವಿಗೆ ಪನಮಾ ನೇಚರ್ ಫ್ರೆಷ್

ವಿವೇಕ್ ರಾಜ್

ಮಂಗಳೂರು: ಕೋವಿಡ್ ಸಂಕಷ್ಟದಿಂದ ಹಣ್ಣು, ತರಕಾರಿಗಳನ್ನು ಸೂಕ್ತ ಬೆಲೆಗೆ ಖರೀದಿಸುವ ಮೂಲಕ ರೈತರಿಗೆ ನೆರವಾಗಲು ‘ಪನಮಾ ನೇಚರ್ ಫ್ರೆಶ್’ ಸಂಸ್ಥೆ ಅಧ್ಯಕ್ಷ ವಿವೇಕ್ ರಾಜ್ ಮುಂದಾಗಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿದ ಅವರು, ‘ಸಂಸ್ಥೆ ತನ್ನ 13 ಕ್ಲೈಮೇಟ್ ಕಂಟೇನರ್‌ಗಳ ಮೂಲಕ ರೈತರಿಂದ ಹಣ್ಣು, ತರಕಾರಿಗಳನ್ನು ಖರೀದಿಸಲಿದೆ. ಇದಕ್ಕಾಗಿಯೇ ₹75 ಕೋಟಿ ಮೀಸಲಿಡಲಾಗಿದೆ’ ಎಂದರು. ‘ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಕಷ್ಟದಲ್ಲಿರುವ 5 ಸಾವಿರ ಕುಟುಂಬಕ್ಕೆ ಕಿಟ್ ಒದಗಿಸುವ ನಿಟ್ಟಿನಲ್ಲಿ ₹50 ಲಕ್ಷ ಮೀಸಲಿಡಲಾಗಿದೆ. ಕುಟುಂಬಕ್ಕೆ 15 ದಿನ ಉಪ ಯೋಗವಾಗಬಲ್ಲ ಕಿಟ್ ಇದಾಗಿದೆ’ ಎಂದರು.

ಕೆನರಾ ಬ್ಯಾಂಕ್: ಬಡ್ಡಿದರ ಬದಲಿಲ್ಲ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, ನಿಧಿ ಆಧರಿಸಿದ ಸಾಲದ ಬಡ್ಡಿದರಗಳಲ್ಲಿ (ಎಂಸಿಎಲ್‌ಆರ್) ಯಾವುದೇ ಬದಲಾವಣೆ ಮಾಡಿಲ್ಲ.

ತಿಂಗಳಿಗೆ ಶೇ 6.70, ಮೂರು ತಿಂಗಳ ಅವಧಿಗೆ ಶೇ 6.95, ಆರು ತಿಂಗಳಿಗೆ ಶೇ 7.30 ಮತ್ತು ಒಂದು ವರ್ಷದ ಅವಧಿಗೆ ಶೇ 7.35ರಷ್ಟು ಬಡ್ಡಿದರವೇ ಇರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ರೆಪೊ ಆಧರಿಸಿದ ಸಾಲದ ಬಡ್ಡಿದರವು ಶೇ 6.90ರಷ್ಟೇ ಮುಂದುವರಿಯಲಿದೆ ಎಂದೂ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	350-400

ಅಡಿಕೆ, ಬಂಟ್ವಾಳ

ಕೋಕ	10000-22500
ಹೊಸತು	23500-40000

ಪುತ್ತೂರು

ಹೊಸತು	28000-39500

ರಾಮನಗರ ರೇಷ್ಮೆ ಧಾರಣೆ

ಮಿಶ್ರತಳಿ (ಸಿ.ಬಿ)	256-389
ದ್ವಿತಳಿ (ಬಿ.ವಿ)	305-485

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11100	10700	10800	161.65 ಸೆಂಟ್ಸ್
ಎಸಿ	4675	4300	4175	
ಆರ್‌ಪಿ	5250	5250	5225	ಲಂಡನ್
ಆರ್‌ಸಿ	3125	3100	3110	1612 ಡಾಲರ್ಸ್

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹550
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1460 (1480)
ಸೋಯಾ (ರಿಫೈನ್ಡ್)	₹1410 (1405)
ಸೂರ್ಯಕಾಂತಿ(ರಿಫೈನ್ಡ್)	₹1530 (1540)
ಪಾಮೋಲಿನ್	₹1245 (1240)